# ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999

(13.02.09ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 39ನೇ ಸಂಪುಟದ 1ನೇ ಸಂಚಿಕೆಯಲ್ಲಿ 13 ರಿಂದ 81ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ – I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು ಮತ್ತು ಅರ್ಥವಿವರಣೆ

### ಅಧ್ಯಾಯ – II
### ರಿಜಿಸ್ಟರು ಮತ್ತು ನೋಂದಣಿಯ ಷರತ್ತುಗಳು

3. ರಿಜಿಸ್ಟ್ರಾರ್ ಮತ್ತು ಇತರ ಅಧಿಕಾರಿಗಳ ನೇಮಕ
4. ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದು ಅಥವಾ ವರ್ಗಾವಣೆ ಮಾಡುವುದು, ಮೊದಲಾದ ರಿಜಿಸ್ಟ್ರಾರನ ಅಧಿಕಾರ
5. ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿ ಮತ್ತು ಅದರ ಕಚೇರಿಗಳು
6. ವ್ಯಾಪಾರ ಚಿಹ್ನೆಗಳ ರಿಜಿಸ್ಟರು
7. ಸರಕುಗಳ ಮತ್ತು ಸೇವೆಗಳ ವರ್ಗೀಕರಣ
8. ಅಕಾರಾದಿ ಸೂಚಿಯ ಪ್ರಕಟಣೆ
9. ನೋಂದಣಿಯ ನಿರಾಕರಣೆಗೆ ಸಂಪೂರ್ಣ ಆಧಾರಗಳು
10. ಬಣ್ಣಕ್ಕೆ ಸಂಬಂಧಿಸಿದ ನಿರ್ಬಂಧ
11. ನೋಂದಣಿಯ ನಿರಾಕರಣೆಗೆ ಸಾಪೇಕ್ಷ ಆಧಾರಗಳು
12. ಪ್ರಾಮಾಣಿಕ ಸಮವರ್ತಿ ಉಪಯೋಗ ಮುಂತಾದವುಗಳ ಸಂದರ್ಭದಲ್ಲಿ ನೋಂದಣಿ, ಇತ್ಯಾದಿ
13. ರಾಸಾಯನಿಕ ವಸ್ತುಗಳ ಹೆಸರುಗಳು ಅಥವಾ ಅಂತರಾಷ್ಟ್ರೀಯ ಸ್ವಾಮ್ಯರಹಿತ ಹೆಸರುಗಳ ನೋಂದಣಿಗೆ ನಿಷೇಧ
14. ಜೀವಂತ ವ್ಯಕ್ತಿಗಳ ಅಥವಾ ಇತ್ತೀಚೆಗೆ ಮರಣ ಹೊಂದಿದ ವ್ಯಕ್ತಿಗಳ ಹೆಸರುಗಳು ಮತ್ತು ಪ್ರಾತಿನಿಧ್ಯಗಳ ಬಳಕೆ
15. ವ್ಯಾಪಾರ ಚಿಹ್ನೆಗಳ ಭಾಗಗಳ ಮತ್ತು ವ್ಯಾಪಾರ ಚಿಹ್ನೆಗಳ ಶ್ರೇಣಿಗಳ ನೋಂದಣಿ
16. ವ್ಯಾಪಾರ ಚಿಹ್ನೆಗಳನ್ನು ಸಹವರ್ತಿ ವ್ಯಾಪಾರ ಚಿಹ್ನೆಗಳಾಗಿ ನೋಂದಣಿ ಮಾಡುವುದು
17. ಚಿಹ್ನೆಯ ಭಾಗಗಳ ನೋಂದಣಿಯ ಪರಿಣಾಮ

### ಅಧ್ಯಾಯ – III
### ನೋಂದಣಿಯ ಕಾರ್ಯವಿಧಾನ ಮತ್ತು ಅವಧಿ

18. ನೋಂದಣಿಗಾಗಿ ಅರ್ಜಿ
19. ಅಂಗೀಕಾರ ಹಿಂತೆಗೆದುಕೊಳ್ಳುವುದು
20. ಅರ್ಜಿಯ ಜಾಹೀರಾತು
21. ನೋಂದಣಿಗೆ ವಿರೋಧ

22. ಸರಿಪಡಿಸುವುದು ಮತ್ತು ತಿದ್ದುಪಡಿ ಮಾಡುವುದು

23. ನೋಂದಣಿ

24. ಜಂಟಿ ಒಡೆತನಕ್ಕೆ ಸೇರಿದ ವ್ಯಾಪಾರ ಚಿಹ್ನೆಗಳು

25. ನೋಂದಣಿಯ ಅವಧಿ, ನವೀಕರಣ, ತೆಗೆದುಹಾಕುವಿಕೆ ಮತ್ತು ಪೂರ್ವಸ್ಥಿತಿ ಸ್ಥಾಪನೆ

26. ನವೀಕರಣದ ಫೀಜನ್ನು ಸಂದಾಯ ಮಾಡಲು ತಪ್ಪಿದ್ದಕ್ಕಾಗಿ ರಿಜಿಸ್ಟರಿನಿಂದ ತೆಗೆದುಹಾಕಿದುದರ ಪರಿಣಾಮ

## ಅಧ್ಯಾಯ – IV
## ನೋಂದಣಿಯ ಪರಿಣಾಮ

27. ನೋಂದಾಯಿಸಿರದ ವ್ಯಾಪಾರಚಿಹ್ನೆಯ ಉಲ್ಲಂಘನಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದಿರುವುದು

28. ನೋಂದಣಿ ಮೂಲಕ ಪ್ರದತ್ತವಾಗುವ ಹಕ್ಕುಗಳು

29. ನೋಂದಾಯಿತ ವ್ಯಾಪಾರ ಚಿಹ್ನೆಗಳ ಉಲ್ಲಂಘನೆ

30. ನೋಂದಾಯಿತ ವ್ಯಾಪಾರ ಚಿಹ್ನೆಯ ಪರಿಣಾಮದ ಮೇಲೆ ಮಿತಿಗಳು

31. ನೋಂದಣಿಯು ಸಿಂಧುತ್ವದ ಮೊದಲ ನೋಟದ ಸಾಕ್ಷಿಯಾಗಿರುವುದು

32. ಕೆಲವು ಸಂದರ್ಭಗಳಲ್ಲಿ ವಿಶಿಷ್ಟತೆಯ ಆಧಾರದ ಮೇಲೆ ನೋಂದಣಿಗೆ ರಕ್ಷಣೆ

33. ಮೌನ ಸಮ್ಮತಿಯ ಪರಿಣಾಮ

34. ನಿಹಿತ ಹಕ್ಕುಗಳಿಗಾಗಿ ಉಳಿಸುವಿಕೆ

35. ಸರಕುಗಳ ಅಥವಾ ಸೇವೆಗಳ ಹೆಸರು, ವಿಳಾಸ ಅಥವಾ ವಿವರಣೆಯ ಬಳಕೆಯ ಉಳಿಸುವಿಕೆ

36. ವಸ್ತು ಅಥವಾ ಸಾಮಗ್ರಿ ಅಥವಾ ಸೇವೆಯ ಹೆಸರಾಗಿ ಅಥವಾ ವಿವರಣೆಯಾಗಿ ಬಳಸುವ ಪದಗಳ ಉಳಿಸುವಿಕೆ

## ಅಧ್ಯಾಯ – V
## ಹಸ್ತಾಂತರಣ ಮತ್ತು ವರ್ಗಾವಣೆ

37. ಹಸ್ತಾಂತರಣ ಮಾಡಲು ಮತ್ತು ಸ್ವೀಕೃತಿಗಳನ್ನು ನೀಡಲು ನೋಂದಾಯಿತ ಮಾಲೀಕನ ಅಧಿಕಾರ

38. ನೋಂದಾಯಿತ ವ್ಯಾಪಾರಚಿಹ್ನೆಗಳ ಹಸ್ತಾಂತರಣ ಸಾಧ್ಯತೆ ಮತ್ತು ವರ್ಗಾವಣೆ ಸಾಧ್ಯತೆ

39. ನೋಂದಾಯಿಸಿರದ ವ್ಯಾಪಾರಚಿಹ್ನೆಗಳ ಹಸ್ತಾಂತರಣ ಸಾಧ್ಯತೆ ಮತ್ತು ವರ್ಗಾವಣೆ ಸಾಧ್ಯತೆ

40. ಬಹುವಿಧದ ಅನನ್ಯ ಹಕ್ಕುಗಳನ್ನು ಸೃಜಿಸುವಲ್ಲಿನ ಹಸ್ತಾಂತರಣ ಅಥವಾ ವರ್ಗಾವಣೆಯ ಮೇಲೆ ನಿರ್ಬಂಧ

41. ಭಾರತದ ವಿವಿಧ ಭಾಗಗಳಲ್ಲಿ ಅನನ್ಯ ಹಕ್ಕುಗಳ ಸೃಜನೆಯಾದಾಗ ಹಸ್ತಾಂತರಣ ಅಥವಾ ವರ್ಗಾವಣೆ ಮೇಲಿನ ನಿರ್ಬಂಧ

42. ವ್ಯವಹಾರದ ಸದ್ಭಾವದ ಸಂಬಂಧದಲ್ಲಿಯಲ್ಲದೆ ಅನ್ಯಥಾ ಮಾಡಲಾದ ಹಸ್ತಾಂತರಣದ ಷರತ್ತುಗಳು

43. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ಹಸ್ತಾಂತರಣ ಸಾಧ್ಯತೆ ಮತ್ತು ವರ್ಗಾವಣೆ ಸಾಧ್ಯತೆ

44. ಸಹವರ್ತಿ ವ್ಯಾಪಾರಚಿಹ್ನೆಗಳ ಹಸ್ತಾಂತರಣ ಸಾಧ್ಯತೆ ಮತ್ತು ವರ್ಗಾವಣೆ ಸಾಧ್ಯತೆ

45. ಹಸ್ತಾಂತರಣಗಳ ಮತ್ತು ವರ್ಗಾವಣೆಗಳ ನೋಂದಣಿ

## ಅಧ್ಯಾಯ – VI
## ವ್ಯಾಪಾರಚಿಹ್ನೆಗಳ ಬಳಕೆ ಮತ್ತು ನೋಂದಾಯಿತ ಬಳಕೆದಾರರು

46. ರಚಿತವಾಗಲಿರುವ ಕಂಪನಿಯಿಂದ ವ್ಯಾಪಾರಿಚಿಹ್ನೆಯ ಉದ್ದೇಶಿತ ಬಳಕೆ, ಇತ್ಯಾದಿ
47. ಬಳಕೆ ಮಾಡದ ಕಾರಣಕ್ಕಾಗಿ ರಿಜಿಸ್ಟರಿನಿಂದ ತೆಗೆದುಹಾಕುವುದು ಮತ್ತು ಮಿತಿಗಳನ್ನು ವಿಧಿಸುವುದು
48. ನೋಂದಾಯಿತ ಬಳಕೆದಾರರು
49. ನೋಂದಾಯಿತ ಬಳಕೆದಾರನಾಗಿ ನೋಂದಣಿ
50. ನೋಂದಾಯಿತ ಬಳಕೆದಾರನೆಂಬ ನೋಂದಣಿಯನ್ನು ವ್ಯತ್ಯಸ್ಥಗೊಳಿಸುವುದಕ್ಕೆ ಅಥವಾ ರದ್ದುಗೊಳಿಸುವುದಕ್ಕೆ ರಿಜಿಸ್ಟ್ರಾರನ ಅಧಿಕಾರ
51. ನೋಂದಾಯಿತ ಬಳಕೆದಾರರ ಒಪ್ಪಂದಕ್ಕೆ ಸಂಬಂಧಿಸಿದ ಮಾಹಿತಿಯನ್ನು ತರಿಸಿಕೊಳ್ಳಲು ರಿಜಿಸ್ಟ್ರಾರನ ಅಧಿಕಾರ
52. ಅತಿಲಂಘನದ ವಿರುದ್ಧ ವ್ಯವಹರಣೆಗಳನ್ನು ಹೂಡಲು ನೋಂದಾಯಿತ ಬಳಕೆದಾರನ ಹಕ್ಕು
53. ಅನುಮತಿಸಲಾದ ಬಳಕೆದಾರನಿಗೆ ಅತಿಲಂಘನದ ವಿರುದ್ಧ ವ್ಯವಹರಣೆ ಹೂಡಲು ಹಕ್ಕಿಲ್ಲದಿರುವುದು
54. ನೋಂದಾಯಿತ ಬಳಕೆದಾರನು ಹಸ್ತಾಂತರಣದ ಅಥವಾ ರವಾನೆಯ ಹಕ್ಕನ್ನು ಹೊಂದಿರುವುದು
55. ಸಹವರ್ತಿಯಾಗಿರುವ ಅಥವಾ ಗಣನೀಯವಾಗಿ ಸಮಾನವಾಗಿರುವ ಒಂದು ವ್ಯಾಪಾರ ಚಿಹ್ನೆಯ ಬಳಕೆಯು ಮತ್ತೊಂದು ವ್ಯಾಪಾರ ಚಿಹ್ನೆಯ ಬಳಕೆಗೆ ಸಮನಾಗಿರುವುದು
56. ರಫ್ತು ವ್ಯಾಪಾರಕ್ಕೆ ವ್ಯಾಪಾರ ಚಿಹ್ನೆಯ ಬಳಕೆ ಮತ್ತು ವ್ಯಾಪಾರ ಸಂಬಂಧದ ಸ್ವರೂಪ ಬದಲಾದಾಗ ಬಳಕೆ

## ಅಧ್ಯಾಯ – VII
## ರಿಜಿಸ್ಟರನ್ನು ಸರಿಪಡಿಸುವುದು ಮತ್ತು ತಿದ್ದುವುದು

57. ನೋಂದಣಿಯನ್ನು ರದ್ದುಗೊಳಿಸುವ ಅಥವಾ ವ್ಯತ್ಯಸ್ತಗೊಳಿಸುವ ಮತ್ತು ರಿಜಿಸ್ಟರನ್ನು ಸರಿಪಡಿಸುವ ಅಧಿಕಾರ
58. ರಿಜಿಸ್ಟರನ್ನು ತಿದ್ದುವುದು
59. ನೋಂದಾಯಿತ ವ್ಯಾಪಾರ ಚಿಹ್ನೆಗಳ ಮಾರ್ಪಾಟು
60. ಸರಕುಗಳ ಅಥವಾ ಸೇವೆಗಳ ತಿದ್ದುಪಡಿ ಮಾಡಿದ ಅಥವಾ ಬದಲಿಸಿದ ವರ್ಗೀಕರಣಕ್ಕೆ ಸಂಬಂಧಿಸಿದಂತೆ ರಿಜಿಸ್ಟರಿನಲ್ಲಿ ನಮೂದುಗಳ ಅಳವಡಿಕೆ

## ಅಧ್ಯಾಯ – VIII
## ಸಾಮೂಹಿಕ ಚಿಹ್ನೆಗಳು

61. ಸಾಮೂಹಿಕ ಚಿಹ್ನೆಗಳಿಗೆ ವಿಶೇಷ ಉಪಬಂಧಗಳು
62. ಸಾಮೂಹಿಕ ಚಿಹ್ನೆಯ ಸ್ವರೂಪ ಅಥವಾ ಅರ್ಥವು ದಾರಿ ತಪ್ಪಿಸದಿರುವುದು
63. ಸಾಮೂಹಿಕ ಚಿಹ್ನೆಗಳ ಬಳಕೆಯನ್ನು ನಿಯಂತ್ರಿಸುವ ವಿನಿಯಮಗಳು ಅರ್ಜಿಯೊಂದಿಗೆ ಇರುವುದು
64. ರಿಜಿಸ್ಟ್ರಾರನು ಅರ್ಜಿಯನ್ನು ಮತ್ತು ವಿನಿಯಮಗಳನ್ನು ಅಂಗೀಕರಿಸುವುದು
65. ವಿನಿಯಮಗಳ ಪರಿಶೀಲನೆಗೆ ಅವಕಾಶವಿರುವುದು
66. ವಿನಿಯಮಗಳ ತಿದ್ದುಪಡಿ
67. ಸಾಮೂಹಿಕ ಚಿಹ್ನೆಯ ನೋಂದಾಯಿತ ಮಾಲೀಕನಿಂದ ವ್ಯವಹರಣೆಗಳ ಅತಿಲಂಘನ
68. ಸಾಮೂಹಿಕ ಚಿಹ್ನೆಯ ನೋಂದಣಿಯನ್ನು ತೆಗೆದುಹಾಕಲು ಹೆಚ್ಚಿನ ಕಾರಣಗಳು

## ಅಧ್ಯಾಯ – IX
### ಪ್ರಮಾಣೀಕೃತ ವ್ಯಾಪಾರ ಚಿಹ್ನೆಗಳು

69. ಈ ಅಧಿನಿಯಮದ ಕೆಲವು ಉಪಬಂಧಗಳು ಪ್ರಮಾಣೀಕೃತ ವ್ಯಾಪಾರ ಚಿಹ್ನೆಗಳಿಗೆ ಅನ್ವಯವಾಗದಿರುವುದು

70. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿ

71. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿಗಾಗಿ ಅರ್ಜಿಗಳು

72. ರಿಜಿಸ್ಟ್ರಾರನು ನೋಂದಣಿಗಾಗಿ ಅರ್ಜಿಯನ್ನು ಪರ್ಯಾಲೋಚಿಸುವುದು

73. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿಗೆ ವಿರೋಧ

74. ಪ್ರಮಾಣೀಕೃತ ವ್ಯಾಪಾರಚಿಹ್ನೆಯ ಬಳಕೆಯನ್ನು ನಿಯಂತ್ರಿಸುವ ವಿನಿಯಮಗಳನ್ನು ದಾಖಲು ಮಾಡುವುದು

75. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ಅತಿಲಂಘನ

76. ಕೃತ್ಯಗಳು ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ಅತಿಲಂಘನೆಯನ್ನು ಒಳಗೊಳ್ಳದಿರುವುದು

77. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿಯ ರದ್ದಿಯಾತಿ ಅಥವಾ ವ್ಯತ್ಯಸ್ಥಗೊಳಿಸುವುದು

78. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿಯಿಂದ ಪ್ರದತ್ತವಾದ ಹಕ್ಕುಗಳು

## ಅಧ್ಯಾಯ – X
### ಜವಳಿ ಸರಕುಗಳಿಗೆ ವಿಶೇಷ ಉಪಂಧಗಳು

79. ಜವಳಿ ಸರಕುಗಳು

80. ಜವಳಿ ಸರಕುಗಳ ನೋಂದಣಿಯ ಮೇಲೆ ನಿರ್ಬಂಧ

81. ಜವಳಿ ಸರಕುಗಳು, ಹತ್ತಿ ನೂಲು ಮತ್ತು ದಾರಗಳ ಮೇಲೆ ಮುದ್ರೆಯೊತ್ತುವುದು

82. ಗುಣ ಪರಿಶೀಲನೆ ಮಾಡುವ ಮೂಲಕ ಜವಳಿ ಸರಕುಗಳ ಸ್ವರೂಪದ ನಿರ್ಧರಣೆ

## ಅಧ್ಯಾಯ – XI
### ಅಪೀಲು ಮಂಡಲಿ

83. ಅಪೀಲು ಮಂಡಲಿಯ ಸ್ಥಾಪನೆ

84. ಅಪೀಲು ಮಂಡಲಿಯ ರಚನೆ

85. ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯರಾಗಿ ನೇಮಕಗೊಳ್ಳಲು ಅರ್ಹತೆಗಳು

86. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ಪದಾವದಿ

87. ಕೆಲವು ಸಂದರ್ಭಗಳಲ್ಲಿ ಉಪಾಧ್ಯಕ್ಷ ಅಥವಾ ಅತ್ಯಂತ ಹಿರಿಯ ಸದಸ್ಯನು ಅಧ್ಯಕ್ಷನಂತೆ ಕಾರ್ಯನಿರ್ವಹಿಸುವುದು ಅಥವಾ ಅವನ ಪ್ರಕಾರ್ಯಗಳನ್ನು ನಿರ್ವಹಿಸುವುದು

88. ಅಧ್ಯಕ್ಷನ, ಉಪಾಧ್ಯಕ್ಷನ ಮತ್ತು ಇತರ ಸದಸ್ಯರ ಸಂಬಳಗಳು, ಭತ್ಯೆಗಳು ಮತ್ತು ಇತರ ನಿಬಂಧನೆಗಳು ಮತ್ತು ಷರತ್ತುಗಳು

89. ರಾಜೀನಾಮೆ ಮತ್ತು ತೆಗೆದುಹಾಕುವಿಕೆ

90. ಅಪೀಲು ಮಂಡಳಿಯ ಸಿಬ್ಬಂದಿ

91. ಅಪೀಲು ಮಂಡಳಿಗೆ ಅಪೀಲುಗಳು

92. ಅಪೀಲು ಮಂಡಳಿಯ ಕಾರ್ಯವಿಧಾನ ಮತ್ತು ಅಧಿಕಾರಗಳು

93. ನ್ಯಾಯಾಲಯಗಳು ಇತ್ಯಾದಿಯ ಅಧಿಕಾರ ವ್ಯಾಪ್ತಿಯ ಪ್ರತಿಷೇಧ

94. ಅಪೀಲು ಮಂಡಲಿಯ ಮುಂದೆ ಹಾಜರಾಗುವುದಕ್ಕೆ ಪ್ರತಿಷೇಧ

95. ಮಧ್ಯಕಾಲೀನ ಆದೇಶಗಳನ್ನು ಮಾಡುವುದಕ್ಕೆ ಷರತ್ತುಗಳು

96. ಪ್ರಕರಣಗಳನ್ನು ಒಂದು ಪೀಠದಿಂದ ಇನ್ನೊಂದಕ್ಕೆ ವರ್ಗಾಯಿಸಲು ಅಧ್ಯಕ್ಷನ ಅಧಿಕಾರ

97. ಅಪೀಲು ಮಂಡಳಿಯ ಮುಂದೆ ಸರಿಪಡಿಸುವಿಕೆಗಾಗಿ ಅರ್ಜಿ, ಇತ್ಯಾದಿಯ ಕಾರ್ಯವಿಧಾನ

98. ಕಾನೂನು ವ್ಯವಹರಣೆಗಳ ಸಂದರ್ಭದಲ್ಲಿ ರಿಜಿಸ್ಟ್ರಾರನು ಹಾಜರಾಗುವುದು

99. ಅಪೀಲು ಮಂಡಳಿಯ ಮುಂದಿರುವ ವ್ಯವಹರಣೆಗಳಲ್ಲಿ ರಿಜಿಸ್ಟ್ರಾರನ ವೆಚ್ಚಗಳು

100. ಇತ್ಯರ್ಥದಲ್ಲಿರುವ ವ್ಯವಹರಣೆಗಳನ್ನು ಅಪೀಲು ಮಂಡಲಿಗೆ ವರ್ಗಾಯಿಸುವುದು

## ಅಧ್ಯಾಯ XII
## ಅಪರಾಧಗಳು, ದಂಡಗಳು ಮತ್ತು ಕಾರ್ಯವಿಧಾನ

101. ವ್ಯಾಪಾರ ಗುರುತುಗಳನ್ನು ಮತ್ತು ವ್ಯಾಪಾರ ವಿವರಣೆಗಳನ್ನು ಅನ್ವಯಿಸುವುದರ ಅರ್ಥ

102. ವ್ಯಾಪಾರ ಚಿಹ್ನೆಗಳನ್ನು ಸುಳ್ಳಾಗಿ ಹಾಕುವುದು ಮತ್ತು ಮೋಸದಿಂದ ಬಳಸುವುದು

103. ಸುಳ್ಳು ವ್ಯಾಪಾರಚಿಹ್ನೆಗಳು, ವ್ಯಾಪಾರ ವಿವರಣೆಗಳು, ಇತ್ಯಾದಿಗಳನ್ನು ಬಳಸುವುದಕ್ಕೆ ದಂಡನೆ

104. ಸುಳ್ಳು ವ್ಯಾಪಾರಚಿಹ್ನೆಯನ್ನು ಅಥವಾ ಸುಳ್ಳು ವ್ಯಾಪಾರವಿವರಣೆಯನ್ನು ಬಳಸಿ ಸರಕುಗಳನ್ನು ಮಾರುವುದಕ್ಕೆ ಅಥವಾ ಸೇವೆಗಳನ್ನು ಒದಗಿಸುವುದಕ್ಕೆ ದಂಡನೆ

105. ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯಕ್ಕಾಗಿ ಹೆಚ್ಚಿಸಲಾದ ದಂಡನೆ

106. 81ನೇ ಪ್ರಕರಣಕ್ಕೆ ವಿರುದ್ಧವಾಗಿ ಜವಳಿ ಸರಕುಗಳು, ಇತ್ಯಾದಿಗಳನ್ನು ಸ್ಥಳಾಂತರಿಸುವುದಕ್ಕೆ ದಂಡನೆ

107. ಒಂದು ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿದೆಯೆಂದು ಸುಳ್ಳಾಗಿ ನಿರೂಪಿಸಿದ್ದಕ್ಕೆ ದಂಡನೆ

108. ಒಂದು ವ್ಯವಹಾರ ಸ್ಥಳವು ವ್ಯಾಪಾರಚಿಹ್ನೆಗಳ ಕಚೇರಿಗೆ ಸಂಬಂಧಿಸಿದ್ದೆಂದು ಅನುಚಿತವಾಗಿ ವಿವರಿಸಿರುವುದಕ್ಕೆ ದಂಡನೆ

109. ರಿಜಿಸ್ಟರಿನಲ್ಲಿ ಇರುವ ಸುಳ್ಳು ನಮೂದನೆಗಳಿಗಾಗಿ ದಂಡನೆ

110. ಕೆಲವು ಸಂದರ್ಭಗಳಲ್ಲಿ ಅಪರಾಧವಾಗದಿರುವುದು

111. ಸರಕುಗಳ ಮುಟ್ಟುಗೋಲು

112. ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ನಿಯೋಜಿತರಾದ ಕೆಲವು ವ್ಯಕ್ತಿಗಳಿಗೆ ವಿನಾಯಿತಿ

113. ಆಪಾದಿತನು ನೋಂದಣಿಯು ಅಸಿಂಧುವೆಂದು ವಾದಿಸಿದಾಗ ಕಾರ್ಯವಿಧಾನ

114. ಕಂಪನಿಗಳಿಂದ ಅಪರಾಧಗಳು

115. ಕೆಲವು ಅಪರಾಧಗಳ ಸಂಜ್ಞೇಯತೆ ಹಾಗೂ ಶೋಧನೆ ಮತ್ತು ಅಭಿಗ್ರಹಣ ಮಾಡಿಕೊಳ್ಳುವುದಕ್ಕೆ ಪೊಲೀಸ್ ಅಧಿಕಾರಿಯ ಅಧಿಕಾರಗಳು

116. ಸಮುದ್ರದ ಮೂಲಕ ಆಮದುಮಾಡಿಕೊಳ್ಳುವ ಸರಕುಗಳ ಮೂಲದ ಬಗ್ಗೆ ಸಾಕ್ಷ್ಯ

117. ಪ್ರತಿರಕ್ಷೆ ಅಥವಾ ಪ್ರಾಸಿಕ್ಯೂಷನಿನ ವೆಚ್ಚಗಳು

118. ಪ್ರಾಸಿಕ್ಯೂಷನಿನ ಕಾಲ ಪರಿಮಿತಿ

119. ಅಪರಾಧವನ್ನು ಮಾಡಿರುವುದರ ಸಂಬಂಧದಲ್ಲಿ ಮಾಹಿತಿ

120. ಭಾರತದ ಹೊರಗಡೆ ಮಾಡಿದ ಕೃತ್ಯಗಳಿಗೆ ಭಾರತದಲ್ಲಿ ದುಷ್ಪ್ರೇರಣೆ ಮಾಡಿದ್ದಕ್ಕಾಗಿ ದಂಡನೆ

121. ಕ್ರಿಮಿನಲ್ ನ್ಯಾಯಾಲಯಗಳು ಅನುಮತಿಸಲಾದ ವ್ಯತ್ಯಾಸವನ್ನು ಪಾಲಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಸೂಚನೆಗಳು

## ಅಧ್ಯಾಯ – XIII
## ಸಂಕೀರ್ಣ

122. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ರಕ್ಷಣೆ

123. ಕೆಲವು ವ್ಯಕ್ತಿಗಳು ಲೋಕನೌಕರರಾಗಿರುವುದು

124. ವ್ಯಾಪಾರಚಿಹ್ನೆಯ ನೋಂದಣಿಯ ಸಿಂಧುತ್ವವನ್ನು ಪ್ರಶ್ನಿಸಿದಾಗ ವ್ಯವಹರಣೆಗಳನ್ನು ತಡೆಹಿಡಿಯುವುದು, ಇತ್ಯಾದಿ

125. ಕೆಲವು ಸಂದರ್ಭಗಳಲ್ಲಿ ರಿಜಿಸ್ಟರನ್ನು ಸರಿಪಡಿಸಲು ಅರ್ಜಿಯನ್ನು ಅಪೀಲು ಮಂಡಲಿಗೆ ಸಲ್ಲಿಸುವುದು

126. ಗುರುತು ಮಾಡಿದ ಸರಕುಗಳ ಮಾರಾಟದ ಮೇಲೆ ಇಂಗಿತ ಭರವಸೆ

127. ರಿಜಿಸ್ಟ್ರಾರನ ಅಧಿಕಾರಗಳು

128. ರಿಜಿಸ್ಟ್ರಾರನಿಂದ ವಿವೇಚನಾಧಿಕಾರದ ಚಲಾವಣೆ

129. ರಿಜಿಸ್ಟ್ರಾರನ ಮುಂದೆ ಸಾಕ್ಷ್ಯ

130. ಒಂದು ವ್ಯವಹರಣೆಯಲ್ಲಿ ಪಕ್ಷಕಾರನ ಮರಣ

131. ಅವಧಿಯ ವಿಸ್ತರಣೆ

132. ಬಿಟ್ಟುಬಿಡುವುದು

133. ವಿಭಿನ್ನತೆಯ ಬಗ್ಗೆ ರಿಜಿಸ್ಟ್ರಾರನಿಂದ ಪ್ರಾರಂಭಿಕ ಸಲಹೆ

134. ಅತಿಲಂಘನದ ದಾವೆ, ಇತ್ಯಾದಿಗಳನ್ನು ಜಿಲ್ಲಾ ನ್ಯಾಯಾಲಯದ ಮುಂದೆ ಹೂಡುವುದು

135. ಅತಿಲಂಘನ ಅಥವಾ ಸರಕುಗಳನ್ನು ಮೋಸದಿಂದ ಮಾರುವುದಕ್ಕೆ ಸಂಬಂಧಿಸಿದ ದಾವೆಗಳಲ್ಲಿ ಪರಿಹಾರ

136. ನೋಂದಾಯಿತ ಬಳಕೆದಾರನನ್ನು ಕೆಲವು ವ್ಯವಹರಣೆಗಳಲ್ಲಿ ಪಕ್ಷಕಾರರನ್ನಾಗಿ ಮಾಡುವುದು

137. ರಿಜಿಸ್ಟರಿನಲ್ಲಿನ ನಮೂದನೆಗಳು, ಇತ್ಯಾದಿ ಮತ್ತು ರಿಜಿಸ್ಟ್ರಾರನು ಮಾಡಿದ ಕಾರ್ಯ ಸಾಕ್ಷ್ಯವಾಗಿರುವುದು

138. ರಿಜಿಸ್ಟರ್ ಇತ್ಯಾದಿಯನ್ನು ಹಾಜರುಪಡಿಸುವುದಕ್ಕೆ ರಿಜಿಸ್ಟ್ರಾರನನ್ನು ಮತ್ತು ಇತರ ಅಧಿಕಾರಿಗಳನ್ನು ಒತ್ತಾಯಿಸದಿರುವುದು

139. ಸರಕುಗಳ ಮೂಲದ ಸೂಚನೆಯನ್ನು ತೋರಿಸುವಂತೆ ಅಗತ್ಯಪಡಿಸುವ ಅಧಿಕಾರ

140. ಸುಳ್ಳು ವ್ಯಾಪಾರಚಿಹ್ನೆಗಳನ್ನು ಹೊಂದಿರುವ ಆಮದು ಸರಕುಗಳ ಮಾಹಿತಿಯನ್ನು ಅಗತ್ಯಪಡಿಸುವ ಅಧಿಕಾರ

141. ಸಿಂಧುತ್ವ ಪ್ರಮಾಣಪತ್ರ

142. ಕಾನೂನು ವ್ಯವಹರಣೆಗಳ ಆಧಾರರಹಿತ ಬೆದರಿಕೆಗಳು

143. ಜಾರಿ ಮಾಡುವ ವಿಳಾಸ

144. ಪರಿಗಣನೆಗೆ ತೆಗೆದುಕೊಳ್ಳಬೇಕಾಗಿರುವ ವ್ಯಾಪಾರ ರೂಢಿಗಳು, ಇತ್ಯಾದಿ

145. ಏಜೆಂಟರು

146. ನಿಯೋಜಿತ ಅಧಿಕಾರವಿಲ್ಲದೆ ಒಬ್ಬ ಏಜೆಂಟನು ಅಥವಾ ಪ್ರತಿನಿಧಿಯು ನೋಂದಾಯಿಸಿದ ಚಿಹ್ನೆಗಳು

147. ಸೂಚಿಗಳು

148. ದಸ್ತಾವೇಜುಗಳು ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿರುವುದು

149. ರಿಜಿಸ್ಟ್ರಾರನ ವರದಿಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು

150. ಫೀಜು ಮತ್ತು ಸರ್‌ಚಾರ್ಜ್

151. ಅಧ್ಯಾಯ XII ರಲ್ಲಿ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆಗಳು

152. ನೋಂದಣಿ ಅಧಿನಿಯಮ, 1908ರ ಅಡಿಯಲ್ಲಿ ನೋಂದಾಯಿಸಲು ಬಾರದ ವ್ಯಾಪಾರ ಚಿಹ್ನೆಯ ಒಡೆತನದ ಬಗ್ಗೆ ಘೋಷಣೆ

153. ಸರ್ಕಾರವು ಬದ್ಧವಾಗಿರಬೇಕಾಗಿರುವುದು

154. ಒಡಂಬಡಿಕೆ ದೇಶಗಳ ನಾಗರಿಕರ ನೋಂದಣಿ ಅರ್ಜಿಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು

155. ಪರಸ್ಪರ ಸಂಬದ್ಧತೆಗೆ ಸಂಬಂಧಿಸಿದ ಉಪಬಂಧ

156. ತೊಂದರೆಗಳನ್ನು ನಿವಾರಿಸಲು ಕೇಂದ್ರ ಸರ್ಕಾರದ ಅಧಿಕಾರ

157. ನಿಯಮ ರಚನಾಧಿಕಾರ

158. ತಿದ್ದುಪಡಿಗಳು

159. ನಿರಸನ ಮತ್ತು ಉಳಿಸುವಿಕೆಗಳು

**ಅನುಸೂಚಿ.**

# ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999

**(1999ರ ಸಂಖ್ಯೆ 47)**

**[ಡಿಸೆಂಬರ್ 30, 1999]**

ವ್ಯಾಪಾರ ಚಿಹ್ನೆಗಳಿಗೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವುದಕ್ಕಾಗಿ ಮತ್ತು ಕ್ರೋಡೀಕರಿಸುವುದಕ್ಕಾಗಿ, ಸರಕುಗಳಿಗೆ ಮತ್ತು ಸೇವೆಗಳಿಗೆ ವ್ಯಾಪಾರ ಚಿಹ್ನೆಗಳ ನೋಂದಣಿಗಾಗಿ ಮತ್ತು ಉತ್ತಮ ರಕ್ಷಣೆಗಾಗಿ ಹಾಗೂ ಮೋಸದ ಚಿಹ್ನೆಗಳ ಬಳಕೆಯನ್ನು ತಡೆಗಟ್ಟುವುದಕ್ಕಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ – I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು* ಜಾರಿಗೆ ಬರತಕ್ಕದ್ದು:

ಪರಂತು, ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಅಂಥ ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಲಾದ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬರುವುದಕ್ಕೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು ಮತ್ತು ಅರ್ಥವಿವರಣೆ.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಪೀಲು ಮಂಡಲಿ" ಎಂದರೆ, 83ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಅಪೀಲು ಮಂಡಲಿ;

(ಬಿ) "ಹಸ್ತಾಂತರಣ" ಎಂದರೆ, ಸಂಬಂಧಿತ ಪಕ್ಷಕಾರರ ಕೃತ್ಯದ ಮೂಲಕ ಮಾಡಲಾದ ಒಂದು ಲಿಖಿತ ಹಸ್ತಾಂತರಣ;

(ಸಿ) "ಸಹವರ್ತಿ ವ್ಯಾಪಾರ ಚಿಹ್ನೆಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸಹವರ್ತಿ ವ್ಯಾಪಾರ ಚಿಹ್ನೆಗಳೆಂದು ನೋಂದಾಯಿತವಾದವುಗಳೆಂದು ಭಾವಿಸಲಾದ ಅಥವಾ ನೋಂದಾಯಿಸಬೇಕೆಂದು ಅಗತ್ಯಪಡಿಸಲಾದ ವ್ಯಾಪಾರ ಚಿಹ್ನೆಗಳು;

(ಡಿ) "ನ್ಯಾಯಪೀಠ" ಎಂದರೆ, ಅಪೀಲು ಮಂಡಲಿಯ ನ್ಯಾಯಪೀಠ;

---

*15.09.2003 ರಿಂದ ಜಾರಿಗೆ ಬಂದಿದೆ. ನೋಡಿ ಎಸ್.ಒ. 1048 (ಇ) ದಿನಾಂಕ 15.09.2003.

(ಇ) "ಪ್ರಮಾಣೀಕೃತ ವ್ಯಾಪಾರ ಚಿಹ್ನೆ" ಎಂದರೆ, ಸರಕುಗಳ ಮೂಲ, ಸಾಮಗ್ರಿ, ಉತ್ಪಾದನಾ ವಿಧಾನ ಅಥವಾ ಸೇವೆಗಳ ನಿರ್ವಹಣೆ, ಗುಣಮಟ್ಟ, ನಿಖರತೆ ಅಥವಾ ಇತರ ಲಕ್ಷಣಗಳಿಗೆ ಸಂಬಂಧಿಸಿದಂತೆ ಚಿಹ್ನೆಯ ಮಾಲೀಕನಿಂದ ಪ್ರಮಾಣೀಕೃತವಾದ, ವ್ಯಾಪಾರ ಕ್ರಮದಲ್ಲಿ ಬಳಸಲಾಗುವ ಸರಕುಗಳನ್ನು ಅಥವಾ ಸೇವೆಗಳನ್ನು ಆ ವ್ಯಕ್ತಿಯ ಹೆಸರಿನಲ್ಲಿ, ಪ್ರಮಾಣೀಕೃತ ವ್ಯಾಪಾರ ಚಿಹ್ನೆಯ ಮಾಲೀಕನೆಂದು ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅಧ್ಯಾಯ IXರ ಅಡಿಯಲ್ಲಿ ಹಾಗೆ ಪ್ರಮಾಣೀಕೃತವಾಗದ ಅಥವಾ ನೋಂದಣಿಯಾಗದ ಸರಕುಗಳಿಂದ ಅಥವಾ ಸೇವೆಗಳಿಂದ ವಿಭಿನ್ನಗೊಳಿಸುವ ಸಾಮರ್ಥ್ಯವಿರುವ ಒಂದು ಚಿಹ್ನೆ;

(ಎಫ್) "ಅಧ್ಯಕ್ಷ" ಎಂದರೆ ಅಪೀಲು ಮಂಡಲಿಯ ಅಧ್ಯಕ್ಷ;

(ಜಿ) "ಸಾಮೂಹಿಕ ಚಿಹ್ನೆ" ಎಂದರೆ, ಇತರರ ಚಿಹ್ನೆಗಿಂತ ಮಾಲೀಕತ್ವ ಹೊಂದಿರುವ ವ್ಯಕ್ತಿಗಳ ಒಂದು ಸಂಘದ ಸದಸ್ಯರ (ಭಾರತೀಯ ಪಾಲುಗಾರಿಕೆ ಅಧಿನಿಯಮ, 1932ರ (1932ರ 9) ಅರ್ಥವ್ಯಾಪ್ತಿಯೊಳಗೆ ಒಂದು ಪಾಲುಗಾರಿಕೆಯಲ್ಲದ) ಸರಕುಗಳನ್ನು ಅಥವಾ ಸೇವೆಗಳನ್ನು ವಿಭಿನ್ನಗೊಳಿಸುವ ಒಂದು ವ್ಯಾಪಾರ ಚಿಹ್ನೆ;

(ಹೆಚ್) "ಮೋಸ ಹೋಗುವಷ್ಟು ಸಮರೂಪವಿರುವುದು" – ಒಂದು ಚಿಹ್ನೆಯು ಇನ್ನೊಂದು ಚಿಹ್ನೆಗೆ ವಂಚಿಸುವಷ್ಟು ಅಥವಾ ಗೊಂದಲಕ್ಕೆ ಕಾರಣವಾಗುವಷ್ಟು ಹತ್ತಿರದ ಸಮರೂಪ ಹೊಂದಿದ್ದಾಗ, ಒಂದು ಚಿಹ್ನೆಯು ಇನ್ನೊಂದು ಚಿಹ್ನೆಗೆ ಮೋಸ ಹೋಗುವಷ್ಟು ಸಮರೂಪವಿರುವುದು ಎಂದು ಭಾವಿಸತಕ್ಕದ್ದು;

(ಐ) "ಸುಳ್ಳು ವ್ಯಾಪಾರ ವಿವರಣೆ" ಎಂದರೆ,–

**(i)** ಯಾವ ಸರಕುಗಳಿಗೆ ಅಥವಾ ಸೇವೆಗಳಿಗೆ ಒಂದು ವ್ಯಾಪಾರ ವಿವರಣೆಯನ್ನು ಬಳಸಲಾಗಿದೆಯೋ ಆ ಒಂದು ಮುಖ್ಯ ವಿಷಯದಲ್ಲಿ ಅಸತ್ಯದಿಂದ ಕೂಡಿರುವ ಅಥವಾ ತಪ್ಪುದಾರಿಗೆ ಎಳೆಯುವ ವ್ಯಾಪಾರ ವಿವರಣೆ;

**(ii)** ವ್ಯಾಪಾರ ವಿವರಣೆಯನ್ನು ಬಳಸಿರುವ ಯಾವುವೇ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ, ಸೇರಿಸುವ ಮೂಲಕವಾಗಲಿ, ಅಳಿಸಿ ಹಾಕುವ ಮೂಲಕವಾಗಲಿ ಅಥವಾ ಅನ್ಯಥಾ ಯಾವುದೇ ವ್ಯತ್ಯಾಸವನ್ನು ಮಾಡಲಾಗಿದ್ದು, ಆ ವ್ಯತ್ಯಾಸವು, ಒಂದು ಮುಖ್ಯ ವಿಷಯದಲ್ಲಿ ವಿವರಣೆಯು ಅಸತ್ಯವಾಗಿರುವಂತೆ ಅಥವಾ ತಪ್ಪು ದಾರಿಗೆಳೆಯುವಂತೆ ಮಾಡಿರುವುದು; ಅಥವಾ

**(iii)** ಯಾವುದೇ ವ್ಯಾಪಾರ ವಿವರಣೆಯನ್ನು ಬಳಸಿರುವ ಯಾವುವೇ ಸರಕುಗಳಿಗೆ ಸಂಬಂಧಿಸಿದಂತೆ ಅವುಗಳಲ್ಲಿ ಒಳಗೊಂಡಿರುವ ಮಾನಕ ಗಜಗಳು ಅಥವಾ ಮಾನಕ ಮೀಟರುಗಳಿಗಿಂತ ಹೆಚ್ಚಿನ ಗಜಗಳನ್ನು ಅಥವಾ ಮೀಟರುಗಳನ್ನು ಒಳಗೊಂಡಿರುವುದೆಂದು ಸೂಚಿಸುವ ಅಥವಾ ನಮೂದಿಸುವ ವ್ಯಾಪಾರ ವಿವರಣೆ; ಅಥವಾ

**(iv)** (ಎ) ಅವು ವಾಸ್ತವವಾಗಿ ಯಾರ ವಾಣಿಜ್ಯ ಸರಕುಗಳಾಗಿವೆಯೋ ಅಥವಾ ಯಾರ ತಯಾರಿಕೆಯಾಗಿದೆಯೋ ಆ ವ್ಯಕ್ತಿಯನ್ನು ಹೊರತುಪಡಿಸಿದ ಬೇರೆ ವ್ಯಕ್ತಿಯ ತಯಾರಿಕೆ ಅಥವಾ ವಾಣಿಜ್ಯ ಸರಕುಗಳೆಂದು ವ್ಯಕ್ತಿಗಳು ನಂಬುವ ಸಂಭವವಿರುವಂಥ ವಿಧಾನದ ಸರಕುಗಳಿಗೆ ಸಂಬಂಧಿಸಿದಂತೆ;

(ಬಿ) ಅವು ವಾಸ್ತವವಾಗಿ ಯಾರ ಸೇವೆಗಳಾಗಿವೆಯೋ ಆ ವ್ಯಕ್ತಿಯನ್ನು ಹೊರತುಪಡಿಸಿದ ಬೇರೆ ವ್ಯಕ್ತಿಯಿಂದ ಒದಗಿಸಲಾದ ಅಥವಾ ಮಾಡಲಾದ ಸೇವೆಗಳೆಂದು ವ್ಯಕ್ತಿಗಳು ನಂಬುವ ಸಂಭವವಿರುವಂಥ ವಿಧಾನದ ಸೇವೆಗಳಿಗೆ ಸಂಬಂಧಿಸಿದಂತೆ

– ಬಳಸಿದ ಯಾವುವೇ ಚಿಹ್ನೆಗಳು ಅಥವಾ ವ್ಯವಸ್ಥೆ ಅಥವಾ ಅವುಗಳ ಸಂಯೋಜನೆ; ಅಥವಾ

**(v)** ಒಬ್ಬ ವ್ಯಕ್ತಿಯ ಯಾವುದೇ ಸುಳ್ಳು ಹೆಸರನ್ನು ಅಥವಾ ಮೊದಲಕ್ಷರಗಳನ್ನು ಅಂಥ ಹೆಸರು ಅಥವಾ ಮೊದಲಕ್ಷರಗಳು ಯಾವುದೇ ಸಂದರ್ಭದಲ್ಲಿ ವ್ಯಾಪಾರ ವಿವರಣೆಯಾಗಿದ್ದರೆ ಹೇಗೋ ಹಾಗೆ ಅಂಥ ವಿಧಾನದಲ್ಲಿ ಸರಕುಗಳಿಗೆ ಅಥವಾ ಸೇವೆಗಳಿಗೆ ಬಳಸಲಾಗಿದ್ದು ಆ ಹೆಸರು ಅಥವಾ ಮೊದಲಕ್ಷರಗಳು,–

(ಎ) ಒಂದು ವ್ಯಾಪಾರ ಚಿಹ್ನೆಯಾಗಿರದಿದ್ದರೆ ಅಥವಾ ವ್ಯಾಪಾರ ಚಿಹ್ನೆಯ ಭಾಗವಾಗಿರದಿದ್ದರೆ;

(ಬಿ) ಅದೇ ವಿವರಣೆಯ ಸರಕುಗಳು ಅಥವಾ ಸೇವೆಗಳ ಅಥವಾ ಇವೆರೆಡರ ಸಂಬಂಧದಲ್ಲಿ ವ್ಯವಹಾರವನ್ನು ನಡೆಸುವ ಮತ್ತು ಅಂಥ ಹೆಸರು ಅಥವಾ ಮೊದಲಕ್ಷರಗಳ ಬಳಕೆಯನ್ನು ಅಧಿಕೃತಗೊಳಿಸಿರದ ಒಬ್ಬ ವ್ಯಕ್ತಿಯ ಹೆಸರು ಅಥವಾ ಮೊದಲಕ್ಷರಗಳಿಗೆ ತದ್ರೂಪವಾಗಿರುವ ಅಥವಾ ಮೋಸಗೊಳಿಸುವ ಹಾಗೆ ಸಮರೂಪವಾಗಿದ್ದರೆ; ಮತ್ತು

(ಸಿ) ಅಂಥ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ವ್ಯವಹಾರ ನಡೆಸುವ ಒಬ್ಬ ಕಾಲ್ಪನಿಕ ವ್ಯಕ್ತಿಯ ಅಥವಾ ನಿಜವಲ್ಲದ ಯಾರೇ ವ್ಯಕ್ತಿಯ ಹೆಸರನ್ನಾಗಲಿ ಅಥವಾ ಮೊದಲಕ್ಷರಗಳನ್ನಾಗಲಿ ಹೊಂದಿದ್ದರೆ

– ಮತ್ತು ಆ ವ್ಯಾಪಾರ ವಿವರಣೆಯು ಒಂದು ವ್ಯಾಪಾರ ಚಿಹ್ನೆ ಅಥವಾ ವ್ಯಾಪಾರ ಚಿಹ್ನೆಯ ಭಾಗವಾಗಿರುವ ಸಂಗತಿಯು ಅಂಥ ವ್ಯಾಪಾರ ವಿವರಣೆಯು ಈ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಸುಳ್ಳು ವ್ಯಾಪಾರ ವಿವರಣೆಯಾಗಿರುವುದನ್ನು ತಡೆಯತಕ್ಕದ್ದಲ್ಲ;

(ಜೆ) "ಸರಕುಗಳು" ಎಂದರೆ, ವ್ಯಾಪಾರದ ಅಥವಾ ತಯಾರಿಕೆಯ ವಿಷಯವಾಗಿರುವ ಯಾವುದೇ ವಸ್ತು;

(ಕೆ) "ನ್ಯಾಯಿಕ ಸದಸ್ಯ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಹಾಗೆಂದು ನೇಮಕಗೊಂಡ ಅಪೀಲು ಮಂಡಲಿಯ ಸದಸ್ಯ ಮತ್ತು ಇದರಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರೂ ಒಳಗೊಳ್ಳುತ್ತಾರೆ;

(ಎಲ್) "ಪರಿಮಿತಿಗಳು" (ಅದರ ವ್ಯಾಕರಣ ವ್ಯತ್ಯಾಸಗಳೊಂದಿಗೆ) ಎಂದರೆ, ವ್ಯಾಪಾರ ಚಿಹ್ನೆಯ ಮಾಲೀಕನಾಗಿ ಒಬ್ಬ ವ್ಯಕ್ತಿಯ ನೋಂದಣಿಯಿಂದ ಲಭ್ಯವಾದ ಭಾರತದ ಒಳಗೆ ಅಥವಾ ಭಾರತದ ಹೊರಗೆ ಅದನ್ನು ಬಳಸುವ ರೀತಿಗೆ ಅಥವಾ ಪ್ರದೇಶಕ್ಕೆ ಸಂಬಂಧಿಸಿದಂತೆ ಹಕ್ಕಿನ ಪರಿಮಿತಿಗಳು ಒಳಗೊಂಡಂತೆ, ಅದರ ಬಳಕೆಯ ಅನನ್ಯ ಹಕ್ಕಿನ ಯಾವುದೇ ಪರಿಮಿತಿ;

(ಎಂ) "ಚಿಹ್ನೆ" ಎಂಬುದರಲ್ಲಿ ಸಾಧನ, ವ್ಯಾಪಾರ ಮುದ್ರೆ, ಶೀರ್ಷಿಕೆ, ಅಂಟುಚೀಟಿ, ಟಿಕೆಟ್, ಹೆಸರು, ಅಂಕಿತ, ಶಬ್ದ, ಅಕ್ಷರ, ಅಂಕಿ, ಸರಕುಗಳ ಆಕಾರ, ಪ್ಯಾಕು ಆಗಿರುವುದು ಅಥವಾ ವರ್ಣ ಸಂಯೋಜನೆ ಅಥವಾ ಅವುಗಳ ಯಾವುದೇ ಸಂಯೋಜನೆಯು ಒಳಗೊಳ್ಳುತ್ತವೆ;

(ಎನ್) "ಸದಸ್ಯ" ಎಂದರೆ ಅಪೀಲು ಮಂಡಲಿಯ ಒಬ್ಬ ನ್ಯಾಯಿಕ ಸದಸ್ಯ ಅಥವಾ ತಾಂತ್ರಿಕ ಸದಸ್ಯ ಮತ್ತು ಇದರಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷನೂ ಒಳಗೊಳ್ಳುತ್ತಾನೆ;

(ಓ) "ಹೆಸರು" ಎಂಬುದರಲ್ಲಿ ಒಂದು ಹೆಸರಿನ ಯಾವುದೇ ಸಂಕ್ಷಿಪ್ತ ರೂಪವು ಒಳಗೊಳ್ಳುತ್ತದೆ;

(ಪಿ) "ಅಧಿಸೂಚಿಸು" ಎಂದರೆ, ರಿಜಿಸ್ಟ್ರಾರನು ಪ್ರಕಟಿಸುವ ವ್ಯಾಪಾರ ಚಿಹ್ನೆಯ ಜರ್ನಲ್‌ನಲ್ಲಿ ಅಧಿಸೂಚಿಸುವುದು;

(ಕ್ಯೂ) "ಪ್ಯಾಕೇಜು" ಎಂಬುದರಲ್ಲಿ ಯಾವುದೇ ಸಂದೂಕ, ಪೆಟ್ಟಿಗೆ, ಧಾರಕ, ರಕ್ಷಾಹೊದಿಕೆ, ಮಡಿಕೆ ಆವರಣ, ಪಾತ್ರೆ, ದೊಡ್ಡ ಪಾತ್ರೆ, ಸಂಪುಟ, ಸೀಸೆ, ಹೊರಕವಚ, ಅಂಟುಚೀಟಿ, ಕಟ್ಟುದಾರ, ಟಿಕೆಟ್, ಸುರುಳಿ, ಚೌಕಟ್ಟು, ಕೋಶ, ಟೋಪಿಯಂಥ ಮುಚ್ಚಳ, ಮುಚ್ಚಳ, ಬೆಣೆ ಮತ್ತು ಬಿರಡೆಯನ್ನು ಒಳಗೊಳ್ಳುತ್ತದೆ;

(ಆರ್) ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯ ಸಂಬಂಧದಲ್ಲಿ "ಅನುಮತಿಸಲಾದ ಬಳಕೆ" ಎಂದರೆ ವ್ಯಾಪಾರ ಚಿಹ್ನೆಯನ್ನು,-

(i) ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ – ವ್ಯಾಪಾರ ಚಿಹ್ನೆಯ ಒಬ್ಬ ನೋಂದಾಯಿತ ಬಳಕೆದಾರನು,-

(ಎ) ವ್ಯಾಪಾರ ಕ್ರಮದಲ್ಲಿ ಅವನಿಗೆ ಸಂಬಂಧಿಸಿದಂತೆ; ಮತ್ತು

(ಬಿ) ತತ್ಕಾಲದಲ್ಲಿ ನೋಂದಾಯಿತವಾಗಿರುವ ವ್ಯಾಪಾರ ಚಿಹ್ನೆಗೆ ಸಂಬಂಧಿಸಿದಂತೆ; ಮತ್ತು

(ಸಿ) ನೋಂದಾಯಿತ ಬಳಕೆದಾರನಂತೆ ಅವನು ನೋಂದಾವಣೆ ಮಾಡಿ; ಮತ್ತು

(ಡಿ) ನೋಂದಾಯಿತ ಬಳಕೆದಾರನ ನೋಂದಣಿಯು ಒಳಗೊಂಡಿರುವ ಯಾವುದೇ ಷರತ್ತುಗಳನ್ನು ಅಥವಾ ನಿರ್ಬಂಧಗಳನ್ನು ಪಾಲಿಸಿ

– ಮಾಡುವ ವ್ಯಾಪಾರ ಚಿಹ್ನೆಯ ಬಳಕೆ; ಅಥವಾ

(ii) ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ನೋಂದಾಯಿತ ಮಾಲೀಕ ಮತ್ತು ನೋಂದಾಯಿತ ಬಳಕೆದಾರನನ್ನು ಹೊರತುಪಡಿಸಿದ ವ್ಯಕ್ತಿಯು, ಈ ಕೆಳಕಂಡಂತೆ ಆ ವ್ಯಾಪಾರೀ ಚಿಹ್ನೆಯನ್ನು ಬಳಸುವುದು,-

(ಎ) ವ್ಯಾಪಾರ ಕ್ರಮದಲ್ಲಿ ಅವನಿಗೆ ಸಂಬಂಧಿಸಿದಂತೆ; ಮತ್ತು

(ಬಿ) ತತ್ಕಾಲದಲ್ಲಿ ನೋಂದಾಯಿತವಾಗಿರುವ ವ್ಯಾಪಾರ ಚಿಹ್ನೆಗೆ ಸಂಬಂಧಿಸಿದಂತೆ; ಮತ್ತು

(ಸಿ) ಲಿಖಿತ ಒಪ್ಪಂದದಲ್ಲಿ ಅಂತಹ ನೋಂದಾಯಿತ ಮಾಲೀಕನ ಒಪ್ಪಿಗೆಯೊಂದಿಗೆ; ಮತ್ತು

(ಡಿ) ಅಂತಹ ಬಳಕೆದಾರನು ಒಳಪಟ್ಟ ಯಾವುದೇ ಷರತ್ತುಗಳು ಅಥವಾ ನಿರ್ಬಂಧಗಳನ್ನು ಮತ್ತು ವ್ಯಾಪಾರ ಗುರುತಿನ ನೋಂದಣಿಯು ಒಳಪಟ್ಟಂಥ ಷರತ್ತುಗಳನ್ನು ಮತ್ತು ನಿರ್ಬಂಧಗಳನ್ನು ಪಾಲಿಸಿದಂತೆ.

(ಎಸ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದದ್ದು;

(ಟಿ) "ರಿಜಿಸ್ಟ್ರರು" ಎಂದರೆ 6ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಾಪಾರ ಚಿಹ್ನೆಗಳ ರಿಜಿಸ್ಟರು;

(ಯು) "ನೋಂದಾಯಿತ" ಎಂದರೆ (ಅದರ ವ್ಯಾಕರಣ ವ್ಯತ್ಯಾಸಗಳೊಂದಿಗೆ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದದ್ದು;

(ವಿ) ಒಂದು ವ್ಯಾಪಾರ ಚಿಹ್ನೆಯ ಸಂಬಂಧದಲ್ಲಿ "ನೋಂದಾಯಿತ ಮಾಲೀಕ" ಎಂದರೆ, ವ್ಯಾಪಾರ ಚಿಹ್ನೆಯ ಮಾಲೀಕನೆಂದು ತತ್ಕಾಲದಲ್ಲಿ ರಿಜಿಸ್ಟರಿನಲ್ಲಿ ನಮೂದಾಗಿರುವ ವ್ಯಕ್ತಿ;

(ಡಬ್ಲ್ಯೂ) "ನೋಂದಾಯಿತ ವ್ಯಾಪಾರ ಚಿಹ್ನೆ" ಎಂದರೆ, ವಾಸ್ತವಿಕವಾಗಿ ರಿಜಿಸ್ಟರಿನಲ್ಲಿರುವ ಮತ್ತು ಜಾರಿಯಲ್ಲಿ ಉಳಿದಿರುವ ಒಂದು ವ್ಯಾಪಾರ ಚಿಹ್ನೆ;

(ಎಕ್ಸ್) "ನೋಂದಾಯಿತ ಬಳಕೆದಾರ" ಎಂದರೆ, 49ನೇ ಪ್ರಕರಣದ ಅಡಿಯಲ್ಲಿ ತತ್ಕಾಲದಲ್ಲಿ ಹಾಗೆಂದು ನೋಂದಾಯಿತನಾದ ವ್ಯಕ್ತಿ;

(ವೈ) "ರಿಜಿಸ್ಟ್ರಾರ್" ಎಂದರೆ, 3ನೇ ಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಾರ್;

(ಜೆಡ್) "ಸೇವೆ" ಎಂದರೆ ಸಂಭಾವ್ಯ ಬಳಕೆದಾರರಿಗೆ ದೊರಕುವಂತೆ ಮಾಡಲಾದ ಯಾವುದೇ ಬಗೆಯ ಸೇವೆ ಮತ್ತು ಬ್ಯಾಂಕು ವ್ಯವಹಾರ, ಸಂಪರ್ಕ, ಶಿಕ್ಷಣ, ಹಣಕಾಸು ನೀಡಿಕೆ, ವಿಮೆ, ಚೀಟಿ ವ್ಯವಹಾರ, ಸ್ಥಿರ ಸಂಪದ, ಸಾಗಣೆ, ಸಂಗ್ರಹಣೆ, ಪ್ರಧಾನ ಉಪಚಾರ, ಸಂಸ್ಕರಣೆ, ವಿದ್ಯುತ್‌ಶಕ್ತಿ ಅಥವಾ ಇತರ ಶಕ್ತಿಯ ಸರಬರಾಜು, ಊಟೋಪಚಾರ, ವಸತಿಗೃಹ, ರಂಜನೆ, ಮನರಂಜನೆ, ನಿರ್ಮಾಣ, ದುರಸ್ತಿ, ವಾರ್ತೆಗಳನ್ನು ಅಥವಾ ಮಾಹಿತಿಯನ್ನು ಕಳಿಸುವುದು ಮತ್ತು ಜಾಹೀರಾತು ಮಾಡುವುದು ಮೊದಲಾದ ಯಾವುದೇ ಕೈಗಾರಿಕಾ ಅಥವಾ ವಾಣಿಜ್ಯ ವಿಷಯಗಳ ವ್ಯವಹಾರಕ್ಕೆ ಸಂಬಂಧಿಸಿದ ಸೇವೆಗಳನ್ನು ಒದಗಿಸುವುದನ್ನು ಒಳಗೊಳ್ಳುತ್ತದೆ;

(ಜಡ್‌ಎ) "ವ್ಯಾಪಾರ ವಿವರಣೆ" ಎಂದರೆ, ಈ ಮುಂದಿನವುಗಳಿಗೆ ಸಂಬಂಧಿಸಿದಂತೆ ಯಾವುದೇ ವಿವರಣೆ, ಹೇಳಿಕೆ ಅಥವಾ ಇತರ ಪ್ರತ್ಯಕ್ಷ ಅಥವಾ ಪರೋಕ್ಷ ಸೂಚನೆ,–

(i) ಯಾವುದೇ ಸರಕುಗಳ ಸಂಖ್ಯೆ, ಪರಿಮಾಣ, ಅಳತೆ, ಮಾಪನ ಅಥವಾ ತೂಕ; ಅಥವಾ

(ii) ವ್ಯಾಪಾರದಲ್ಲಿ ಸಾಮಾನ್ಯವಾಗಿ ಬಳಸಲಾಗುವ ಅಥವಾ ಮಾನ್ಯ ಮಾಡಲಾಗುವ ಒಂದು ವರ್ಗೀಕರಣಕ್ಕೆ ಅನುಸಾರವಾಗಿ ಯಾವುವೇ ಸರಕುಗಳ ಅಥವಾ ಸೇವೆಗಳ ಗುಣಮಟ್ಟ; ಅಥವಾ

(iii) ಔಷಧ ಮತ್ತು ಪ್ರಸಾಧನ ಸಾಮಗ್ರಿಗಳ ಅಧಿನಿಯಮ, 1940ರಲ್ಲಿ (1940ರ 23) ವಿವರಿಸಿದ "ಔಷಧ"ವಾಗಿರುವ ಅಥವಾ ಆಹಾರ ಕಲಬೆರಕೆ ಪ್ರತಿಬಂಧಕ ಅಧಿನಿಯಮ, 1954ರಲ್ಲಿ (1954ರ 37) ವಿವರಿಸಿದ, ಆಹಾರವಾಗಿರುವ ಯಾವುದೇ ಸರಕುಗಳ ಉದ್ದೇಶ, ಸಂಖ್ಯಾಬಲ, ಕಾರ್ಯಪಾಲನೆ ಅಥವಾ ಚರ್ಯೆಗೆ ಸಂಬಂಧಿಸಿದಂತೆ ಹೊಂದಿಕೆ; ಅಥವಾ

(iv) ಯಾವುವೇ ಸರಕುಗಳನ್ನು ಅಥವಾ ಸಂದರ್ಭಾನುಸಾರ, ಸೇವೆಗಳನ್ನು ಎಲ್ಲಿ ಅಥವಾ ಯಾವ ಕಾಲದಲ್ಲಿ ಮಾಡಲಾಗಿದೆಯೋ, ಉತ್ಪಾದಿಸಲಾಗಿದೆಯೋ ಅಥವಾ ಒದಗಿಸಲಾಗಿದೆಯೋ ಆ ಸ್ಥಳ ಅಥವಾ ದೇಶ ಅಥವಾ ಕಾಲ; ಅಥವಾ

(v) ತಯಾರಕನ ಅಥವಾ ಸೇವೆಗಳನ್ನು ಒದಗಿಸುವ ವ್ಯಕ್ತಿಯ ಅಥವಾ ಯಾವ ವ್ಯಕ್ತಿಗಾಗಿ ಸರಕುಗಳನ್ನು ತಯಾರಿಸಲಾಗಿದೆಯೋ ಅಥವಾ ಸೇವೆಗಳನ್ನು ಒದಗಿಸಿದೆಯೋ ಆ ವ್ಯಕ್ತಿಯ ಗುರುತಿಗೆ ಸಂಬಂಧಿಸಿದಂತೆ ಹೆಸರು ಮತ್ತು ವಿಳಾಸ ಅಥವಾ ಇತರ ಸೂಚನೆ; ಅಥವಾ

(vi) ಯಾವುವೇ ಸರಕುಗಳನ್ನು ತಯಾರಿಸುವ ಅಥವಾ ಉತ್ಪಾದಿಸುವ ಅಥವಾ ಸೇವೆಗಳನ್ನು ಒದಗಿಸುವ ವಿಧಾನ; ಅಥವಾ

(vii) ಯಾವುವೇ ಸರಕುಗಳನ್ನು ತಯಾರಿಸಲಾದ ಸಾಮಗ್ರಿ; ಅಥವಾ

(viii) ಅಸ್ತಿತ್ವದಲ್ಲಿರುವ ಪೇಟೆಂಟ್, ವಿಶೇಷ ಹಕ್ಕು ಅಥವಾ ಕೃತಿಸ್ವಾಮ್ಯದ ವಿಷಯವಾಗಿರತಕ್ಕ ಯಾವುವೇ ಸರಕುಗಳು

– ಮತ್ತು ಅದರಲ್ಲಿ ಕೆಳಕಂಡವುಗಳು ಒಳಗೊಳ್ಳುತ್ತವೆ, –

(ಎ) ಮೇಲಿನ ಯಾವುವೇ ವಿಷಯಗಳ ಒಂದು ಸೂಚನೆಯಾಗಿ ಸಾಮಾನ್ಯವಾಗಿ ಪರಿಗಣಿಸಲಾಗುವ ವ್ಯಾಪಾರದ ರೂಢಿಗನುಸಾರವಾಗಿ ಯಾವುದೇ ಚಿಹ್ನೆಯ ಬಳಕೆಗೆ ಸಂಬಂಧಿಸಿದ ಯಾವುದೇ ವಿವರಣೆ;

(ಬಿ) ಆಮದು ರಫ್ತು ಸರಕುಗಳ ಪಟ್ಟಿಯಲ್ಲಿ ಅಥವಾ ಹಡಗು ಸಾಗಣೆ ಬಿಲ್ಲಿನಲ್ಲಿ ಇರುವ ಯಾವುವೇ ಆಮದು ಸರಕುಗಳಿಗೆ ಸಂಬಂಧಿಸಿದ ವಿವರಣೆ;

(ಸಿ) ಸದರಿ ಎಲ್ಲಾ ವಿಷಯಗಳಲ್ಲಿ ಅಥವಾ ಯಾವುದೇ ವಿಷಯದಲ್ಲಿ ತಪ್ಪು ತಿಳುವಳಿಕೆಗೆ ಅಥವಾ ತಪ್ಪು ಗ್ರಹಿಕೆಗೆ ಕಾರಣವಾಗಬಹುದಾದ ಯಾವುದೇ ಇತರ ವಿವರಣೆ;

(ಜಡ್‌ಬಿ) "ವ್ಯಾಪಾರ ಚಿಹ್ನೆ" ಎಂದರೆ ಸಂಕೇತ ರೇಖೆಗಳ ಮೂಲಕ ನಿರೂಪಿಸಲು ಸಾಧ್ಯವಾದ ಮತ್ತು ಒಬ್ಬ ವ್ಯಕ್ತಿಯ ಸರಕುಗಳನ್ನು ಅಥವಾ ಸೇವೆಗಳನ್ನು ಇತರರ ಸರಕುಗಳಿಂದ ಅಥವಾ ಸೇವೆಗಳಿಂದ ಬೇರ್ಪಡಿಸುವ, ವಿಭಿನ್ನವೆಂದು ತೋರಿಸಲು ಸಾಧ್ಯವಾದ ಒಂದು ಚಿಹ್ನೆ ಮತ್ತು ಸರಕುಗಳ ಆಕಾರ, ಅವುಗಳನ್ನು ಪ್ಯಾಕು ಮಾಡುವ ವಿನ್ಯಾಸ ಹಾಗೂ ಬಣ್ಣಗಳ ಸಂಯೋಜನೆ ಇದು ಒಳಗೊಂಡಿರಬಹುದು; ಮತ್ತು,–

(i) ಅಧ್ಯಾಯ–XIIಕ್ಕೆ ಸಂಬಂಧಿಸಿದಂತೆ (ಪ್ರಕರಣ 107ನ್ನು ಹೊರತುಪಡಿಸಿ), ಸರಕುಗಳ ಅಥವಾ ಸಂದರ್ಭಾನುಸಾರ ಸೇವೆಗಳ ಮತ್ತು ಕೆಲವು ವ್ಯಕ್ತಿಗಳು ಚಿಹ್ನೆಯನ್ನು ಮಾಲೀಕನಂತೆ ಬಳಸಲು ಹಕ್ಕು ಹೊಂದಿರುವ ಒಬ್ಬ ವ್ಯಕ್ತಿಯ ನಡುವಿನ ವ್ಯಾಪಾರ ಕ್ರಮದಲ್ಲಿ ಒಂದು ಸಂಬಂಧವನ್ನು ಸೂಚಿಸುವ ಉದ್ದೇಶಕ್ಕಾಗಿ ಅಥವಾ ಸೂಚಿಸುವಂತೆ ಮಾಡಲು, ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಬಳಸಲಾಗುವ ಒಂದು ನೋಂದಾಯಿತ ವ್ಯಾಪಾರ ಚಿಹ್ನೆ ಅಥವಾ ಒಂದು ಚಿಹ್ನೆ; ಮತ್ತು

(ii) ಈ ಅಧಿನಿಯಮದ ಇತರ ಉಪಬಂಧಗಳಿಗೆ ಸಂಬಂಧಿಸಿದಂತೆ, ಸರಕುಗಳ ಅಥವಾ ಸಂದರ್ಭಾನುಸಾರ ಸೇವೆಗಳ ಚಿಹ್ನೆಯನ್ನು ಮಾಲೀಕನಾಗಿ ಅಥವಾ ಅನುಮತಿಸಲಾದ

ಬಳಕೆದಾರನಾಗಿ, ಒಬ್ಬ ವ್ಯಕ್ತಿಯ ಗುರುತಿನ ಬಗ್ಗೆ ಯಾವುದೇ ಸೂಚನೆಯೊಂದಿಗೆ ಅಥವಾ ಸೂಚನೆಯಿಲ್ಲದೆ, ಚಿಹ್ನೆಯನ್ನು ಬಳಸಲು ಹಕ್ಕು ಹೊಂದಿರುವ ಆ ವ್ಯಕ್ತಿಯ ನಡುವಿನ ವ್ಯಾಪಾರ ಕ್ರಮದಲ್ಲಿ ಒಂದು ಸಂಬಂಧವನ್ನು ಸೂಚಿಸುವ ಉದ್ದೇಶಕ್ಕಾಗಿ ಅಥವಾ ಹಾಗೆ ಸೂಚಿಸುವಂತೆ ಮಾಡಲು, ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಬಳಸಿದ ಅಥವಾ ಬಳಸಲು ಪ್ರಸ್ತಾಪಿಸಲಾದ ಒಂದು ಚಿಹ್ನೆ, ಮತ್ತು ಒಂದು ಪ್ರಮಾಣೀಕೃತ ವ್ಯಾಪಾರ ಚಿಹ್ನೆ ಅಥವಾ ಸಾಮೂಹಿಕ ಚಿಹ್ನೆಯನ್ನು ಒಳಗೊಳ್ಳುತ್ತದೆ;

(ಜಡ್‌ಸಿ) "ವರ್ಗಾವಣೆ" ಎಂದರೆ, ಕಾನೂನು ಕಾರ್ಯಾಚರಣೆಯ ಮೂಲಕ ವರ್ಗಾವಣೆ, ಮರಣ ಹೊಂದಿದ ಒಬ್ಬ ವ್ಯಕ್ತಿಯ ವೈಯಕ್ತಿಕ ಪ್ರತಿನಿಧಿಗೆ ಪ್ರಾಪ್ತಿ ಮತ್ತು ಹಸ್ತಾಂತರಣವಲ್ಲದ, ವರ್ಗಾವಣೆಯ ಯಾವುದೇ ಇತರ ವಿಧಾನ;

(ಜಡ್‌ಡಿ) "ತಾಂತ್ರಿಕ ಸದಸ್ಯ" ಎಂದರೆ, ಒಬ್ಬ ನ್ಯಾಯಿಕ ಸದಸ್ಯನಲ್ಲದ ಒಬ್ಬ ಸದಸ್ಯ;

(ಜಡ್‌ಇ) "ನ್ಯಾಯಾಧಿಕರಣ" ಎಂದರೆ, ಸಂಬಂಧಿತ ವ್ಯವಹರಣೆಯು ಯಾವ ರಿಜಿಸ್ಟ್ರಾರನ ಅಥವಾ ಅಪೀಲು ಮಂಡಲಿಯ ಮುಂದೆ ಇತ್ಯರ್ಥದಲ್ಲಿದೆಯೋ, ಆ ರಿಜಿಸ್ಟ್ರಾರ್ ಅಥವಾ ಸಂದರ್ಭಾನುಸಾರ, ಅಪೀಲು ಮಂಡಲಿ;

(ಜಡ್‌ಎಫ್) "ಉಪಾಧ್ಯಕ್ಷ" ಎಂದರೆ ಅಪೀಲು ಮಂಡಲಿಯ ಒಬ್ಬ ಉಪಾಧ್ಯಕ್ಷ;

(ಜಡ್‌ಜಿ) ಯಾವುದೇ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ, "ವಿಖ್ಯಾತ ವ್ಯಾಪಾರ ಚಿಹ್ನೆ" ಎಂದರೆ ಇತರ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಪಟ್ಟಂತೆ ಅಂಥ ಚಿಹ್ನೆಯ ಬಳಕೆಯು ಆ ಸರಕುಗಳ ಅಥವಾ ಸೇವೆಗಳ ಮತ್ತು ಮೊದಲು ತಿಳಿಸಿದ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಆ ಚಿಹ್ನೆಯನ್ನು ಬಳಸುವ ವ್ಯಕ್ತಿಯ ನಡುವಣ ವ್ಯಾಪಾರದ ಅಥವಾ ಸೇವೆ ಸಲ್ಲಿಸುವ ಕ್ರಮದಲ್ಲಿ ಒಂದು ಸಂಪರ್ಕದ ಸೂಚನೆಯೆಂದು ತಿಳಿದುಕೊಳ್ಳುವ ಸಂಭವವಿದೆಯೆನ್ನುವ ರೀತಿಯಲ್ಲಿ, ಅಂಥ ಸರಕುಗಳನ್ನು ಬಳಸುವ ಅಥವಾ ಸೇವೆಗಳನ್ನು ಸ್ವೀಕರಿಸುವ ಸಾರ್ವಜನಿಕರ ಬಹಳಷ್ಟು ಭಾಗಕ್ಕೆ ವಿಖ್ಯಾತ ವ್ಯಾಪಾರ ಚಿಹ್ನೆಯಾಗಿರುವಂಥ ಒಂದು ವ್ಯಾಪಾರ ಚಿಹ್ನೆ.

(2) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-

(ಎ) "ವ್ಯಾಪಾರ ಚಿಹ್ನೆ"ಗೆ ಮಾಡಲಾದ ಯಾವುದೇ ಉಲ್ಲೇಖವು "ಸಾಮೂಹಿಕ ಚಿಹ್ನೆ" ಅಥವಾ "ಪ್ರಮಾಣೀಕೃತ ವ್ಯಾಪಾರ ಚಿಹ್ನೆ"ಗೆ ಮಾಡಲಾದ ಉಲ್ಲೇಖವನ್ನು ಒಳಗೊಂಡಿರತಕ್ಕದ್ದು;

(ಬಿ) ಒಂದು ಚಿಹ್ನೆಯ ಬಳಕೆಗೆ ಮಾಡಲಾದ ಯಾವುದೇ ಉಲ್ಲೇಖವನ್ನು ಚಿಹ್ನೆಯ ಮುದ್ರಿತ ಅಥವಾ ಇತರ ದೃಶ್ಯ ನಿರೂಪಣದ ಬಳಕೆಗೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು;

(ಸಿ) ಒಂದು ಚಿಹ್ನೆಯ ಬಳಕೆಗೆ,-

(i) ಸರಕುಗಳ ಸಂಬಂಧದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು ಅಂಥ ಸರಕುಗಳ ಮೇಲಿನ ಯಾವುದೇ ಭೌತಿಕ ಅಥವಾ ಇತರ ಯಾವುದೇ ಸಂಬಂಧದ ಮೇಲಿನ ಅಥವಾ ಅದರಲ್ಲಿನ ಚಿಹ್ನೆಯ ಬಳಕೆಗೆ ಮಾಡಲಾದ ಒಂದು ಉಲ್ಲೇಖವೆಂದು ಅರ್ಥೈಸತಕ್ಕದ್ದು;

(ii) ಸೇವೆಗಳ ಸಂಬಂಧದಲ್ಲಿ, ಮಾಡಲಾದ ಯಾವುದೇ ಉಲ್ಲೇಖವನ್ನು, ಅಂಥ ಸೇವೆಗಳ ಲಭ್ಯತೆ, ವ್ಯವಸ್ಥೆ ಅಥವಾ ಕಾರ್ಯಸಾಧನೆಗೆ ಸಂಬಂಧಿಸಿದ ಯಾವುದೇ ವಿವರಣೆಯಾಗಿ ಅಥವಾ ಅದರ ಭಾಗವಾಗಿ ಚಿಹ್ನೆಯ ಬಳಕೆಗೆ ಮಾಡಲಾದ ಒಂದು ಉಲ್ಲೇಖವೆಂದು ಅರ್ಥೈಸತಕ್ಕದ್ದು;

(ಡಿ) ರಿಜಿಸ್ಟ್ರಾರನಿಗೆ ಮಾಡಲಾದ ಯಾವುದೇ ಉಲ್ಲೇಖದಲ್ಲಿ 3ನೇ ಪ್ರಕರಣದ (2)ನೇ ಉಪಪ್ರಕರಣಕ್ಕನುಸಾರವಾಗಿ ರಿಜಿಸ್ಟ್ರಾರನ ಕರ್ತವ್ಯಗಳನ್ನು ನಿರ್ವಹಿಸುವ ಯಾರೇ ಅಧಿಕಾರಿಗೆ ಮಾಡಲಾದ ಒಂದು ಉಲ್ಲೇಖವು ಒಳಗೊಂಡಿದೆಯೆಂದು ಅರ್ಥೈಸತಕ್ಕದ್ದು;

(ಇ) ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಗೆ ಮಾಡಲಾದ ಯಾವುದೇ ಉಲೇಖದಲ್ಲಿ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯ ಯಾವುದೇ ಕಚೇರಿಗೆ ಮಾಡಲಾದ ಉಲ್ಲೇಖವು ಒಳಗೊಂಡಿರುವುದೆಂದು ಅರ್ಥೈಸತಕ್ಕದ್ದು.

(3) ಈ ಅಧಿನಿಯಮದ ಉದ್ದೇಶಗಳಿಗಾಗಿ, ಆ ಸರಕುಗಳನ್ನು ಸರಕುಗಳ ವಿವರಣೆಗಳು ಮತ್ತು ಸೇವೆಗಳ ವಿವರಣೆಗಳೊಂದಿಗೆ ಒಂದೇ ವ್ಯವಹಾರದ ಮೂಲಕ ಮಾರಾಟ ಮಾಡುವ ಅಥವಾ ಇತರೇ ರೀತಿಯಲ್ಲಿ ವ್ಯಾಪಾರ ಮಾಡುವ ಮತ್ತು ಆ ಸೇವೆಗಳನ್ನು ಒದಗಿಸುವ ಸಂಭವವಿರುವಲ್ಲಿ ಸರಕುಗಳು ಮತ್ತು ಸೇವೆಗಳು ಪರಸ್ಪರ ಸಹವರ್ತಿಗಳಾಗಿರುತ್ತವೆ.

(4) ಈ ಅಧಿನಿಯಮದ ಉದ್ದೇಶಗಳಿಗಾಗಿ, "ಅಸ್ತಿತ್ವದಲ್ಲಿರುವ ನೋಂದಾಯಿತ ವ್ಯಾಪಾರ ಚಿಹ್ನೆ" ಎಂದರೆ ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಚಿಹ್ನೆಗಳ ಅಧಿನಿಯಮ, 1958ರ (1958ರ 43) ಅಡಿಯಲ್ಲಿ ನೋಂದಾಯಿತವಾದ ಒಂದು ವ್ಯಾಪಾರ ಚಿಹ್ನೆ.

## ಅಧ್ಯಾಯ – II
## ರಿಜಿಸ್ಟರು ಮತ್ತು ನೋಂದಣಿಯ ಷರತ್ತುಗಳು

**3. ರಿಜಿಸ್ಟ್ರಾರ್ ಮತ್ತು ಇತರ ಅಧಿಕಾರಿಗಳ ನೇಮಕ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಒಬ್ಬ ವ್ಯಕ್ತಿಯನ್ನು ಪೇಟೆಂಟ್, ವಿನ್ಯಾಸ ಮತ್ತು ವ್ಯಾಪಾರ ಚಿಹ್ನೆಗಳ ಮಹಾ ನಿಯಂತ್ರಕ ಎಂಬುದಾಗಿ ನೇಮಕ ಮಾಡಬಹುದು, ಅವನು ಈ ಅಧಿನಿಯಮದ ಉದ್ದೇಶಗಳಿಗಾಗಿ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಾರನಾಗಿರತಕ್ಕದ್ದು.

(2) ಕೇಂದ್ರ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ರಿಜಿಸ್ಟ್ರಾರನ ಅಧೀಕ್ಷಣೆ ಮತ್ತು ನಿರ್ದೇಶನದ ಅಡಿಯಲ್ಲಿ ಕಾಲಕಾಲಕ್ಕೆ ರಿಜಿಸ್ಟ್ರಾರನು ತಾನು ನಿರ್ವಹಿಸಲು ಅಧಿಕಾರ ನೀಡಬಹುದಾದ ಅಂಥ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ತಾನು ಸೂಕ್ತವೆಂದು ಭಾವಿಸುವಂಥ ಇತರ ಅಧಿಕಾರಿಗಳನ್ನು ಅಂಥ ಪದನಾಮಗಳೊಂದಿಗೆ ನೇಮಕ ಮಾಡಬಹುದು.

**4. ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದು ಅಥವಾ ವರ್ಗಾವಣೆ ಮಾಡುವುದು, ಮೊದಲಾದ ರಿಜಿಸ್ಟ್ರಾರನ ಅಧಿಕಾರ.–** 3ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ರಿಜಿಸ್ಟ್ರಾರನು, ಲಿಖಿತ ಆದೇಶದ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ದಾಖಲಿಸಿ, ಸದರಿ (2)ನೇ ಉಪಪ್ರಕರಣದ ಅಡಿಯಲ್ಲಿ ನೇಮಕಗೊಂಡ ಅಧಿಕಾರಿಯ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ವಿಷಯವನ್ನು ಹಿಂತೆಗೆದುಕೊಳ್ಳಬಹುದು ಮತ್ತು ಅಂಥ ವಿಷಯವನ್ನು ತಾನೇ ಹೊಸದಾಗಿ ಅಥವಾ ಅದನ್ನು ಹಾಗೆ ವರ್ಗಾವಣೆ ಮಾಡಿದ ಹಂತದಿಂದ ವ್ಯವಹರಿಸಬಹುದು ಅಥವಾ ಹಾಗೆ ನೇಮಕ ಮಾಡಿದ ಮತ್ತೊಬ್ಬ ಅಧಿಕಾರಿಗೆ ಅದನ್ನು ವರ್ಗಾಯಿಸಬಹುದು, ಅವನು ವರ್ಗಾವಣೆ ಆದೇಶದಲ್ಲಿಯ ವಿಶೇಷ ನಿರ್ದೇಶನಗಳಿಗೆ ಒಳಪಟ್ಟು, ಆ ವಿಷಯವನ್ನು ಹೊಸದಾಗಿ ಅಥವಾ ಅದನ್ನು ಹಾಗೇ ವರ್ಗಾವಣೆ ಮಾಡಿದ ಹಂತದಿಂದ ವ್ಯವಹರಿಸಬಹುದು.

**5. ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿ ಮತ್ತು ಅದರ ಕಚೇರಿಗಳು.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ ವ್ಯಾಪಾರ ಚಿಹ್ನೆಗಳ ಒಂದು ರಿಜಿಸ್ಟ್ರಿ ಇರತಕ್ಕದ್ದು ಹಾಗೂ ವ್ಯಾಪಾರ ಮತ್ತು ವಾಣಿಜ್ಯ ಸರಕು ಚಿಹ್ನೆಗಳ ಅಧಿನಿಯಮ, 1958ರ (1958ರ 43) ಅಡಿಯಲ್ಲಿ ಸ್ಥಾಪಿತವಾದ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯು ಈ ಅಧಿನಿಯಮದ ಅಡಿಯಲ್ಲಿ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯಾಗಿರತಕ್ಕದ್ದು.

(2) ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯ ಕೇಂದ್ರ ಕಚೇರಿಯು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿರತಕ್ಕದ್ದು ಮತ್ತು ವ್ಯಾಪಾರ ಚಿಹ್ನೆಗಳ ನೋಂದಣಿಗೆ ಅನುಕೂಲ ಮಾಡಿಕೊಡುವ ಉದ್ದೇಶಕ್ಕಾಗಿ, ಕೇಂದ್ರ

ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಸ್ಥಳಗಳಲ್ಲಿ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯ ಶಾಖಾ ಕಚೇರಿಗಳನ್ನು ಸ್ಥಾಪಿಸಬಹುದು.

(3) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯ ಒಂದು ಕಚೇರಿಯು ಯಾವ ಪ್ರಾದೇಶಿಕ ಪರಿಮಿತಿಗಳೊಳಗೆ ತನ್ನ ಪ್ರಕಾರ್ಯಗಳನ್ನು ಚಲಾಯಿಸಬಹುದೋ ಅವುಗಳನ್ನು ನಿರ್ಧರಿಸತಕ್ಕದ್ದು.

(4) ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯು ಒಂದು ಮೊಹರನ್ನು ಹೊಂದಿರತಕ್ಕದ್ದು.

**6. ವ್ಯಾಪಾರ ಚಿಹ್ನೆಗಳ ರಿಜಿಸ್ಟರು.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ವ್ಯಾಪಾರ ಚಿಹ್ನೆಗಳ ರಿಜಿಸ್ಟರು ಎಂದು ಕರೆಯಲಾಗುವ ಒಂದು ದಾಖಲೆ ಪುಸ್ತಕವನ್ನು ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯ ಕೇಂದ್ರ ಕಚೇರಿಯಲ್ಲಿ ಇಟ್ಟಿರತಕ್ಕದ್ದು. ಅದರಲ್ಲಿ ಎಲ್ಲಾ ನೋಂದಾಯಿತ ವ್ಯಾಪಾರ ಚಿಹ್ನೆಗಳು ಮಾಲೀಕರ ಹೆಸರುಗಳು, ವಿಳಾಸಗಳು ಮತ್ತು ವಿವರಣೆಗಳು, ಹಸ್ತಾಂತರಣ ಮತ್ತು ವರ್ಗಾವಣೆಯ ಅಧಿಸೂಚನೆಗಳು, ನೋಂದಾಯಿತ ಬಳಕೆದಾರರ ಹೆಸರುಗಳು, ವಿಳಾಸಗಳು ಮತ್ತು ವಿವರಣೆಗಳು ಮತ್ತು ನಿಯಮಿಸಬಹುದಾದಂತೆ ನೋಂದಾಯಿತ ವ್ಯಾಪಾರ ಚಿಹ್ನೆಗಳಿಗೆ ಸಂಬಂಧಿಸಿದಂಥ ಷರತ್ತುಗಳು, ನಿರ್ಬಂಧಗಳು ಮತ್ತು ಇತರೆ ವಿಷಯಗಳೊಂದಿಗೆ ನಮೂದಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ ಸಹ, ನಿಯಮಿಸಬಹುದಾದಂಥ ರಕ್ಷಾ ಕ್ರಮಗಳಿಗೆ ಒಳಪಟ್ಟು ರಿಜಿಸ್ಟ್ರಾರನು ಗಣಕಯಂತ್ರ, ಧ್ವನಿ ಸುರುಳಿ, ಧ್ವನಿತಟ್ಟೆಗಳಲ್ಲಿ ಅಥವಾ ಇತರ ಯಾವುದೇ ವಿದ್ಯುನ್ಮಾನ ನಮೂನೆಯಲ್ಲಿ ಪೂರ್ಣವಾಗಿ ಅಥವಾ ಭಾಗಶಃ ದಾಖಲೆಗಳನ್ನು ಇಡುವುದು ಕಾನೂನು ಸಮ್ಮತವಾಗಿರತಕ್ಕದ್ದು.

(3) (2)ನೇ ಉಪಪ್ರಕರಣದ ಅಡಿಯಲ್ಲಿ ಗಣಕಯಂತ್ರದಲ್ಲಿ ಅಂಥ ರಿಜಿಸ್ಟರನ್ನು ಪೂರ್ಣವಾಗಿ ಅಥವಾ ಭಾಗಶಃ ನಿರ್ವಹಿಸಿರುವಲ್ಲಿ, ಈ ಅಧಿನಿಯಮದಲ್ಲಿ ರಿಜಿಸ್ಟರಿನ ನಮೂದಿಗೆ ಮಾಡಲಾದ ಯಾವುದೇ ಉಲ್ಲೇಖವನ್ನು, ಗಣಕಯಂತ್ರದ ಅಥವಾ ಇತರ ಯಾವುದೇ ವಿದ್ಯುನ್ಮಾನ ನಮೂನೆಯಲ್ಲಿ ಇಟ್ಟುಕೊಂಡು ಬಂದ ಯಾವುದೇ ನಮೂದಿಗೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(4) ವಿಶ್ವಾಸಕ್ಕೆ ಸಂಬಂಧಿಸಿದಂತೆ, ವ್ಯಕ್ತ ಅಥವಾ ಇಂಗಿತ ಅಥವಾ ರಚನಾತ್ಮಕವಾದ ಯಾವುದೇ ನೋಟೀಸನ್ನು ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದಲ್ಲ ಮತ್ತು ರಿಜಿಸ್ಟ್ರಾರನು ಅಂಥ ಯಾವುದೇ ನೋಟೀಸನ್ನು ಸ್ವೀಕರಿಸತಕ್ಕದ್ದಲ್ಲ.

(5) ರಿಜಿಸ್ಟ್ರಾರನ ನಿಯಂತ್ರಣ ಮತ್ತು ವ್ಯವಸ್ಥಾಪನೆಯಲ್ಲಿ ರಿಜಿಸ್ಟರನ್ನು ಇಡತಕ್ಕದ್ದು.

(6) ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯ ಪ್ರತಿಯೊಂದು ಶಾಖಾ ಕಚೇರಿಯಲ್ಲಿ ರಿಜಿಸ್ಟರಿನ ಒಂದು ಪ್ರತಿಯನ್ನು ಮತ್ತು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದಾದಂತೆ 148ನೇ ಪ್ರಕರಣದಲ್ಲಿ ಹೇಳಿದಂಥ ಇತರ ದಸ್ತಾವೇಜುಗಳನ್ನು ಇಡತಕ್ಕದ್ದು.

(7) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿದ್ದ ವ್ಯಾಪಾರ ಚಿಹ್ನೆಗಳ ರಿಜಿಸ್ಟರಿನ, ಭಾಗ– ಎ ಮತ್ತು ಭಾಗ– ಬಿ ಯನ್ನು ಈ ಅಧಿನಿಯಮದ ಅಡಿಯಲ್ಲಿ ರಿಜಿಸ್ಟರಿನಲ್ಲಿ ಸೇರಿಸತಕ್ಕದ್ದು ಮತ್ತು ಅದು ಅದರ ಭಾಗವಾಗಿರತಕ್ಕದ್ದು.

**7. ಸರಕುಗಳ ಮತ್ತು ಸೇವೆಗಳ ವರ್ಗೀಕರಣ.–** (1) ರಿಜಿಸ್ಟ್ರಾರನು, ವ್ಯಾಪಾರ ಚಿಹ್ನೆಗಳ ನೋಂದಣಿಯ ಉದ್ದೇಶಗಳಿಗಾಗಿ, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಸರಕುಗಳ ಮತ್ತು ಸೇವೆಗಳ ಅಂತರಾಷ್ಟ್ರೀಯ ವರ್ಗೀಕರಣಕ್ಕನುಸಾರವಾಗಿ ಸರಕುಗಳನ್ನು ಮತ್ತು ಸೇವೆಗಳನ್ನು ವರ್ಗೀಕರಿಸತಕ್ಕದ್ದು.

(2) ಯಾವುವೇ ಸರಕುಗಳು ಅಥವಾ ಸೇವೆಗಳು ಯಾವ ವರ್ಗದಲ್ಲಿ ಬರುತ್ತವೆ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದಾಗ, ಅದನ್ನು ರಿಜಿಸ್ಟ್ರಾರನು ನಿರ್ಧರಿಸತಕ್ಕದ್ದು, ಮತ್ತು ಆ ಬಗ್ಗೆ ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

**8. ಅಕಾರಾದಿ ಸೂಚಿಯ ಪ್ರಕಟಣೆ.–** (1) ರಿಜಿಸ್ಟ್ರಾರನು, 7ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಸರಕುಗಳ ಮತ್ತು ಸೇವೆಗಳ ವರ್ಗೀಕರಣದ ಅಕಾರಾದಿ ಸೂಚಿಯನ್ನು ನಿಯಮಿಸಿದ ವಿಧಾನದಲ್ಲಿ ಪ್ರಕಟಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಪ್ರಕಟಿಸಿದ ಸರಕುಗಳ ಮತ್ತು ಸೇವೆಗಳ ಅಕಾರಾದಿ ಸೂಚಿಯಲ್ಲಿ ಯಾವುವೇ ಸರಕುಗಳನ್ನು ಅಥವಾ ಸೇವೆಗಳನ್ನು ನಿರ್ದಿಷ್ಟಪಡಿಸಿರದಿದ್ದಲ್ಲಿ, ಸರಕುಗಳ ಅಥವಾ ಸೇವೆಗಳ ವರ್ಗೀಕರಣವನ್ನು 7ನೇ ಪ್ರಕರಣದ (2)ನೇ ಉಪಪ್ರಕರಣಕ್ಕನುಸಾರವಾಗಿ ರಿಜಿಸ್ಟ್ರಾರನು ನಿರ್ಧರಿಸತಕ್ಕದ್ದು.

**9. ನೋಂದಣಿಯ ನಿರಾಕರಣೆಗೆ ಸಂಪೂರ್ಣ ಆಧಾರಗಳು.–** (1) ಈ ಮುಂದಿನ ಸಂದರ್ಭಗಳಲ್ಲಿ ವ್ಯಾಪಾರ ಚಿಹ್ನೆಗಳನ್ನು,–

(ಎ) ಯಾವುದೇ ವಿಭಿನ್ನ ಸ್ವರೂಪ ಇಲ್ಲದಿರುವುದು ಎಂದರೆ ಒಬ್ಬ ವ್ಯಕ್ತಿಯ ಸರಕುಗಳನ್ನು ಅಥವಾ ಸೇವೆಗಳನ್ನು ಮತ್ತೊಬ್ಬ ವ್ಯಕ್ತಿಯ ಸರಕುಗಳಿಂದ ಅಥವಾ ಸೇವೆಗಳಿಂದ ವಿಭಿನ್ನಗೊಳಿಸಲು ಸಾಧ್ಯವಿಲ್ಲದಿರುವುದು;

(ಬಿ) ಸರಕುಗಳ ಬಗೆ, ಗುಣ, ಪರಿಮಾಣ, ಸಂಕಲ್ಪಿತ ಉದ್ದೇಶ, ಮೌಲ್ಯಗಳು, ಸರಕುಗಳ ಉತ್ಪಾದನೆಯ ಅಥವಾ ಸೇವೆಗಳ ಸಲ್ಲಿಸುವಿಕೆಯ ಭೌಗೋಳಿಕ ಮೂಲ ಅಥವಾ ಸಮಯ ಅಥವಾ ಸರಕುಗಳ ಅಥವಾ ಸೇವೆಗಳ ಇತರ ಸ್ವರೂಪಗಳನ್ನು ಹೆಸರಿಸುವುದಕ್ಕೆ ವ್ಯಾಪಾರದಲ್ಲಿ ಬಳಸಬಹುದಾದ ಚಿಹ್ನೆಗಳನ್ನು ಅಥವಾ ಸೂಚನೆಗಳನ್ನು ಅನನ್ಯವಾಗಿ ಹೊಂದಿರುವುದು;

(ಸಿ) ಪ್ರಚಲಿತ ಭಾಷೆಯಲ್ಲಿ ಅಥವಾ ವ್ಯಾಪಾರದಲ್ಲಿ ಪ್ರಾಮಾಣಿಕ ಮತ್ತು ಸುಸ್ಥಾಪಿತ ಪದ್ಧತಿಗಳಾಗಿರುವ ಚಿಹ್ನೆಗಳನ್ನು ಅಥವಾ ಸೂಚನೆಗಳನ್ನು ಅನನ್ಯವಾಗಿ ಹೊಂದಿರುವುದು

– ನೋಂದಾಯಿಸತಕ್ಕದ್ದಲ್ಲ:

ಪರಂತು, ವ್ಯಾಪಾರ ಚಿಹ್ನೆಯು, ನೋಂದಣಿಗೆ ಅರ್ಜಿ ಸಲ್ಲಿಸಿದ ದಿನಾಂಕಕ್ಕೆ ಮುಂಚೆಯೇ, ಅದರ ಬಳಕೆಯ ಪರಿಣಾಮವಾಗಿ ವಿಭಿನ್ನ ಸ್ವರೂಪ ಹೊಂದಿದ್ದರೆ ಅಥವಾ ಅದು ಒಂದು ವಿಖ್ಯಾತ ವ್ಯಾಪಾರ ಚಿಹ್ನೆಯಾಗಿದ್ದರೆ, ಅದರ ನೋಂದಣಿಯನ್ನು ತಿರಸ್ಕರಿಸತಕ್ಕದ್ದಲ್ಲ.

(2) ಒಂದು ಚಿಹ್ನೆಯನ್ನು,–

(ಎ) ಅದು ಸಾರ್ವಜನಿಕರನ್ನು ವಂಚಿಸುವ ಅಥವಾ ಗೊಂದಲಕ್ಕೆ ಕಾರಣವಾಗುವಂಥ ಸ್ವರೂಪದ್ದಾಗಿದ್ದರೆ;

(ಬಿ) ಅದು ಭಾರತದ ನಾಗರೀಕರ ಯಾವುದೇ ವರ್ಗದ ಅಥವಾ ಪಂಗಡದ ಧಾರ್ಮಿಕ ಸೂಕ್ಷ್ಮತೆಗೆ ನೋವು ಉಂಟುಮಾಡುವ ಸಂಭವವಿರುವ ಯಾವುದೇ ವಿಷಯವನ್ನು ಒಳಗೊಂಡಿದ್ದರೆ, ಅಥವಾ ಅದರಲ್ಲಿ ಅಡಕವಾಗಿದ್ದರೆ;

(ಸಿ) ಅದು ನಿಂದಾತ್ಮಕ ಅಥವಾ ಅಶ್ಲೀಲ ವಿಷಯವನ್ನು ಒಳಗೊಂಡಿದ್ದರೆ ಅಥವಾ ಅದರಲ್ಲಿ ಅಡಕವಾಗಿದ್ದರೆ;

(ಡಿ) ಅದು ಲಾಂಛನಗಳ ಮತ್ತು ಹೆಸರುಗಳ (ಅನುಚಿತ ಬಳಕೆಯ ಪ್ರತಿಬಂಧಕ) ಅಧಿನಿಯಮ, 1950ರ (1950ರ 12) ಅಡಿಯಲ್ಲಿ ಅದರ ಬಳಕೆಯನ್ನು ಪ್ರತಿಬಂಧಿಸಿದ್ದರೆ

– ವ್ಯಾಪಾರ ಚಿಹ್ನೆಯೆಂದು ನೋಂದಾಯಿಸತಕ್ಕದ್ದಲ್ಲ.

(3) ಒಂದು ಚಿಹ್ನೆಯನ್ನು,-

(ಎ) ಅದು ಸರಕುಗಳ ಸ್ವರೂಪದ ಪರಿಣಾಮದಿಂದ ಸರಕುಗಳಿಗೆ ಬರುವ ಆಕಾರ; ಅಥವಾ

(ಬಿ) ಅದು ಒಂದು ತಾಂತ್ರಿಕ ಫಲಿತಾಂಶವನ್ನು ಪಡೆಯಲು ಅವಶ್ಯವಿರುವ ಸರಕುಗಳಿಗೆ ಬರುವ ಆಕಾರ; ಅಥವಾ

(ಸಿ) ಅದು ಸರಕುಗಳಿಗೆ ಗಣನೀಯ ಮೌಲ್ಯವನ್ನು ನೀಡುವ ಆಕಾರ

– ಪ್ರತ್ಯೇಕವಾಗಿ ಹೊಂದಿದ್ದರೆ, ಅವುಗಳನ್ನು ವ್ಯಾಪಾರ ಚಿಹ್ನೆಯೆಂದು ನೋಂದಾಯಿಸತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ವ್ಯಾಪಾರ ಚಿಹ್ನೆಯನ್ನು ಬಳಸಲಾಗಿದೆಯೋ ಅಥವಾ ಬಳಸಲು ಉದ್ದೇಶಿಸಲಾಗಿದೆಯೋ ಆ ಸರಕುಗಳ ಅಥವಾ ಸೇವೆಗಳ ಸ್ವರೂಪವು, ನೋಂದಣಿಯನ್ನು ನಿರಾಕರಿಸಲು ಒಂದು ಆಧಾರವಾಗಿರತಕ್ಕದ್ದಲ್ಲ.

**10. ಬಣ್ಣಕ್ಕೆ ಸಂಬಂಧಿಸಿದ ನಿರ್ಬಂಧ.–** (1) ಒಂದು ವ್ಯಾಪಾರ ಚಿಹ್ನೆಯನ್ನು ಬಣ್ಣಗಳ ಯಾವುದೇ ಸಂಯೋಜನೆಗೆ ಪೂರ್ಣವಾಗಿ ಅಥವಾ ಭಾಗಶಃವಾಗಿ ನಿರ್ಬಂಧಿಸಬಹುದು ಮತ್ತು ಯಾವುದೇ ಅಂತಹ ನಿರ್ಬಂಧವನ್ನು, ನ್ಯಾಯಾಧಿಕರಣವು, ವ್ಯಾಪಾರ ಚಿಹ್ನೆಯ ವಿಭಿನ್ನ ಸ್ವರೂಪದ ಮೇಲೆ ನಿರ್ಧರಿಸಲು ಗಣನೆಗೆ ತೆಗೆದುಕೊಳ್ಳತಕ್ಕದ್ದು.

(2) ಒಂದು ವ್ಯಾಪಾರ ಚಿಹ್ನೆಯನ್ನು ಬಣ್ಣದ ನಿರ್ಬಂಧವಿಲ್ಲದೆ ನೋಂದಾಯಿಸಿರುವಷ್ಟರ ಮಟ್ಟಿಗೆ ಅದನ್ನು ಎಲ್ಲಾ ಬಣ್ಣಗಳ ಸಂಬಂಧದಲ್ಲಿ ನೋಂದಾಯಿಸಲಾಗಿದೆಯೆಂದು ಭಾವಿಸತಕ್ಕದ್ದು.

**11. ನೋಂದಣಿಯ ನಿರಾಕರಣೆಗೆ ಸಾಪೇಕ್ಷ ಆಧಾರಗಳು.–** (1) 12ನೇ ಪ್ರಕರಣದಲ್ಲಿ ಉಪಬಂಧಿಸಿದುದನ್ನುಳಿದು, ವ್ಯಾಪಾರ ಚಿಹ್ನೆಯನ್ನು,-

(ಎ) ಮೊದಲ ಒಂದು ವ್ಯಾಪಾರ ಚಿಹ್ನೆಯೊಂದಿಗೆ, ಅದು ತದ್ರೂಪವಾಗಿದ್ದರೆ ಮತ್ತು ವ್ಯಾಪಾರ ಚಿಹ್ನೆಯು ಅನ್ವಯಿಸುವ ಸರಕುಗಳಿಗೆ ಅಥವಾ ಸೇವೆಗಳಿಗೆ ಸಮರೂಪತೆಯಿದ್ದರೆ; ಅಥವಾ

(ಬಿ) ಮೊದಲ ಒಂದು ವ್ಯಾಪಾರ ಚಿಹ್ನೆಯೊಂದಿಗೆ ಅದಕ್ಕೆ ಸಮರೂಪತೆಯಿದ್ದರೆ ಮತ್ತು ವ್ಯಾಪಾರ ಚಿಹ್ನೆಯು ಅನ್ವಯಿಸುವ ಸರಕುಗಳಿಗೆ ಅಥವಾ ಸೇವೆಗಳಿಗೆ ತದ್ರೂಪ ಅಥವಾ ಸಮರೂಪತೆಯಿದ್ದರೆ

– ಅದು ಮೊದಲ ವ್ಯಾಪಾರ ಗುರುತಿನೊಂದಿಗೆ ಸೇರಿಕೊಳ್ಳುವ ಸಾಧ್ಯತೆ ಇದ್ದು, ಸಾರ್ವಜನಿಕರು ಗೊಂದಲಕ್ಕೊಳಗಾಗುವ ಸಂಭವವಿರುವುದರಿಂದ, ಅದನ್ನು ನೋಂದಾಯಿಸತಕ್ಕದ್ದಲ್ಲ.

(2) ಒಂದು ವ್ಯಾಪಾರ ಚಿಹ್ನೆಯು,-

(ಎ) ಮೊದಲ ಒಂದು ವ್ಯಾಪಾರ ಚಿಹ್ನೆಯೊಂದಿಗೆ ತದ್ರೂಪತೆ ಅಥವಾ ಸಮರೂಪತೆ ಹೊಂದಿದ್ದರೆ; ಮತ್ತು

(ಬಿ) ಬೇರೊಬ್ಬ ಮಾಲೀಕನ ಹೆಸರಿನಲ್ಲಿ ನೋಂದಾಯಿಸಿದ್ದ ಮೊದಲ ವ್ಯಾಪಾರ ಚಿಹ್ನೆಯೊಂದಿಗೆ ಸಮರೂಪತೆಯಿಲ್ಲದ ಸರಕುಗಳಿಗಾಗಿ ಅಥವಾ ಸೇವೆಗಳಿಗಾಗಿ ಅದನ್ನು ನೋಂದಾಯಿಸಬೇಕಾಗಿರುವುದರಿಂದ

– ಮೊದಲ ವ್ಯಾಪಾರ ಚಿಹ್ನೆ ಭಾರತದಲ್ಲಿ ಸುಪರಿಚಿತ ವ್ಯಾಪಾರ ಚಿಹ್ನೆಯಾಗಿದ್ದರೆ ಅಥವಾ ಸುಪರಿಚಿತ ವ್ಯಾಪಾರ ಚಿಹ್ನೆಯಾಗಿರುವಷ್ಟರ ಮಟ್ಟಿಗೆ ಮತ್ತು ಯುಕ್ತ ಕಾರಣವಿಲ್ಲದೆ ತರುವಾಯದ ಚಿಹ್ನೆಯ ಬಳಕೆಯು ಮೊದಲ ವ್ಯಾಪಾರ ಚಿಹ್ನೆಯ ವಿಶಿಷ್ಟ ಸ್ವರೂಪದ ಅಥವಾ ಖ್ಯಾತಿಯ ಅನುಚಿತ ಅನುಕೂಲವನ್ನು ಪಡೆಯುವಂತಿದ್ದರೆ ಅಥವಾ ಅದಕ್ಕೆ ಬಾಧಕವಾಗುವಂತಿದ್ದರೆ ಅದನ್ನು ನೋಂದಾಯಿಸತಕ್ಕದ್ದಲ್ಲ.

(3) ಒಂದು ವ್ಯಾಪಾರ ಚಿಹ್ನೆಯನ್ನು,–

(ಎ) ವ್ಯಾಪಾರದ ಕ್ರಮದಲ್ಲಿ ಯಾವುದೇ ಕಾನೂನಿನ, ಅದರಲ್ಲೂ ವಿಶೇಷವಾಗಿ, ನೋಂದಾಯಿಸಿಲ್ಲದ ವ್ಯಾಪಾರ ಚಿಹ್ನೆಯನ್ನು ಬಳಸಿ ಮೋಸದ ಮಾರಾಟದಿಂದ ರಕ್ಷಿಸುವ ಕಾನೂನಿನ ಸಲುವಾಗಿ; ಅಥವಾ

(ಬಿ) ಕೃತಿಸ್ವಾಮ್ಯದ ಕಾನೂನಿನ ಕಾರಣದಿಂದಾಗಿ

– ಭಾರತದಲ್ಲಿ ಅದರ ಬಳಕೆಯು ಪ್ರತಿಬಂಧಕ್ಕೆ ಅಥವಾ ಪ್ರತಿಬಂಧಿಸುವಷ್ಟರಮಟ್ಟಿಗೆ ಹೊಣೆಯಾಗಿದ್ದರೆ ನೋಂದಾಯಿಸತಕ್ಕದ್ದಲ್ಲ.

(4) ಈ ಪ್ರಕರಣದಲ್ಲಿರುವುದಾವುದೂ, ಮೊದಲ ವ್ಯಾಪಾರ ಚಿಹ್ನೆ ಅಥವಾ ಇತರ ಮೊದಲ ಹಕ್ಕನ್ನುಳ್ಳ ಮಾಲೀಕನು ನೋಂದಣಿಗೆ ಒಪ್ಪಿದಲ್ಲಿ ಒಂದು ವ್ಯಾಪಾರ ಚಿಹ್ನೆಯ ನೋಂದಣಿಗೆ ಅಡ್ಡಿಪಡಿಸತಕ್ಕದ್ದಲ್ಲ ಮತ್ತು ಅಂತಹ ಸಂದರ್ಭದಲ್ಲಿ ರಿಜಿಸ್ಟ್ರಾರನು 12ನೇ ಪ್ರಕರಣದ ಅಡಿಯಲ್ಲಿ ವಿಶೇಷ ಸಂದರ್ಭಗಳಲ್ಲಿ ಚಿಹ್ನೆಯನ್ನು ನೋಂದಾಯಿಸಬಹುದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ, ಮೊದಲ ವ್ಯಾಪಾರ ಚಿಹ್ನೆ ಎಂದರೆ, –

(ಎ) ಒಂದು ನೋಂದಾಯಿತ ವ್ಯಾಪಾರ ಚಿಹ್ನೆ ಅಥವಾ ಪ್ರಸ್ತುತದ ವ್ಯಾಪಾರ ಚಿಹ್ನೆಯ ದಿನಾಂಕಕ್ಕಿಂತ ಮೊದಲ ವ್ಯಾಪಾರ ಚಿಹ್ನೆಯ ಅರ್ಜಿಯ ದಿನಾಂಕವನ್ನು, ವ್ಯಾಪಾರ ಚಿಹ್ನೆಗಳ ಸಂಬಂಧದಲ್ಲಿ ಕ್ಲೇಮು ಮಾಡಿದ ಆದ್ಯತೆಯ ಮೇರೆಗೆ ಯುಕ್ತವಾಗಿ ಗಣನೆಗೆ ತೆಗೆದುಕೊಂಡಿರುವ, 154ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಒಡಂಬಡಿಕೆಯ ದೇಶಗಳಲ್ಲಿ ಯಾವ ಚಿಹ್ನೆಗಾಗಿ ಅರ್ಜಿ ಸಲ್ಲಿಸಿದೆಯೋ ಆ ಚಿಹ್ನೆ;

(ಬಿ) ಪ್ರಶ್ನಿತ ವ್ಯಾಪಾರ ಚಿಹ್ನೆಯ ನೋಂದಣಿಯ ಅರ್ಜಿಯ ದಿನಾಂಕದಂದು ಅಥವಾ ವಿಖ್ಯಾತ ವ್ಯಾಪಾರ ಚಿಹ್ನೆಯ ರಕ್ಷಣೆಯನ್ನು ಯುಕ್ತವಾಗಿ ಮಾಡಲು ಅರ್ಹವಾಗಿದ್ದು ಅರ್ಜಿಯ ಸಂಬಂಧದಲ್ಲಿ ಆದ್ಯತೆಯ ಮೇರೆಗೆ ಕ್ಲೇಮು ಮಾಡಿದ ಒಂದು ವ್ಯಾಪಾರ ಚಿಹ್ನೆ.

(5) ಮೊದಲ ವ್ಯಾಪಾರ ಚಿಹ್ನೆಯ ಮಾಲೀಕನು ಎತ್ತಿದ ವಿರೋಧದ ವ್ಯವಹರಣೆಗಳಲ್ಲಿ ಒಂದು ಅಥವಾ ಹೆಚ್ಚಿನ ಆಧಾರದ ಮೇಲೆ ಆಕ್ಷೇಪಣೆಯೆತ್ತಿದ ಹೊರತು, (2) ಮತ್ತು (3)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಆಧಾರಗಳ ಮೇರೆಗೆ ಯಾವುದೇ ಒಂದು ವ್ಯಾಪಾರ ಚಿಹ್ನೆಯ ನೋಂದಣಿಯನ್ನು ನಿರಾಕರಿಸತಕ್ಕದ್ದಲ್ಲ.

(6) ರಿಜಿಸ್ಟ್ರಾರನು, ಒಂದು ವ್ಯಾಪಾರ ಚಿಹ್ನೆಯು ವಿಖ್ಯಾತ ವ್ಯಾಪಾರ ಚಿಹ್ನೆಯೇ ಎಂಬುದನ್ನು ನಿರ್ಧರಿಸುವಾಗ,–

**(i)** ವ್ಯಾಪಾರ ಚಿಹ್ನೆಯ ಸಂವರ್ಧನೆಯ ಪರಿಣಾಮವಾಗಿ ಭಾರತದಲ್ಲಿ ಪಡೆದ ತಿಳುವಳಿಕೆಯೂ ಒಳಗೊಂಡಂತೆ, ಸಂಬಂಧಿಸಿದ ಸಾರ್ವಜನಿಕ ವರ್ಗದಲ್ಲಿ ಆ ವ್ಯಾಪಾರ ಚಿಹ್ನೆಯ ಬಗೆಗಿನ ತಿಳುವಳಿಕೆಯನ್ನು ಅಥವಾ ಮಾನ್ಯತೆಯನ್ನು;

**(ii)** ಆ ವ್ಯಾಪಾರ ಚಿಹ್ನೆಯ ಯಾವುದೇ ಬಳಕೆಯ ಅವಧಿ, ವ್ಯಾಪ್ತಿ ಮತ್ತು ಭೌಗೋಳಿಕ ಪ್ರದೇಶವನ್ನು;

**(iii)** ವ್ಯಾಪಾರ ಚಿಹ್ನೆಯು ಅನ್ವಯವಾಗುವ ಸರಕುಗಳನ್ನು ಅಥವಾ ಸೇವೆಗಳನ್ನು ಜಾತ್ರೆಗಳಲ್ಲಿ ಅಥವಾ ವಸ್ತು ಪ್ರದರ್ಶನಗಳಲ್ಲಿ ಜಾಹೀರಾತುಮಾಡಿಸುವುದು ಅಥವಾ ಪ್ರಚಾರಮಾಡಿಸುವುದು ಮತ್ತು ಪ್ರದರ್ಶಿಸುವುದೂ ಒಳಗೊಂಡಂತೆ, ವ್ಯಾಪಾರ ಚಿಹ್ನೆಯ ಯಾವುದೇ ಸಂವರ್ಧನೆಯ ಅವಧಿ, ವ್ಯಾಪ್ತಿ ಮತ್ತು ಭೌಗೋಳಿಕ ಪ್ರದೇಶವನ್ನು;

**(iv)** ವ್ಯಾಪಾರ ಚಿಹ್ನೆಯ ಬಳಕೆಯನ್ನು ಅಥವಾ ಮಾನ್ಯತೆಯನ್ನು ಪ್ರತಿಬಿಂಬಿಸುವಷ್ಟರ ಮಟ್ಟಿಗೆ, ಈ ಅಧಿನಿಯಮದ ಅಡಿಯಲ್ಲಿ ಆ ವ್ಯಾಪಾರ ಚಿಹ್ನೆಯ ಯಾವುದೇ ನೋಂದಣಿಯ ಅಥವಾ ನೋಂದಣಿ ಕೋರಿ ಸಲ್ಲಿಸಿದ ಯಾವುದೇ ಅರ್ಜಿಯ ಅವಧಿಯನ್ನು ಮತ್ತು ಭೌಗೋಳಿಕ ಪ್ರದೇಶವನ್ನು;

**(v)** ವ್ಯಾಪಾರ ಚಿಹ್ನೆಯ ಹಕ್ಕುಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ ದಾಖಲೆಯನ್ನು, ಅದರಲ್ಲೂ ವಿಶೇಷವಾಗಿ, ಆ ದಾಖಲೆಯ ಮೇರೆಗೆ ಯಾವುದೇ ನ್ಯಾಯಾಲಯದಿಂದ ಅಥವಾ ರಿಜಿಸ್ಟ್ರಾರನಿಂದ ವಿಖ್ಯಾತ ವ್ಯಾಪಾರ ಚಿಹ್ನೆಯೆಂದು ಮಾನ್ಯತೆ ಪಡೆದ ವ್ಯಾಪಾರ ಚಿಹ್ನೆಯ ವ್ಯಾಪ್ತಿಯನ್ನು

– ಒಳಗೊಂಡಂತೆ ಅವನು ಸುಸಂಬದ್ಧವೆಂದು ಪರಿಗಣಿಸುವ ಯಾವುದೇ ಸಂಗತಿಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

(7) ರಿಜಿಸ್ಟ್ರಾರನು, (6)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಸಂಬಂಧಪಟ್ಟ ಸಾರ್ವಜನಿಕ ವರ್ಗದಲ್ಲಿ ಪರಿಚಿತವಾಗಿರುವ ಅಥವಾ ಮಾನ್ಯತೆ ಪಡೆದ ವ್ಯಾಪಾರ ಚಿಹ್ನೆಯೆ ಎಂಬುದನ್ನು ನಿರ್ಧರಿಸುವಾಗ ಈ ಮುಂದಿನವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು,–

**(i)** ಸರಕುಗಳ ಅಥವಾ ಸೇವೆಗಳ ವಾಸ್ತವಿಕ ಅಥವಾ ಸಂಭಾವ್ಯ ಬಳಕೆದಾರರ ಸಂಖ್ಯೆ;

**(ii)** ಸರಕುಗಳ ಅಥವಾ ಸೇವೆಗಳ ವಿತರಣೆಯಲ್ಲಿ ತೊಡಗಿರುವ ವ್ಯಕ್ತಿಗಳ ಸಂಖ್ಯೆ;

**(iii)** ಯಾವುದೇ ಸರಕುಗಳಿಗೆ ಅಥವಾ ಸೇವೆಗಳಿಗೆ ಅನ್ವಯಿಸುವ ವ್ಯಾಪಾರ ಚಿಹ್ನೆಯೊಂದಿಗೆ ವ್ಯವಹರಿಸುವ ವಾಣಿಜ್ಯ ವಲಯಗಳು.

(8) ಭಾರತದಲ್ಲಿನ ಕನಿಷ್ಠ ಒಂದು ಸಂಬಂಧಪಟ್ಟ ಸಾರ್ವಜನಿಕ ವರ್ಗದಲ್ಲಿ ಒಂದು ವ್ಯಾಪಾರ ಚಿಹ್ನೆಯು ವಿಖ್ಯಾತ ವ್ಯಾಪಾರ ಚಿಹ್ನೆಯೆಂದು ಯಾವುದೇ ನ್ಯಾಯಾಲಯವು ಅಥವಾ ರಿಜಿಸ್ಟ್ರಾರನು ನಿರ್ಧರಿಸಿರುವಲ್ಲಿ, ರಿಜಿಸ್ಟ್ರಾರನು ಈ ಅಧಿನಿಯಮದ ಅಡಿಯಲ್ಲಿನ ನೋಂದಣಿಗೆ ಆ ವ್ಯಾಪಾರ ಚಿಹ್ನೆಯನ್ನು ವಿಖ್ಯಾತ ವ್ಯಾಪಾರ ಚಿಹ್ನೆಯೆಂದು ಪರಿಗಣಿಸತಕ್ಕದ್ದು.

(9) ರಿಜಿಸ್ಟ್ರಾರನು, ಒಂದು ವ್ಯಾಪಾರ ಚಿಹ್ನೆಯನ್ನು ವಿಖ್ಯಾತ ವ್ಯಾಪಾರ ಚಿಹ್ನೆಯೇ ಎಂದು ನಿರ್ಧರಿಸುವಾಗ, ಈ ಮುಂದಿನ ಯಾವುದೇ ಷರತ್ತನ್ನು ಅಗತ್ಯಪಡಿಸತಕ್ಕದ್ದಲ್ಲ, ಎಂದರೆ:–

**(i)** ಆ ವ್ಯಾಪಾರ ಚಿಹ್ನೆಯನ್ನು ಭಾರತದಲ್ಲಿ ಬಳಸಲಾಗಿದೆ;

**(ii)** ಆ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿದೆ;

**(iii)** ವ್ಯಾಪಾರ ಚಿಹ್ನೆಯ ನೋಂದಣಿಯ ಅರ್ಜಿಯನ್ನು ಭಾರತದಲ್ಲಿ ದಾಖಲ್ಮಾಡಿದೆ;

**(iv)** ಆ ವ್ಯಾಪಾರ ಚಿಹ್ನೆಯು ಭಾರತವನ್ನು ಹೊರತುಪಡಿಸಿದ ಯಾವುದೇ ಅಧಿಕಾರ ವ್ಯಾಪ್ತಿಯುಳ್ಳ ಪ್ರದೇಶದಲ್ಲಿ,–

(ಎ) ವಿಖ್ಯಾತಿ ಹೊಂದಿರಬೇಕು; ಅಥವಾ

(ಬಿ) ನೋಂದಾಯಿತವಾಗಿರಬೇಕು; ಅಥವಾ

(ಸಿ) ಆ ಸಂಬಂಧದಲ್ಲಿ ನೋಂದಣಿಯ ಅರ್ಜಿಯನ್ನು ದಾಖಲ್ಮಾಡಿರಬೇಕು; ಅಥವಾ

**(v)** ಆ ವ್ಯಾಪಾರ ಚಿಹ್ನಯು ಭಾರತದಲ್ಲಿ ಬಹುಸಂಖ್ಯೆಯ ಸಾರ್ವಜನಿಕರಿಗೆ ತಿಳಿದಿರಬೇಕು.

(10) ವ್ಯಾಪಾರ ಚಿಹ್ನೆಯ ನೋಂದಣಿ ಅರ್ಜಿಯನ್ನು ಮತ್ತು ಅದರ ಸಂಬಂಧದಲ್ಲಿ ದಾಖಲ್ಮಾಡಿರುವ, ವಿರೋಧವನ್ನು ಪರಿಗಣಿಸುವಾಗ ರಿಜಿಸ್ಟ್ರಾರನು,–

**(i)** ತದ್ರೂಪ ಇರುವ ಅಥವಾ ಸಮರೂಪ ಇರುವ ವ್ಯಾಪಾರ ಚಿಹ್ನೆಗಳಿಂದ ವಿಖ್ಯಾತ ವ್ಯಾಪಾರ ಚಿಹ್ನೆಯನ್ನು ರಕ್ಷಿಸತಕ್ಕದ್ದು;

**(ii)** ಅರ್ಜಿದಾರನಾಗಲಿ ಅಥವಾ ಪ್ರತಿಪಕ್ಷಕಾರನಾಗಲಿ ವ್ಯಾಪಾರ ಚಿಹ್ನೆಗೆ ಸಂಬಂಧಿಸಿದ ಹಕ್ಕಿಗೆ ಬಾಧೆಯನ್ನುಂಟು ಮಾಡುವ ದುರ್ಭಾವನೆಯನ್ನು ಹೊಂದಿದ್ದರೆ ಅದನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**11.** ರಿಜಿಸ್ಟ್ರಾರನಿಗೆ ಮುಖ್ಯ ಮಾಹಿತಿಗಳನ್ನು ಬಹಿರಂಗಪಡಿಸಿ ಸದ್ಭಾವನೆಯಿಂದ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಿರುವಲ್ಲಿ ಅಥವಾ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಸದ್ಭಾವನೆಯಿಂದ ಬಳಸುವುದಕ್ಕೆ ಒಂದು ವ್ಯಾಪಾರ ಚಿಹ್ನೆಯ ಹಕ್ಕನ್ನು ಪಡೆದುಕೊಂಡಿರುವಲ್ಲಿ, ಈ ಪ್ರಕರಣದಲ್ಲಿರುವುದಾವುದೂ, ಆ ವ್ಯಾಪಾರ ಚಿಹ್ನೆಯ ನೋಂದಣಿಯ ಸಿಂಧುತ್ವಕ್ಕೆ ಅಥವಾ ಅಂತಹ ವ್ಯಾಪಾರ ಚಿಹ್ನೆಯು ವಿಖ್ಯಾತ ವ್ಯಾಪಾರ ಚಿಹ್ನೆಗೆ ತದ್ರೂಪವಾಗಿರುವ ಅಥವಾ ಸಮರೂಪವಾಗಿರುವ ಆಧಾರದ ಮೇಲೆ ಆ ವ್ಯಾಪಾರ ಚಿಹ್ನೆಯ ಬಳಕೆಯ ಹಕ್ಕಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**12. ಪ್ರಾಮಾಣಿಕ ಸಮವರ್ತಿ ಉಪಯೋಗ ಮುಂತಾದವುಗಳ ಸಂದರ್ಭದಲ್ಲಿ ನೋಂದಣಿ, ಇತ್ಯಾದಿ.–** ಪ್ರಾಮಾಣಿಕ ಸಮವರ್ತಿ ಉಪಯೋಗದ ಸಂದರ್ಭದಲ್ಲಿ ಅಥವಾ ರಿಜಿಸ್ಟ್ರಾರನ ಅಭಿಪ್ರಾಯದಲ್ಲಿ ಹಾಗೆ ಮಾಡುವುದು ಯುಕ್ತವೆಂದು ಭಾವಿಸಿದ ಇತರ ವಿಶೇಷ ಸನ್ನಿವೇಶಗಳಲ್ಲಿ ಹಾಗೆ ವಿಧಿಸುವುದು ಸೂಕ್ತವೆಂದು ರಿಜಿಸ್ಟ್ರಾರನು ಭಾವಿಸಬಹುದಾದಂತೆ ಒಂದೇ ಅಥವಾ ಸಮರೂಪವಾಗಿರುವ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ತದ್ರೂಪವಾಗಿರುವ ಅಥವಾ ಸಮರೂಪ ಇರುವ (ಅಂಥ ಯಾವುದೇ ವ್ಯಾಪಾರ ಚಿಹ್ನೆಯನ್ನು ಈಗಾಗಲೇ ನೋಂದಾಯಿಸಿರಲಿ ಅಥವಾ ಇಲ್ಲದಿರಲಿ) ವ್ಯಾಪಾರ ಚಿಹ್ನೆಗಳನ್ನು ಒಬ್ಬರಿಗಿಂತ ಹೆಚ್ಚಿನ ಮಾಲೀಕರ ಸಂಬಂಧದಲ್ಲಿ ನೋಂದಣಿ ಮಾಡುವುದು ಸೂಕ್ತವೆಂದು ರಿಜಿಸ್ಟ್ರಾರನು ಅಭಿಪ್ರಾಯಪಟ್ಟಲ್ಲಿ ಅಂತಹ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಹಾಗೆ ನೋಂದಣಿ ಮಾಡಲು ಅನುಮತಿಸಬಹುದು.

**13. ರಾಸಾಯನಿಕ ವಸ್ತುಗಳ ಹೆಸರುಗಳು ಅಥವಾ ಅಂತರಾಷ್ಟ್ರೀಯ ಸ್ವಾಮ್ಯರಹಿತ ಹೆಸರುಗಳ ನೋಂದಣಿಗೆ ನಿಷೇಧ.–** (ಎ) ಒಂದು ರಾಸಾಯನಿಕ ವಸ್ತುವಿನ ಅಥವಾ ತಯಾರಿಕೆಯ ಸಂಬಂಧದಲ್ಲಿ ಯಾವುದೇ ಒಂದು ರಾಸಾಯನಿಕ ವಸ್ತು ಅಥವಾ ಯಾವುದೇ ಒಂದು ರಾಸಾಯನಿಕ ಸಂಯುಕ್ತದ (ಮಿಶ್ರಣದಿಂದ ಭಿನ್ನವಾದ) ಹೆಸರನ್ನು ಸಾಮಾನ್ಯವಾಗಿ ಬಳಸುವ ಮತ್ತು ಒಪ್ಪಿರುವ ಹೆಸರಾದ; ಅಥವಾ

(ಬಿ) ಅಂತರಾಷ್ಟ್ರೀಯ ಸ್ವಾಮ್ಯರಹಿತ ಹೆಸರೆಂದು ಅಥವಾ ಅಂತಹ ಹೆಸರಿಗೆ ಮೋಸ ಹೋಗುವಷ್ಟು ಸಮರೂಪ ಇರುವ ಹೆಸರೆಂದು, ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದ ಮತ್ತು ಕಾಲ ಕಾಲಕ್ಕೆ ರಿಜಿಸ್ಟ್ರಾರನು ಗೊತ್ತುಪಡಿಸಿದ ರೀತಿಯಲ್ಲಿ ಅಧಿಸೂಚಿಸಿದ

– ಯಾವುದೇ ಪದವನ್ನು ವ್ಯಾಪಾರ ಚಿಹ್ನೆಯೆಂದು ನೋಂದಾಯಿಸತಕ್ಕದ್ದಲ್ಲ ಮತ್ತು ಯಾವುದೇ ಅಂತಹ ನೋಂದಣಿಯನ್ನು, ಪರಿಸ್ಥಿತಿಗಳು ಅಗತ್ಯಪಡಿಸಬಹುದಾದಂತೆ ರಿಜಿಸ್ಟರಿನಲ್ಲಿ ಸಾಕಷ್ಟು ಕಾರಣವಿಲ್ಲದೆ ಮಾಡಿದ ನಮೂದೆಂದು ಅಥವಾ ರಿಜಿಸ್ಟರಿನಲ್ಲಿ ತಪ್ಪಾಗಿ ಉಳಿದಿರುವ ನಮೂದೆಂದು 57ನೇ ಪ್ರಕರಣದ ಉದ್ದೇಶಕ್ಕಾಗಿ ಭಾವಿಸತಕ್ಕದ್ದು.

**14. ಜೀವಂತ ವ್ಯಕ್ತಿಗಳ ಅಥವಾ ಇತ್ತೀಚೆಗೆ ಮರಣ ಹೊಂದಿದ ವ್ಯಕ್ತಿಗಳ ಹೆಸರುಗಳು ಮತ್ತು ಪ್ರಾತಿನಿಧ್ಯಗಳ ಬಳಕೆ.–** ವ್ಯಾಪಾರ ಚಿಹ್ನೆಯ ನೋಂದಣಿಗೆ ಸಲ್ಲಿಸಿದ ಅರ್ಜಿಯಲ್ಲಿ ಯಾರೇ ಜೀವಂತ ವ್ಯಕ್ತಿಯೊಂದಿಗೆ ಅಥವಾ ವ್ಯಾಪಾರ ಚಿಹ್ನೆಯ ನೋಂದಣಿಯ ಅರ್ಜಿಯ ದಿನಾಂಕಕ್ಕೆ ಹಿಂದೆ ಇಪ್ಪತ್ತು ವರ್ಷಗಳೊಳಗಿನ ಅವಧಿಯಲ್ಲಿ ಮರಣ ಸಂಭವಿಸಿದ ಯಾರೇ ವ್ಯಕ್ತಿಯೊಂದಿಗೆ ಅದನ್ನು ಸುಳ್ಳು ಸಂಬಂಧವನ್ನು ಸೂಚಿಸಿರುವಲ್ಲಿ ರಿಜಿಸ್ಟ್ರಾರನು, ಅರ್ಜಿಯ ಬಗ್ಗೆ ಕ್ರಮ ಮುಂದುವರೆಸುವ ಮುಂಚೆ, ವ್ಯಾಪಾರ ಚಿಹ್ನೆಯಲ್ಲಿ ಇರುವ ಸಂಬಂಧದ ಬಗ್ಗೆ ಅಂತಹ ಜೀವಂತ ವ್ಯಕ್ತಿಯ ಅಥವಾ ಸಂದರ್ಭಾನುಸಾರ, ಮೃತ ವ್ಯಕ್ತಿಯ ಕಾನೂನು ಸಮ್ಮತ ಪ್ರತಿನಿಧಿಯ ಒಪ್ಪಿಗೆಯನ್ನು ಲಿಖಿತದಲ್ಲಿ ಒದಗಿಸುವುದಕ್ಕೆ ಅರ್ಜಿದಾರನನ್ನು ಅಗತ್ಯಪಡಿಸಬಹುದು ಮತ್ತು ಅಂತಹ ಒಪ್ಪಿಗೆಯನ್ನು ರಿಜಿಸ್ಟ್ರಾರನಿಗೆ ಅರ್ಜಿದಾರನು ಒದಗಿಸಿದ ಹೊರತು, ಅರ್ಜಿಯ ಬಗ್ಗೆ ವ್ಯವಹರಿಸುವುದನ್ನು ನಿರಾಕರಿಸಬಹುದು.

**15. ವ್ಯಾಪಾರ ಚಿಹ್ನೆಗಳ ಭಾಗಗಳ ಮತ್ತು ವ್ಯಾಪಾರ ಚಿಹ್ನೆಗಳ ಶ್ರೇಣಿಗಳ ನೋಂದಣಿ.–** (1) ಒಂದು ವ್ಯಾಪಾರ ಚಿಹ್ನೆಯ ಮಾಲೀಕನು ಪ್ರತ್ಯೇಕವಾಗಿ ಅದರ ಯಾವುದೇ ಒಂದು ಭಾಗವನ್ನು ಅನನ್ಯವಾಗಿ ಬಳಸುವ ಹಕ್ಕಿಗೆ ಕ್ಲೇಮು ಮಾಡಿರುವಲ್ಲಿ, ಅವನು ಪೂರ್ಣ ಚಿಹ್ನೆಯ ಮತ್ತು ಭಾಗದ ಸಂಬಂಧದಲ್ಲಿ ಪ್ರತ್ಯೇಕ ವ್ಯಾಪಾರ ಚಿಹ್ನೆಗಳಾಗಿ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸಬಹುದು.

(2) ಪ್ರತಿಯೊಂದು ಅಂತಹ ಪ್ರತ್ಯೇಕ ವ್ಯಾಪಾರಚಿಹ್ನೆಯು, ಒಂದು ಸ್ವತಂತ್ರ ವ್ಯಾಪಾರ ಚಿಹ್ನೆಗೆ ಅನ್ವಯಿಸುವ ಎಲ್ಲಾ ಷರತ್ತುಗಳನ್ನು ಪೂರೈಸತಕ್ಕದ್ದು ಮತ್ತು ಅದು ಅನುಗತವಾಗಿ ಬರುವ ಎಲ್ಲಾ ಹಕ್ಕುಗಳನ್ನು ಹೊಂದಿರತಕ್ಕದ್ದು.

(3) ಒಬ್ಬ ವ್ಯಕ್ತಿಯು, ಒಂದೇ ಅಥವಾ ಸಮರೂಪ ಸರಕುಗಳ ಅಥವಾ ಸೇವೆಗಳ ಅಥವಾ ಸರಕುಗಳ ವಿವರಣೆ ಅಥವಾ ಸೇವೆಗಳ ವಿವರಣೆಯ ಸಂಬಂಧದಲ್ಲಿ ತಾನು ಅನೇಕ ವ್ಯಾಪಾರ ಚಿಹ್ನೆಗಳ ಮಾಲೀಕನಾಗಿರುವ ಬಗ್ಗೆ ಕ್ಲೇಮು ಮಾಡುವಲ್ಲಿ, ಅದರ ಮುಖ್ಯ ವಿವರಗಳಲ್ಲಿ ಪರಸ್ಪರ ಸಾದೃಶ್ಯ ಇದ್ದರೂ,–

(ಎ) ಅವುಗಳನ್ನು ಅನುಕ್ರಮವಾಗಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಸಂಬಂಧದಲ್ಲಿ ಸರಕುಗಳ ಅಥವಾ ಸೇವೆಗಳ ವಿವರಣೆ; ಅಥವಾ

(ಬಿ) ಸಂಖ್ಯೆ, ಬೆಲೆ, ಗುಣಮಟ್ಟ ಅಥವಾ ಸ್ಥಳಗಳ ಹೆಸರುಗಳ ವಿವರಣೆ; ಅಥವಾ

(ಸಿ) ವ್ಯಾಪಾರ ಚಿಹ್ನೆಯ ತದ್ರೂಪದ ಮೇಲೆ ಗಮನಾರ್ಹ ಪರಿಣಾಮ ಬೀರದ ವಿಭಿನ್ನವಲ್ಲದ ಸ್ವರೂಪದ ಇತರ ವಿಷಯ; ಅಥವಾ

(ಡಿ) ಬಣ್ಣ

– ಇವುಗಳಲ್ಲಿ ವ್ಯತ್ಯಾಸವಿದ್ದರೂ, ಆ ವ್ಯಾಪಾರ ಚಿಹ್ನೆಗಳ ನೋಂದಣಿಗೆ ಕೋರಿದಾಗ, ಅವುಗಳನ್ನು ಒಂದೇ ನೋಂದಣಿಯಲ್ಲಿ ಒಂದು ಶ್ರೇಣಿಯಾಗಿ ನೋಂದಾಯಿಸಬಹುದು.

**16. ವ್ಯಾಪಾರ ಚಿಹ್ನೆಗಳನ್ನು ಸಹವರ್ತಿ ವ್ಯಾಪಾರಚಿಹ್ನೆಗಳಾಗಿ ನೋಂದಣಿ ಮಾಡುವುದು.–** (1) ಯಾವುವೇ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ನೋಂದಾಯಿತವಾಗಿರುವ ಅಥವಾ ನೋಂದಣಿಯ ಅರ್ಜಿಯ ವಿಷಯವಾಗಿರುವ ಒಂದು ವ್ಯಾಪಾರ ಚಿಹ್ನೆಯು, ಅವೇ ಸರಕುಗಳಿಗೆ ಅಥವಾ ಸರಕುಗಳ ವಿವರಣೆಗೆ ಅಥವಾ ಅವೇ ಸೇವೆಗಳಿಗೆ ಅಥವಾ ಸೇವೆಗಳ ವಿವರಣೆಗೆ ಸಂಬಂಧಿಸಿದಂತೆ ಅದೇ ಮಾಲೀಕನ ಹೆಸರಿನಲ್ಲಿ ನೋಂದಾಯಿತವಾಗಿರುವ ಅಥವಾ ನೋಂದಣಿಯ ಅರ್ಜಿಯ ವಿಷಯವಾಗಿರುವ ಮತ್ತೊಂದು ವ್ಯಾಪಾರ ಚಿಹ್ನೆಯೊಂದಿಗೆ ತದ್ರೂಪವಾಗಿರುವ ಸಂದರ್ಭದಲ್ಲಿ ಅಥವಾ ಮಾಲೀಕನಲ್ಲದ ಇತರ ವ್ಯಕ್ತಿಯು ಅದನ್ನು ಬಳಸುವಾಗ

ಮೋಸಗೊಳಿಸುವ ಹಾಗೆ ಸರಿಸುಮಾರು ಸಾದೃಶ್ಯತೆಯಿದ್ದರೆ ಅಥವಾ ಗೊಂದಲಕ್ಕೆ ಕಾರಣವಾಗುವಂತಿದ್ದರೆ, ರಿಜಿಸ್ಟ್ರಾರನು, ಯಾವುದೇ ಕಾಲದಲ್ಲಿ, ಆ ವ್ಯಾಪಾರಚಿಹ್ನೆಗಳನ್ನು ಸಹವರ್ತಿ ವ್ಯಾಪಾರಚಿಹ್ನೆಗಳೆಂದು ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದೆಂದು ಅಗತ್ಯಪಡಿಸಬಹುದು.

(2) ಒಬ್ಬನೇ ಮಾಲೀಕನ ಹೆಸರಿನಲ್ಲಿ ನೋಂದಾಯಿತವಾಗಿರುವ ಅಥವಾ ನೋಂದಣಿಗೆ ಅರ್ಜಿಗಳ ವಿಷಯವಾಗಿರುವ ಚಿಹ್ನೆಗಳು ಆ ಸರಕುಗಳೊಂದಿಗೆ ಅಥವಾ ಆ ವಿವರಣೆಯ ಸರಕುಗಳೊಂದಿಗೆ ಮತ್ತು ಆ ಸೇವೆಗಳೊಂದಿಗೆ ಅಥವಾ ಆ ವಿವರಣೆಯ ಸೇವೆಗಳೊಂದಿಗೆ ಸಹವರ್ತಿಗಳಾಗಿರುವ ಸರಕುಗಳಿಗೆ ಸಂಬಂಧಿಸಿದಂತೆ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ತದ್ರೂಪವಾಗಿದ್ದರೆ ಅಥವಾ ಸರಿ ಸುಮಾರು ಸದೃಶ್ಯತೆಯಿರುವ (1)ನೇ ಉಪಪ್ರಕರಣವು ಅದೇ ಸರಕುಗಳ ಅಥವಾ ಸರಕುಗಳ ವಿವರಣೆಯ ಅಥವಾ ಅದೇ ಸೇವೆಗಳ ಅಥವಾ ಸೇವೆಗಳ ವಿವರಣೆಯ ಸಂಬಂಧದಲ್ಲಿ ಅದೇ ಮಾಲೀಕನ ಹೆಸರಿನಲ್ಲಿ ನೋಂದಾಯಿತವಾಗಿರುವ ಅಥವಾ ನೋಂದಣಿಗೆ ಅರ್ಜಿಗಳ ವಿಷಯವಾಗಿರುವ ತದ್ರೂಪವಾಗಿರುವ ಅಥವಾ ಸರಿ ಸುಮಾರು ಸಾದೃಶ್ಯತೆಯಿರುವ ಚಿಹ್ನೆಗಳಿಗೆ ಅನ್ವಯವಾಗುವಂತೆಯೇ ಅನ್ವಯವಾಗತಕ್ಕದ್ದು.

(3) ಒಂದು ವ್ಯಾಪಾರ ಚಿಹ್ನೆಯನ್ನು ಮತ್ತು ಅದರ ಯಾವುದೇ ಭಾಗವನ್ನು, 15ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರ, ಅದೇ ಮಾಲೀಕನ ಹೆಸರಿನಲ್ಲಿ ಪ್ರತ್ಯೇಕ ವ್ಯಾಪಾರ ಚಿಹ್ನೆಗಳಾಗಿ ನೋಂದಾಯಿಸಿದಲ್ಲಿ, ಅವುಗಳನ್ನು ಸಹವರ್ತಿ ವ್ಯಾಪಾರ ಚಿಹ್ನೆಗಳೆಂದು ಭಾವಿಸತಕ್ಕದ್ದು ಮತ್ತು ಹಾಗೆ ನೋಂದಾಯಿಸತಕ್ಕದ್ದು.

(4) 15ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳಿಗನುಸಾರ ಎಲ್ಲಾ ವ್ಯಾಪಾರಚಿಹ್ನೆಗಳನ್ನು ಒಂದು ಶ್ರೇಣಿಯಾಗಿ ಒಂದೇ ನೋಂದಣಿಯಲ್ಲಿ ನೋಂದಾಯಿಸಿದಲ್ಲಿ, ಸಹವರ್ತಿ ವ್ಯಾಪಾರಚಿಹ್ನೆಗಳೆಂದು ಭಾವಿಸತಕ್ಕದ್ದು ಮತ್ತು ಹಾಗೆ ನೋಂದಾಯಿಸತಕ್ಕದ್ದು.

(5) ಸಹವರ್ತಿ ವ್ಯಾಪಾರಚಿಹ್ನೆಗಳೆಂದು ನೋಂದಾಯಿಸಲು ಎರಡು ಅಥವಾ ಹೆಚ್ಚಿನ ವ್ಯಾಪಾರಚಿಹ್ನೆಗಳ ನೋಂದಾಯಿತ ಮಾಲೀಕನು ನಿಯಮಿಸಲಾದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿದಾಗ, ರಿಜಿಸ್ಟ್ರಾರನು, ಅವುಗಳಲ್ಲಿ ನೋಂದಾಯಿತವಾಗಿರುವ ಯಾವುದೇ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅಥವಾ ಎರಡಕ್ಕೂ ಸಂಬಂಧಿಸಿದಂತೆ ಯಾರೇ ಇತರ ವ್ಯಕ್ತಿಯು ಆ ವ್ಯಾಪಾರ ಚಿಹ್ನೆಯನ್ನು ಬಳಸಿದಾಗ ಮೋಸದ ಅಥವಾ ಗೊಂದಲದ ಸಂಭವವಿಲ್ಲವೆಂದು ಮನಗಂಡರೆ, ಅವುಗಳ ಪೈಕಿ ಯಾವುದಕ್ಕಾದರು ಸಂಬಂಧಿಸಿದ ಸಹವರ್ತಿತ್ವವನ್ನು ರದ್ದು ಮಾಡಬಹುದು ಮತ್ತು ಅದಕ್ಕನುಸಾರ ರಿಜಿಸ್ಟರಿನಲ್ಲಿ ತಿದ್ದುಪಡಿ ಮಾಡಬಹುದು.

**17. ಚಿಹ್ನೆಯ ಭಾಗಗಳ ನೋಂದಣಿಯ ಪರಿಣಾಮ.–** (1) ಒಂದು ವ್ಯಾಪಾರ ಚಿಹ್ನೆಯು ಅನೇಕ ವಿಷಯಗಳನ್ನು ಒಳಗೊಂಡಿರುವಾಗ, ಅದರ ನೋಂದಣಿಯು, ಒಟ್ಟಾರೆಯಾಗಿ ಪರಿಗಣಿಸಿ ವ್ಯಾಪಾರ ಚಿಹ್ನೆಯನ್ನು ಬಳಸಲು ಮಾಲೀಕನಿಗೆ ಅನನ್ಯ ಹಕ್ಕನ್ನು ಪ್ರದಾನ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಒಂದು ವ್ಯಾಪಾರಚಿಹ್ನೆಯು,–

(ಎ) **(i)** ವ್ಯಾಪಾರಚಿಹ್ನೆಯಾಗಿ ನೋಂದಣಿ ಮಾಡಲು ಮಾಲೀಕನು ಹಾಕಿಕೊಂಡ ಒಂದು ಪ್ರತ್ಯೇಕ ಅರ್ಜಿಯ ವಿಷಯವಾಗಿಲ್ಲದ; ಅಥವಾ

**(ii)** ವ್ಯಾಪಾರಚಿಹ್ನೆಯೆಂದು ಮಾಲೀಕನು ಪ್ರತ್ಯೇಕವಾಗಿ ನೋಂದಾಯಿಸಿರದಿದ್ದ ಯಾವುದೇ ಭಾಗವನ್ನು ಒಳಗೊಂಡಿರುವಾಗ; ಅಥವಾ

(ಬಿ) ವ್ಯಾಪಾರಕ್ಕೆ ಸಾಮಾನ್ಯವಾಗಿರುವ ಅಥವಾ ಅನ್ಯಥಾ ವಿಭಿನ್ನವಲ್ಲದ ಸ್ವರೂಪದ ಯಾವುದೇ ವಿಷಯವನ್ನು ಒಳಗೊಂಡಿರುವಾಗ

– ಅದರ ನೋಂದಣಿಯು, ಹಾಗೇ ನೋಂದಾಯಿತವಾದ ಇಡೀ ವ್ಯಾಪಾರಚಿಹ್ನೆಯ ಒಂದು ಭಾಗವನ್ನು ರೂಪಿಸುವ ವಿಷಯದಲ್ಲಿ ಮಾತ್ರ ಯಾವುದೇ ಅನನ್ಯ ಹಕ್ಕನ್ನು ಪ್ರದಾನ ಮಾಡತಕ್ಕದ್ದಲ್ಲ.

## ಅಧ್ಯಾಯ – III
## ನೋಂದಣಿಯ ಕಾರ್ಯವಿಧಾನ ಮತ್ತು ಅವಧಿ

**18. ನೋಂದಣಿಗಾಗಿ ಅರ್ಜಿ.–** (1) ತಾನು ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಒಂದು ವ್ಯಾಪಾರ ಚಿಹ್ನೆಯ ಮಾಲೀಕನೆಂದು ಕ್ಲೇಮು ಮಾಡಿದ ಯಾರೇ ವ್ಯಕ್ತಿಯು, ಅದನ್ನು ನೋಂದಾಯಿಸುವುದಕ್ಕೆ ಇಚ್ಛೆಪಟ್ಟಲ್ಲಿ, ತನ್ನ ವ್ಯಾಪಾರಚಿಹ್ನೆಯ ನೋಂದಣಿಗಾಗಿ ನಿಯಮಿಸಲಾದ ರೀತಿಯಲ್ಲಿ, ರಿಜಿಸ್ಟ್ರಾರನಿಗೆ ಲಿಖಿತ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಬೇರೆ ಬೇರೆ ವರ್ಗಗಳ ಸರಕುಗಳ ಮತ್ತು ಸೇವೆಗಳ ವ್ಯಾಪಾರ ಚಿಹ್ನೆಯನ್ನು ನೋಂದಣಿ ಮಾಡಲು ಒಂದೇ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಆ ಬಗ್ಗೆ ಪ್ರತಿಯೊಂದು ವರ್ಗದ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಫೀಜು ಸಂದಾಯವಾಗತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಪ್ರತಿಯೊಂದು ಅರ್ಜಿಯನ್ನು, ಭಾರತದಲ್ಲಿ ಅರ್ಜಿದಾರನ ವ್ಯಾಪಾರದ ಪ್ರಮುಖ ಸ್ಥಳವು ಯಾವ ಪ್ರಾದೇಶಿಕ ಪರಿಮಿತಿಗಳೊಳಗೆ ಬರುತ್ತದೊ ಆ ಸ್ಥಳದಲ್ಲಿರುವ ಅಥವಾ ಜಂಟಿ ಅರ್ಜಿದಾರರ ಸಂದರ್ಭದಲ್ಲಿ, ಭಾರತದಲ್ಲಿ ಆ ಅರ್ಜಿದಾರನ ವ್ಯಾಪಾರ ಸ್ಥಳವನ್ನು ಹೊಂದಿರುವುದಾಗಿ ಯಾವ ಅರ್ಜಿದಾರನ ಹೆಸರನ್ನು ಅರ್ಜಿಯಲ್ಲಿ ಮೊದಲು ನಮೂದಿಸಲಾಗಿದೆಯೋ ಅವನ ವ್ಯಾಪಾರದ ಪ್ರಮುಖ ಸ್ಥಳವು ಭಾರತದಲ್ಲಿ ಎಲ್ಲಿರುವುದೊ ಅಲ್ಲಿರುವ ರಿಜಿಸ್ಟ್ರಿಯಲ್ಲಿ ದಾಖಲ್ಮಾಡತಕ್ಕದ್ದು:

ಪರಂತು, ಅರ್ಜಿದಾರನು ಅಥವಾ ಜಂಟಿ ಅರ್ಜಿದಾರರ ಪೈಕಿ ಯಾರೇ ಅರ್ಜಿದಾರನು ಭಾರತದಲ್ಲಿ ವ್ಯವಹಾರವನ್ನು ನಡೆಸದಿದ್ದಲ್ಲಿ, ಅರ್ಜಿಯಲ್ಲಿ ತಿಳಿಯಪಡಿಸಿದ ಜಾರಿ ವಿಳಾಸದಲ್ಲಿ ನಮೂದಿಸಿದ ಸ್ಥಳವು ಯಾವ ಪ್ರಾದೇಶಿಕ ಪರಿಮಿತಿಯೊಳಗೆ ಬರುತ್ತದೆಯೋ ಆ ಸ್ಥಳದಲ್ಲಿರುವ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿಯಲ್ಲಿ ಅರ್ಜಿಯನ್ನು ದಾಖಲ್ಮಾಡತಕ್ಕದ್ದು.

(4) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ರಿಜಿಸ್ಟ್ರಾರನು ಅರ್ಜಿಯನ್ನು ನಿರಾಕರಿಸಹುದು ಅಥವಾ ಅದನ್ನು ಸಂಪೂರ್ಣವಾಗಿ ಅಥವಾ ತಾನು ಸೂಕ್ತವೆಂದು ಭಾವಿಸಬಹುದಾದಂಥ ತಿದ್ದುಪಡಿಗಳು, ಮಾರ್ಪಾಡುಗಳು, ಷರತ್ತುಗಳು ಅಥವಾ ಪರಿಮಿತಿಗಳು, ಯಾವುದಾದರೂ ಇದ್ದರೆ, ಅವುಗಳಿಗೊಳಪಟ್ಟು ಅಂಗೀಕರಿಸಬಹುದು.

(5) ಅರ್ಜಿಯ ನಿರಾಕರಣೆ ಅಥವಾ ಷರತ್ತುಪೂರ್ವಕ ಅಂಗೀಕಾರದ ಸಂದರ್ಭದಲ್ಲಿ, ರಿಜಿಸ್ಟ್ರಾರನು, ಅಂಥ ನಿರಾಕರಣೆಗೆ ಅಥವಾ ಷರತ್ತುಪೂರ್ವಕ ಅಂಗೀಕಾರಕ್ಕೆ ಆಧಾರಗಳನ್ನು ಮತ್ತು ತಾನು ತೀರ್ಮಾನ ತೆಗೆದುಕೊಂಡದ್ದಕ್ಕೆ ಬಳಸಿದ ವಿಷಯಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

**19. ಅಂಗೀಕಾರ ಹಿಂತೆಗೆದುಕೊಳ್ಳುವುದು.–** ವ್ಯಾಪಾರ ಚಿಹ್ನೆಯ ನೋಂದಣಿಗಾಗಿ ಅರ್ಜಿಯನ್ನು, ಅಂಗೀಕರಿಸಿದ ನಂತರ, ಆದರೆ ಅದರ ನೋಂದಣಿಗೆ ಮುಂಚೆ ರಿಜಿಸ್ಟ್ರಾರನು,–

(ಎ) ಅರ್ಜಿಯನ್ನು ತಪ್ಪಾಗಿ ಅಂಗೀಕರಿಸಲಾಯಿತೆಂದು; ಅಥವಾ

(ಬಿ) ಪ್ರಕರಣದ ಸನ್ನಿವೇಶಗಳಲ್ಲಿ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಬಾರದೆಂದು ಅಥವಾ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟು ಅಥವಾ ಯಾವ ಷರತ್ತುಗಳು ಅಥವಾ ಪರಿಮಿತಿಗಳಿಗಿಂತ ಹೆಚ್ಚಿನ ಅಥವಾ ವಿಭಿನ್ನ ಷರತ್ತುಗಳಿಗೊಳಪಟ್ಟು ಅರ್ಜಿಯನ್ನು ನೋಂದಾಯಿಸತಕ್ಕದ್ದೆಂದು

– ರಿಜಿಸ್ಟ್ರಾರನಿಗೆ ಮನವರಿಕೆಯಾದರೆ ಹಾಗೆ ಮಾಡಬಹುದು ಅಥವಾ ಅವನು ಅಂಗೀಕಾರವನ್ನು ವಾಪಸು ಪಡೆಯಲು ಅಪೇಕ್ಷಿಸಿದರೆ, ಅರ್ಜಿದಾರನ ಅಹವಾಲನ್ನು ಕೇಳಿದ ತರುವಾಯ ಹಾಗೆ ಮಾಡಬಹುದು ಮತ್ತು ಅರ್ಜಿಯನ್ನು ಸ್ವೀಕರಿಸಿರದಿದ್ದರೆ ಹೇಗೋ ಹಾಗೆ ಮುಂದುವರಿಯಬಹುದು.

**20. ಅರ್ಜಿಯ ಜಾಹೀರಾತು.–** (1) ವ್ಯಾಪಾರಚಿಹ್ನೆಯ ನೋಂದಣಿಗಾಗಿ ಒಂದು ಅರ್ಜಿಯನ್ನು ಸಂಪೂರ್ಣವಾಗಿಯಾಗಲಿ ಅಥವಾ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟಾಗಲಿ ಅಂಗೀಕರಿಸಿದಾಗ ರಿಜಿಸ್ಟ್ರಾರನು, ಅದನ್ನು ಅಂಗೀಕರಿಸಿದ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಅದನ್ನು ಯಾವ ಷರತ್ತುಗಳು ಅಥವಾ ಪರಿಮಿತಿಗಳಿಗೆ ಒಳಪಟ್ಟು ಅಂಗೀಕರಿಸಲಾಯಿತೋ ಆ ಷರತ್ತುಗಳು ಅಥವಾ ಪರಿಮಿತಿಗಳು, ಯಾವುವಾದರೂ ಇದ್ದರೆ, ಅವುಗಳೊಂದಿಗೆ ನಿಯಮಿಸಲಾದ ರೀತಿಯಲ್ಲಿ ಅದನ್ನು ಜಾಹೀರಾತುಪಡಿಸುವಂತೆ ಮಾಡತಕ್ಕದ್ದು:

ಪರಂತು, ರಿಜಿಸ್ಟ್ರಾರನು, ಯಾವ ವ್ಯಾಪಾರಚಿಹ್ನೆಗೆ ಸಂಬಂಧಿಸಿದಂತೆ 9ನೇ ಪ್ರಕರಣದ (1)ನೇ ಉಪಪ್ರಕರಣವು ಮತ್ತು 11ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳು ಅನ್ವಯವಾಗುತ್ತವೋ ಆ ವ್ಯಾಪಾರಚಿಹ್ನೆಗೆ ಸಂಬಂಧಿಸಿದಂತೆ ಅರ್ಜಿಯನ್ನು ಅಂಗೀಕರಿಸುವುದಕ್ಕೆ ಮುಂಚೆ ಜಾಹೀರಾತು ನೀಡುವಂತೆ ಮಾಡಬಹುದು ಅಥವಾ ಯಾವುದೇ ಇತರೇ ಸಂದರ್ಭದಲ್ಲಿ ಯಾವುವೇ ಅಸಾಧಾರಣ ಪರಿಸ್ಥಿತಿಗಳ ಕಾರಣ ಹಾಗೆ ಮುಂಚಿತವಾಗಿಯೇ ಜಾಹೀರಾತು ನೀಡುವುದು ವಿಹಿತವೆಂದು ಕಂಡುಬಂದಲ್ಲಿ, ಹಾಗೆ ಮಾಡಬಹುದು.

(2) (ಎ) (1)ನೇ ಉಪಪ್ರಕರಣದ ಅಡಿಯಲ್ಲಿ ಅಂಗೀಕಾರಕ್ಕೆ ಮುಂಚೆ ಒಂದು ಅರ್ಜಿಯ ಜಾಹೀರಾತು ಮಾಡಿರುವಲ್ಲಿ; ಅಥವಾ

(ಬಿ) ಒಂದು ಅರ್ಜಿಯ ಜಾಹೀರಾತಿನ ನಂತರ,–

**(i)** ಅರ್ಜಿಯಲ್ಲಿರುವ ತಪ್ಪನ್ನು ಸರಿಪಡಿಸಲಾಗಿರುವಲ್ಲಿ; ಅಥವಾ

**(ii)** ಅರ್ಜಿಯನ್ನು 22ನೇ ಪ್ರಕರಣದ ಅಡಿಯಲ್ಲಿ ತಿದ್ದುಪಡಿ ಮಾಡುವುದಕ್ಕೆ ಅನುಮತಿಸಲಾಗಿರುವಲ್ಲಿ

– ರಿಜಿಸ್ಟ್ರಾರನು, ತನ್ನ ವಿವೇಚನೆಯ ಮೇರೆಗೆ ಅರ್ಜಿಯನ್ನು ಮತ್ತೊಮ್ಮೆ ಜಾಹೀರಾತುಪಡಿಸುವಂತೆ ಮಾಡಬಹುದು ಅಥವಾ (ಬಿ) ಖಂಡದ ಅಡಿಯಲ್ಲಿ ಬರುವ ಯಾವುದೇ ಸಂದರ್ಭದಲ್ಲಿ, ಅರ್ಜಿಯನ್ನು ಮತ್ತೊಮ್ಮೆ ಜಾಹಿರಾತು ಮಾಡುವ ಬದಲಿಗೆ, ಅರ್ಜಿಯಲ್ಲಿ ಮಾಡಿದ ಸರಿಪಡಿಸುವಿಕೆ ಮತ್ತು ತಿದ್ದುಪಡಿಯನ್ನು ನಿಯಮಿಸಲಾದ ರೀತಿಯಲ್ಲಿ ಅಧಿಸೂಚಿಸಬಹುದು.

**21. ನೋಂದಣಿಗೆ ವಿರೋಧ.–** (1) ಯಾರೇ ವ್ಯಕ್ತಿಯು, ನೋಂದಣಿ ಅರ್ಜಿಯ ಜಾಹೀರಾತಿನ ಅಥವಾ ಮರು ಜಾಹೀರಾತಿನ ದಿನಾಂಕದಿಂದ ಮೂರು ತಿಂಗಳೊಳಗೆ ಅಥವಾ ನಿಯಮಿಸಿದ ರೀತಿಯಲ್ಲಿ ಮತ್ತು ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ, ಒಟ್ಟು ಒಂದು ತಿಂಗಳಿಗೆ ಮೀರದಂತಹ ಹೆಚ್ಚಿನ ಅವಧಿಯೊಳಗೆ, ನೋಂದಣಿಗೆ ವಿರೋಧವಾಗಿ ನಿಯಮಿಸಿದ ರೀತಿಯಲ್ಲಿ ಲಿಖಿತ ನೋಟೀಸನ್ನು ರಿಜಿಸ್ಟ್ರಾರನಿಗೆ ನೀಡಬಹುದು.

(2) ರಿಜಿಸ್ಟ್ರಾರನು, ನೋಂದಣಿಯ ಸಂಬಂಧದ ಅರ್ಜಿದಾರನಿಗೆ ನೋಟೀಸಿನ ಒಂದು ಪ್ರತಿಯನ್ನು ಜಾರಿ ಮಾಡತಕ್ಕದ್ದು ಮತ್ತು ವಿರೋಧದ ನೋಟೀಸಿನ ಅಂಥ ಪ್ರತಿಯನ್ನು ಅರ್ಜಿದಾರನು ಸ್ವೀಕರಿಸಿದಂದಿನಿಂದ ಎರಡು ತಿಂಗಳೊಳಗೆ, ಅರ್ಜಿದಾರನು ತನ್ನ ಅರ್ಜಿಯನ್ನು ಯಾವ ಆಧಾರದ ಮೇರೆಗೆ ಅವಲಂಬಿಸಿರುವನೋ ಆ ಆಧಾರಗಳ ಮೇರೆಗೆ, ನಿಯಮಿಸಿದ ವಿಧಾನದಲ್ಲಿ ಒಂದು ಪ್ರತಿ ಹೇಳಿಕೆಯನ್ನು ರಿಜಿಸ್ಟ್ರಾರರಿಗೆ ಕಳುಹಿಸತಕ್ಕದ್ದು ಮತ್ತು ಅವನು ಹಾಗೆ ಮಾಡದಿದ್ದರೆ, ಅವನ ಅರ್ಜಿಯನ್ನು ಬಿಟ್ಟುಬಿಡಲಾಗಿದೆಯೆಂದು ಭಾವಿಸತಕ್ಕದ್ದು.

(3) ಅರ್ಜಿದಾರನು ಅಂಥ ಪ್ರತಿಹೇಳಿಕೆಯನ್ನು ಕಳುಹಿಸಿದರೆ, ರಿಜಿಸ್ಟ್ರಾರನು ವಿರೋಧದ ನೋಟೀಸನ್ನು ನೀಡಿದ ವ್ಯಕ್ತಿಗೆ ಅದರ ಒಂದು ಪ್ರತಿಯನ್ನು ಜಾರಿ ಮಾಡತಕ್ಕದ್ದು.

(4) ಪ್ರತಿವಾದಿಯು ಮತ್ತು ವಾದಿಯು ಅವಲಂಬಿಸಿರಬಹುದಾದ ಯಾವುದೇ ಸಾಕ್ಷ್ಯವನ್ನು ನಿಯಮಿಸಿದ ವಿಧಾನದಲ್ಲಿ ಮತ್ತು ನಿಯಮಿಸಿದ ಸಮಯದೊಳಗೆ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು ಮತ್ತು ರಿಜಿಸ್ಟ್ರಾರನು, ಅವರು ತಮ್ಮ ಅಹವಾಲನ್ನು ಹೇಳಬೇಕೆಂದು ಅಪೇಕ್ಷಿಸಿದರೆ, ಅವರಿಗೆ ಹಾಗೆ ಒಂದು ಸೂಕ್ತ ಅವಕಾಶ ನೀಡತಕ್ಕದ್ದು.

(5) ರಿಜಿಸ್ಟ್ರಾರನು, ಪಕ್ಷಕಾರರು ಅಗತ್ಯಪಡಿಸಿದರೆ ಹಾಗೆ, ಅಹವಾಲನ್ನು ಕೇಳಿದ ನಂತರ ಮತ್ತು ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ ಷರತ್ತುಗಳು ಅಥವಾ ಪರಿಮಿತಿಗಳು, ಯಾವುದಾದರು ಇದ್ದರೆ, ಅವುಗಳಿಗೆ ಒಳಪಟ್ಟು ಅಥವಾ ಒಳಪಡದೆ, ನೋಂದಣಿಯನ್ನು ಅನುಮತಿಸಬೇಕೆ ಎಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಪ್ರತಿವಾದಿಯು ಅವುಗಳ ಆಕ್ಷೇಪಣೆಯನ್ನು ಅವಲಂಬಿಸಿರಲಿ ಅಥವಾ ಇಲ್ಲದಿರಲಿ ಅದರ ಆಧಾರವನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(6) ವಿರೋಧದ ನೋಟೀಸನ್ನು ನೀಡಿರುವ ವ್ಯಕ್ತಿಯು ಅಥವಾ ಅಂಥ ನೋಟೀಸಿನ ಪ್ರತಿಯನ್ನು ಸ್ವೀಕರಿಸಿದ ನಂತರ ಪ್ರತಿಹೇಳಿಕೆಯನ್ನು ಕಳುಹಿಸಿರುವ ಅರ್ಜಿದಾರನು ಭಾರತದಲ್ಲಿ ವಾಸವಾಗಿಲ್ಲದಿದ್ದರೆ ಅಥವಾ ಅಲ್ಲಿ ವ್ಯವಹಾರವನ್ನು ನಡಿಸುತ್ತಿಲ್ಲದಿದ್ದರೆ, ರಿಜಿಸ್ಟ್ರಾರನು ತನ್ನ ಮುಂದಿರುವ ವ್ಯವಹರಣೆಗಳ ವೆಚ್ಚಗಳಿಗೆ ಭದ್ರತೆಯನ್ನು ನೀಡುವುದಕ್ಕೆ ಅವನನ್ನು ಅಗತ್ಯಪಡಿಸಬಹುದು ಮತ್ತು ಕ್ರಮಬದ್ಧವಾಗಿ ಅಂತಹ ಭದ್ರತೆಯನ್ನು ನೀಡುವುದಕ್ಕೆ ತಪ್ಪಿದಲ್ಲಿ, ವಿರೋಧವನ್ನು ಅಥವಾ ಸಂದರ್ಭಾನುಸಾರ ಅರ್ಜಿಯನ್ನು ಬಿಟ್ಟುಬಿಡಲಾಗಿದೆಯೆಂದು ಪರಿಗಣಿಸಬಹುದು.

(7) ರಿಜಿಸ್ಟ್ರಾರನು, ಕೋರಿಕೆಯ ಮೇಲೆ ತಾನು ನ್ಯಾಯಸಮ್ಮತವೆಂದು ಭಾವಿಸುವಂತಹ ನಿಬಂಧನೆಗಳ ಮೇರೆಗೆ ವಿರೋಧದ ಅಥವಾ ಪ್ರತಿಹೇಳಿಕೆಯ ನೋಟೀಸಿನಲ್ಲಿರುವ ಯಾವುದೇ ತಪ್ಪನ್ನು ಸರಿಪಡಿಸಲು ಅಥವಾ ಅದನ್ನು ತಿದ್ದುಪಡಿ ಮಾಡಲು ಅನುಮತಿಸಬಹುದು.

**22. ಸರಿಪಡಿಸುವುದು ಮತ್ತು ತಿದ್ದುಪಡಿ ಮಾಡುವುದು.–** ರಿಜಿಸ್ಟ್ರಾರನು, 18ನೇ ಪ್ರಕರಣದ ಅಡಿಯಲ್ಲಿ ನೋಂದಣಿಗೆ ಅರ್ಜಿಯನ್ನು ಅಂಗೀಕರಿಸುವ ಮುಂಚೆಯಾಗಲಿ ಅಥವಾ ನಂತರವಾಗಲಿ ಯಾವುದೇ ಸಮಯದಲ್ಲಿ, ತಾನು ನ್ಯಾಯಸಮ್ಮತವೆಂದು ಭಾವಿಸುವಂಥ ನಿಬಂಧನೆಗಳ ಮೇರೆಗೆ, ಅರ್ಜಿಯಲ್ಲಿರುವ ಅಥವಾ ಅರ್ಜಿಯ ಸಂಬಂಧದಲ್ಲಿನ ಯಾವುದೇ ತಪ್ಪನ್ನು ಸರಿಪಡಿಸಲು ಅನುಮತಿಸಬಹುದು ಅಥವಾ ಅರ್ಜಿಯ ತಿದ್ದುಪಡಿ ಮಾಡಲು ಅನುಮತಿಸಬಹುದು:

ಪರಂತು, 18ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಒಂದು ಅರ್ಜಿಯು, ಎರಡು ಅಥವಾ ಹೆಚ್ಚಿನ ಅರ್ಜಿಗಳಾಗಿ ವಿಭಾಗಗಳನ್ನು ಒಳಗೊಂಡಿದ್ದಲ್ಲಿ, ಅಂಥ ಒಂದೇ ಅರ್ಜಿಯ ತಿದ್ದುಪಡಿಯನ್ನು ಮಾಡಲಾಗಿದ್ದರೆ, ಪ್ರಾರಂಭಿಕ ಅರ್ಜಿಯನ್ನು ಸಲ್ಲಿಸಿದ ದಿನಾಂಕವನ್ನು ಹಾಗೆ ವಿಭಜಿತ ಅರ್ಜಿಗಳನ್ನು ಸಲ್ಲಿಸಿದ ದಿನಾಂಕವೆಂದು ಭಾವಿಸತಕ್ಕದ್ದು.

**23. ನೋಂದಣಿ.–** (1) 19ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ವ್ಯಾಪಾರ ಚಿಹ್ನೆಯ ನೋಂದಣಿಗಾಗಿ ಒಂದು ಅರ್ಜಿಯನ್ನು ಅಂಗೀಕರಿಸಿದಾಗ ಮತ್ತು,–

(ಎ) ಅರ್ಜಿಯನ್ನು ವಿರೋಧಿಸದಿರುವಲ್ಲಿ ಮತ್ತು ವಿರೋಧದ ನೋಟೀಸಿನ ಅವಧಿಯು ಮುಗಿದುಹೋಗಿರುವಲ್ಲಿ; ಅಥವಾ

(ಬಿ) ಅರ್ಜಿಯನ್ನು ವಿರೋಧಿಸಿರುವಲ್ಲಿ ಮತ್ತು ವಿರೋಧವನ್ನು ಅರ್ಜಿದಾರನ ಪರವಾಗಿ ನಿರ್ಧರಿಸಿದಲ್ಲಿ

– ರಿಜಿಸ್ಟ್ರಾರನು, ಕೇಂದ್ರ ಸರ್ಕಾರವು ಅನ್ಯಥಾ ನಿರ್ದೇಶಿಸಿರುವ ಹೊರತು, ಸದರಿ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸತಕ್ಕದ್ದು ಮತ್ತು ವ್ಯಾಪಾರ ಚಿಹ್ನೆಯನ್ನು ನೋಂದಾಯಿಸುವಾಗ ಸದರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದ್ದಾಗಿರುವಂತೆ ನೋಂದಾಯಿಸತಕ್ಕದ್ದು ಮತ್ತು ಆ ದಿನಾಂಕವನ್ನು 154ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ನೋಂದಣಿಯ ದಿನಾಂಕವೆಂಬುದಾಗಿ ಭಾವಿಸತಕ್ಕದ್ದು.

(2) ವ್ಯಾಪಾರಚಿಹ್ನೆಯ ನೋಂದಣಿಯಾದ ಮೇಲೆ ರಿಜಿಸ್ಟ್ರಾರನು, ವ್ಯಾಪಾರ ಚಿಹ್ನೆಗಳ ನೋಂದಣಿ ರಿಜಿಸ್ಟ್ರಿಯ ಮೊಹರಿನೊಂದಿಗೆ, ಗೊತ್ತುಪಡಿಸಿದ ನಮೂನೆಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ಅರ್ಜಿದಾರನಿಗೆ ನೀಡತಕ್ಕದ್ದು.

(3) ಒಂದು ವ್ಯಾಪಾರಚಿಹ್ನೆಯ ನೋಂದಣಿಯು, ಅರ್ಜಿದಾರನಿಗೆ ಸಂಬಂಧಿಸಿದ ಲೋಪದ ಕಾರಣದಿಂದ ಅರ್ಜಿಯ ದಿನಾಂಕದಿಂದ ಹನ್ನೆರಡು ತಿಂಗಳೊಳಗಾಗಿ ನೋಂದಣಿ ಪೂರೈಸದಿದ್ದರೆ, ರಿಜಿಸ್ಟ್ರಾರನು, ಅರ್ಜಿದಾರನಿಗೆ ನಿಯಮಿಸಿದ ರೀತಿಯಲ್ಲಿ ನೋಟೀಸನ್ನು ನೀಡಿದ ನಂತರ, ನೋಟೀಸಿನಲ್ಲಿ ಆ ಬಗ್ಗೆ ನಿರ್ದಿಷ್ಟಪಡಿಸಿದ ಸಮಯದೊಳಗೆ ಅದನ್ನು ಪೂರೈಸಿದ ಹೊರತು, ಅರ್ಜಿಯನ್ನು ಬಿಟ್ಟುಬಿಡಲಾಗಿದೆಯೆಂದು ಪರಿಗಣಿಸತಕ್ಕದ್ದು.

(4) ರಿಜಿಸ್ಟ್ರಾರನು, ಒಂದು ಲಿಪಿಕ ತಪ್ಪನ್ನು ಅಥವಾ ಸ್ಪುಟವಾಗಿ ಕಾಣುವ ಒಂದು ದೋಷವನ್ನು ಸರಿಪಡಿಸುವ ಉದ್ದೇಶಕ್ಕಾಗಿ ರಿಜಿಸ್ಟರನ್ನು ಅಥವಾ ನೋಂದಣಿಯ ಪ್ರಮಾಣ ಪತ್ರವನ್ನು ತಿದ್ದುಪಡಿ ಮಾಡಬಹುದು.

**24. ಜಂಟಿ ಒಡೆತನಕ್ಕೆ ಸೇರಿದ ವ್ಯಾಪಾರ ಚಿಹ್ನೆಗಳು.–** (1) (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವುದನ್ನು ಉಳಿದು, ಈ ಅಧಿನಿಯಮದಲ್ಲಿರುವುದು ಯಾವುದೂ, ವ್ಯಾಪಾರ ಚಿಹ್ನೆಯನ್ನು ಸ್ವತಂತ್ರವಾಗಿ ಬಳಸುವ ಅಥವಾ ಹಾಗೆ ಬಳಸುವುದಕ್ಕೆ ಉದ್ದೇಶಿಸದ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಅದರ ಜಂಟಿ ಮಾಲೀಕರೆಂದು ನೋಂದಣಿಯಾಗುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ.

(2) ಒಂದು ವ್ಯಾಪಾರ ಚಿಹ್ನೆಯಲ್ಲಿ ಹಿತಾಸಕ್ತಿಯಿರುವ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ನಡುವೆ,–

(ಎ) ಅವರಿಬ್ಬರ ಅಥವಾ ಅವರೆಲ್ಲರ ಪರವಾಗಿ; ಅಥವಾ

(ಬಿ) ಅವರಿಬ್ಬರು ಅಥವಾ ಅವರಲ್ಲಿ ಎಲ್ಲರೂ ವ್ಯಾಪಾರ ಕ್ರಮದಲ್ಲಿ ಸಂಬಂಧಿಸಿದ ಒಂದು ವಸ್ತುವಿನ ಅಥವಾ ಸೇವೆಯ ಸಂಬಂಧದಲ್ಲಿ ಹೊರತು, ಅವನಲ್ಲಿ ಮತ್ತು ಅವರಲ್ಲಿ ಇನ್ನೊಬ್ಬ ಅಥವಾ ಅವರ ಪೈಕಿ ಯಾರೋ ಒಬ್ಬರು ಬಳಸಲು ಹಕ್ಕುಳ್ಳವರಾಗಿಲ್ಲದ ಅವರಲ್ಲಿ ಒಬ್ಬ ಸಂಬಂಧವನ್ನು ಹೊಂದಿರುವಲ್ಲಿ

– ಆ ವ್ಯಕ್ತಿಗಳು ವ್ಯಾಪಾರಚಿಹ್ನೆಯ ಜಂಟಿಮಾಲೀಕರನ್ನಾಗಿ ನೋಂದಾಯಿಸಿಕೊಳ್ಳಬಹುದು ಮತ್ತು ಈ ಅಧಿನಿಯಮವು, ಚಲಾಯಿಸಲಾಗುತ್ತದೋ ಅದೇ ರೀತಿಯಲ್ಲಿ ಆ ವ್ಯಕ್ತಿಗಳಲ್ಲಿ ನಿಹಿತವಾಗಿರುವ ವ್ಯಾಪಾರ ಚಿಹ್ನೆಯನ್ನು ಬಳಸುವ ಯಾವುವೇ ಹಕ್ಕುಗಳಿಗೆ ಸಂಬಂಧಿಸಿದಂತೆ ಆ ಹಕ್ಕುಗಳು ಒಬ್ಬನೇ ವ್ಯಕ್ತಿಯಲ್ಲಿ ನಿಹಿತವಾಗಿದ್ದರೆ ಹೇಗೋ ಹಾಗೆ ಪರಿಣಾಮ ಹೊಂದಿರತಕ್ಕದ್ದು.

**25. ನೋಂದಣಿಯ ಅವಧಿ, ನವೀಕರಣ, ತೆಗೆದುಹಾಕುವಿಕೆ ಮತ್ತು ಪೂರ್ವಸ್ಥಿತಿ ಸ್ಥಾಪನೆ.–** (1) ಈ ಅಧಿನಿಯಮದ ಪ್ರಾರಂಭದ ನಂತರ, ವ್ಯಾಪಾರ ಚಿಹ್ನೆಯ ನೋಂದಣಿಯ ಅವಧಿಯು ಹತ್ತು ವರ್ಷಗಳದ್ದಾಗಿರತಕ್ಕದ್ದು, ಆದರೆ ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ಕಾಲ ಕಾಲಕ್ಕೆ ಅದನ್ನು ನವೀಕರಿಸಬಹುದು.

(2) ನಿಯಮಿಸಲಾದ ರೀತಿಯಲ್ಲಿ ಮತ್ತು ನಿಯಮಿಸಲಾದ ಅವಧಿಯೊಳಗೆ ಮತ್ತು ನಿಯಮಿಸಲಾದ ಫೀಜನ್ನು ಸಂದಾಯ ಮಾಡಿ ಒಂದು ವ್ಯಾಪಾರಚಿಹ್ನೆಯ ನೋಂದಾಯಿತ ಮಾಲೀಕನು ಅರ್ಜಿಯನ್ನು ಸಲ್ಲಿಸಿದ ನಂತರ, ರಿಜಿಸ್ಟ್ರಾರನು, ಮೂಲ ನೋಂದಣಿಯ ಮುಕ್ತಾಯದ ದಿನಾಂಕದಿಂದ ಅಥವಾ ಸಂದರ್ಭಾನುಸಾರ ನೋಂದಣಿಯ ಕೊನೆಯ ನವೀಕರಣದ ದಿನಾಂಕದಿಂದ ಹತ್ತು ವರ್ಷಗಳ ಅವಧಿಗಾಗಿ ವ್ಯಾಪಾರ ಚಿಹ್ನೆಯ ನೋಂದಣಿಯನ್ನು ನವೀಕರಿಸತಕ್ಕದ್ದು (ಈ ಪ್ರಕರಣದಲ್ಲಿ ಈ ದಿನಾಂಕವನ್ನು ಕೊನೆಯ ನೋಂದಣಿಯ ಮುಕ್ತಾಯದ ದಿನಾಂಕವೆಂಬುದಾಗಿ ಉಲ್ಲೇಖಿಸಲಾಗಿದೆ).

(3) ವ್ಯಾಪಾರಚಿಹ್ನೆಯ ಕೊನೆಯ ನೋಂದಣಿ ಅವಧಿಯ ಮುಕ್ತಾಯಕ್ಕೆ ಮುಂಚೆ ನಿಯಮಿಸಿದ ಕಾಲದಲ್ಲಿ ರಿಜಿಸ್ಟ್ರಾರನು, ನೋಂದಾಯಿತ ಮಾಲೀಕನಿಗೆ ನಿಯಮಿಸಿದ ವಿಧಾನದಲ್ಲಿ ಮುಕ್ತಾಯ ದಿನಾಂಕದ ಬಗ್ಗೆ ಮತ್ತು ನೋಂದಣಿಯ ನವೀಕರಣವನ್ನು ಪಡೆಯುವುದಕ್ಕೆ ಸಂಬಂಧಪಟ್ಟಂತೆ ಫೀಜಿನ ಸಂದಾಯಕ್ಕೆ ಸಂಬಂಧಿಸಿದ

ಷರತ್ತುಗಳನ್ನು ಮತ್ತು ಅನ್ಯಥಾ ತಿಳಿಸುವ ನೋಟೀಸನ್ನು ಕಳಿಸತಕ್ಕದ್ದು ಮತ್ತು ಆ ಬಗ್ಗೆ ನಿಯಮಿಸಲಾದ ಕಾಲದ ಅವಧಿಯ ಮುಕ್ತಾಯದಲ್ಲಿ ಆ ಷರತ್ತುಗಳನ್ನು ಕ್ರಮಬದ್ಧವಾಗಿ ಪಾಲಿಸದಿದ್ದಲ್ಲಿ, ರಿಜಿಸ್ಟ್ರಾರನು ಆ ವ್ಯಾಪಾರಚಿಹ್ನೆಯನ್ನು ರಿಜಿಸ್ಟರಿನಿಂದ ತೆಗೆದುಹಾಕಬಹುದು:

ಪರಂತು, ವ್ಯಾಪಾರ ಚಿಹ್ನೆಯ ಕೊನೆಯ ನೋಂದಣಿಯ ಮುಕ್ತಾಯದ ದಿನಾಂಕದಿಂದ ಆರು ತಿಂಗಳೊಳಗೆ ನಿಯಮಿಸಲಾದ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿದರೆ ಮತ್ತು ನಿಯಮಿಸಲಾದ ಫೀಜನ್ನು ಮತ್ತು ಅಧಿಭಾರವನ್ನು ಸಂದಾಯ ಮಾಡಿದರೆ, ರಿಜಿಸ್ಟ್ರಾರನು, ರಿಜಿಸ್ಟರಿನಿಂದ ವ್ಯಾಪಾರ ಚಿಹ್ನೆಯನ್ನು ತೆಗೆದುಹಾಕತಕ್ಕದ್ದಲ್ಲ ಮತ್ತು (2)ನೇ ಉಪಪ್ರಕರಣದ ಅಡಿಯಲ್ಲಿ ಹತ್ತು ವರ್ಷಗಳ ಅವಧಿಗಾಗಿ ವ್ಯಾಪಾರ ಚಿಹ್ನೆಯ ನೋಂದಣಿಯನ್ನು ನವೀಕರಿಸತಕ್ಕದ್ದು.

(4) ನಿಯಮಿಸಲಾದ ಫೀಜನ್ನು ಸಂದಾಯ ಮಾಡದಿದ್ದುದಕ್ಕಾಗಿ ರಿಜಿಸ್ಟರಿನಿಂದ ಒಂದು ವ್ಯಾಪಾರ ಚಿಹ್ನೆಯನ್ನು ತೆಗೆದು ಹಾಕಿರುವಲ್ಲಿ, ವ್ಯಾಪಾರ ಚಿಹ್ನೆಯ ಕೊನೆಯ ನೋಂದಣಿ ಅವಧಿ ಮುಕ್ತಾಯದಿಂದ ಆರು ತಿಂಗಳಗಳ ನಂತರ ಮತ್ತು ಒಂದು ವರ್ಷದ ಒಳಗೆ, ನಿಯಮಿಸಲಾದ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದ ಮೇಲೆ, ನ್ಯಾಯಸಮ್ಮತವೆಂದು ತನಗೆ ಮನದಟ್ಟಾದರೆ, ರಿಜಿಸ್ಟ್ರಾರನು, ವ್ಯಾಪಾರ ಚಿಹ್ನೆಯನ್ನು ರಿಜಿಸ್ಟರಿನಲ್ಲಿ ಪೂರ್ವಸ್ಥಿತಿಗೆ ತರತಕ್ಕದ್ದು ಮತ್ತು ಸಾಮಾನ್ಯವಾಗಿಯಾಗಲಿ ಅಥವಾ ತಾನು ಸೂಕ್ತವೆಂದು ಭಾವಿಸುವಂತೆ ವಿಧಿಸಬಹುದಾದ ಷರತ್ತುಗಳಿಗೆ ಅಥವಾ ಪರಿಮಿತಿಗೆ ಒಳಪಟ್ಟು, ವ್ಯಾಪಾರ ಚಿಹ್ನೆಯ ನೋಂದಣಿಯನ್ನು ಕೊನೆಯ ನೋಂದಣಿ ಅವಧಿಯ ಮುಕ್ತಾಯದಿಂದ ಹತ್ತು ವರ್ಷಗಳ ಅವಧಿಗಾಗಿ ನವೀಕರಿಸತಕ್ಕದ್ದು.

**26. ನವೀಕರಣದ ಫೀಜನ್ನು ಸಂದಾಯ ಮಾಡಲು ತಪ್ಪಿದ್ದಕ್ಕಾಗಿ ರಿಜಿಸ್ಟರಿನಿಂದ ತೆಗೆದುಹಾಕಿದುದರ ಪರಿಣಾಮ.–** ನವೀಕರಣದ ಫೀಜನ್ನು ಸಂದಾಯ ಮಾಡಲು ತಪ್ಪಿದ್ದಕ್ಕಾಗಿ ರಿಜಿಸ್ಟರಿನಿಂದ ವ್ಯಾಪಾರ ಚಿಹ್ನೆಯನ್ನು ತೆಗೆದುಹಾಕಿರುವಲ್ಲಿ, ತೆಗೆದುಹಾಕಿದ ದಿನಾಂಕದ ತರುವಾಯ ಒಂದು ವರ್ಷದ ಅವಧಿಯಲ್ಲಿ ಮತ್ತೊಂದು ವ್ಯಾಪಾರ ಚಿಹ್ನೆಯ ನೋಂದಣಿಗೆ ಸಲ್ಲಿಸಿದ ಯಾವುದೇ ಅರ್ಜಿಯ ಉದ್ದೇಶಕ್ಕಾಗಿ, ನ್ಯಾಯಾಧಿಕರಣಕ್ಕೆ, –

(ಎ) ಅದನ್ನು ತೆಗೆದುಹಾಕಿದ ನಿಕಟಪೂರ್ವದ ಹಿಂದಿನ ಎರಡು ವರ್ಷಗಳಲ್ಲಿ ತೆಗೆದುಹಾಕಲಾದ ವ್ಯಾಪಾರ ಚಿಹ್ನೆಯನ್ನು ವ್ಯಾಪಾರದಲ್ಲಿ ಪ್ರಾಮಾಣಿಕವಾಗಿ ಬಳಸಿಲ್ಲವೆಂದು; ಅಥವಾ

(ಬಿ) ತೆಗೆದುಹಾಕಲಾದ ವ್ಯಾಪಾರ ಚಿಹ್ನೆಯ ಯಾವುದೇ ಹಿಂದಿನ ಬಳಕೆಯ ಕಾರಣದಿಂದಾಗಿ ನೋಂದಣಿಗೆ ಸಲ್ಲಿಸಿದ ಅರ್ಜಿಯ ವಿಷಯವಾಗಿರುವ ವ್ಯಾಪಾರ ಚಿಹ್ನೆಯ ಬಳಕೆಯಿಂದ ಯಾವುದೇ ಮೋಸ ಅಥವಾ ಗೊಂದಲ ಉಂಟಾಗುವ ಸಂಭವವಿಲ್ಲವೆಂಬ ಬಗ್ಗೆ

– ಮನದಟ್ಟಾದ ಹೊರತು, ಅದನ್ನು ರಿಜಿಸ್ಟರಿನಲ್ಲಿ ಇರುವ ವ್ಯಾಪಾರ ಚಿಹ್ನೆಯೆಂಬುದಾಗಿ ಭಾವಿಸತಕ್ಕದ್ದು.

## ಅಧ್ಯಾಯ – IV
## ನೋಂದಣಿಯ ಪರಿಣಾಮ

**27. ನೋಂದಾಯಿಸಿರದ ವ್ಯಾಪಾರಚಿಹ್ನೆಯ ಉಲ್ಲಂಘನಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದಿರುವುದು.–** (1) ಯಾರೇ ವ್ಯಕ್ತಿಯು, ನೋಂದಾಯಿಸಿರದ ವ್ಯಾಪಾರಚಿಹ್ನೆಯ ಉಲ್ಲಂಘನೆಯನ್ನು ತಡೆಗಟ್ಟಲು ಅಥವಾ ಹಾನಿಪರಿಹಾರದ ವಸೂಲಿಗಾಗಿ ಯಾವುದೇ ವ್ಯವಹರಣೆಯನ್ನು ಹೂಡಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

(2) ಮತ್ತೊಬ್ಬ ವ್ಯಕ್ತಿಯ ಸರಕುಗಳೆಂದು ಅಥವಾ ಮತ್ತೊಬ್ಬ ವ್ಯಕ್ತಿಯು ಒದಗಿಸಲಾಗುವ ಸೇವೆಗಳೆಂದು ಸರಕುಗಳನ್ನು ಅಥವಾ ಸೇವೆಗಳನ್ನು ಮೋಸದಿಂದ ಮಾರುವ ಯಾರೇ ವ್ಯಕ್ತಿಯ ವಿರುದ್ಧ ಕ್ರಮತೆಗೆದುಕೊಳ್ಳುವ ಹಕ್ಕುಗಳಿಗೆ ಈ ಪ್ರಕರಣದಲ್ಲಿರುವುದು ಯಾವುದೂ ಬಾಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

**28. ನೋಂದಣಿ ಮೂಲಕ ಪ್ರದತ್ತವಾಗುವ ಹಕ್ಕುಗಳು.–** (1) ಈ ಅಧಿನಿಯಮದ ಇತರೆ ಉಪಬಂಧಗಳಿಗೊಳಪಟ್ಟು, ಒಂದು ವ್ಯಾಪಾರ ಚಿಹ್ನೆಯ ನೋಂದಣಿಯು ಸಿಂಧುವಾಗಿದ್ದರೆ, ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಯಾವ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿದೆಯೋ ಆ ವ್ಯಾಪಾರ ಚಿಹ್ನೆಯ ಬಳಕೆಯ ಮತ್ತು ಈ ಅಧಿನಿಯಮದ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ವ್ಯಾಪಾರ ಚಿಹ್ನೆಯ ಉಲ್ಲಂಘನೆಯ ಪರಿಹಾರವನ್ನು ಪಡೆಯುವ ಸಂಬಂಧದಲ್ಲಿ ಸಂಪೂರ್ಣ ಹಕ್ಕನ್ನು ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕನಿಗೆ ನೀಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನೀಡಲಾದ ವ್ಯಾಪಾರ ಚಿಹ್ನೆಯ ಬಳಕೆಯ ಸಂಪೂರ್ಣ ಹಕ್ಕು, ನೋಂದಣಿಯು ಯಾವ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು ನೋಂದಾಯಿಸಲಾಗಿದೆಯೋ ಆ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟಿರತಕ್ಕದ್ದು.

(3) ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ತದ್ರೂಪವಾಗಿರುವ ಅಥವಾ ಬಹುಮಟ್ಟಿಗೆ ಪರಸ್ಪರ ಸಾದೃಶ್ಯತೆಯಿರುವ ವ್ಯಾಪಾರ ಚಿಹ್ನೆಗಳ ನೋಂದಾಯಿತ ಮಾಲೀಕರಾಗಿದ್ದಲ್ಲಿ, ಆ ಯಾವುವೇ ವ್ಯಾಪಾರ ಚಿಹ್ನೆಗಳ ಬಳಕೆಯ ಅನನ್ಯ ಹಕ್ಕನ್ನು (ಅವರ ಅನುಕ್ರಮವಾದ ಹಕ್ಕುಗಳು ರಿಜಿಸ್ಟರಿನಲ್ಲಿ ನಮೂದಿಸಿದ ಯಾವುದೇ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟಿರುವಷ್ಟರ ಮಟ್ಟಿಗೆ ಹೊರತು) ಕೇವಲ ವ್ಯಾಪಾರ ಚಿಹ್ನೆಗಳನ್ನು ನೋಂದಣಿ ಮಾಡಿಸಿದ್ದೇವೆ ಎಂಬ ಕಾರಣ ಮಾತ್ರದಿಂದಲೇ ಆ ವ್ಯಕ್ತಿಗಳು ಯಾರೇ ಇತರೆ ವ್ಯಕ್ತಿಯ ವಿರುದ್ಧ ಆ ವ್ಯಕ್ತಿಗಳಲ್ಲಿ 'ಯಾರಾದರೂ ಒಬ್ಬ' ವ್ಯಕ್ತಿಯು ಆರ್ಜಿಸಿಕೊಂಡಿರುವುದಾಗಿ ಭಾವಿಸತಕ್ಕದ್ದಲ್ಲ, ಆದರೆ ಆ ವ್ಯಕ್ತಿಗಳಲ್ಲಿ ಪ್ರತಿಯೊಬ್ಬನು ಏಕಮಾತ್ರ ನೋಂದಾಯಿತ ಮಾಲೀಕನಾಗಿದ್ದರೆ ಹೇಗೋ ಹಾಗೆ (ಅನುಮತಿಸಲಾದ ಬಳಕೆಯ ರೂಪದಲ್ಲಿ ಬಳಸುವ ನೋಂದಾಯಿತ ಬಳಕೆದಾರರಲ್ಲದ) ಇತರೆ ವ್ಯಕ್ತಿಗಳ ವಿರುದ್ಧ ಅನ್ಯಥಾ ಅವೇ ಹಕ್ಕುಗಳನ್ನು ಹೊಂದಿರತಕ್ಕದ್ದು.

**29. ನೋಂದಾಯಿತ ವ್ಯಾಪಾರಚಿಹ್ನೆಗಳ ಉಲ್ಲಂಘನೆ.–** (1) ನೋಂದಾಯಿತ ಮಾಲೀಕನಾಗಿರದ ಅಥವಾ ಬಳಸಲು ಅನುಮತಿ ಹೊಂದುವ ಮೂಲಕ ಚಿಹ್ನೆಯನ್ನು ಬಳಕೆ ಮಾಡುವಂತಹ ಒಬ್ಬ ವ್ಯಕ್ತಿಯಾಗಿರದ ವ್ಯಾಪಾರ ಕ್ರಮದಲ್ಲಿ ಯಾವ ಸರಕುಗಳ ಮತ್ತು ಸೇವೆಗಳ ವಿಷಯದಲ್ಲಿ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿರುವ ವ್ಯಾಪಾರಚಿಹ್ನೆಯ ಹಾಗೆ ತದ್ರೂಪವಾಗಿರುವ ಅಥವಾ ಮೋಸ ಹೋಗುವಷ್ಟು ಸಮರೂಪವಿರುವ ಚಿಹ್ನೆಯನ್ನು ಮತ್ತು ಆ ವ್ಯಾಪಾರಚಿಹ್ನೆಯಾಗಿ ಪರಿಗಣಿಸುವ ಸಂಭವವಿರುವ ರೀತಿಯಲ್ಲಿ ಬಳಸುವ ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಉಲ್ಲಂಘಿಸಿದಂತಾಗುತ್ತದೆ.

(2) ನೋಂದಾಯಿತ ಮಾಲೀಕನಾಗಿರದ ಒಬ್ಬ ವ್ಯಕ್ತಿಯು ಅಥವಾ ಅನುಮತಿಸಲಾದ ಬಳಕೆಯ ಮೂಲಕ ಚಿಹ್ನೆಯನ್ನು ಬಳಕೆ ಮಾಡುವಂತಹ ಒಬ್ಬ ವ್ಯಕ್ತಿಯು, ವ್ಯಾಪಾರದ ಕ್ರಮದಲ್ಲಿ, ಯಾವ ಚಿಹ್ನೆಯು,–

(ಎ) ನೋಂದಾಯಿತ ವ್ಯಾಪಾರಚಿಹ್ನೆಯೊಂದಿಗೆ ತದ್ರೂಪತೆ ಕಾರಣದಿಂದಾಗಿ ಮತ್ತು ಅಂತಹ ನೋಂದಾಯಿತ ವ್ಯಾಪಾರಚಿಹ್ನೆಯ ವ್ಯಾಪ್ತಿಯಲ್ಲಿ ಬರುವ ಸರಕುಗಳ ಅಥವಾ ಸೇವೆಗಳ ಸಮರೂಪತೆಯ ಕಾರಣದಿಂದಾಗಿ; ಅಥವಾ

(ಬಿ) ನೋಂದಾಯಿತ ವ್ಯಾಪಾರಚಿಹ್ನೆಯೊಂದಿಗೆ ಅದರ ಸಮರೂಪತೆಯಿಂದಾಗಿ ಮತ್ತು ಅಂತಹ ನೋಂದಾಯಿತ ವ್ಯಾಪಾರಚಿಹ್ನೆಯ ವ್ಯಾಪ್ತಿಯಲ್ಲಿ ಬರುವ ಸರಕುಗಳ ಅಥವಾ ಸೇವೆಗಳ ತದ್ರೂಪತೆ ಅಥವಾ ಸಮರೂಪತೆಯ ಕಾರಣದಿಂದಾಗಿ; ಅಥವಾ

(ಸಿ) ನೋಂದಾಯಿತ ವ್ಯಾಪಾರಚಿಹ್ನೆಯೊಂದಿಗೆ ಅದರ ತದ್ರೂಪತೆಯಿಂದಾಗಿ ಮತ್ತು ಅಂತಹ ನೋಂದಾಯಿತ ವ್ಯಾಪಾರಚಿಹ್ನೆಯ ವ್ಯಾಪ್ತಿಯಲ್ಲಿ ಬರುವ ಸರಕುಗಳ ಅಥವಾ ಸೇವೆಗಳ ತದ್ರೂಪತೆಯಿಂದಾಗಿ

– ಸಾರ್ವಜನಿಕರಲ್ಲಿ ಗೊಂದಲ ಉಂಟುಮಾಡುವ ಸಂಭವವಿರುವುದೋ ನೋಂದಾಯಿತ ವ್ಯಾಪಾರಚಿಹ್ನೆಯೊಂದಿಗೆ ಸಂಬಂಧ ಕಲ್ಪಿತವಾಗುವ ಸಂಭವವಿರುವುದೋಆ ಚಿಹ್ನೆಯನ್ನು ಬಳಸಿದರೆ ಅವನು ಒಂದು ನೋಂದಾಯಿತ ವ್ಯಾಪಾರಚಿಹ್ನೆಯನ್ನು ಉಲ್ಲಂಘಿಸಿದಂತಾಗುತ್ತದೆ.

(3) (2)ನೇ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ಬರುವ ಯಾವುದೇ ಸಂದರ್ಭದಲ್ಲಿ, ಸಾರ್ವಜನಿಕರಲ್ಲಿ ಗೊಂದಲ ಉಂಟಾಗುವ ಸಂಭವವಿರುವುದೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

(4) ನೋಂದಾಯಿತ ಮಾಲೀಕನಾಗಿರದ ಒಬ್ಬ ವ್ಯಕ್ತಿಯು ಅಥವಾ ಅನುಮತಿಸಲಾದ ಬಳಕೆಯ ಮೂಲಕ ಚಿಹ್ನೆಯನ್ನು ಬಳಕೆ ಮಾಡುವಂತಹ ಒಬ್ಬ ವ್ಯಕ್ತಿಯು, ವ್ಯಾಪಾರದ ಕ್ರಮದಲ್ಲಿ ಯಾವ ಚಿಹ್ನೆಯು,–

(ಎ) ನೋಂದಾಯಿತ ವ್ಯಾಪಾರಚಿಹ್ನೆಯೊಂದಿಗೆ ತದ್ರೂಪವಾಗಿರುವುದೋ ಅಥವಾ ಅದಕ್ಕೆ ಸಮರೂಪವಾಗಿರುವುದೋ; ಮತ್ತು

(ಬಿ) ನೋಂದಾಯಿತ ವ್ಯಾಪಾರಚಿಹ್ನೆಯ ಸರಕುಗಳು ಅಥವಾ ಸೇವೆಗಳಿಗೆ ಸಮರೂಪತೆ ಇಲ್ಲದ ಸರಕುಗಳು ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಬಳಕೆಯಾಗಿವೆಯೋ; ಮತ್ತು

(ಸಿ) ಯುಕ್ತ ಕಾರಣವಿಲ್ಲದೆ ಅದನ್ನು ಬಳಸುವ ಮೂಲಕ ಭಾರತದಲ್ಲಿ ವಿಖ್ಯಾತಿ ಹೊಂದಿರುವ ನೋಂದಾಯಿತ ವ್ಯಾಪಾರಚಿಹ್ನೆಯ ವಿಖ್ಯಾತಿಯ ದುರ್ಲಾಭ ಪಡೆದಂತಾಗುವುದೋ ಅಥವಾ ಆ ನೋಂದಾಯಿತ ವ್ಯಾಪಾರ ಚಿಹ್ನೆಯ ವಿಭಿನ್ನ ಸ್ವರೂಪಕ್ಕೆ ಅಥವಾ ವಿಖ್ಯಾತಿಗೆ ಹಾನಿಯುಂಟು ಮಾಡುವಂತಿರುವುದೋ ಆ ಚಿಹ್ನೆಯನ್ನು ಬಳಸಿದರೆ ಅವನು ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಉಲ್ಲಂಘಿಸಿದಂತಾಗುತ್ತದೆ.

(5) ಒಬ್ಬ ವ್ಯಕ್ತಿಯು, ಅಂಥ ನೋಂದಾಯಿತ ವ್ಯಾಪಾರಚಿಹ್ನೆಯನ್ನು ತನ್ನ ವ್ಯಾಪಾರದ ಹೆಸರಾಗಿ ಅಥವಾ ತನ್ನ ವ್ಯಾಪಾರದ ಹೆಸರಿನ ಭಾಗವಾಗಿ ಅಥವಾ ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿದೆಯೋ ಅಂಥ ಸರಕುಗಳಲ್ಲಿ ಅಥವಾ ಸೇವೆಗಳಲ್ಲಿ ವ್ಯವಹರಿಸಲು ತನ್ನ ವ್ಯವಹಾರ ಸಂಸ್ಥೆಯ ಹೆಸರಾಗಿ ಅಥವಾ ಅಂಥ ಹೆಸರಿನ ಭಾಗವಾಗಿ ಬಳಸಿದರೆ, ಅವನು ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಅತಿಲಂಘಿಸಿದಂತಾಗುತ್ತದೆ.

(6) ಈ ಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು ಒಂದು ವ್ಯಾಪಾರಚಿಹ್ನೆಯನ್ನು ವಿಶೇಷವಾಗಿ, ಈ ಮುಂದಿನಂತೆ ಬಳಸಿದರೆ ಅವನು ನೋಂದಾಯಿತ ವ್ಯಾಪಾರಚಿಹ್ನೆಯನ್ನು ಬಳಸಿದಂತಾಗುತ್ತದೆ,–

(ಎ) ಅದನ್ನು ಸರಕುಗಳ ಮೇಲೆ ಅಥವಾ ಸರಕುಗಳ ಪ್ಯಾಕೇಜಿಗೆ ಅಂಟಿಸುವುದು;

(ಬಿ) ನೋಂದಾಯಿತ ವ್ಯಾಪಾರಚಿಹ್ನೆಯ ಅಡಿಯಲ್ಲಿ ಸರಕುಗಳನ್ನು ಮಾರಾಟಕ್ಕಾಗಿ ಇಡುವುದು ಅಥವಾ ಪ್ರದರ್ಶಿಸುವುದು ಅಥವಾ ಆ ಉದ್ದೇಶಗಳಿಗಾಗಿ ಅವುಗಳನ್ನು ಮಾರುಕಟ್ಟೆಯಲ್ಲಿಡುವುದು ಅಥವಾ ದಾಸ್ತಾನು ಮಾಡುವುದು ಅಥವಾ ನೋಂದಾಯಿತ ವ್ಯಾಪಾರ ಚಿಹ್ನೆಯ ಅಡಿಯಲ್ಲಿ ಸೇವೆಗಳನ್ನು ಒದಗಿಸುವುದು ಅಥವಾ ಪೂರೈಸುವುದು;

(ಸಿ) ಆ ಚಿಹ್ನೆಯ ಅಡಿಯಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳುವುದು ಅಥವಾ ರಫ್ತು ಮಾಡುವುದು; ಅಥವಾ

(ಡಿ) ವ್ಯವಹಾರದ ಕಾಗದಪತ್ರಗಳ ಮೇಲೆ ಅಥವಾ ಜಾಹೀರಾತಿನಲ್ಲಿ ನೋಂದಾಯಿತ ವ್ಯಾಪಾರಚಿಹ್ನೆಯನ್ನು ಬಳಸುವುದು.

(7) ಒಬ್ಬ ವ್ಯಕ್ತಿಯು, ಒಂದು ನೋಂದಾಯಿತ ವ್ಯಾಪಾರಚಿಹ್ನೆಯನ್ನು, ಸರಕುಗಳಿಗೆ ಚೀಟಿ ಅಂಟಿಸಲು ಅಥವಾ ಅವುಗಳನ್ನು ಪ್ಯಾಕೇಜು ಮಾಡಲು ಬಳಸಬೇಕೆಂದು ಉದ್ದೇಶಿಸಲಾದಂಥ ಸಾಮಗ್ರಿಗೆ, ಒಂದು ವ್ಯವಹಾರ ಕಾಗದ ಪತ್ರವಾಗಿ ಅಥವಾ ಸರಕುಗಳನ್ನು ಅಥವಾ ಸೇವೆಗಳನ್ನು ಜಾಹಿರಾತು ಮಾಡುವ ಸಲುವಾಗಿ ಅನ್ವಯಿಸಿದರೆ, ಅವನು ಅಂಥ ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಅತಿಲಂಘಿಸಿದಂತಾಗುತ್ತದೆ. ಆ ಚಿಹ್ನೆಯ ಅನ್ವಯವು ಮಾಲೀಕನಿಂದ ಅಥವಾ ಲೈಸೆನ್ಸ್‌ದಾರನಿಂದ ಕ್ರಮಬದ್ಧವಾಗಿ ಅಧಿಕೃತವಾಗಿಲ್ಲವೆಂದು ಅವನು ತಿಳಿದಿದ್ದರೆ ಅಥವಾ ನಂಬುವುದಕ್ಕೆ ಕಾರಣಗಳಿದ್ದಾಗ ಅಂತಹ ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಅತಿಲಂಘಿಸಿದಂತಾಗುತ್ತದೆ.

(8) ಒಂದು ನೋಂದಾಯಿತ ವ್ಯಾಪಾರಚಿಹ್ನೆಯ ಜಾಹೀರಾತಿನ ಮೂಲಕ ಈ ಮುಂದಿನ ಪರಿಣಾಮವಾಗುವಂತಿದ್ದರೆ,-

(ಎ) ಕೈಗಾರಿಕೆ ಅಥವಾ ವಾಣಿಜ್ಯ ವಿಷಯಗಳಲ್ಲಿ ಅನುಚಿತ ಲಾಭವನ್ನು ಮತ್ತು ಅವುಗಳಲ್ಲಿನ ಪ್ರಾಮಾಣಿಕ ರೂಢಿಗಳಿಗೆ ವಿರುದ್ಧವಾಗಿರುವುದಾದರೆ; ಅಥವಾ

(ಬಿ) ಅದರ ವಿಶಿಷ್ಟ ಸ್ವರೂಪಕ್ಕೆ ಹಾನಿಯುಂಟುಮಾಡುವುದಾದರೆ; ಅಥವಾ

(ಸಿ) ವ್ಯಾಪಾರಚಿಹ್ನೆಯ ವಿಖ್ಯಾತಿಗೆ ವಿರುದ್ಧವಾಗಿರುವುದಾದರೆ

– ಅಂತಹ ವ್ಯಾಪಾರಚಿಹ್ನೆಯನ್ನು ಅತಿಲಂಘಿಸಿದಾಂತಾಗುತ್ತದೆ

(9) ಒಂದು ನೋಂದಾಯಿತ ವ್ಯಾಪಾರಚಿಹ್ನೆಯ ವಿಶಿಷ್ಟಾಂಶಗಳ ಪದಗಳನ್ನು ಅಡಕ ಮಾಡಿಕೊಂಡಿದ್ದಲ್ಲಿ ಅಥವಾ ಒಳಗೊಂಡಿದ್ದಲ್ಲಿ, ಆ ಪದಗಳ ಮಾತಿನ ಬಳಕೆಯಿಂದ ಹಾಗೂ ದೃಶ್ಯರೂಪಣದಿಂದ ವ್ಯಾಪಾರಚಿಹ್ನೆಯನ್ನು ಅತಿಲಂಘಿಸಬಹುದು ಮತ್ತು ಈ ಪ್ರಕರಣದಲ್ಲಿ ಗುರುತಿನ ಬಳಕೆಗೆ ಮಾಡಲಾದ ಉಲ್ಲೇಖವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

**30. ನೋಂದಾಯಿತ ವ್ಯಾಪಾರಚಿಹ್ನೆಯ ಪರಿಣಾಮದ ಮೇಲೆ ಮಿತಿಗಳು.-** (1) 29ನೇ ಪ್ರಕರಣದಲ್ಲಿರುವುದಾವುದೂ, ಮಾಲೀಕನ ಸರಕುಗಳನ್ನು ಅಥವಾ ಸೇವೆಗಳನ್ನು ಗುರುತಿಸುವ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಯು ನೋಂದಾಯಿತ ವ್ಯಾಪಾರಚಿಹ್ನೆಯನ್ನು ಬಳಸದಂತೆ ತಡೆಯುವುದಾಗಿ ಅರ್ಥೈಸತಕ್ಕದ್ದಲ್ಲ:

ಪರಂತು ಆ ಬಳಕೆಯು,-

(ಎ) ಕೈಗಾರಿಕೆ ಅಥವಾ ವಾಣಿಜ್ಯ ವಿಷಯಗಳಲ್ಲಿ ಪ್ರಾಮಾಣಿಕ ರೂಢಿಗಳಿಗನುಸಾರವಾಗಿರಬೇಕು; ಮತ್ತು

(ಬಿ) ವ್ಯಾಪಾರಚಿಹ್ನೆಯ ವಿಭಿನ್ನಕ ಸ್ವರೂಪದ ಅಥವಾ ಖ್ಯಾತಿಯ ಅನುಚಿತ ಲಾಭ ಪಡೆಯದಂತಿರಬೇಕು ಅಥವಾ ಅದಕ್ಕೆ ಹಾನಿಕಾರಕವಾಗದಂತಿರಬೇಕು.

(2) ಈ ಕೆಳಕಂಡ ಸಂದರ್ಭಗಳಲ್ಲಿ ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಅತಿಲಂಘಿಸಿದಂತಾಗುವುದಿಲ್ಲ,-

(ಎ) ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದ ಬಳಕೆಯು ಸರಕುಗಳ ಬಗೆ, ಗುಣಮಟ್ಟ, ಪರಿಮಾಣ, ಉದ್ದೇಶಿತ ಗುರಿ, ಮೌಲ್ಯ, ಭೌಗೋಳಿಕ ಮೂಲ, ಉತ್ಪಾದನಾ ಕಾಲ ಅಥವಾ ಸೇವೆಗಳನ್ನು ಒದಗಿಸುವುದು ಅಥವಾ ಸರಕುಗಳ ಮತ್ತು ಸೇವೆಗಳ ಇತರ ಸ್ವರೂಪಗಳನ್ನು ಸೂಚಿಸಿದರೆ;

(ಬಿ) ಯಾವುದೇ ಷರತ್ತುಗಳಿಗೆ ಅಥವಾ ಮಿತಿಗಳಿಗೆ ಒಳಪಟ್ಟು ಒಂದು ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಿದಾಗ, ಯಾವುದೇ ಸ್ಥಳದಲ್ಲಿ ಮಾರಾಟ ಮಾಡಬೇಕಾದ ಅಥವಾ ಇತರೇ ರೀತಿಯಲ್ಲಿ ಮಾರಾಟ ಮಾಡುವ ಸರಕುಗಳಿಗೆ ಸಂಬಂಧಿಸಿದಂತೆ ಅಥವಾ ಯಾವುದೇ ಮಾರುಕಟ್ಟೆಗೆ ರಫ್ತು ಮಾಡಬೇಕಾದ ಸರಕುಗಳಿಗೆ ಸಂಬಂಧಿಸಿ ಯಾವುದೇ ಸ್ಥಳದಲ್ಲಿ ಅಥವಾ ಭಾರತದ ಹೊರಗಿನ ದೇಶದಲ್ಲಿ ಬಳಕೆಗೆ ಅಥವಾ ಪಡೆಯುವುದಕ್ಕೆ ಲಭ್ಯವಾಗಿರುವ ಸೇವೆಗಳಿಗೆ ಸಂಬಂಧಿಸಿ ಅಥವಾ ಆ ಷರತ್ತುಗಳಿಗೆ ಅಥವಾ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಯಾವುದಕ್ಕೆ ನೋಂದಣಿಯು ವ್ಯಾಪ್ತವಾಗುವುದಿಲ್ಲವೋ ಅಂಥ ಯಾವುದೇ ಪರಿಸ್ಥಿತಿಗಳಲ್ಲಿ;

(ಸಿ) ಒಬ್ಬ ವ್ಯಕ್ತಿಯು ಈ ಮುಂದಿನಂತೆ ಎಂದರೆ:–

(i) ವ್ಯಾಪಾರ ಚಿಹ್ನೆಯ ಮಾಲೀಕನೊಡನೆ ಅಥವಾ ನೋಂದಾಯಿತ ಬಳಕೆದಾರನೊಡನೆ ವ್ಯಾಪಾರ ಮಾಡುವ ಸಂದರ್ಭದಲ್ಲಿ ಸರಕುಗಳಿಗೆ ಸಂಬಂಧಿಸಿದಂತೆ ಆ ಸರಕುಗಳ ಅಥವಾ ಸಗಟಿನ ಅಥವಾ ಅವು ಭಾಗವಾಗಿರುವಲ್ಲಿ ಅವುಗಳ ಬಗ್ಗೆ ಅನುಮತಿಸಲಾದ ಬಳಕೆಯ ಅನುಸಾರ ನೋಂದಾಯಿತ ಮಾಲೀಕ ಅಥವಾ ನೋಂದಾಯಿತ ಬಳಕೆದಾರ ವ್ಯಾಪಾರ ಚಿಹ್ನೆಯನ್ನು ಅನ್ವಯಿಸಿದಲ್ಲಿ ಮತ್ತು ನಂತರ ಅದನ್ನು ತೆಗೆದು ಹಾಕಿರದಿದ್ದರೆ ಅಥವಾ ತೊಡೆದು ಹಾಕಿರದಿದ್ದರೆ ಅಥವಾ ಯಾವುದೇ ಕಾಲದಲ್ಲಿ ವ್ಯಾಪಾರ ಚಿಹ್ನೆಯ ಬಳಕೆಗೆ ಸ್ಪಷ್ಟವಾಗಿ ಅಥವಾ ಇಂಗಿತವಾಗಿ ಒಪ್ಪಿಗೆ ನೀಡಿದ್ದರೆ; ಅಥವಾ

(ii) ಅನುಮತಿಸಲಾದ ಬಳಕೆಯ ಅನುಸಾರ ಅಂಥ ಚಿಹ್ನೆಯ ಮಾಲೀಕನು ಅಥವಾ ನೋಂದಾಯಿತ ಬಳಕೆದಾರನು ಸೇವೆಗಳ ಸಂಬಂಧದಲ್ಲಿ ಚಿಹ್ನೆಯನ್ನು ಅನ್ವಯಿಸಿದ್ದು ಚಿಹ್ನೆಯ ಬಳಕೆಯ ಉದ್ದೇಶವು ಮತ್ತು ಪರಿಣಾಮವು ಚಿಹ್ನೆಯ ಮಾಲೀಕನು ಅಥವಾ ನೋಂದಾಯಿತ ಬಳಕೆದಾರನು ಆ ಸೇವೆಗಳನ್ನು ನಿರ್ವಹಿಸಿದ್ದಾನೆಂಬ ಸಂಗತಿಗೆ ಅನುಸಾರ ಸೂಚನೆಯಾಗಿರುವಾಗ ಅಂಥ ವ್ಯಾಪಾರ ಚಿಹ್ನೆಯ ಬಳಕೆ;

(ಡಿ) ವ್ಯಾಪಾರ ಚಿಹ್ನೆಯನ್ನು ಯಾವ ಇತರ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿನ ನೋಂದಣಿಯಿಂದ ನೀಡಲಾದ ಹಕ್ಕನ್ನು ಅತಿಲಂಘಿಸದೆ ಬಳಸಲಾಗಿದೆಯೋ ಅಥವಾ ತತ್ಕಾಲದಲ್ಲಿ ಹಾಗೆ ಬಳಸಬಹುದಾಗಿದೆಯೋ ಅವುಗಳ ಭಾಗವಾಗಿ ಅಥವಾ ಉಪಸಾಧನವಾಗಿ ಅಳವಡಿಸಿಕೊಳ್ಳಲಾದ ಸರಕುಗಳ ಸಂಬಂಧದಲ್ಲಿ, ಒಂದು ವ್ಯಾಪಾರ ಚಿಹ್ನೆಯ ಬಳಕೆಯು, ಸರಕುಗಳನ್ನು ಅಥವಾ ಸೇವೆಗಳನ್ನು ಹಾಗೆ ಅಳವಡಿಸಿಕೊಳ್ಳಲಾಗಿದೆಯೆಂದು ಸೂಚಿಸಲು ಮತ್ತು ವ್ಯಾಪಾರ ಚಿಹ್ನೆಯ ಬಳಕೆಯ ಉದ್ದೇಶವು ಅಥವಾ ಪರಿಣಾಮವು ವಾಸ್ತವಾಂಶಕ್ಕೆ ಅನುಸಾರವಾಗಿ ಅಲ್ಲದೆ ಅನ್ಯಥಾ ವ್ಯಾಪಾರ ಕ್ರಮದಲ್ಲಿ ಒಬ್ಬ ವ್ಯಕ್ತಿಯ ಮತ್ತು ಸರಕುಗಳ ಅಥವಾ ಸೇವೆಗಳ ನಡುವೆ ಒಂದು ಸಂಬಂಧವನ್ನು ಸೂಚಿಸದಿರಲು ವ್ಯಾಪಾರ ಚಿಹ್ನೆಯ ಬಳಕೆಯು ಯುಕ್ತವಾಗಿ ಆವಶ್ಯಕವಾಗಿರುವ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯು ಒಂದು ವ್ಯಾಪಾರ ಚಿಹ್ನೆಯನ್ನು ಬಳಸಿದ್ದರೆ;

(ಇ) ಈ ಅಧಿನಿಯಮದ ಅಡಿಯಲ್ಲಿ ಎರಡು ಅಥವಾ ಹೆಚ್ಚಿನ ನೋಂದಾಯಿತ ವ್ಯಾಪಾರ ಚಿಹ್ನೆಗಳಲ್ಲಿ ಒಂದಾಗಿದ್ದು, ಅವು ಪರಸ್ಪರ ತದ್ರೂಪತೆ ಅಥವಾ ಬಹುಮಟ್ಟಿಗೆ ಸಾದೃಶ್ಯತೆ ಹೊಂದಿದ್ದು, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಿಂದಾಗಿ ಆ ವ್ಯಾಪಾರ ಚಿಹ್ನೆಯನ್ನು ಬಳಸುವ ಹಕ್ಕನ್ನು ಚಲಾಯಿಸುವಲ್ಲಿ ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಬಳಸಿದರೆ

– ಅತಿಲಂಘನೆಯಾಗತಕ್ಕದ್ದಲ್ಲ.

(3) ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಹೊಂದಿರುವ ಸರಕುಗಳನ್ನು ಒಬ್ಬ ವ್ಯಕ್ತಿಯು ಕಾನೂನುಸಮ್ಮತವಾಗಿ ಸ್ವಾಧೀನಪಡಿಸಿಕೊಂಡಲ್ಲಿ, ಆ ವ್ಯಕ್ತಿಯು ಅಥವಾ ಅವನ ಅಡಿಯಲ್ಲಿ ಅಥವಾ ಅವನ ಮೂಲಕ

ಕ್ಲೇಮು ಮಾಡುವ ವ್ಯಕ್ತಿಯು ಮಾರುಕಟ್ಟೆಯಲ್ಲಿ ಸರಕುಗಳನ್ನು ಮಾರುವಾಗ ಅಥವಾ ಆ ಸರಕುಗಳೊಂದಿಗೆ ಅನ್ಯಥಾ ವ್ಯವಹರಿಸುವಾಗ,–

(ಎ) ಆ ಸರಕುಗಳನ್ನು ಸ್ವಾಧೀನಪಡಿಸಿಕೊಂಡ ನಂತರ, ನೋಂದಾಯಿತ ಮಾಲೀಕನು ಇತರ ವ್ಯಕ್ತಿಗೆ ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಹಸ್ತಾಂತರಿಸಿದ; ಅಥವಾ

(ಬಿ) ಮಾಲೀಕನು ಅಥವಾ ಅವನ ಒಪ್ಪಿಗೆಯೊಂದಿಗೆ ಸರಕುಗಳನ್ನು ನೋಂದಾಯಿತ ವ್ಯಾಪಾರ ಚಿಹ್ನೆಯ ಮೇರೆಗೆ ಮಾರುಕಟ್ಟೆಯಲ್ಲಿ ಇಟ್ಟಿರುವ

– ಕಾರಣ ಮಾತ್ರದಿಂದಲೇ ವ್ಯಾಪಾರ ಚಿಹ್ನೆಯನ್ನು ಅತಿಲಂಘಿಸಿದಂತಾಗುವುದಿಲ್ಲ.

(4) ಸರಕುಗಳ ಸ್ಥಿತಿಯು ಅವುಗಳನ್ನು ಮಾರುಕಟ್ಟೆಯಲ್ಲಿಟ್ಟ ನಂತರ ಬದಲಾಗಿರುವಲ್ಲಿ ಅಥವಾ ಶಿಥಿಲವಾಗಿರುವಲ್ಲಿ, ಸರಕುಗಳ ಬಗ್ಗೆ ಹೆಚ್ಚಿನ ವ್ಯವಹಾರಗಳನ್ನು ವಿರೋಧಿಸಲು ಮಾಲೀಕನಿಗೆ ವಿಶೇಷವಾಗಿ ಅಸ್ತಿತ್ವದಲ್ಲಿರುವ ಕಾನೂನುಸಮ್ಮತ ಕಾರಣಗಳಿರುವಲ್ಲಿ (3)ನೇ ಉಪಪ್ರಕರಣವು ಅನ್ವಯವಾಗತಕ್ಕದ್ದಲ್ಲ.

**31. ನೋಂದಣಿಯು ಸಿಂಧುತ್ವದ ಮೊದಲ ನೋಟದ ಸಾಕ್ಷಿಯಾಗಿರುವುದು.–** (1) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತ ವ್ಯಾಪಾರ ಚಿಹ್ನೆಗೆ ಸಂಬಂಧಿಸಿದ ಎಲ್ಲ ಕಾನೂನು ವ್ಯವಹರಣೆಗಳಲ್ಲಿ, ವ್ಯಾಪಾರ ಚಿಹ್ನೆಯ ಮೂಲ ನೋಂದಣಿ ಮತ್ತು ವ್ಯಾಪಾರ ಚಿಹ್ನೆಯ ತರುವಾಯದ ಎಲ್ಲ ಹಸ್ತಾಂತರಣಗಳು ಮತ್ತು ಪ್ರಸರಣಗಳ (57ನೇ ಪ್ರಕರಣದ ಅಡಿಯಲ್ಲಿನ ಅರ್ಜಿಗಳೂ ಸೇರಿದಂತೆ) ಅದರ ಸಿಂಧುತ್ವದ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು.

(2) ಮೇಲೆ ಹೇಳಿದಂತೆ ಎಲ್ಲಾ ಕಾನೂನು ವ್ಯವಹರಣೆಗಳಲ್ಲಿ ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ನೋಂದಣಿಯ ದಿನಾಂಕದಂದು ನೋಂದಾಯಿತ ಮಾಲೀಕನು ಅಥವಾ ಸ್ವಾಮ್ಯದಿಂದ ತನ್ನ ಪೂರ್ವಿಕರು ವಿಶಿಷ್ಟವಾಗುವ ಹಾಗೆ ಅದನ್ನು ಬಳಸಿರುವದು ರುಜುವಾತಾದರೆ, ವಿಶಿಷ್ಟತೆಯ ಸಾಕ್ಷ್ಯದ ಮೇಲೆ ಹೊರತು ಮತ್ತು 9ನೇ ಪ್ರಕರಣದ ಅಡಿಯಲ್ಲಿ ಅದು ನೋಂದಣಿಯೋಗ್ಯ ವ್ಯಾಪಾರ ಚಿಹ್ನೆಯಾಗಿಲ್ಲವೆಂದು ಮತ್ತು ಅಂಥ ಸಾಕ್ಷ್ಯವನ್ನು ನೋಂದಣಿಗೆ ಮುಂಚೆ ರಿಜಿಸ್ಟ್ರಾರನಿಗೆ ಒಪ್ಪಿಸಿಲ್ಲವೆಂಬ ಕಾರಣದ ಮೇಲೆ ಅದನ್ನು ಅಸಿಂಧುವೆಂದು ನಿರ್ಧರಿಸತಕ್ಕದ್ದಲ್ಲ.

**32. ಕೆಲವು ಸಂದರ್ಭಗಳಲ್ಲಿ ವಿಶಿಷ್ಟತೆಯ ಆಧಾರದ ಮೇಲೆ ನೋಂದಣಿಗೆ ರಕ್ಷಣೆ.–** 9ನೇ ಪ್ರಕರಣದ (1)ನೇ ಉಪಪ್ರಕರಣವನ್ನು ಉಲ್ಲಂಘಿಸಿ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಿರುವಲ್ಲಿ, ಅದನ್ನು ಉಪಯೋಗಿಸಿದ್ದರ ಪರಿಣಾಮವಾಗಿ ನೋಂದಣಿಯ ನಂತರ ಅಥವಾ ಅಂಥ ನೋಂದಣಿಯ ಸಿಂಧುತ್ವವನ್ನು ಪ್ರಶ್ನಿಸುವ ಯಾವುದೇ ಕಾನೂನು ವ್ಯವಹರಣೆಗಳ ಪ್ರಾರಂಭಕ್ಕೆ ಮುಂಚೆ, ಆ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಅದನ್ನು ನೋಂದಾಯಿಸಲಾಗಿದೆಯೋ ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ವಿಭಿನ್ನ ಸ್ವರೂಪವನ್ನು ಪಡೆದಿದ್ದರೆ, ಅದನ್ನು ಅಸಿಂಧುವೆಂದು ಘೋಷಿಸತಕ್ಕದ್ದಲ್ಲ.

**33. ಮೌನ ಸಮ್ಮತಿಯ ಪರಿಣಾಮ.–** (1) ಮುಂಚಿನ ವ್ಯಾಪಾರ ಚಿಹ್ನೆಯ ಒಬ್ಬ ಮಾಲೀಕನು, ಐದು ವರ್ಷಗಳ ನಿರಂತರ ಅವಧಿಗಾಗಿ ಅಂಥ ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯ ಬಳಕೆಯ ಬಗ್ಗೆ ತಿಳಿದು ತಿಳಿದೂ ಅದಕ್ಕೆ ಮೌನಸಮ್ಮತಿ ನೀಡಿರುವಲ್ಲಿ ಅವನು ಮುಂಚಿನ ವ್ಯಾಪಾರ ಚಿಹ್ನೆಯ ಆಧಾರದ ಮೇಲೆ ಈ ಮುಂದಿನವುಗಳಿಗೆ, ಎಂದರೆ:–

(ಎ) ನಂತರದ ವ್ಯಾಪಾರಚಿಹ್ನೆಯ ನೋಂದಣಿಯು ಅಸಿಂಧುವೆಂದು ಒಂದು ಘೋಷಣೆ ಮಾಡುವುದಕ್ಕೆ ಅರ್ಜಿ ಸಲ್ಲಿಸಲು; ಅಥವಾ

(ಬಿ) ನಂತರದ ವ್ಯಾಪಾರಚಿಹ್ನೆಯನ್ನು ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ತರುವಾಯದ ವ್ಯಾಪಾರಚಿಹ್ನೆಯನ್ನು ಹಾಗೆ ಬಳಸಲಾಗಿದೆಯೋ ಅವುಗಳ ಸಂಬಂಧದಲ್ಲಿ ಅದರ ಬಳಕೆಯನ್ನು ವಿರೋಧಿಸಲು ತರುವಾಯದ ವ್ಯಾಪಾರಚಿಹ್ನೆಯ ನೋಂದಣಿಯನ್ನು ಸದ್ಭಾವನೆಯಿಂದ ಬಳಸಿಲ್ಲದ ಹೊರತು

– ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣವು ಅನ್ವಯಿಸುವಲ್ಲಿ, ತರುವಾಯದ ವ್ಯಾಪಾರಚಿಹ್ನೆಯ ಮಾಲೀಕನು, ತನ್ನ ತರುವಾಯದ ವ್ಯಾಪಾರ ಚಿಹ್ನೆಗೆ ಪ್ರತಿಯಾಗಿ ಮುಂಚಿನ ವ್ಯಾಪಾರ ಚಿಹ್ನೆಯ ಹಕ್ಕನ್ನು ಇನ್ನು ಮುಂದೆ ಕೋರಿಕೊಳ್ಳಲಾಗದಿದ್ದರೂ ಸಹ, ಮುಂಚಿನ ವ್ಯಾಪಾರ ಚಿಹ್ನೆಯ ಬಳಕೆಯನ್ನು ವಿರೋಧಿಸಲು ಅಥವಾ ಮುಂಚಿನ ಹಕ್ಕನ್ನು ಸಂಪೂರ್ಣವಾಗಿ ಬಳಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**34. ನಿಹಿತ ಹಕ್ಕುಗಳಿಗಾಗಿ ಉಳಿಸುವಿಕೆ.–** ಈ ಪ್ರಕರಣದಲ್ಲಿರುವುದಾವುದೂ ಒಬ್ಬ ನೋಂದಾಯಿತ ವ್ಯಾಪಾರ ಚಿಹ್ನೆಯ ಮಾಲೀಕನಿಗೆ ಅಥವಾ ಒಬ್ಬ ನೋಂದಾಯಿತ ಬಳಕೆದಾರನಿಗೆ, ಯಾರೇ ವ್ಯಕ್ತಿಯು, ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅದು ತದ್ರೂಪವಾಗಿರುವ ಅಥವಾ ಸರಿಸುಮಾರಾಗಿ ಸಾದೃಶ್ಯವಾಗಿರುವ ವ್ಯಾಪಾರ ಚಿಹ್ನೆಯ ಬಳಕೆಯಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಅಥವಾ ಅದನ್ನು ನಿಗ್ರಹಿಸುವುದಕ್ಕೆ ಆ ವ್ಯಕ್ತಿಗೆ ಅಥವಾ ಆ ವ್ಯಾಪಾರ ಚಿಹ್ನೆಯ ನಿರಂತರ ಬಳಕೆಗೆ ಅವನ ಹಕ್ಕಿನ ಪೂರ್ವಾಧಿಕಾರಿಯು,–

(ಎ) ಮಾಲೀಕನಾಗಿರಲಿ ಅಥವಾ ಅವನ ಸ್ವಾಮ್ಯದ ಪೂರ್ವಾಧಿಕಾರಿಯಾಗಿರಲಿ, ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಮೊದಲು ನಮೂದಿಸಿದ ವ್ಯಾಪಾರ ಚಿಹ್ನೆಯ ಬಳಕೆ; ಅಥವಾ

(ಬಿ) ಮಾಲೀಕನ ಅಥವಾ ಅವನ ಸ್ವಾಮ್ಯದ ಪೂರ್ವಾಧಿಕಾರಿಯ ಹೆಸರಿನಲ್ಲಿ, ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಮೊದಲು ನಮೂದಿಸಿದ ವ್ಯಾಪಾರ ಚಿಹ್ನೆಯ ನೋಂದಣಿಯ ದಿನಾಂಕಕ್ಕೆ

– ಇವುಗಳಲ್ಲಿ ಯಾವುದು ಮೊದಲೋ ಅದರ, ಹಿಂದಿನ ದಿನಾಂಕದಿಂದ, ಹಕ್ಕುಳ್ಳವನಾಗತಕ್ಕದ್ದಲ್ಲ ಮತ್ತು ರಿಜಿಸ್ಟ್ರಾರನು, ಮೊದಲು ನಮೂದಿಸಿದ ವ್ಯಾಪಾರ ಚಿಹ್ನೆಯ ನೋಂದಣಿಯ ಕಾರಣ ಮಾತ್ರದಿಂದಲೇ ನಂತರ ನಮೂದಿಸಿದ ವ್ಯಾಪಾರ ಚಿಹ್ನೆಯ ನೋಂದಣಿಯನ್ನು (ಅಂತಹ ಬಳಕೆಯು ರುಜುವಾತಾದಲ್ಲಿ) ನಿರಾಕರಿಸತಕ್ಕದ್ದಲ್ಲ.

**35. ಸರಕುಗಳ ಅಥವಾ ಸೇವೆಗಳ ಹೆಸರು, ವಿಳಾಸ ಅಥವಾ ವಿವರಣೆಯ ಬಳಕೆಯ ಉಳಿಸುವಿಕೆ.–** ಈ ಪ್ರಕರಣದಲ್ಲಿರುವುದಾವುದೂ, ಯಾರೇ ವ್ಯಕ್ತಿಯು ತನ್ನ ಸ್ವಂತ ಹೆಸರಿನ ಅಥವಾ ತನ್ನ ವ್ಯವಹಾರ ಸ್ಥಳದ ಹೆಸರಿನ, ಅಥವಾ ವ್ಯವಹಾರದಲ್ಲಿನ ತನ್ನ ಯಾರೇ ಪೂರ್ವಾಧಿಕಾರಿಯ ಹೆಸರಿನ ಅಥವಾ ವ್ಯಾಪಾರ ಸ್ಥಳದ ಹೆಸರಿನ ಯಾವುದೇ ಪ್ರಾಮಾಣಿಕ ಬಳಕೆಯಲ್ಲಿ, ಅಥವಾ ಯಾರೇ ವ್ಯಕ್ತಿಯು ತನ್ನ ಸರಕುಗಳ ಅಥವಾ ಸೇವೆಗಳ ಸ್ವಭಾವ ಅಥವಾ ಗುಣಮಟ್ಟದ ಯಾವುದೇ ಪ್ರಾಮಾಣಿಕ ವಿವರಣೆಯ ಬಳಕೆಯಲ್ಲಿ ನೋಂದಾಯಿತ ವ್ಯಾಪಾರ ಚಿಹ್ನೆಯ ಮಾಲೀಕನ ಅಥವಾ ನೋಂದಾಯಿತ ಬಳಕೆದಾರನ ಸಂಬಂಧದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಹಕ್ಕು ನೀಡತಕ್ಕದ್ದಲ್ಲ.

**36. ವಸ್ತು ಅಥವಾ ಸಾಮಗ್ರಿ ಅಥವಾ ಸೇವೆಯ ಹೆಸರಾಗಿ ಅಥವಾ ವಿವರಣೆಯಾಗಿ ಬಳಸುವ ಪದಗಳ ಉಳಿಸುವಿಕೆ.–** (1) ಒಂದು ವ್ಯಾಪಾರ ಚಿಹ್ನೆಯ ನೋಂದಣಿಯನ್ನು, ಒಂದು ವಸ್ತುವಿನ ಅಥವಾ ಸಾಮಗ್ರಿಯ ಅಥವಾ ಸೇವೆಯ ಹೆಸರನ್ನು ಅಥವಾ ವಿವರಣೆಯನ್ನು ಒಳಗೊಂಡಿರುವ ಅಥವಾ ಅದರಲ್ಲಿ ಸೇರಿರುವ ವ್ಯಾಪಾರ ಚಿಹ್ನೆಯ ಯಾವುದೇ ಪದ ಅಥವಾ ಪದಗಳ ನೋಂದಣಿಯ ದಿನಾಂಕದ ನಂತರ ಯಾವುದೇ ಬಳಕೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗಿದೆಯೆಂದು ಭಾವಿಸತಕ್ಕದ್ದಲ್ಲ:

ಪರಂತು, ಇದು,–

(ಎ) ವ್ಯಾಪಾರ ಚಿಹ್ನೆಯ ಮಾಲೀಕನೊಂದಿಗೆ ಅಥವಾ ನೋಂದಾಯಿತ ಬಳಕೆದಾರನೊಂದಿಗೆ ವ್ಯಾಪಾರ ಕ್ರಮದಲ್ಲಿ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅಥವಾ (ಪ್ರಮಾಣೀಕೃತ ವ್ಯಾಪಾರ ಚಿಹ್ನೆಯ ಸಂದರ್ಭದಲ್ಲಿ) ಮಾಲೀಕನು ಪ್ರಮಾಣೀಕರಿಸಿದ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ, ಬಳಕೆಯಲ್ಲಿಲ್ಲದ, ಅದರಲ್ಲಿ ವ್ಯಾಪಾರ ನಡೆಸುವ ವ್ಯಕ್ತಿ ಅಥವಾ ವ್ಯಕ್ತಿಗಳ ವಸ್ತು ಅಥವಾ

ಸಾಮಗ್ರಿ ಅಥವಾ ಸೇವೆಯ ಹೆಸರೆಂದು ಅಥವಾ ವಿವರಣೆಯೆಂದು ಸದರಿ ಪದದ ವಿಖ್ಯಾತವಾದ ಮತ್ತು ಸ್ಥಾಪಿತವಾದ ಬಳಕೆಯಾಗಿದೆಯೆಂದು; ಅಥವಾ

(ಬಿ) ಒಂದು ಪೇಟೆಂಟ್ ಮೇರೆಗೆ ವಸ್ತು ಅಥವಾ ಸಾಮಗ್ರಿಯನ್ನು ಮುಂಚಿತವಾಗಿಯೇ ತಯಾರಿಸಲಾಗಿದ್ದು, ಏಕಸ್ವದ ಸಮಾಪ್ತಿಯ ನಂತರ ಎರಡು ಅಥವಾ ಹೆಚ್ಚು ವರ್ಷಗಳ ಅವಧಿಯು ಗತಿಸಿದ್ದು ಮತ್ತು ಆ ಸದರಿ ಪದವು ವಸ್ತುವಿನ ಅಥವಾ ಸಾಮಗ್ರಿಯ ಕಾರ್ಯಸಾಧ್ಯವಾದ ಏಕಮಾತ್ರ ಹೆಸರು ಅಥವಾ ವಿವರಣೆಯಾಗಿತ್ತೆಂದು

– ರುಜುವಾತಾದರೆ, (2)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

(2) (1)ನೇ ಉಪಪ್ರಕರಣದ ಪರಂತುಕದ (ಎ) ಖಂಡ ಅಥವಾ (ಬಿ) ಖಂಡದಲ್ಲಿ ನಮೂದಿಸಲಾದ ಸಂಗತಿಗಳು ಯಾವುವೇ ಪದಗಳಿಗೆ ಸಂಬಂಧಿಸಿದಂತೆ ರುಜುವಾತಾದಾಗ,-

(ಎ) 57ನೇ ಪ್ರಕರಣದ ಅಡಿಯಲ್ಲಿ ಯಾವುವೇ ವ್ಯವಹರಣೆಗಳ ಉದ್ದೇಶಗಳಿಗಾಗಿ, ವ್ಯಾಪಾರ ಚಿಹ್ನೆಯು ಅಂಥ ಪದಗಳನ್ನು ಮಾತ್ರವೇ ಒಳಗೊಂಡಿದ್ದರೆ, ವ್ಯಾಪಾರ ಚಿಹ್ನೆಯ ನೋಂದಣಿಯನ್ನು, ಸಂದರ್ಭವು ಅಗತ್ಯಪಡಿಸಿದಂತೆ, ಸಾಧ್ಯವಾದಷ್ಟು, ಸಂಬಂಧಪಟ್ಟ ವಸ್ತು ಅಥವಾ ಸಾಮಗ್ರಿಯ ಅಥವಾ ಅದೇ ವಿವರಣೆಯ ಯಾವುವೇ ಸರಕುಗಳ ಅಥವಾ ಸೇವೆಗಳ ಅಥವಾ ಅದೇ ವಿವರಣೆಯ ಯಾವುವೇ ಸೇವೆಗಳ ಸಂಬಂಧದಲ್ಲಿ ನೋಂದಣಿಗೆ ಸಂಬಂಧಿಸಿದಂತೆ, ರಿಜಿಸ್ಟರಿನಲ್ಲಿ ತಪ್ಪಾಗಿ ಉಳಿದಿರುವ ಒಂದು ನಮೂದೆಂದು ಭಾವಿಸತಕ್ಕದ್ದು;

(ಬಿ) ವ್ಯಾಪಾರ ಚಿಹ್ನೆಗೆ ಸಂಬಂಧಿಸಿದಂತೆ ಯಾವುವೇ ಇತರ ಕಾನೂನು ವ್ಯವಹರಣೆಗಳ ಉದ್ದೇಶಗಳಿಗಾಗಿ ಸಂದರ್ಭವು ಅಗತ್ಯಪಡಿಸಿದಂತೆ, ವಸ್ತುವಿಗೆ ಅಥವಾ ಸಾಮಗ್ರಿಗೆ ಅಥವಾ ಅದೇ ವಿವರಣೆಯ ಯಾವುವೇ ಸರಕುಗಳಿಗೆ ಅಥವಾ ಸೇವೆಗೆ ಅಥವಾ ಅದೇ ವಿವರಣೆಯ ಯಾವುವೇ ಸೇವೆಗಳಿಗೆ ಸಂಬಂಧಿಸಿದಂತೆ, –

**(i)** ವ್ಯಾಪಾರಚಿಹ್ನೆಯು ಅಂಥ ಪದಗಳನ್ನು ಮಾತ್ರವೇ ಒಳಗೊಂಡಿದ್ದರೆ, ಈ ಅಧಿನಿಯಮದ ಅಥವಾ ವ್ಯಾಪಾರಚಿಹ್ನೆಯ ಬಳಕೆಗೆ ಸಂಬಂಧಿಸಿದ ಯಾವುದೇ ಇತರ ಕಾನೂನಿನ ಅಡಿಯಲ್ಲಿನ ಮಾಲೀಕನ ಎಲ್ಲಾ ಹಕ್ಕುಗಳು; ಅಥವಾ

**(ii)** ವ್ಯಾಪಾರಚಿಹ್ನೆಯು ಅಂಥ ಪದಗಳು ಮತ್ತು ಇತರ ವಿಷಯವನ್ನು ಒಳಗೊಂಡಿದ್ದರೆ, ಅಂಥ ಪದಗಳ ಬಳಕೆಗೆ ಮಾಲೀಕನ ಅಂಥ ಎಲ್ಲಾ ಹಕ್ಕುಗಳು

– (1)ನೇ ಉಪಪ್ರಕರಣದ ಪರಂತುಕದ (ಎ) ಖಂಡದಲ್ಲಿ ನಮೂದಿಸಲಾದ ಬಳಕೆಯು ಮೊದಲಿಗೆ ವಿಖ್ಯಾತವಾದ ಮತ್ತು ಸ್ಥಾಪಿತವಾದ ದಿನಾಂಕದಂದು ಅಥವಾ ಸದರಿ ಪರಂತುಕದ (ಬಿ) ಖಂಡದಲ್ಲಿ ನಮೂದಿಸಲಾಗಿರುವ ಎರಡು ವರ್ಷಗಳ ಅವಧಿಯ ಮುಕ್ತಾಯದ ದಿನಾಂಕದಂದು ನಿಂತುಹೋಗಿದೆಯೆಂದು ಭಾವಿಸತಕ್ಕದ್ದು.

## ಅಧ್ಯಾಯ – V
## ಹಸ್ತಾಂತರಣ ಮತ್ತು ವರ್ಗಾವಣೆ

**37. ಹಸ್ತಾಂತರಣ ಮಾಡಲು ಮತ್ತು ಸ್ವೀಕೃತಿಗಳನ್ನು ನೀಡಲು ನೋಂದಾಯಿತ ಮಾಲೀಕನ ಅಧಿಕಾರ.**– ಒಂದು ವ್ಯಾಪಾರ ಚಿಹ್ನೆಯ ಮಾಲೀಕನೆಂದು ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ನಮೂದಿಸಲಾದ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಯಾರೇ ಇತರ ವ್ಯಕ್ತಿಯಲ್ಲಿ ನಿಹಿತವಾಗಿರುವುದಾಗಿ ರಿಜಿಸ್ಟರಿನಲ್ಲಿ ಕಂಡು ಬಂದಿರುವ

ಯಾವುವೇ ಹಕ್ಕುಗಳಿಗೆ ಒಳಪಟ್ಟು, ವ್ಯಾಪಾರ ಚಿಹ್ನೆಯನ್ನು ಹಸ್ತಾಂತರಣ ಮಾಡಲು ಮತ್ತು ಅಂಥ ಹಸ್ತಾಂತರಣ ಯಾವುದೇ ಪ್ರತಿಫಲಕ್ಕಾಗಿ ಪರಿಣಾಮಕಾರಿ ಸ್ವೀಕೃತಿಗಳನ್ನು ನೀಡಲು ಅಧಿಕಾರವನ್ನು ಹೊಂದಿರತಕ್ಕದ್ದು.

**38. ನೋಂದಾಯಿತ ವ್ಯಾಪಾರಚಿಹ್ನೆಗಳ ಹಸ್ತಾಂತರಣ ಸಾಧ್ಯತೆ ಮತ್ತು ವರ್ಗಾವಣೆ ಸಾಧ್ಯತೆ.–** ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾದದ್ದು ಏನೇ ಇದ್ದರೂ, ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯು, ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ಸಂಬಂಧಿಸಿದ ವ್ಯವಹಾರಕ್ಕೆ ಸದ್ಭಾವವಿರಲಿ ಅಥವಾ ಇಲ್ಲದಿರಲಿ, ಮತ್ತು ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಆ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಿದೆಯೋ ಆ ಎಲ್ಲ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಅಥವಾ ಅವುಗಳ ಪೈಕಿ ಕೆಲವೇ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಹಸ್ತಾಂತರಣ ಸಾಧ್ಯವಾಗಿರತಕ್ಕದ್ದು ಮತ್ತು ವರ್ಗಾವಣೆ ಸಾಧ್ಯವಾಗಿರತಕ್ಕದ್ದು.

**39. ನೋಂದಾಯಿಸಿರದ ವ್ಯಾಪಾರಚಿಹ್ನೆಗಳ ಹಸ್ತಾಂತರಣ ಸಾಧ್ಯತೆ ಮತ್ತು ವರ್ಗಾವಣೆ ಸಾಧ್ಯತೆ:–** ನೋಂದಾಯಿಸಿರದ ಒಂದು ವ್ಯಾಪಾರಚಿಹ್ನೆಯನ್ನು, ಸಂಬಂಧಿಸಿದ ವ್ಯವಹಾರಕ್ಕೆ ಸದ್ಭಾವವಿರಲಿ ಅಥವಾ ಇಲ್ಲದಿರಲಿ, ಹಸ್ತಾಂತರಣ ಮಾಡಬಹುದು ಅಥವಾ ವರ್ಗಾವಣೆ ಮಾಡಬಹುದು.

**40. ಬಹುವಿಧದ ಅನನ್ಯ ಹಕ್ಕುಗಳನ್ನು ಸೃಜಿಸುವಲ್ಲಿನ ಹಸ್ತಾಂತರಣ ಅಥವಾ ವರ್ಗಾವಣೆಯ ಮೇಲೆ ನಿರ್ಬಂಧ.–** (1) 38 ಮತ್ತು 39ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಒಂದು ವ್ಯಾಪಾರ ಚಿಹ್ನೆಯನ್ನು,–

(ಎ) ಒಂದೇ ಬಗೆಯ ಸರಕುಗಳಿಗೆ ಅಥವಾ ಸೇವೆಗಳಿಗೆ;

(ಬಿ) ಸರಕುಗಳ ಅಥವಾ ಸೇವೆಗಳ ಒಂದೇ ಬಗೆಯ ವಿವರಣೆಗೆ;

(ಸಿ) ಪರಸ್ಪರ ಸಹವರ್ತಿಯಾಗಿರುವ ಸರಕುಗಳಿಗೆ ಅಥವಾ ಸೇವೆಗಳಿಗೆ ಅಥವಾ ಸರಕುಗಳ ಅಥವಾ ಸೇವೆಗಳ ಒಂದೇ ಬಗೆಯ ವಿವರಣೆಗೆ

– ಸಂಬಂಧಿಸಿದಂತೆ, ಪರಸ್ಪರ ಸಾದೃಶವಾಗಿರುವಂಥ ಅಥವಾ ತದ್ರೂಪ ವ್ಯಾಪಾರಚಿಹ್ನೆ, ಸರಕುಗಳ ಮತ್ತು ಸೇವೆಗಳ ಸಮರೂಪವನ್ನು ಮತ್ತು ವ್ಯಾಪಾರ ಚಿಹ್ನೆಗಳ ಸಮರೂಪವನ್ನು ಗಮನದಲ್ಲಿಟ್ಟುಕೊಂಡಾಗ, ಮೋಸವುಂಟು ಮಾಡುವ ಅಥವಾ ಗೊಂದಲಕ್ಕೆ ಕಾರಣವಾಗುವ ಸಂಭವವಿದ್ದರೆ ಆ ಹಕ್ಕುಗಳನ್ನು ಚಲಾಯಿಸುವಲ್ಲಿ ವ್ಯಾಪಾರಚಿಹ್ನೆಗಳ ಬಳಕೆಯು, ಈ ಅಧಿನಿಯಮದ ಅಡಿಯಲ್ಲಾಗಲಿ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಾಗಲಿ, ವ್ಯಾಪಾರಚಿಹ್ನೆಗಳ ಬಳಕೆಗೆ ಸಂಬಂಧಿಸಿದಂತೆ ಹಸ್ತಾಂತರಣ ಅಥವಾ ವರ್ಗಾವಣೆಯ ಪರಿಣಾಮದಿಂದಾಗಿ ಒಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳು, ಅನನ್ಯ ಹಕ್ಕುಗಳು ಪಡೆಯುವ ಪರಿಸ್ಥಿತಿಗಳು, ಒಂದು ಪ್ರಕರಣದಲ್ಲಿ ಹಸ್ತಾಂತರಿಸತಕ್ಕದ್ದಲ್ಲ ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ:

ಪರಂತು, ಭಾರತದಿಂದ ರಫ್ತು ಮಾಡುವದನ್ನಲ್ಲದೆ ಭಾರತದೊಳಗೆ ಮಾರಾಟ ಮಾಡತಕ್ಕ ಅಥವಾ ಅನ್ಯಥಾ ವ್ಯವಹರಿಸತಕ್ಕ ಸರಕುಗಳ ಸಂಬಂಧದಲ್ಲಿ ಅಥವಾ ಭಾರತದ ಹೊರಗೆ ಅದೇ ಮಾರುಕಟ್ಟೆಗೆ ರಫ್ತು ಮಾಡತಕ್ಕ ಸರಕುಗಳ ಸಂಬಂಧದಲ್ಲಿ ಅಥವಾ ಭಾರತದಲ್ಲಿ ಯಾವುದೇ ಸ್ಥಳದಲ್ಲಿ ಬಳಕೆಗಾಗಿ ಇರುವ ಸೇವೆಗಳ ಸಂಬಂಧದಲ್ಲಿ ಅಥವಾ ಭಾರತದಲ್ಲಿ ಅಂಗೀಕರಿಸಲು ಲಭ್ಯವಿರುವ ಸೇವೆಗಳ ಸಂಬಂಧದಲ್ಲಿ, ಈ ಉಪಪ್ರಕರಣದ ಪರಿಣಾಮವಾಗಿ ವ್ಯಕ್ತಿಗಳಲ್ಲಿ ಇಬ್ಬರು ಅಥವಾ ಹೆಚ್ಚಿನವರು ಚಲಾಯಿಸಬಾರದ ಅಂಥ ಹಕ್ಕುಗಳ ಮೇಲೆ ವಿಧಿಸಲಾದ ಅಂಥ ಷರತ್ತುಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮವಾಗಿ ಸಂಬಂಧಪಟ್ಟ ವ್ಯಕ್ತಿಗಳಲ್ಲಿ ಅನನ್ಯ ಹಕ್ಕುಗಳನ್ನು ಪಡೆಯದಿದ್ದರೆ ಈ ಉಪಪ್ರಕರಣದ ಅಡಿಯಲ್ಲಿ ಅದರ ಹಸ್ತಾಂತರಣವನ್ನು ಅಥವಾ ವರ್ಗಾವಣೆಯನ್ನು ಅಸಿಂಧುವೆಂದು ಭಾವಿಸತಕ್ಕದ್ದಲ್ಲ.

(2) ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ಹಸ್ತಾಂತರಣ ಮಾಡಲು ಪ್ರಸ್ತಾವಿಸುವ ಅದರ ಮಾಲೀಕನು, ಪರಿಸ್ಥಿತಿಗಳನ್ನು ನಿರೂಪಿಸುವ ಪ್ರಕರಣದ ಒಂದು ಹೇಳಿಕೆಯನ್ನು ನಿಯಮಿಸಲಾದ ರೀತಿಯಲ್ಲಿ, ರಿಜಿಸ್ಟ್ರಾರನಿಗೆ ಸಲ್ಲಿಸಬಹುದು ಮತ್ತು ರಿಜಿಸ್ಟ್ರಾರನು ಪ್ರಕರಣದಲ್ಲಿ ಉಲ್ಲೇಖಿಸಲಾದ ಸರಕುಗಳ ಅಥವಾ ಸೇವೆಗಳ ಮತ್ತು ವ್ಯಾಪಾರ ಚಿಹ್ನೆಗಳ ಸಮರೂಪತೆಯನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತಾವಿತ ಹಸ್ತಾಂತರಣವು (1)ನೇ ಉಪಪ್ರಕರಣದ ಅಡಿಯಲ್ಲಿ ಅಸಿಂಧುವಾಗುವುದೇ ಅಥವಾ ಅಸಿಂಧುವಾಗುವುದಿಲ್ಲವೆ ಎಂಬುದನ್ನು ಸೂಚಿಸುವ

ಒಂದು ಪ್ರಮಾಣಪತ್ರವನ್ನು ಅವನಿಗೆ ನೀಡಬಹುದು ಮತ್ತು ಹಾಗೆ ನೀಡಲಾದ ಒಂದು ಪ್ರಮಾಣಪತ್ರವು, ಅಪೀಲಿಗೆ ಒಳಪಟ್ಟು ಮತ್ತು ಆ ಪ್ರಮಾಣಪತ್ರವನ್ನು ಮೋಸದಿಂದ ಅಥವಾ ತಪ್ಪು ನಿರೂಪಣೆಯಿಂದ ಪಡೆಯಲಾಗಿದೆ ಎಂಬುದನ್ನು ತೋರಿಸಿದ ಹೊರತು, (1)ನೇ ಉಪಪ್ರಕರಣದ ಅಡಿಯಲ್ಲಿ ಹಸ್ತಾಂತರಣದ ಸಿಂಧುತ್ವಕ್ಕೆ ಅಥವಾ ಅಸಿಂಧುತ್ವಕ್ಕೆ ಸಂಬಂಧಿಸಿದಂತೆ, ಅಂಥ ಸಿಂಧುತ್ವ ಅಥವಾ ಅಸಿಂಧುತ್ವವು ಪ್ರಕರಣದಲ್ಲಿ ನಿರೂಪಿಸಿದ ಸಂಗತಿಗಳನ್ನು ಅವಲಂಬಿಸಿರುವಷ್ಟರ ಮಟ್ಟಿಗೆ ಆದರೆ, ಸಿಂಧುತ್ವದ ಪರವಾದ ಒಂದು ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ 45ನೇ ಪ್ರಕರಣದ ಅಡಿಯಲ್ಲಿ ಹಕ್ಕು ಹೊಂದಿದ ವ್ಯಕ್ತಿಯ ಸ್ವಾಮ್ಯದ ನೋಂದಣಿಗಾಗಿ ಅರ್ಜಿಯನ್ನು, ಪ್ರಮಾಣಪತ್ರವನ್ನು ನೀಡಿದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಸಲ್ಲಿಸಿದ್ದಲ್ಲಿ ಮಾತ್ರ ನಿರ್ಣಾಯಕವಾಗಿರತಕ್ಕದ್ದು.

**41. ಭಾರತದ ವಿವಿಧ ಭಾಗಗಳಲ್ಲಿ ಅನನ್ಯ ಹಕ್ಕುಗಳ ಸೃಜನೆಯಾದಾಗ ಹಸ್ತಾಂತರಣ ಅಥವಾ ವರ್ಗಾವಣೆ ಮೇಲಿನ ನಿರ್ಬಂಧ.–** 38ನೇ ಮತ್ತು 39ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಒಂದು ವ್ಯಾಪಾರ ಚಿಹ್ನೆಯನ್ನು, ವರ್ಗಾವಣೆಯ ಪರಿಣಾಮದಿಂದಾಗಿ ಈ ಮುಂದಿನ ಪರಿಸ್ಥಿತಿಗಳಿರುವ ಒಂದು ಪ್ರಕರಣದಲ್ಲಿ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಅಡಿಯಲ್ಲಾಗಲಿ,–

(ಎ) ಭಾರತದ ಯಾವುದೇ ಸ್ಥಳದಲ್ಲಿ ಮಾರಾಟ ಮಾಡಲಾಗುವ ಸರಕುಗಳ ಅಥವಾ ಅನ್ಯಥಾ ವ್ಯವಹರಿಸಲಾಗುವ ಸರಕುಗಳ ಸಂಬಂಧದಲ್ಲಿ ಅಥವಾ ಭಾರತದಲ್ಲಿರುವ ಯಾವುದೇ ಸ್ಥಳದಲ್ಲಿ ಬಳಕೆಗಾಗಿರುವ ಸೇವೆಗಳ ಅಥವಾ ಅಂಗೀಕರಿಸಲು ಲಭ್ಯವಿರುವ ಸೇವೆಗಳ ಸಂಬಂಧದಲ್ಲಿ ಬಳಕೆಗೆ ಪರಿಮಿತವಾಗಿರುವ ವ್ಯಾಪಾರ ಚಿಹ್ನೆಯ ಬಳಕೆಗೆ ಸಂಬಂಧಪಟ್ಟ ವ್ಯಕ್ತಿಗಳ ಪೈಕಿ ಒಬ್ಬನು ಅನನ್ಯ ಹಕ್ಕು ಪಡೆದರೆ; ಮತ್ತು

(ಬಿ) ಮೊದಲು ನಮೂದಿಸಿದ ವ್ಯಾಪಾರ ಚಿಹ್ನೆಗೆ ಸರಿಸುಮಾರು ಸದೃಶ್ಯತೆಯಿರುವ ವ್ಯಾಪಾರ ಚಿಹ್ನೆಯ,–

**(i)** ಒಂದೇ ಬಗೆಯ ಸರಕುಗಳಿಗೆ ಅಥವಾ ಸೇವೆಗಳಿಗೆ; ಅಥವಾ

**(ii)** ಸರಕುಗಳ ಅಥವಾ ಸೇವೆಗಳ ಒಂದೇ ಬಗೆಯ ವಿವರಣೆಗೆ; ಅಥವಾ

**(iii)** ಆ ಸರಕುಗಳೊಂದಿಗೆ ಅಥವಾ ವಿವರಣೆಯ ಸರಕುಗಳೊಂದಿಗೆ ಸಹವರ್ತಿಯಾಗಿರುವ ಸೇವೆಗಳು ಅಥವಾ ಆ ಸೇವೆಗಳೊಂದಿಗೆ ಅಥವಾ ಆ ವಿವರಣೆಯ ಸೇವೆಗಳೊಂದಿಗೆ ಸಹವರ್ತಿಯಾಗಿರುವ ಸರಕುಗಳಿಗೆ ಸಂಬಂಧಿಸಿದಂತೆ, ಅಥವಾ ಸಾದೃಶ್ಯವಾಗಿರುವ ಒಂದು ವ್ಯಾಪಾರ ಚಿಹ್ನೆಯ ಬಳಕೆಗೆ ಸಂಬಂಧಪಟ್ಟ ಆ ವ್ಯಕ್ತಿಗಳ ಪೈಕಿ ಮತ್ತೊಬ್ಬನು ಅನನ್ಯ ಹಕ್ಕನ್ನು ಪಡೆದರೆ

– ಭಾರತದಲ್ಲಿನ ಯಾವುದೇ ಇತರ ಸ್ಥಳದಲ್ಲಿ, ಮಾರಾಟ ಮಾಡಲಾಗುವ ಅಥವಾ ಅನ್ಯಥಾ ವ್ಯವಹರಿಸಲಾಗುವ ಸರಕುಗಳಿಗೆ ಅಥವಾ ಬಳಕೆಗಾಗಿರುವ ಅಥವಾ ಅಂಗೀಕಾರಕ್ಕೆ ಲಭ್ಯವಿರುವ ಸೇವೆಗಳಿಗೆ ಸಂಬಂಧಿಸಿ ಪರಿಮಿತ ಬಳಕೆಗಾಗಿ ಹಸ್ತಾಂತರಿಸತಕ್ಕದ್ದಲ್ಲ ಅಥವಾ ವರ್ಗೀಕರಣ ಮಾಡತಕ್ಕದ್ದಲ್ಲ:

ಪರಂತು, ಅಂಥ ಯಾವುದೇ ಸಂದರ್ಭದಲ್ಲಿ, ಈ ಅಧಿನಿಯಮದ ಪ್ರಾರಂಭದ ತರುವಾಯ, ವ್ಯಾಪಾರ ಚಿಹ್ನೆಯನ್ನು ಹಸ್ತಾಂತರಿಸಲು ಪ್ರಸ್ತಾವಿಸಿದ ಅದರ ಮಾಲೀಕನು, ಅಥವಾ ನೋಂದಾಯಿತ ವ್ಯಾಪಾರ ಚಿಹ್ನೆಯನ್ನು ತನಗೆ ಅಥವಾ ತನ್ನ ಸ್ವಾಮ್ಯದಲ್ಲಿದ್ದ ಪೂರ್ವಾಧಿಕಾರಿಗೆ ವರ್ಗಾಯಿಸುವುದಕ್ಕೆ ಕ್ಲೇಮು ಮಾಡುವ ವ್ಯಕ್ತಿಯು, ನಿಯಮಿಸಿದ ರೀತಿಯಲ್ಲಿ ಸಲ್ಲಿಸಿದ ಅರ್ಜಿಯ ಮೇರೆಗೆ, ರಿಜಿಸ್ಟ್ರಾರನು, ಎಲ್ಲಾ ಪರಿಸ್ಥಿತಿಗಳಲ್ಲಿ, ಸದರಿ ಹಕ್ಕುಗಳನ್ನು ಚಲಾಯಿಸುವಾಗ ವ್ಯಾಪಾರ ಚಿಹ್ನೆಯ ಬಳಕೆಯು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿಲ್ಲ ಎಂಬುದನ್ನು ಮನಗಂಡರೆ ಹಸ್ತಾಂತರಣವನ್ನು ಅಥವಾ ವರ್ಗಾವಣೆಯನ್ನು ಅನುಮೋದಿಸಬಹುದು, ಮತ್ತು ಹಾಗೆ ಅನುಮೋದಿಸಿದ ಹಸ್ತಾಂತರಣ ಅಥವಾ ವರ್ಗಾವಣೆಯು, ಅದನ್ನು ಮೋಸದಿಂದ ಅಥವಾ ತಪ್ಪು ನಿರೂಪಣೆಯಿಂದ ಪಡೆಯಲಾಗಿದೆಯೆಂದು ಮನಗಂಡ ಹೊರತು, 45ನೇ ಪ್ರಕರಣದ ಅಡಿಯಲ್ಲಿ ಹಕ್ಕುಳ್ಳವನಾಗುವ ವ್ಯಕ್ತಿಯ ಸ್ವಾಮ್ಯದ ನೋಂದಣಿಗಾಗಿ ಅರ್ಜಿಯನ್ನು, ಅನುಮೋದನೆಯನ್ನು ನೀಡಲಾದ ದಿನಾಂಕದಿಂದ ಆರು ತಿಂಗಳುಗಳ ಒಳಗೆ

ಸಲ್ಲಿಸಿದ್ದರೆ, ಅಥವಾ ವರ್ಗಾವಣೆಯ ಸಂದರ್ಭದಲ್ಲಿ, ಆ ದಿನಾಂಕಕ್ಕೆ ಮುಂಚೆ ಸಲ್ಲಿಸಿದ್ದರೆ, ಈ ಪ್ರಕರಣದ ಅಥವಾ 40ನೇ ಪ್ರಕರಣದ ಅಡಿಯಲ್ಲಿ ಅಸಿಂಧುವೆಂದು ಭಾವಿಸತಕ್ಕದ್ದಲ್ಲ.

**42. ವ್ಯವಹಾರದ ಸದ್ಭಾವದ ಸಂಬಂಧದಲ್ಲಿಯಲ್ಲದೆ ಅನ್ಯಥಾ ಮಾಡಲಾದ ಹಸ್ತಾಂತರಣದ ಷರತ್ತುಗಳು.–** ನೋಂದಾಯಿಸಿದ ಅಥವಾ ನೋಂದಾಯಿಸಿರದ ಒಂದು ವ್ಯಾಪಾರ ಚಿಹ್ನೆಯನ್ನು, ಆ ಚಿಹ್ನೆಯನ್ನು ಬಳಸಲಾದ ಅಥವಾ ಬಳಸಲಾಗುತ್ತಿರುವ ಸದ್ಭಾವದ ಸಂಬಂಧದಲ್ಲಿ ಅಲ್ಲದೆ ಅನ್ಯಥಾ ಹಸ್ತಾಂತರಣ ಮಾಡಿದಾಗ, ಹಸ್ತಾಂತರಣವನ್ನು ಮಾಡಿದ ದಿನಾಂಕದಿಂದ ಆರು ತಿಂಗಳುಗಳೊಳಗೆ ಅಥವಾ ರಿಜಿಸ್ಟ್ರಾರನು ಅನುಮತಿಸಬಹುದಾದ ಒಟ್ಟು ಮೂರು ತಿಂಗಳುಗಳಿಗೆ ಮೀರದಂತಹ ವಿಸ್ತರಿತ ಅವಧಿ ಯಾವುದಾದರೂ ಇದ್ದರೆ, ಆ ಅವಧಿಯೊಳಗೆ ಮಾಡಿದ ಹಸ್ತಾಂತರಣದ ಜಾಹೀರಾತಿಗೆ ಸಂಬಂಧಿಸಿದಂತೆ ನಿರ್ದೇಶನಗಳಿಗಾಗಿ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸಿದ ಹೊರತು ಮತ್ತು ರಿಜಿಸ್ಟ್ರಾರನು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ಜಾಹೀರಾತು ಮಾಡಿದ ಹೊರತು ಆ ಹಸ್ತಾಂತರಣವು ಪರಿಣಮಕಾರಿಯಾಗತಕ್ಕದ್ದಲ್ಲ,

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, ಈ ಕೆಳಕಂಡ ವಿವರಣೆಯ ವ್ಯಾಪಾರ ಚಿಹ್ನೆಯ ಹಸ್ತಾಂತರಣವನ್ನು, ಯಾವ ವ್ಯವಹಾರದ ಸದ್ಭಾವದ ಸಂಬಂಧದಲ್ಲಿ ಚಿಹ್ನೆಯನ್ನು ಬಳಸಲಾಗಿದೆಯೋ ಅದನ್ನು ಹೊರತುಪಡಿಸಿ ಮಾಡಿದ ಹಸ್ತಾಂತರಣವೆಂದು ಭಾವಿಸತಕ್ಕದ್ದಲ್ಲ, ಎಂದರೆ: –

(ಎ) ಕೆಲವು ಸರಕುಗಳಿಗೆ ಅಥವಾ ಸೇವೆಗಳಿಗೆ ಮಾತ್ರ ಸಂಬಂಧಿಸಿದ ವ್ಯಾಪಾರ ಚಿಹ್ನೆಯ ಹಸ್ತಾಂತರಣದ ಸಂಬಂಧದಲ್ಲಿ ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದ ವ್ಯವಹಾರದ ಸದ್ಭಾವವನ್ನು ವರ್ಗಾವಣೆ ಮಾಡಿ, ಯಾವ ವ್ಯಾಪಾರದ ಚಿಹ್ನೆಯನ್ನು ನೋಂದಾಯಿಸಲಾಗಿದೆಯೋ ಅದರ ಹಸ್ತಾಂತರಣ; ಅಥವಾ

(ಬಿ) ಭಾರತದಿಂದ ರಫ್ತು ಮಾಡುವ ಸರಕುಗಳಿಗೆ ಸಂಬಂಧಿಸಿದಂತೆ ಬಳಸುವ ಅಥವಾ ಭಾರತದ ಹೊರಗಡೆ ಬಳಕೆಗಾಗಿರುವ ಸೇವೆಗಳಿಗೆ ಸಂಬಂಧಿಸಿದಂತೆ ಮಾಡಲಾದ ವ್ಯಾಪಾರ ಚಿಹ್ನೆಯ ಹಸ್ತಾಂತರಣ. ಆದರೆ, ಆ ಹಸ್ತಾಂತರದ ಜೊತೆಗೆ ರಫ್ತು ವ್ಯವಹಾರಕ್ಕೆ ಮಾತ್ರ ಸಂಬಂಧಿಸಿದಂತೆ ಸದ್ಭಾವದ ವರ್ಗಾವಣೆಯಾಗಿರಬೇಕು.

**43. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ಹಸ್ತಾಂತರಣ ಸಾಧ್ಯತೆ ಮತ್ತು ವರ್ಗಾವಣೆ ಸಾಧ್ಯತೆ.–** ಒಂದು ಪ್ರಮಾಣೀಕೃತ ವ್ಯಾಪಾರಚಿಹ್ನೆಯನ್ನು ನಿಯಮಿಸಿದ ರೀತಿಯಲ್ಲಿ ಮಾಡಿರತಕ್ಕ ಲಿಖಿತ ಅರ್ಜಿಗೆ ರಿಜಿಸ್ಟ್ರಾರನ ಒಪ್ಪಿಗೆಯಿದ್ದ ಹೊರತು ಹಸ್ತಾಂತರಣ ಮಾಡತಕ್ಕದ್ದಲ್ಲ ಅಥವಾ ರವಾನಿಸತಕ್ಕದ್ದಲ್ಲ.

**44. ಸಹವರ್ತಿ ವ್ಯಾಪಾರಚಿಹ್ನೆಗಳ ಹಸ್ತಾಂತರಣ ಸಾಧ್ಯತೆ ಮತ್ತು ವರ್ಗಾವಣೆ ಸಾಧ್ಯತೆ.–** ಸಹವರ್ತಿ ವ್ಯಾಪಾರಚಿಹ್ನೆಗಳನ್ನು ಪ್ರತ್ಯೇಕಿಸದೆ ಪೂರ್ಣವಾಗಿ ಮಾತ್ರ ಹಸ್ತಾಂತರಣೆ ಮಾಡತಕ್ಕದ್ದು ಮತ್ತು ವರ್ಗಾವಣೆ ಮಾಡತಕ್ಕದ್ದಲ್ಲ. ಆದರೆ, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಅವನ್ನು ಎಲ್ಲಾ ಇತರ ಉದ್ದೇಶಗಳಿಗಾಗಿ, ಪ್ರತ್ಯೇಕ ವ್ಯಾಪಾರ ಚಿಹ್ನೆಗಳಾಗಿ ನೋಂದಾಯಿಸಲಾಗಿದೆಯೆಂದು ಭಾವಿಸತಕ್ಕದ್ದು.

**45. ಹಸ್ತಾಂತರಣಗಳ ಮತ್ತು ವರ್ಗಾವಣೆಗಳ ನೋಂದಣಿ.–** (1) ಒಬ್ಬ ವ್ಯಕ್ತಿಯು, ಹಸ್ತಾಂತರಣ ಅಥವಾ ವರ್ಗಾವಣೆಯ ಮೂಲಕ ನೋಂದಾಯಿತ ವ್ಯಾಪಾರ ಚಿಹ್ನೆಗೆ ಹಕ್ಕನ್ನು ಪಡೆಯುವಲ್ಲಿ, ಅವನು, ತನ್ನ ಹಕ್ಕನ್ನು ನೋಂದಣಿ ಮಾಡಲು ನಿಯಮಿಸಿದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ರಿಜಿಸ್ಟ್ರಾರನು ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ಆ ಹಕ್ಕಿನ ಬಗ್ಗೆ ರುಜುವಾತು ಇದೆಯೆಂದು ತಾನು ಮನಗಂಡರೆ, ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಹಸ್ತಾಂತರಣ ಅಥವಾ ವರ್ಗಾವಣೆಯು ಪರಿಣಾಮ ಬೀರುವುದೋ ಆ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ವ್ಯಾಪಾರ ಚಿಹ್ನೆಯ ಮಾಲೀಕನೆಂದು ಅವನನ್ನು ನೋಂದಾಯಿಸತಕ್ಕದ್ದು ಮತ್ತು ಹಸ್ತಾಂತರಣ ಅಥವಾ ವರ್ಗಾವಣೆಯ ವಿವರಗಳನ್ನು ರಿಜಿಸ್ಟರಿನಲ್ಲಿ ನಮೂದಿಸುವಂತೆ ಮಾಡತಕ್ಕದ್ದು:

ಪರಂತು, ಎರಡು ಪಕ್ಷಕಾರರ ನಡುವೆ ಹಸ್ತಾಂತರಣದ ಅಥವಾ ವರ್ಗಾವಣೆಯ ಸಿಂಧುತ್ವದ ಬಗ್ಗೆ ವಿವಾದವಿದ್ದಲ್ಲಿ, ರಿಜಿಸ್ಟ್ರಾರನು, ಪಕ್ಷಕಾರರ ಹಕ್ಕುಗಳು ಸಕ್ಷಮ ನ್ಯಾಯಾಲಯದಿಂದ ನಿರ್ಧಾರವಾಗುವವರೆಗೆ ಹಸ್ತಾಂತರಣ ಅಥವಾ ವರ್ಗಾವಣೆಯನ್ನು ನೋಂದಾಯಿಸುವುದಕ್ಕೆ ನಿರಾಕರಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿನ ಅರ್ಜಿಯ ಅಥವಾ ಅದರ ಆದೇಶದ ಮೇಲಿನ ಅಪೀಲಿನ, ಅಥವಾ 57ನೇ ಪ್ರಕರಣದ ಅಡಿಯಲ್ಲಿನ ಅರ್ಜಿಯ ಅಥವಾ ಅದರ ಆದೇಶದ ಮೇಲಿನ ಅಪೀಲಿನ ಉದ್ದೇಶಕ್ಕಾಗಿ ಅಲ್ಲದೆ (1)ನೇ ಉಪ ಪ್ರಕರಣಕ್ಕನುಸಾರವಾಗಿ ಯಾವ ದಸ್ತಾವೇಜು ಅಥವಾ ಲಿಖಿತದ ಬಗ್ಗೆ, ರಿಜಿಸ್ಟರಿನಲ್ಲಿ ಯಾವುದೇ ನಮೂದನೆಯನ್ನು ಮಾಡಿಲ್ಲವೋ ಅವುಗಳನ್ನು ಸಂದರ್ಭಾನುಸಾರ ರಿಜಿಸ್ಟ್ರಾರನು ಅಥವಾ ಅಪೀಲು ಮಂಡಲಿ ಅಥವಾ ನ್ಯಾಯಾಲಯವು ಅನ್ಯಥಾ ನಿರ್ದೇಶಿಸಿದ ಹೊರತು ರಿಜಿಸ್ಟ್ರಾರನು ಅಥವಾ ಅಪೀಲು ಮಂಡಲಿಯು ಅಥವಾ ಯಾವುದೇ ನ್ಯಾಯಾಲಯವು ಹಸ್ತಾಂತರಣ ಅಥವಾ ವರ್ಗಾವಣೆ ವ್ಯಾಪಾರ ಚಿಹ್ನೆಯ ಹಕ್ಕಿನ ರುಜುವಾತಾಗಿ ಸಾಕ್ಷ್ಯದಲ್ಲಿ ಅಂಗೀಕರಿಸತಕ್ಕದ್ದಲ್ಲ.

## ಅಧ್ಯಾಯ – VI
## ವ್ಯಾಪಾರಚಿಹ್ನೆಗಳ ಬಳಕೆ ಮತ್ತು ನೋಂದಾಯಿತ ಬಳಕೆದಾರರು

**46. ರಚಿತವಾಗಲಿರುವ ಕಂಪನಿಯಿಂದ ವ್ಯಾಪಾರಿಚಿಹ್ನೆಯ ಉದ್ದೇಶಿತ ಬಳಕೆ, ಇತ್ಯಾದಿ.–** (1) ಯಾವುವೇ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ವ್ಯಾಪಾರ ಚಿಹ್ನೆಯ ನೋಂದಣಿಗೆ ಸಂಬಂಧಿಸಿದಂತೆ,–

(ಎ) ಒಂದು ಕಂಪನಿಯು, ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ ರಚಿತವಾಗಬೇಕಾಗಿದೆಯೆಂದು ಮತ್ತು ನೋಂದಾಯಿಸಬೇಕಾಗಿದೆಯೆಂದು ಮತ್ತು ಆ ಅರ್ಜಿದಾರನು, ಕಂಪನಿಯ ಮೂಲಕ ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ವ್ಯಾಪಾರ ಚಿಹ್ನೆಯ ಬಳಕೆಯ ದೃಷ್ಟಿಯಿಂದ ಆ ಕಂಪನಿಗೆ ಅದನ್ನು ಹಸ್ತಾಂತರಿಸುವುದಕ್ಕೆ ಉದ್ದೇಶಿಸಿರುವನೆಂದು; ಅಥವಾ

(ಬಿ) ಮಾಲೀಕನು, ವ್ಯಾಪಾರಚಿಹ್ನೆಯ ನೋಂದಣಿಯ ನಂತರ ಒಬ್ಬ ವ್ಯಕ್ತಿಯ ಮೂಲಕ ಅದನ್ನು ನೋಂದಾಯಿತ ಬಳಕೆದಾರನಂತೆ ಬಳಸಬೇಕೆಂದು ಉದ್ದೇಶಿಸಿರುವನೆಂದು

– ರಿಜಿಸ್ಟ್ರಾರನು ಮನಗಂಡರೆ, ವ್ಯಾಪಾರಚಿಹ್ನೆಯನ್ನು ಆ ಅರ್ಜಿದಾರನು ಬಳಸುತ್ತಿಲ್ಲ ಅಥವಾ ಬಳಸಲು ಉದ್ದೇಶಿಸಿಲ್ಲ ಎಂದು ಕಂಡುಬಂದ ಕಾರಣದ ಮೇಲೆ ಮಾತ್ರ ಆ ಯಾವುದೇ ಅರ್ಜಿಯನ್ನು ನಿರಾಕರಿಸತಕ್ಕದ್ದಲ್ಲ ಅಥವಾ ಅಂಥ ನೋಂದಣಿಯ ಅನುಮತಿಯನ್ನು ತಡೆಹಿಡಿಯತಕ್ಕದ್ದಲ್ಲ.

(2) 47ನೇ ಪ್ರಕರಣದ ಉಪಬಂಧಗಳು ಈ ಉಪಪ್ರಕರಣದ ಮೂಲಕ ಪ್ರದಾನ ಮಾಡಲಾದ ಅಧಿಕಾರಗಳ ಮೇರೆಗೆ ನೋಂದಾಯಿತ ವ್ಯಾಪಾರಚಿಹ್ನೆಗೆ ಸಂಬಂಧಿಸಿದಂತೆ, ಆ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ, ಒಂದು ವ್ಯಾಪಾರಚಿಹ್ನೆಯನ್ನು ಅವನಿಂದ ಬಳಸತಕ್ಕದ್ದೆಂದು ನೋಂದಣಿಗಾಗಿ ಅರ್ಜಿದಾರನ ಆಶಯದ ಆ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿಯ ಉಲ್ಲೇಖವನ್ನು ಸಂಬಂಧಪಟ್ಟ ಕಂಪನಿ ಅಥವಾ ನೋಂದಾಯಿತ ಬಳಕೆದಾರನು ಬಳಸತಕ್ಕದ್ದೆಂದು ಅವನ ಆಶಯದ ಉಲ್ಲೇಖವೆಂಬುದಾಗಿ ಪ್ರತ್ಯಾಯೋಜಿಸಿದ್ದ ಹಾಗೆ ಪರಿಣಾಮವುಳ್ಳದ್ದಾಗಿರತಕ್ಕದ್ದು.

(3) ನ್ಯಾಯಾಧಿಕರಣವು, (1)ನೇ ಉಪಪ್ರಕರಣವು ಅನ್ವಯಿಸುವ ಒಂದು ಪ್ರಕರಣದಲ್ಲಿ, ಯಾವುದೇ ವಿರೋಧ ಅಥವಾ ಅಪೀಲಿಗೆ ಸಂಬಂಧಿಸಿದ ಯಾವುವೇ ವ್ಯವಹರಣೆಗಳ ವೆಚ್ಚಗಳಿಗಾಗಿ ಭದ್ರತೆಯನ್ನು ನೀಡಲು ಅರ್ಜಿದಾರನನ್ನು ಅಗತ್ಯಪಡಿಸಬಹುದು ಮತ್ತು ಅಂಥ ಭದ್ರತೆಯನ್ನು ಕ್ರಮಬದ್ಧವಾಗಿ ನೀಡಲು ತಪ್ಪಿದಲ್ಲಿ, ಅರ್ಜಿಯನ್ನು ಬಿಟ್ಟುಬಿಡಲಾಗಿದೆಯೆಂದು ಪರಿಗಣಿಸಬಹುದು.

(4) (1)ನೇ ಉಪಪ್ರಕರಣವು ಅನ್ವಯಿಸುವ ಒಂದು ಪ್ರಕರಣದಲ್ಲಿ, ಯಾವುವೇ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಒಂದು ವ್ಯಾಪಾರಚಿಹ್ನೆಯನ್ನು ಅರ್ಜಿದಾರನ ಹೆಸರಿನಲ್ಲಿ ನೋಂದಾಯಿಸಿದಲ್ಲಿ, ಅವನು ಒಂದು ಕಂಪನಿಗೆ ಆ ವ್ಯಾಪಾರಚಿಹ್ನೆಯನ್ನು ಹಸ್ತಾಂತರಿಸುವ ಉದ್ದೇಶದ ಆಶಯವನ್ನು ಹೊಂದಿದ್ದರೆ, ನಿಯಮಿಸಬಹುದಾದ

ಅಂಥ ಅವಧಿಯೊಳಗೆ ಅಥವಾ ರಿಜಿಸ್ಟ್ರಾರನು ನಿಯಮಿಸಿದ ರೀತಿಯಲ್ಲಿ ತನಗೆ ಸಲ್ಲಿಸಿದ ಅರ್ಜಿಯ ಮೇರೆಗೆ ಅನುಮತಿಸಿದ ಆರು ತಿಂಗಳಿಗಿಂತ ಹೆಚ್ಚಾಗದಂಥ ಅವಧಿಯೊಳಗೆ, ಕಂಪನಿಯನ್ನು ಆ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ವ್ಯಾಪಾರ ಚಿಹ್ನೆಯ ಮಾಲೀಕನೆಂದು ನೋಂದಾಯಿಸಿದ್ದ ಹೊರತು, ಅದರ ಸಂಬಂಧದಲ್ಲಿನ ಆ ಅವಧಿಯು ಮುಕ್ತಾಯಗೊಂಡಾಗ ಪರಿಣಾಮಕಾರಿಯಾಗುವುದು ನಿಂತುಹೋಗತಕ್ಕದ್ದು ಮತ್ತು ರಿಜಿಸ್ಟ್ರಾರನು ಅದಕ್ಕನುಸಾರ ನೋಂದಣಿಯನ್ನು ತಿದ್ದುಪಡಿ ಮಾಡತಕ್ಕದ್ದು.

**47. ಬಳಕೆ ಮಾಡದ ಕಾರಣಕ್ಕಾಗಿ ರಿಜಿಸ್ಟರಿನಿಂದ ತೆಗೆದುಹಾಕುವುದು ಮತ್ತು ಮಿತಿಗಳನ್ನು ವಿಧಿಸುವುದು.–**

(1) ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯನ್ನು,–

(ಎ) ಅರ್ಜಿದಾರನು ನೋಂದಣಿಗಾಗಿ ಒಂದು ವ್ಯಾಪಾರ ಚಿಹ್ನೆಯನ್ನು ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅದನ್ನು ಆತನು ಅಥವಾ 46ನೇ ಪ್ರಕರಣದ ಉಪಬಂಧಗಳಿಗೆ ಅನ್ವಯವಾಗುವ ಸಂದರ್ಭದಲ್ಲಿ ಸಂಬಂಧಪಟ್ಟ ಕಂಪನಿ ಅಥವಾ ಸಂದರ್ಭಾನುಸಾರ, ನೋಂದಾಯಿತ ಬಳಕೆದಾರನು, ಬಳಸತಕ್ಕದ್ದೆಂಬ, ಯಾವುದೇ ಪ್ರಾಮಾಣಿಕ ಉದ್ದೇಶವಿಲ್ಲದೆ ನೋಂದಾಯಿಸಿರುವಲ್ಲಿ, ಮತ್ತು ವಾಸ್ತವವಾಗಿ, ಅರ್ಜಿಯನ್ನು ಸಲ್ಲಿಸಿದ ದಿನಾಂಕಕ್ಕೆ ಮುಂಚೆ, ಮೂರು ತಿಂಗಳವರೆಗಿನ ದಿನಾಂಕದವರೆಗೆ ತತ್ಕಾಲದ ಅದರ ಯಾರೇ ಮಾಲೀಕನು ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಆ ವ್ಯಾಪಾರ ಚಿಹ್ನೆಯ ಯಾವುದೇ ಪ್ರಾಮಾಣಿಕ ಬಳಕೆ ಮಾಡಿಲ್ಲವೆಂಬ; ಅಥವಾ

(ಬಿ) ಅರ್ಜಿಯನ್ನು ಸಲ್ಲಿಸಿದ ದಿನಾಂಕಕ್ಕೆ ಮುಂಚೆ ಮೂರು ತಿಂಗಳುಗಳವರೆಗಿನ ದಿನಾಂಕದವರೆಗೆ, ವ್ಯಾಪಾರ ಚಿಹ್ನೆಯು ರಿಜಿಸ್ಟರಿನಲ್ಲಿ ವಾಸ್ತವಿಕವಾಗಿ ನಮೂದಾದ ದಿನಾಂಕದಿಂದ ಐದು ವರ್ಷಗಳ ನಿರಂತರ ಅವಧಿ ಅಥವಾ ಹೆಚ್ಚಿನ ಅವಧಿಯು ಕಳೆದು ಹೋಗಿರುವಲ್ಲಿ ಆ ಸಂದರ್ಭದಲ್ಲಿ ವ್ಯಾಪಾರ ಚಿಹ್ನೆಯು ನೋಂದಾಯಿತವಾಗಿದ್ದು ಮತ್ತು ತತ್ಕಾಲದ ಅದರ ಯಾರೇ ಮಾಲೀಕನು ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅದರ ಯಾವುದೇ ಪ್ರಾಮಾಣಿಕ ಬಳಕೆ ಮಾಡಿಲ್ಲವೆಂಬ

– ಕಾರಣದ ಮೇರೆಗೆ ಬಾಧಿತನಾದ ಯಾರೇ ವ್ಯಕ್ತಿಯು, ರಿಜಿಸ್ಟ್ರಾರನಿಗೆ ಅಥವಾ ಅಪೀಲು ಮಂಡಲಿಗೆ ನಿಯಮಿಸಲಾದ ರೀತಿಯಲ್ಲಿ ಸಲ್ಲಿಸಿದ ಅರ್ಜಿಯ ಮೇರೆಗೆ, ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಅದನ್ನು ನೋಂದಣಿ ಮಾಡಲಾಗಿದೆಯೋ ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ರಿಜಿಸ್ಟರಿನಿಂದ ತೆಗೆದುಹಾಕಬಹುದು:

ಪರಂತು, ಅರ್ಜಿದಾರನಿಗೆ, ಪ್ರಶ್ನಿತ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ತದ್ರೂಪತೆ ಅಥವಾ ಬಹುಮಟ್ಟಿಗೆ ಸದೃಶ್ಯತೆ ಇರುವ ವ್ಯಾಪಾರ ಚಿಹ್ನೆಯನ್ನು 12ನೇ ಪ್ರಕರಣದ ಮೇರೆಗೆ ನೋಂದಣಿ ಮಾಡಲು ಅನುಮತಿ ನೀಡಲಾದ ಹೊರತು, ಅಥವಾ ಅಂತಹ ವ್ಯಾಪಾರ ಚಿಹ್ನೆಯನ್ನು ನೋಂದಣಿ ಮಾಡಲು ಅವನಿಗೆ ಸೂಕ್ತವಾಗಿ ಅನುಮತಿ ನೀಡಬಹುದೆಂದು ನ್ಯಾಯಾಧಿಕರಣ ಅಭಿಪ್ರಾಯಪಟ್ಟ ಹೊರತು, ನ್ಯಾಯಾಧಿಕರಣವು,–

**(i)** ಒಂದೇ ಸ್ವರೂಪದ ಸರಕುಗಳಿಗೆ ಅಥವಾ ಸೇವೆಗಳಿಗೆ; ಅಥವಾ

**(ii)** ಯಾವ ಸರಕುಗಳಿಗೆ ಅಥವಾ ಸಂದರ್ಭಾನುಸಾರ, ಸೇವೆಗಳಿಗೆ ಸಂಬಂಧಿಸಿದಂತೆ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿದೆಯೋ, ಆ ಸ್ವರೂಪದ ಸರಕುಗಳು ಅಥವಾ ಸೇವೆಗಳಿಗೆ ಸಹವರ್ತಿಯಾಗಿರುವ ಸರಕುಗಳಿಗೆ ಅಥವಾ ಸೇವೆಗಳಿಗೆ

– ಸಂಬಂಧಿಸಿದಂತೆ, ವ್ಯಾಪಾರಚಿಹ್ನೆಯ ತತ್ಕಾಲದ ಯಾರೇ ಮಾಲೀಕನು, ಸಂಬಂಧಪಟ್ಟ ದಿನಾಂಕಕ್ಕೆ ಮುಂಚೆ ಅಥವಾ ಸಂದರ್ಭಾನುಸಾರ, ಸಂಬಂಧಪಟ್ಟ ಅವಧಿಯಲ್ಲಿ ವ್ಯಾಪಾರ ಚಿಹ್ನೆಯ ಪ್ರಾಮಾಣಿಕ ಬಳಕೆಯಾಗಿತ್ತೆಂದು ತೋರಿಸಿದರೆ, ಯಾವುವೇ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ (ಎ) ಖಂಡದ ಅಥವಾ (ಬಿ) ಖಂಡದ ಮೇರೆಗಿನ ಅರ್ಜಿಯನ್ನು ತಿರಸ್ಕರಿಸಬಹುದು.

(2) ಯಾವ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಒಂದು ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿದೆಯೋ ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅಪೀಲು ಮಂಡಲಿಗೆ ಅಥವಾ ರಿಜಿಸ್ಟ್ರಾರನಿಗೆ ನಿಯಮಿಸಲಾದ ರೀತಿಯಲ್ಲಿ ಒಬ್ಬ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇರೆಗೆ, ನ್ಯಾಯಾಧಿಕರಣವು,–

(ಎ) (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಪರಿಸ್ಥಿತಿಗಳು, ಭಾರತದಲ್ಲಿ ನಿರ್ದಿಷ್ಟ ಸ್ಥಳದಲ್ಲಿ (ಭಾರತದಿಂದ ರಫ್ತು ಮಾಡುವುದನ್ನು ಹೊರತುಪಡಿಸಿ) ಮಾರಾಟ ಮಾಡಲಾಗುವ, ಅಥವಾ ಇತರೇ ರೀತಿಯಲ್ಲಿ ವ್ಯಾಪಾರ ಮಾಡಲಾಗುವ ಸರಕುಗಳಿಗೆ ಸಂಬಂಧಿಸಿದಂತೆ ಅಥವಾ ಭಾರತದ ಹೊರಗಡೆ ನಿರ್ದಿಷ್ಟ ಮಾರುಕಟ್ಟೆಗೆ ರಫ್ತು ಮಾಡಲಾಗುವ ಸರಕುಗಳಿಗೆ ಸಂಬಂಧಿಸಿದಂತೆ; ಅಥವಾ ಭಾರತದ ನಿರ್ದಿಷ್ಟ ಸ್ಥಳದಲ್ಲಿ ಬಳಕೆಗೆ ಅಥವಾ ಸ್ವೀಕೃತಿಗೆ ಲಭ್ಯವಿರುವ ಅಥವಾ ಭಾರತದ ಹೊರಗಡೆ ನಿರ್ದಿಷ್ಟ ಮಾರುಕಟ್ಟೆಯಲ್ಲಿ ಬಳಕೆಗಾಗಿ ಇರುವ ಸೇವೆಗಳಿಗೆ ಸಂಬಂಧಿಸಿದಂತೆ ವ್ಯಾಪಾರಚಿಹ್ನೆಯನ್ನು ಬಳಸದಿರುವಷ್ಟು ಮಟ್ಟಿಗೆ, ಅಸ್ತಿತ್ವದಲ್ಲಿರುವುದಾಗಿ ಕಂಡು ಬಂದಾಗ; ಮತ್ತು

(ಬಿ) ಆ ಸ್ಥಳದಲ್ಲಿ ಅಥವಾ ಆ ದೇಶದಲ್ಲಿ ಮಾರಾಟ ಮಾಡಲಾಗುವ ಅಥವಾ ಇತರೇ ರೀತಿಯಲ್ಲಿ ವ್ಯಾಪಾರ ಮಾಡಲಾಗುವ ಸರಕುಗಳಿಗೆ ಸಂಬಂಧಿಸಿದಂತೆ, ಅಥವಾ ಹಾಗೆ ರಫ್ತು ಮಾಡಲಾಗುವ ಸರಕುಗಳಿಗೆ ಸಂಬಂಧಿಸಿದಂತೆ ಅಥವಾ ಬಳಕೆಗೆ ಅಥವಾ ಸ್ವೀಕೃತಿಗೆ ಲಭ್ಯವಿರುವ ಅಥವಾ ಬಳಕೆಗಾಗಿ ಇರುವ ಸೇವೆಗಳಿಗೆ ಸಂಬಂಧಿಸಿದಂತೆ, ಬಳಕೆಗೆ ವಿಸ್ತರಿಸಿದ ಒಂದು ನೋಂದಣಿಯ ಮೇರೆಗೆ, ಒಬ್ಬ ವ್ಯಕ್ತಿಗೆ ಆ ಸರಕುಗಳ ಸಂಬಂಧದಲ್ಲಿ ತದ್ರೂಪವಾಗಿರುವ ಅಥವಾ ಬಹುಮಟ್ಟಿಗೆ ಸಾದೃಶ್ಯತೆಯಿರುವ ವ್ಯಾಪಾರ ಚಿಹ್ನೆಯನ್ನು 12ನೇ ಪ್ರಕರಣದ ಅಡಿಯಲ್ಲಿ ನೋಂದಣಿ ಮಾಡುವುದಕ್ಕೆ ಅನುಮತಿ ನೀಡಿದಾಗ, ಅಥವಾ ಅಂತಹ ವ್ಯಾಪಾರ ಚಿಹ್ನೆಯನ್ನು ನೋಂದಣಿ ಮಾಡಲು ಅವನಿಗೆ ಸೂಕ್ತವಾಗಿ ಅನುಮತಿ ನೀಡಬಹುದೆಂದು ನ್ಯಾಯಾಧಿಕರಣವು ಅಭಿಪ್ರಾಯಪಟ್ಟಾಗ

– ಆ ನೋಂದಣಿಯು, ಅಂತಹ ಬಳಕೆಗೆ ವಿಸ್ತರಿಸುವುದು ನಿಂತುಹೋಗತಕ್ಕದ್ದೆಂದು ಸುನಿಶ್ಚಿತಗೊಳಿಸಲು ತಾನು ಸೂಕ್ತವೆಂದು ಭಾವಿಸುವಂತಹ ಪರಿಮಿತಿಗಳನ್ನು ಮೊದಲು ನಮೂದಿಸಿದ ವ್ಯಾಪಾರ ಚಿಹ್ನೆಯ ನೋಂದಣಿಯ ಮೇಲೆ ವಿಧಿಸಬಹುದು.

(3) ಅರ್ಜಿದಾರನು (1)ನೇ ಉಪಪ್ರಕರಣದ (ಬಿ) ಖಂಡದ ಉದ್ದೇಶಕ್ಕೆ ಅಥವಾ (2)ನೇ ಉಪಪ್ರಕರಣದ ಉದ್ದೇಶಗಳಿಗಳಿಗಾಗಿ ವ್ಯಾಪಾರದ ವಿಶೇಷ ಪರಿಸ್ಥಿತಿಗಳ ಕಾರಣದಿಂದಾಗಿ ಇದೆಯೆಂದು ಕಂಡುಬರುವ ಒಂದು ವ್ಯಾಪಾರ ಚಿಹ್ನೆಯ ಯಾವುದೇ ಬಳಕೆಯಾಗದ ಬಗ್ಗೆ ಅವಲಂಬಿಸಲು ಹಕ್ಕುಳ್ಳವನಾಗತಕ್ಕದ್ದಲ್ಲ. ಅದು, ಭಾರತದಲ್ಲಿ ವ್ಯಾಪಾರ ಚಿಹ್ನೆಯ ಬಳಕೆಗೆ ಸಂಬಂಧಿಸಿದ ಯಾವುದೇ ಕಾನೂನಿನ ಅಥವಾ ವಿನಿಯಮದ ಮೂಲಕ ವಿಧಿಸಲಾದ ನಿರ್ಬಂಧಗಳನ್ನು ಒಳಗೊಳ್ಳುತ್ತದೆ ಮತ್ತು ಅರ್ಜಿಯು ಯಾವ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದೆಯೋ ಅವುಗಳಿಗೆ ಸಂಬಂಧಿಸಿದಂತೆ ವ್ಯಾಪಾರಚಿಹ್ನೆಯನ್ನು ಬಿಟ್ಟುಬಿಡುವ ಅಥವಾ ಬಳಸದಿರುವ ಯಾವುದೇ ಆಶಯವನ್ನು ಒಳಗೊಳ್ಳುವುದಿಲ್ಲ.

**48. ನೋಂದಾಯಿತ ಬಳಕೆದಾರರು.–** (1) 49ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಒಂದು ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕನನ್ನು ಹೊರತುಪಡಿಸಿದ ಒಬ್ಬ ವ್ಯಕ್ತಿಯನ್ನು, ವ್ಯಾಪಾರ ಚಿಹ್ನೆಯನ್ನು ಯಾವುದೇ ಸರಕಿನ ಅಥವಾ ಎಲ್ಲಾ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ನೋಂದಾಯಿಸಲಾಗಿರುವ ಸಂದರ್ಭದಲ್ಲಿ, ಅವುಗಳ ನೋಂದಾಯಿತ ಬಳಕೆದಾರನೆಂದು ನೋಂದಾಯಿಸಬಹುದು.

(2) ಅನುಮತಿಸಲಾದ ವ್ಯಾಪಾರ ಚಿಹ್ನೆಯ ಬಳಕೆಯನ್ನು ಅದರ ಮಾಲೀಕನು ಬಳಸಬಹುದೆಂದು ಪರಿಗಣಿಸತಕ್ಕದ್ದು, ಮತ್ತು 47ನೇ ಪ್ರಕರಣದ ಉದ್ದೇಶಗಳಿಗಾಗಿ ಅಥವಾ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಯಾವ ಉದ್ದೇಶಕ್ಕಾಗಿ ಅಂಥ ಯಾವ ಬಳಕೆಯು ಪ್ರಧಾನವಾಗಿದೆಯೋ ಆ ಯಾವುದೇ ಇತರ ಉದ್ದೇಶಕ್ಕಾಗಿ, ಮಾಲೀಕನನ್ನು ಹೊರತುಪಡಿಸಿದ ಒಬ್ಬ ವ್ಯಕ್ತಿಯು ಬಳಸತಕ್ಕದ್ದಲ್ಲವೆಂದು ಭಾವಿಸತಕ್ಕದ್ದು.

**49. ನೋಂದಾಯಿತ ಬಳಕೆದಾರನಾಗಿ ನೋಂದಣಿ.–** (1) ಒಬ್ಬ ವ್ಯಕ್ತಿಯು, ಒಂದು ವ್ಯಾಪಾರ ಚಿಹ್ನೆಯ ನೋಂದಾಯಿತ ಬಳಕೆದಾರನಾಗಿ ನೋಂದಾಯಿಸಲು ಪ್ರಸ್ತಾವಿಸಿದಲ್ಲಿ, ನೋಂದಾಯಿತ ಮಾಲೀಕನು ಮತ್ತು ಪ್ರಸ್ತಾವಿತ ನೋಂದಾಯಿತ ಬಳಕೆದಾರನು ಜಂಟಿಯಾಗಿ ಗೊತ್ತುಪಡಿಸಿದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಲಿಖಿತ ಅರ್ಜಿಯನ್ನು ಸಲ್ಲಿಸತಕ್ಕದ್ದು, ಮತ್ತು ಅಂತಹ ಪ್ರತಿಯೊಂದು ಅರ್ಜಿಯು,–

(ಎ) ಅನುಮತಿಸಲಾದ ಒಂದು ವ್ಯಾಪಾರ ಚಿಹ್ನೆಯ ಬಳಕೆಗೆ ಸಂಬಂಧಿಸಿದಂತೆ ನೋಂದಾಯಿತ ಮಾಲೀಕ ಮತ್ತು ಪ್ರಸ್ತಾವಿತ ನೋಂದಾಯಿತ ಬಳಕೆದಾರನು ತಮ್ಮ ನಡುವೆ ಮಾಡಿಕೊಂಡ ಒಪ್ಪಂದದ ಲಿಖಿತ ಕರಾರು ಅಥವಾ ಅದರ ಯುಕ್ತ ಅಧಿಪ್ರಮಾಣಿತ ಪ್ರತಿಯನ್ನು ಹೊಂದಿರತಕ್ಕದ್ದು ಮತ್ತು

(ಬಿ) ನೋಂದಾಯಿತ ಮಾಲೀಕನು ಅಥವಾ ಅವನ ಪರವಾಗಿ ಕಾರ್ಯನಿರ್ವಹಿಸಲು ಅಧಿಕೃತನಾದ ವ್ಯಕ್ತಿಯು ರಿಜಿಸ್ಟ್ರಾರನಿಗೆ ತೃಪ್ತಿಕರವಾಗುವಂತೆ ಸಲ್ಲಿಸಿದ ಶಪಥಪತ್ರವು, –

(**i**) ಅವರ ಸಂಬಂಧವು, ಅನುಮತಿಸಲಾದ ಬಳಕೆಯ ಮೇಲೆ ಮಾಲೀಕನು ಮಾಡುವ ನಿಯಂತ್ರಣದ ಪ್ರಮಾಣವನ್ನು ತೋರಿಸುವ ಮತ್ತು ಅವರ ಸಂಬಂಧದ ಷರತ್ತಿನಲ್ಲಿ ಆ ಪ್ರಸ್ತಾವಿತ ನೋಂದಾಯಿತ ಬಳಕೆದಾರನು ಏಕಮಾತ್ರ ನೋಂದಾಯಿತ ಬಳಕೆದಾರನಾಗತಕ್ಕದ್ದೇ ಅಥವಾ ಯಾವ ವ್ಯಕ್ತಿಗಳ ಸಂಬಂಧದಲ್ಲಿ ನೋಂದಾಯಿತ ಬಳಕೆದಾರರೆಂದು ನೋಂದಣಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆಯೋ ಆ ವ್ಯಕ್ತಿಗಳಿಗೆ ಯಾವುದೇ ಇತರ ನಿರ್ಬಂಧವಿರತಕ್ಕದ್ದೇ ಎಂಬುದನ್ನು ತೋರಿಸುವ ವಿವರಗಳನ್ನು ಒಳಗೊಂಡಂತೆ, ನೋಂದಾಯಿತ ಮಾಲೀಕ ಮತ್ತು ಪ್ರಸ್ತಾವಿತ ನೋಂದಾಯಿತ ಬಳಕೆದಾರನ ನಡುವಣ, ಅಸ್ತಿತ್ವದಲ್ಲಿರುವ ಅಥವಾ ಪ್ರಸ್ತಾವಿತ ಸಂಬಂಧದ, ವಿವರಗಳನ್ನು ನಿರೂಪಿಸುವುದು;

(**ii**) ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ನೋಂದಣಿಯನ್ನು ಪ್ರಸ್ತಾಪಿಸಲಾಗಿದೆಯೋ ಅಂಥ ಸರಕುಗಳ ಅಥವಾ ಸೇವೆಗಳನ್ನು ನಿರೂಪಿಸುವುದು;

(**iii**) ಸರಕುಗಳ ಅಥವಾ ಸೇವೆಗಳ ಗುಣ ಸ್ವಭಾವಕ್ಕೆ, ಅನುಮತಿಸಲಾದ ವಿಧಾನಕ್ಕೆ ಅಥವಾ ಸ್ಥಳಕ್ಕೆ ಅಥವಾ ಯಾವುದೇ ಇತರ ವಿಷಯಕ್ಕೆ ಸಂಬಂಧಿಸಿದಂತೆ ಸೂಚಿಸಿದ ಷರತ್ತುಗಳು ಅಥವಾ ನಿರ್ಬಂಧಗಳೇನಾದರೂ ಇದ್ದರೆ, ಅವುಗಳನ್ನು ನಿರೂಪಿಸುವುದು;

(**iv**) ಅನುಮತಿಸಲಾದ ಬಳಕೆಗೆ ಒಂದು ಕಾಲಾವಧಿ ಇರಬೇಕೇ ಅಥವಾ ಕಾಲಾವಧಿ ಮಿತಿ ಬೇಡವೇ ಅದನ್ನು, ಮತ್ತು ಒಂದು ಕಾಲಾವಧಿಯಿದ್ದರೆ, ಅದರ ಅವಧಿಯನ್ನು ನಿರೂಪಿಸುವುದು; ಮತ್ತು

(ಸಿ) ರಿಜಿಸ್ಟ್ರಾರನು ಅಗತ್ಯಪಡಿಸಬಹುದಾದಂಥ ಅಥವಾ ನಿಯಮಿಸಬಹುದಾದಂಥ ಹೆಚ್ಚಿನ ದಸ್ತಾವೇಜುಗಳನ್ನು ಅಥವಾ ಇತರ ಸಾಕ್ಷ್ಯವನ್ನು, ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಅಗತ್ಯತೆಗಳನ್ನು ಪಾಲಿಸಿದಾಗ, ರಿಜಿಸ್ಟ್ರಾರನು, ತಾನು ಸಮಾಧಾನ ಹೊಂದಿದ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಪ್ರಸ್ತಾವಿತ ನೋಂದಾಯಿತ ಬಳಕೆದಾರನನ್ನು ನೋಂದಾಯಿಸತಕ್ಕದ್ದು.

(3) ಇತರ ನೋಂದಾಯಿತ ಬಳಕೆದಾರರೇನಾದರು ಇದ್ದರೆ, ಅವರಿಗೆ ರಿಜಿಸ್ಟ್ರಾರನು, ಒಬ್ಬ ವ್ಯಕ್ತಿಯು ನೋಂದಾಯಿತ ಬಳಕೆದಾರನಾಗಿ ನೋಂದಾಯಿಸಿರುವುದನ್ನು ನಿಯಮಿಸಲಾದ ರೀತಿಯಲ್ಲಿ ನೋಟೀಸು ನೀಡತಕ್ಕದ್ದು.

(4) ವ್ಯಾಪಾರದಲ್ಲಿ ಪ್ರತಿಸ್ಪರ್ಧಿಗಳಿಗೆ ಬಹಿರಂಗಪಡಿಸಬಾರದೆಂದು ಅರ್ಜಿದಾರನು ಕೋರಿದರೆ, ರಿಜಿಸ್ಟ್ರಾರನು ಈ ಪ್ರಕರಣದ ಅಡಿಯಲ್ಲಿನ ಅರ್ಜಿಯ ಉದ್ದೇಶಗಳಿಗೆ ನೀಡಿದ ಮಾಹಿತಿಯನ್ನು (ರಿಜಿಸ್ಟರಿನಲ್ಲಿ ನೋಂದಣಿ ಮಾಡಿದ ವಿಷಯಗಳನ್ನು ಹೊರತುಪಡಿಸಿ) ಬಹಿರಂಗಗೊಳಿಸದಂತೆ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**50. ನೋಂದಾಯಿತ ಬಳಕೆದಾರನೆಂಬ ನೋಂದಣಿಯನ್ನು ವ್ಯತ್ಯಸ್ಥಗೊಳಿಸುವುದಕ್ಕೆ ಅಥವಾ ರದ್ದುಗೊಳಿಸುವುದಕ್ಕೆ ರಿಜಿಸ್ಟ್ರಾರನ ಅಧಿಕಾರ.–** (1)57ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಒಬ್ಬ ವ್ಯಕ್ತಿಯು ನೋಂದಾಯಿತ ಬಳಕೆದಾರ ಎಂದು ಮಾಡಿದ ನೋಂದಣಿಯನ್ನು,-

(ಎ) ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕನು, ನಿಯಮಿಸಲಾದ ರೀತಿಯಲ್ಲಿ ಸಲ್ಲಿಸಿದ ಲಿಖಿತ ಅರ್ಜಿಯ ಮೇರೆಗೆ, ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಅದು ಪರಿಣಾಮ ಬೀರುವದೋ ಆ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ರಿಜಿಸ್ಟ್ರಾರನು ವ್ಯತ್ಯಾಸಗೊಳಿಸಬಹುದು;

(ಬಿ) ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕ ಅಥವಾ ನೋಂದಾಯಿತ ಬಳಕೆದಾರ ಅಥವಾ ಯಾವುದೇ ಇತರ ನೋಂದಾಯಿತ ಬಳಕೆದಾರನು ನಿಯಮಿಸಲಾದ ರೀತಿಯಲ್ಲಿ ಸಲ್ಲಿಸಿದ ಲಿಖಿತ ಅರ್ಜಿಯ ಮೇರೆಗೆ ರಿಜಿಸ್ಟ್ರಾರನು ರದ್ದುಗೊಳಿಸಬಹುದು;

(ಸಿ) ಈ ಕೆಳಕಂಡ ಯಾವುದೇ ಆಧಾರಗಳ ಮೇಲೆ ಯಾರೇ ವ್ಯಕ್ತಿಯು ಗೊತ್ತುಪಡಿಸಿದ ರೀತಿಯಲ್ಲಿ ಸಲ್ಲಿಸಿದ ಲಿಖಿತ ಅರ್ಜಿಯ ಮೇರೆಗೆ, ರಿಜಿಸ್ಟ್ರಾರನು ರದ್ದುಗೊಳಿಸಬಹುದು, ಎಂದರೆ: –

**(i)** ನೋಂದಾಯಿತ ಬಳಕೆದಾರನು 49ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಅಡಿಯಲ್ಲಿನ ಒಪ್ಪಂದಕ್ಕೆ ಹೊರತಾಗಿ ಅಥವಾ ಮೋಸ ಅಥವಾ ಗೊಂದಲ ಉಂಟು ಮಾಡುವ ರೀತಿಯಲ್ಲಿ ಅಥವಾ ಉಂಟು ಮಾಡುವ ಸಂಭವವಿರುವ ವ್ಯಾಪಾರ ಚಿಹ್ನೆಯನ್ನು ಬಳಸಿರುವುದು;

**(ii)** ಯಾವುದನ್ನು ಯಥಾವತ್ತಾಗಿ ನಿರೂಪಿಸಿದ್ದರೆ ಅಥವಾ ಬಹಿರಂಗಪಡಿಸಿದ್ದರೆ ನೋಂದಾಯಿತ ಬಳಕೆದಾರನ ನೋಂದಣಿಯನ್ನು ಸಮರ್ಥಿಸುವುದಿಲ್ಲವೋ ಅಂಥ ಕೆಲವು ವಾಸ್ತವಿಕ ಅಂಶಗಳನ್ನು ಮಾಲೀಕನು ಅಥವಾ ನೋಂದಾಯಿತ ಬಳಕೆದಾರನು ನೋಂದಣಿ ಅರ್ಜಿಯಲ್ಲಿ, ತಪ್ಪಾಗಿ ನಿರೂಪಿಸಿರುವುದು, ಅಥವಾ ಕೆಲವು ಮುಖ್ಯ ಸಂಗತಿಗಳನ್ನು ಬಹಿರಂಗಪಡಿಸಲು ವಿಫಲನಾಗಿರುವುದು.

**(iii)** ನೋಂದಣಿಯ ದಿನಾಂಕದಿಂದ ಸನ್ನಿವೇಶಗಳು ಹೇಗೆ ಬದಲಾಯಿಸಿವೆ ಯೆಂದರೆ, ರದ್ದಿಯಾತಿಗಾಗಿ ಮಾಡಿದ ಅರ್ಜಿಯ ದಿನಾಂಕದಿಂದ ನೋಂದಾಯಿತ ಬಳಕೆದಾರನ ನೋಂದಣಿಯನ್ನು ಸಮರ್ಥಿಸುವುದಿಲ್ಲ;

**(iv)** ಯಾವ ಕರಾರಿನ ನಿರ್ವಹಣೆಯಲ್ಲಿ ಅರ್ಜಿದಾರನು ಹಿತಾಸಕ್ತಿ ಹೊಂದಿರುವನೋ ಅದರ ಕಾರಣದಿಂದಾಗಿ ಅದರಲ್ಲಿ ನಿಹಿತವಾಗಿರುವ ಹಕ್ಕುಗಳ ಸಂಬಂಧದಲ್ಲಿ ನೋಂದಣಿಯು ಪರಿಣಾಮಕಾರಿಯಾಗಬಾರದಿತ್ತು;

(ಡಿ) ವ್ಯಾಪಾರ ಚಿಹ್ನೆಯನ್ನು ಉಪಯೋಗಿಸಬೇಕಾದ ಸರಕುಗಳ ಅಥವಾ ಸೇವೆಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ, ನೋಂದಾಯಿತ ಮಾಲೀಕನ ಮತ್ತು ನೋಂದಾಯಿತ ಬಳಕೆದಾರನ ನಡುವಿನ ಒಪ್ಪಂದದಲ್ಲಿನ ಯಾವುದೇ ಷರತ್ತನ್ನು ಜಾರಿ ಮಾಡುವುದಿಲ್ಲ ಅಥವಾ ಪಾಲಿಸುವುದಿಲ್ಲ ಎಂಬ ಕಾರಣದ ಮೇಲೆ, ರಿಜಿಸ್ಟ್ರಾರನು, ತಾನಾಗಿಯಾಗಲಿ ಅಥವಾ ಯಾರೇ ವ್ಯಕ್ತಿಯು ನಿಯಮಿಸಿದ ರೀತಿಯಲ್ಲಿ ಸಲ್ಲಿಸಿದ ಲಿಖಿತ ಅರ್ಜಿಯ ಮೇರೆಗಾಗಲಿ ರದ್ದುಗೊಳಿಸಬಹುದು;

(ಇ) ರಿಜಿಸ್ಟ್ರಾರನು, ವ್ಯಾಪಾರ ಚಿಹ್ನೆಯನ್ನು ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ನೋಂದಾಯಿಸಿಲ್ಲವೋ ಅವುಗಳಿಗೆ ಸಂಬಂಧಿಸಿದಂತೆ ರದ್ದುಗೊಳಿಸಬಹುದು.

(2) ರಿಜಿಸ್ಟ್ರಾರನು, ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕನಿಗೆ ಮತ್ತು ಪ್ರತಿಯೊಬ್ಬ ನೋಂದಾಯಿತ ಬಳಕೆದಾರನಿಗೆ (ಅರ್ಜಿದಾರನಲ್ಲದ) ಈ ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ಅರ್ಜಿಯ ಸಂಬಂಧದಲ್ಲಿ ನಿಯಮಿಸಲಾದ ರೀತಿಯಲ್ಲಿ ನೋಟೀಸನ್ನು ನೀಡತಕ್ಕದ್ದು.

(3) ನೋಂದಣಿಯ ರದ್ದತಿಯ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ನೋಂದಣಿಯನ್ನು ರದ್ದುಗೊಳಿಸುವ ಮುಂಚೆ, ನೋಂದಾಯಿತ ಮಾಲೀಕನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ನೀಡತಕ್ಕದ್ದು.

**51. ನೋಂದಾಯಿತ ಬಳಕೆದಾರರ ಒಪ್ಪಂದಕ್ಕೆ ಸಂಬಂಧಿಸಿದ ಮಾಹಿತಿಯನ್ನು ತರಿಸಿಕೊಳ್ಳಲು ರಿಜಿಸ್ಟ್ರಾರನ ಅಧಿಕಾರ.–** (1) ರಿಜಿಸ್ಟ್ರಾರನು, ನೋಂದಾಯಿತ ಬಳಕೆದಾರನ ನೋಂದಣಿಯ ಮುಂದುವರಿಕೆಯ ಯಾವುದೇ ಸಮಯದಲ್ಲಿ 49ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಅಡಿಯಲ್ಲಿ ದಾಖಲ್ಮಾಡಿದ ಒಪ್ಪಂದದ ಜಾರಿಯು ಮುಂದುವರಿದಿರುವ ಬಗ್ಗೆ ಲಿಖಿತನೋಟೀಸು ನೀಡುವ ಮೂಲಕ ಒಂದು ತಿಂಗಳೊಳಗೆ ಸ್ಥಿರೀಕರಿಸಬೇಕೆಂದು ನೋಂದಾಯಿತ ಮಾಲೀಕನನ್ನು ಅಗತ್ಯಪಡಿಸಬಹುದು.

(2) ನೋಂದಾಯಿತ ಮಾಲೀಕನು, (1)ನೇ ಉಪಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದಂತೆ ಒಂದು ತಿಂಗಳೊಳಗೆ ಸ್ಥಿರೀಕರಣವನ್ನು ಒದಗಿಸಲು ವಿಫಲನಾದರೆ, ನೋಂದಾಯಿತ ಬಳಕೆದಾರನು ಸದರಿ ಅವಧಿಯ ಮುಕ್ತಾಯದ ನಂತರ ತಕ್ಷಣದ ದಿನದಿಂದ ನೋಂದಾಯಿತ ಬಳಕೆದಾರನಾಗಿರುವುದು ನಿಂತುಹೋಗತಕ್ಕದ್ದು ಮತ್ತು ರಿಜಿಸ್ಟ್ರಾರನು ಆ ಬಗ್ಗೆ ಅಧಿಸೂಚಿಸತಕ್ಕದ್ದು.

**52. ಅತಿಲಂಘನದ ವಿರುದ್ಧ ವ್ಯವಹರಣೆಗಳನ್ನು ಹೂಡಲು ನೋಂದಾಯಿತ ಬಳಕೆದಾರನ ಹಕ್ಕು.–** (1) ಪಕ್ಷಕಾರರ ನಡುವೆ ಅಸ್ತಿತ್ವದಲ್ಲಿರುವ ಯಾವುದೇ ಒಪ್ಪಂದಕ್ಕೆ ಒಳಪಟ್ಟು, ಒಬ್ಬ ನೋಂದಾಯಿತ ಬಳಕೆದಾರನು, ನೋಂದಾಯಿತ ಮಾಲೀಕನಾಗಿದ್ದರೆ ಹೇಗೋ ಹಾಗೆ ಆ ಮಾಲೀಕನನ್ನು ಪ್ರತಿವಾದಿಯನ್ನಾಗಿ ಮಾಡಿಕೊಂಡು ಮತ್ತು ಆ ನೋಂದಾಯಿತ ಮಾಲೀಕನ ಹಕ್ಕು ಬಾಧ್ಯತೆಗಳಿಗೆ ಸಮವರ್ತಿಯಾಗಿರುವ ಸಂದರ್ಭದಲ್ಲಿ ಅಂಥ ನೋಂದಾಯಿತ ಬಳಕೆದಾರನ ಹಕ್ಕುಗಳು ಮತ್ತು ಬಾಧ್ಯತೆಗಳು, ನೋಂದಾಯಿತ ಮಾಲೀಕನಿಗೆ ಇರುವ ಹಾಗೆಯೇ ತನ್ನ ಸ್ವಂತ ಹೆಸರಿನಲ್ಲಿ ಅತಿಲಂಘನೆಯ ವಿರುದ್ಧ ವ್ಯವಹರಣೆಗಳನ್ನು ಹೂಡಬಹುದು.

(2) ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ನೋಂದಾಯಿತ ಮಾಲೀಕನು ಪ್ರತಿವಾದಿಯಾಗಿ ಹಾಗೆ ಸೇರಿಸಲಾಗಿದ್ದು, ಅವನು ವ್ಯವಹರಣೆಗಳಲ್ಲಿ ಹಾಜರಾದ ಮತ್ತು ಭಾಗಿಯಾದ ಹೊರತು, ಯಾವುದೇ ಖರ್ಚುಗಳಿಗೆ ಹೊಣೆಗಾರನಾಗತಕ್ಕದ್ದಲ್ಲ.

**53. ಅನುಮತಿಸಲಾದ ಬಳಕೆದಾರನಿಗೆ ಅತಿಲಂಘನದ ವಿರುದ್ಧ ವ್ಯವಹರಣೆ ಹೂಡಲು ಹಕ್ಕಿಲ್ಲದಿರುವುದು.–** 2ನೇ ಪ್ರಕರಣದ (1)ನೇ ಉಪಪ್ರಕರಣದ (ಆರ್) ಖಂಡದ (ii)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು ಯಾವುದೇ ಅತಿಲಂಘನಕ್ಕೆ ಯಾವುದೇ ವ್ಯವಹರಣೆಯನ್ನು ಹೂಡಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

**54. ನೋಂದಾಯಿತ ಬಳಕೆದಾರನು ಹಸ್ತಾಂತರಣದ ಅಥವಾ ರವಾನೆಯ ಹಕ್ಕನ್ನು ಹೊಂದಿರುವುದು.–** ಈ ಅಧಿನಿಯಮದಲ್ಲಿರುವುದಾವುದೂ, ಅದರ ಬಳಕೆಯನ್ನು ಹಸ್ತಾಂತರಿಸುವ ಅಥವಾ ರವಾನಿಸುವ ಯಾವುದೇ ಹಕ್ಕನ್ನು ವ್ಯಾಪಾರ ಚಿಹ್ನೆಯ ನೋಂದಾಯಿತ ಬಳಕೆದಾರನಿಗೆ ಪ್ರದಾನ ಮಾಡತಕ್ಕದ್ದಲ್ಲ.

**ವಿವರಣೆ I.–** ಒಂದು ವ್ಯಾಪಾರ ಚಿಹ್ನೆಯ ನೋಂದಾಯಿತ ಬಳಕೆದಾರನ ಹಕ್ಕನ್ನು ಈ ಕೆಳಕಂಡ ಸಂದರ್ಭಗಳಲ್ಲಿ ಈ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಹಸ್ತಾಂತರಿಸಲಾಗಿದೆಯೆಂದು ಅಥವಾ ವರ್ಗಾಯಿಸಲಾಗಿದೆಯೆಂದು ಭಾವಿಸತಕ್ಕದ್ದಲ್ಲ, ಎಂದರೆ: –

(ಎ) ನೋಂದಾಯಿತ ಬಳಕೆದಾರನು ಒಬ್ಬ ವ್ಯಕ್ತಿಯಾಗಿದ್ದು ಸಂಬಂಧಪಟ್ಟ ವ್ಯವಹಾರವನ್ನು ನಡೆಸುವುದಕ್ಕಾಗಿ ಯಾರೇ ಇತರ ವ್ಯಕ್ತಿಯೊಂದಿಗೆ ಪಾಲುದಾರಿಕೆಯಲ್ಲಿ ತೊಡಗಿದ್ದು, ಆದರೆ ಅಂತಹ ಯಾವುದೇ ಸಂದರ್ಭದಲ್ಲಿ, ಫರ್ಮು, ನೋಂದಾಯಿತ ಬಳಕೆದಾರನು ಎಲ್ಲಿಯವರೆಗೆ ಫರ್ಮ್‌ನ ಸದಸ್ಯನಾಗಿರುವನೋ ಅಲ್ಲಿಯವರೆಗೆ ಮಾತ್ರ, ಆ ವ್ಯಾಪಾರಚಿಹ್ನೆಯನ್ನು ಅದು, ಅನ್ಯಥಾ ಜಾರಿಯಲ್ಲಿದ್ದರೆ ಬಳಸಬಹುದು;

(ಬಿ) ನೋಂದಾಯಿತ ಬಳಕೆದಾರನು ಒಂದು ಫರ್ಮು ಆಗಿದ್ದು, ತರುವಾಯ ಅದರ ರಚನೆಯಲ್ಲಿ ಬದಲಾವಣೆ ಉಂಟಾಗಿದ್ದು, ಆದರೆ ಅಂತಹ ಯಾವುದೇ ಸಂದರ್ಭದಲ್ಲಿ, ಪುನರ್‌ರಚಿತವಾದ ಫರ್ಮು, ಅದರ ನೋಂದಣಿಯ ಸಮಯದಲ್ಲಿ ನೋಂದಾಯಿತ ಬಳಕೆದಾರನಾಗಿರುವ ಮೂಲ ಫರ್ಮಿನ ಯಾರೇ ಪಾಲುದಾರನು ಎಲ್ಲಿಯವರೆಗೆ ಪುನರ್‌ರಚಿತ ಫರ್ಮಿನ ಪಾಲುದಾರನಾಗಿ ಮುಂದುವರಿಯುವನೋ ಅಲ್ಲಿಯವರೆಗೆ ಮಾತ್ರ, ಆ ವ್ಯಾಪಾರ ಚಿಹ್ನೆಯನ್ನು, ಅದು ಅನ್ಯಥಾ ಜಾರಿಯಲ್ಲಿದ್ದರೆ ಬಳಸಬಹುದು.

**ವಿವರಣೆ II.–** ವಿವರಣೆ–Iರ ಉದ್ದೇಶಗಳಿಗಾಗಿ, "ಫರ್ಮು" ಎನ್ನುವುದು ಭಾರತೀಯ ಪಾಲುಗಾರಿಕೆ ಅಧಿನಿಯಮ, 1932ರಲ್ಲಿ ಹೊಂದಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**55. ಸಹವರ್ತಿಯಾಗಿರುವ ಅಥವಾ ಗಣನೀಯವಾಗಿ ಸಮಾನವಾಗಿರುವ ಒಂದು ವ್ಯಾಪಾರ ಚಿಹ್ನೆಯ ಬಳಕೆಯು ಮತ್ತೊಂದು ವ್ಯಾಪಾರ ಚಿಹ್ನೆಯ ಬಳಕೆಗೆ ಸಮನಾಗಿರುವುದು.–** (1) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ, ನೋಂದಾಯಿತ ವ್ಯಾಪಾರ ಚಿಹ್ನೆಯ ಬಳಕೆಯನ್ನು ಯಾವುದೇ ಉದ್ದೇಶಕ್ಕಾಗಿ ರುಜುವಾತು ಮಾಡಬೇಕೆಂದು ಅಗತ್ಯಪಡಿಸಿದಲ್ಲಿ, ನ್ಯಾಯಾಧಿಕರಣವು, ತಾನು ಸೂಕ್ತವೆಂದು ಭಾವಿಸಿದರೆ ಮತ್ತು ಭಾವಿಸುವಷ್ಟುಮಟ್ಟಿಗೆ ನೋಂದಾಯಿತ ಸಹವರ್ತಿ ವ್ಯಾಪಾರ ಚಿಹ್ನೆಯ ಅಥವಾ ಅದರ ಗುರುತಿನ ಮೇಲೆ ಗಣನೀಯವಾಗಿ ಪರಿಣಾಮವನ್ನುಂಟುಮಾಡದ ಸೇರ್ಪಡೆಗಳು ಅಥವಾ ವ್ಯತ್ಯಾಸಗಳೊಂದಿಗೆ ವ್ಯಾಪಾರ ಚಿಹ್ನೆಯ ಬಳಕೆಯು ರುಜುವಾತುಪಡಿಸಲು ಅಗತ್ಯಪಡಿಸಿದ ಬಳಕೆಗೆ ಸಮವೆಂದು ಅಂಗೀಕರಿಸತಕ್ಕದ್ದು.

(2) ಈ ಅಧಿನಿಯಮದ ಉದ್ದೇಶಕ್ಕಾಗಿ, ನೋಂದಾಯಿತ ಪೂರ್ಣ ವ್ಯಾಪಾರ ಚಿಹ್ನೆಯ ಬಳಕೆಯು, ಅದರ ಭಾಗವಾಗಿರುವ ಮತ್ತು ಅದೇ ಮಾಲೀಕನ ಹೆಸರಿನಲ್ಲಿ 15ನೇ ಪ್ರಕರಣದ (1)ನೇ ಉಪಪ್ರಕರಣಕ್ಕನುಸಾರವಾಗಿ ನೋಂದಾಯಿತವಾಗಿರುವ ಯಾವುದೇ ವ್ಯಾಪಾರ ಚಿಹ್ನೆಯ ಬಳಕೆಯೆಂದು ಸಹ ಭಾವಿಸತಕ್ಕದ್ದು.

(3) 32ನೇ ಪ್ರಕರಣದಲ್ಲಿ ಏನೇ ಇದ್ದರೂ, (2)ನೇ ಉಪಪ್ರಕರಣದಲ್ಲಿನ ನೋಂದಾಯಿತ ವ್ಯಾಪಾರ ಚಿಹ್ನೆಯ ಭಾಗದ ಬಳಕೆಯು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಉದ್ದೇಶಕ್ಕಾಗಿ ಅದರ ವಿಭಿನ್ನತೆಯ ಸಾಕ್ಷ್ಯದ ಬಗ್ಗೆ ನಿರ್ಣಾಯಕವಾಗತಕ್ಕದ್ದಲ್ಲ.

**56. ರಫ್ತು ವ್ಯಾಪಾರಕ್ಕೆ ವ್ಯಾಪಾರ ಚಿಹ್ನೆಯ ಬಳಕೆ ಮತ್ತು ವ್ಯಾಪಾರ ಸಂಬಂಧದ ಸ್ವರೂಪ ಬದಲಾದಾಗ ಬಳಕೆ.–** (1) ಭಾರತದಿಂದ ರಫ್ತು ಮಾಡಲಾಗುವ ಸರಕುಗಳಿಗೆ ಅಥವಾ ಭಾರತದ ಹೊರಗಡೆ ಬಳಸಲಾಗುವ ಸೇವೆಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ವ್ಯಾಪಾರ ಚಿಹ್ನೆಯ ಅನ್ವಯ ಮತ್ತು ಭಾರತದ ಹೊರಗಡೆ ಹಾಗೆ ರಫ್ತು ಮಾಡಲಾಗುವ ಸರಕುಗಳಿಗೆ ಅಥವಾ ಹಾಗೆ ಒದಗಿಸುವ ಸೇವೆಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಮಾಡಲಾಗುವ ಯಾವುದೇ ಇತರ ಕಾರ್ಯವು, ಅದರಲ್ಲಿ ವ್ಯಾಪಾರ ಚಿಹ್ನೆಯ ಬಳಕೆಯು ಭಾರತದೊಳಗೆ ಮಾರಾಟಮಾಡಲಾಗುವ ಸರಕುಗಳಿಗೆ ಅಥವಾ ಒದಗಿಸಲಾಗುವ ಸೇವೆಗಳಿಗೆ ಅಥವಾ ಇತರೇ ರೀತಿಯಲ್ಲಿ ವ್ಯಾಪಾರ ಮಾಡಲಾಗುವ ಸರಕುಗಳಿಗೆ ಸಂಬಂಧಿಸಿದಂತೆ ಆಗಿದ್ದರೆ, ಅಂತಹ ಬಳಕೆಯು ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ಪ್ರಮುಖವಾಗಿದ್ದು ಯಾವುದೇ ಉದ್ದೇಶಕ್ಕಾಗಿ ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಆಗಿರುವ ವ್ಯಾಪಾರ ಚಿಹ್ನೆಯ ಬಳಕೆಯೆಂದು ಭಾವಿಸತಕ್ಕದ್ದು.

(2) ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ, ಅವುಗಳ ಮತ್ತು ವ್ಯಾಪಾರ ಚಿಹ್ನೆಯನ್ನು ಬಳಸುವ ಒಬ್ಬ ವ್ಯಕ್ತಿಯ ನಡುವೆ ವ್ಯಾಪಾರ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಸಂಬಂಧ ಇದ್ದು ಆ ವ್ಯಾಪಾರ ಚಿಹ್ನೆಯ ಬಳಕೆಯು, ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅವುಗಳ ಮತ್ತು ಸದರಿ ವ್ಯಕ್ತಿಯ ಅಥವಾ ಆ ವ್ಯಕ್ತಿಯ ಹಕ್ಕಿನ ಪೂರ್ವಾಧಿಕಾರಿಯ ನಡುವೆ ವ್ಯಾಪಾರ ಕ್ರಮಕ್ಕೆ ಸಂಬಂಧಿಸಿದಂತೆ ಒಂದು ವಿಭಿನ್ನ

ಸ್ವರೂಪದ ಸಂಬಂಧವಿದ್ದು ಆ ಚಿಹ್ನೆಯನ್ನು ಬಳಸಲಾಗಿತ್ತು ಅಥವಾ ಬಳಸಲಾಗುತ್ತದೆ ಎಂಬ ಕಾರಣಕ್ಕಾಗಿ ಮಾತ್ರವೇ ಮೋಸವನ್ನು ಅಥವಾ ಗೊಂದಲವನ್ನು ಉಂಟು ಮಾಡುವ ಸಂಭವವಿದೆಯೆಂದು ಭಾವಿಸತಕ್ಕದ್ದಲ್ಲ.

## ಅಧ್ಯಾಯ – VII
## ರಿಜಿಸ್ಟರನ್ನು ಸರಿಪಡಿಸುವುದು ಮತ್ತು ತಿದ್ದುವುದು

**57. ನೋಂದಣಿಯನ್ನು ರದ್ದುಗೊಳಿಸುವ ಅಥವಾ ವ್ಯತ್ಯಸ್ತಗೊಳಿಸುವ ಮತ್ತು ರಿಜಿಸ್ಟರನ್ನು ಸರಿಪಡಿಸುವ ಅಧಿಕಾರ.–** (1) ಬಾಧಿತನಾದ ಯಾರೇ ವ್ಯಕ್ತಿಯು ಅಪೀಲುಮಂಡಲಿಗೆ ಅಥವಾ ರಿಜಿಸ್ಟ್ರಾರನಿಗೆ ಗೊತ್ತುಪಡಿಸಿದ ರೀತಿಯಲ್ಲಿ ಸಲ್ಲಿಸಿದ ಅರ್ಜಿಯ ಮೇರೆಗೆ, ನ್ಯಾಯಾಧಿಕರಣವು, ರಿಜಿಸ್ಟರಿನಲ್ಲಿ ನಮೂದಿಸಿರುವ ಷರತ್ತಿನ ಯಾವುದೇ ಉಲ್ಲಂಘನೆ ಅಥವಾ ಆ ಸಂಬಂಧದಲ್ಲಿ ಅದನ್ನು ಪಾಲಿಸಲು ವಿಫಲವಾದ ಆಧಾರದ ಮೇರೆಗೆ ವ್ಯಾಪಾರ ಚಿಹ್ನೆಯ ನೋಂದಣಿಯನ್ನು ರದ್ದುಗೊಳಿಸಲು ಅಥವಾ ವ್ಯತ್ಯಸ್ತಗೊಳಿಸಲು, ತಾನು ಸೂಕ್ತವೆಂದು ಭಾವಿಸುವ ಅಂಥ ಆದೇಶವನ್ನು ಮಾಡಬಹುದು.

(2) ರಿಜಿಸ್ಟರಿನಲ್ಲಿ ಯಾವುದೇ ನಮೂದು ಆಗದಿರುವುದು ಅಥವಾ ಲೋಪ ಅಥವಾ ಸಾಕಷ್ಟು ಕಾರಣವಿಲ್ಲದೆ ರಿಜಿಸ್ಟರಿನಲ್ಲಿ ಮಾಡಿದ ಯಾವುದೇ ನಮೂದನೆ ಅಥವಾ ರಿಜಿಸ್ಟರಿನಲ್ಲಿ ತಪ್ಪಾಗಿ ಉಳಿದುಕೊಂಡಿರುವ ಯಾವುದೇ ನಮೂದನೆಯಿಂದ ಅಥವಾ ರಿಜಿಸ್ಟರಿನಲ್ಲಿನ ಯಾವುದೇ ನಮೂದನೆಯಲ್ಲಿ ಯಾವುದೇ ತಪ್ಪು ಅಥವಾ ದೋಷದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಪೀಲು ಮಂಡಲಿಗೆ ಅಥವಾ ರಿಜಿಸ್ಟ್ರಾರನಿಗೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅರ್ಜಿ ಸಲ್ಲಿಸಬಹುದು ಮತ್ತು ನ್ಯಾಯಾಧಿಕರಣವು, ತಾನು ಸೂಕ್ತವೆಂದು ಭಾವಿಸುವಂತೆ ನಮೂದನೆಯನ್ನು ಮಾಡುವದಕ್ಕಾಗಿ, ತೆಗೆದು ಹಾಕುವದಕ್ಕಾಗಿ ಅಥವಾ ವ್ಯತ್ಯಸ್ತಗೊಳಿಸುವುದಕ್ಕಾಗಿ ಅಂತಹ ಆದೇಶವನ್ನು ಮಾಡಬಹುದು.

(3) ನ್ಯಾಯಾಧಿಕರಣವು ಈ ಪ್ರಕರಣದ ಅಡಿಯಲ್ಲಿನ ಯಾವುದೇ ವ್ಯವಹರಣೆಯಲ್ಲಿ ರಿಜಿಸ್ಟರನ್ನು ಸರಿಪಡಿಸುವ ಸಂಬಂಧದಲ್ಲಿ ತೀರ್ಮಾನಿಸುವುದಕ್ಕೆ ಅಗತ್ಯವೆನಿಸಬಹುದಾದ ಅಥವಾ ವಿಹಿತವೆನಿಸಬಹುದಾದ ಯಾವುದೇ ಪ್ರಶ್ನೆಯನ್ನು ತೀರ್ಮಾನಿಸಬಹುದು.

(4) ನ್ಯಾಯಾಧಿಕರಣವು, ತಾನಾಗಿಯೇ ಸಂಬಂಧಪಟ್ಟ ಪಕ್ಷಕಾರರಿಗೆ ನಿಯಮಿಸಲಾದ ರೀತಿಯಲ್ಲಿ ನೋಟೀಸನ್ನು ನೀಡಿದ ನಂತರ ಮತ್ತು ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವರಿಗೆ ಒಂದು ಅವಕಾಶವನ್ನು ನೀಡಿದ ನಂತರ, (1)ನೆಯ ಉಪಪ್ರಕರಣದಲ್ಲಿ ಅಥವಾ (2)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದಂತೆ ಯಾವುದೇ ಆದೇಶವನ್ನು ಮಾಡಬಹುದು.

(5) ರಿಜಿಸ್ಟರನ್ನು ಸರಿಪಡಿಸುವುದಕ್ಕೆ ಸಂಬಂಧಿಸಿದ ಅಪೀಲು ಮಂಡಲಿಯ ಯಾವುದೇ ಆದೇಶವು, ಆ ಸರಿಪಡಿಸುವ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಜಾರಿ ಮಾಡತಕ್ಕದ್ದೆಂದು ನಿರ್ದೇಶಿಸತಕ್ಕದ್ದು ಅವನು ಅಂಥ ನೋಟೀಸನ್ನು ಸ್ವೀಕರಿಸಿದ ಮೇಲೆ ಅದಕ್ಕನುಸಾರವಾಗಿ ರಿಜಿಸ್ಟರನ್ನು ಸರಿಪಡಿಸತಕ್ಕದ್ದು.

**58. ರಿಜಿಸ್ಟರನ್ನು ತಿದ್ದುವುದು.–** (1) ನೋಂದಾಯಿತ ಮಾಲೀಕನು ಸಲ್ಲಿಸಿದ ನಿಯಮಿಸಲಾದ ಅರ್ಜಿಯ ಮೇರೆಗೆ, ರಿಜಿಸ್ಟ್ರಾರನು,–

(ಎ) ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕನ ಹೆಸರು, ವಿಳಾಸ ಅಥವಾ ವಿವರಣೆ– ಇವುಗಳಲ್ಲಿರುವ ಅಥವಾ ವ್ಯಾಪಾರ ಚಿಹ್ನೆಗೆ ಸಂಬಂಧಿಸಿದ ಯಾವುದೇ ಇತರೆ ನಮೂದಿನಲ್ಲಿರುವ ಯಾವುದೇ ತಪ್ಪನ್ನು ತಿದ್ದಬಹುದು;

(ಬಿ) ಒಂದು ವ್ಯಾಪಾರ ಚಿಹ್ನೆಯ ಮಾಲೀಕನೆಂದು ನೋಂದಾಯಿತನಾದ ವ್ಯಕ್ತಿಯ ಹೆಸರಿನಲ್ಲಿ, ವಿಳಾಸದಲ್ಲಿ ಅಥವಾ ವಿವರದ ಯಾವುದೇ ಬದಲಾವಣೆಯನ್ನು ನಮೂದು ಮಾಡಬಹುದು;

(ಸಿ) ರಿಜಿಸ್ಟರಿನಲ್ಲಿ ವ್ಯಾಪಾರ ಚಿಹ್ನೆಯ ನಮೂದನ್ನು ರದ್ದುಗೊಳಿಸಬಹುದು;

(ಡಿ) ಯಾವ ಸರಕುಗಳ ಅಥವಾ ಸೇವೆಗಳ ವರ್ಗಗಳ ಸಂಬಂಧದಲ್ಲಿ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿದೆಯೋ ಅವುಗಳನ್ನು ಹೊಡೆದು ಹಾಕಬಹುದು

– ಮತ್ತು ನೋಂದಣಿ ಪ್ರಮಾಣಪತ್ರದಲ್ಲಿ ಯಾವುದೇ ಅನುಷಂಗಿಕ ತಿದ್ದುಪಡಿ ಅಥವಾ ಬದಲಾವಣೆಯನ್ನು ಮಾಡಬಹುದು ಮತ್ತು ಆ ಉದ್ದೇಶಕ್ಕಾಗಿ, ನೋಂದಣಿಯ ಪ್ರಮಾಣಪತ್ರವನ್ನು ತನ್ನ ಮುಂದೆ ಹಾಜರು ಪಡಿಸುವಂತೆ ಅಗತ್ಯಪಡಿಸಬಹುದು.

(2) ವ್ಯಾಪಾರ ಚಿಹ್ನೆಯ ನೋಂದಾಯಿತ ಬಳಕೆದಾರನು ನಿಯಮಿಸಲಾದ ರೀತಿಯಲ್ಲಿ ಸಲ್ಲಿಸಿದ ಅರ್ಜಿಯ ಮೇರೆಗೆ, ಮತ್ತು ನೋಂದಾಯಿತ ಮಾಲೀಕನಿಗೆ ನೋಟೀಸನ್ನು ನೀಡಿದ ನಂತರ, ರಿಜಿಸ್ಟ್ರಾರನು ನೋಂದಾಯಿತ ಬಳಕೆದಾರನ ಹೆಸರು, ವಿಳಾಸದಲ್ಲಿನ ಅಥವಾ ವಿವರಣೆಯಲ್ಲಿನ ಯಾವುದೇ ತಪ್ಪನ್ನು ತಿದ್ದಬಹುದು ಅಥವಾ ಯಾವುದೇ ಬದಲಾವಣೆಯನ್ನು ನಮೂದು ಮಾಡಬಹುದು.

**59. ನೋಂದಾಯಿತ ವ್ಯಾಪಾರ ಚಿಹ್ನೆಗಳ ಮಾರ್ಪಾಟು.–** (1) ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕನು, ಅದರ ಗುರುತಿಗೆ ಗಣನೀಯ ಪರಿಣಾಮ ಬೀರದ ಯಾವುದೇ ರೀತಿಯಲ್ಲಿ ವ್ಯಾಪಾರ ಚಿಹ್ನೆಗೆ ಸೇರಿಸುವುದನ್ನು ಅಥವಾ ಮಾರ್ಪಾಟು ಮಾಡುವುದನ್ನು ಅನುಮತಿಸಲು ರಿಜಿಸ್ಟ್ರಾರನಿಗೆ ನಿಯಮಿಸಲಾದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು, ಮತ್ತು ರಿಜಿಸ್ಟ್ರಾರನು, ಹಾಗೆ ಅನುಮತಿ ನೀಡಲು ನಿರಾಕರಿಸಬಹುದು ಅಥವಾ ತಾನು ಸೂಕ್ತವೆಂದು ಭಾವಿಸಬಹುದಾದ ಅಂತಹ ನಿಬಂಧನೆಗಳ ಮೇರೆಗೆ ಮತ್ತು ಅಂತಹ ಮಿತಿಗಳಿಗೊಳಪಟ್ಟು ಅದನ್ನು ಮಂಜೂರು ಮಾಡಬಹುದು.

(2) ರಿಜಿಸ್ಟ್ರಾರನು, ಈ ಪ್ರಕರಣದ ಮೇರೆಗೆ ಒಂದು ಅರ್ಜಿಯನ್ನು ಜಾಹೀರಾತುಪಡಿಸುವುದು ವಿಹಿತವೆಂದು ಭಾವಿಸಿದಲ್ಲಿ, ಯಾವುದೇ ಸಂದರ್ಭದಲ್ಲಿ ನಿಯಮಿಸಲಾದ ರೀತಿಯಲ್ಲಿ ಹಾಗೆ ಜಾಹೀರಾತುಪಡಿಸುವಂತೆ ಮಾಡಬಹುದು ಮತ್ತು ಅವನು ಹಾಗೆ ಮಾಡಿದಾಗ, ಯಾರೇ ವ್ಯಕ್ತಿಯು ಜಾಹಿರಾತಿನ ದಿನಾಂಕದಿಂದ ನಿಯಮಿಸಿದ ಸಮಯದೊಳಗೆ ಅರ್ಜಿಯನ್ನು ವಿರೋಧಿಸುವ ಬಗ್ಗೆ ನಿಯಮಿಸಲಾದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ನೋಟಿಸನ್ನು ನೀಡಿದರೆ ಹಾಗೆ ಅಗತ್ಯಪಡಿಸಿದಲ್ಲಿ ರಿಜಿಸ್ಟ್ರಾರನು, ಪಕ್ಷಕಾರರ ಅಹವಾಲನ್ನು ಕೇಳಿದ ನಂತರ, ವಿಷಯವನ್ನು ತೀರ್ಮಾನಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ಅನುಮತಿಯನ್ನು ನೀಡಿರುವಲ್ಲಿ, ವ್ಯತ್ಯಾಸ ಮಾಡಿದ ರೀತಿಯಲ್ಲಿ ವ್ಯಾಪಾರ ಚಿಹ್ನೆಯನ್ನು, (2)ನೆಯ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಈಗಾಗಲೆ ಜಾಹೀರಾತುಮಾಡಿದ್ದ ಹೊರತು, ನಿಯಮಿಸಿದ ರೀತಿಯಲ್ಲಿ ಜಾಹೀರಾತು ಮಾಡತಕ್ಕದ್ದು.

**60. ಸರಕುಗಳ ಅಥವಾ ಸೇವೆಗಳ ತಿದ್ದುಪಡಿ ಮಾಡಿದ ಅಥವಾ ಬದಲಿಸಿದ ವರ್ಗೀಕರಣಕ್ಕೆ ಸಂಬಂಧಿಸಿದಂತೆ ರಿಜಿಸ್ಟರಿನಲ್ಲಿ ನಮೂದುಗಳ ಅಳವಡಿಕೆ.–** (1) ರಿಜಿಸ್ಟ್ರಾರನು, ತಿದ್ದುಪಡಿಯನ್ನು ಮಾಡುವುದಕ್ಕೆ ನಿಕಟಪೂರ್ವದಲ್ಲಿ ಯಾವ ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿದೆಯೋ ಅವುಗಳಿಗೆ ಯಾವುವೇ ಸರಕುಗಳನ್ನು ಅಥವಾ ಸರಕುಗಳ ಅಥವಾ ಸೇವೆಗಳ ವರ್ಗಗಳನ್ನು (ಒಂದು ಅಥವಾ ಹೆಚ್ಚು ವರ್ಗಗಳಲ್ಲಿ) ಸೇರಿಸುವ ಅಥವಾ ಯಾವುವೇ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಒಂದು ವ್ಯಾಪಾರ ಚಿಹ್ನೆಯ ನೋಂದಣಿಗೆ ಹಿಂದಿನ ತಾರೀಖು ಹಾಕುವ ಪರಿಣಾಮ ಹೊಂದಿರುವಂತೆ ರಿಜಿಸ್ಟರಿನ ಯಾವುದೇ ತಿದ್ದುಪಡಿಯನ್ನು ಮಾಡತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣವನ್ನು ಪಾಲಿಸುವುದರಿಂದ ಅನುಚಿತ ಜಟಿಲತೆ ಉಂಟಾಗುವುದೆಂದು ಮತ್ತು ಸಂದರ್ಭಾನುಸಾರ ಸೇರ್ಪಡೆ ಮಾಡುವುದರಿಂದ ಅಥವಾ ಹಿಂದಿನ ತಾರೀಖು ಹಾಕುವುದರಿಂದ ಸರಕುಗಳ ಅಥವಾ ಸೇವೆಗಳ ಯಾವುದೇ ಗಣನೀಯ ಪರಿಮಾಣದ ಮೇಲೆ ಬಾಧೆಯುಂಟು ಮಾಡುವುದಿಲ್ಲವೆಂದು ಮತ್ತು ಯಾರೇ ವ್ಯಕ್ತಿಯ ಹಕ್ಕುಗಳ ಮೇಲೆ ಗಣನೀಯವಾಗಿ ಪ್ರತಿಕೂಲ ಪ್ರಭಾವ ಬೀರುವುದಿಲ್ಲವೆಂದು ರಿಜಿಸ್ಟ್ರಾರನು ಮನಗಂಡಾಗ, ಇದು ಅನ್ವಯವಾಗತಕ್ಕದ್ದಲ್ಲ.

(2) ರಿಜಿಸ್ಟರನ್ನು ಹಾಗೆ ತಿದ್ದುಪಡಿ ಮಾಡುವ ಒಂದು ಪ್ರಸ್ತಾವವನ್ನು ಬಾಧಿತನಾದ ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕನ ಗಮನಕ್ಕೆ ತರತಕ್ಕದ್ದು ಮತ್ತು ನಿಯಮಿಸಿದ ರೀತಿಯಲ್ಲಿ ಜಾಹೀರಾತು ಮಾಡತಕ್ಕದ್ದು

ಮತ್ತು ಆ ಪ್ರಸ್ತಾವಿತ ತಿದ್ದುಪಡಿಯು (1)ನೆಯ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವುದೆಂಬ ಕಾರಣದ ಮೇಲೆ ಬಾಧಿತನಾದ ಯಾರೇ ವ್ಯಕ್ತಿಯು ರಿಜಿಸ್ಟ್ರಾರನ ಮುಂದೆ ಅದನ್ನು ವಿರೋಧಿಸಬಹುದು.

## ಅಧ್ಯಾಯ – VIII
## ಸಾಮೂಹಿಕ ಚಿಹ್ನೆಗಳು

**61. ಸಾಮೂಹಿಕ ಚಿಹ್ನೆಗಳಿಗೆ ವಿಶೇಷ ಉಪಬಂಧಗಳು.–** (1) ಈ ಅಧಿನಿಯಮದ ಉಪಬಂಧಗಳು, ಈ ಅಧ್ಯಾಯದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು ಸಾಮೂಹಿಕ ಚಿಹ್ನೆಗಳಿಗೆ ಅನ್ವಯವಾಗತಕ್ಕದ್ದು.

(2) ಸಾಮೂಹಿಕ ಚಿಹ್ನೆಗೆ ಸಂಬಂಧಿಸಿದಂತೆ, ಒಬ್ಬ ವ್ಯಕ್ತಿಯ ಸರಕುಗಳನ್ನು ಅಥವಾ ಸೇವೆಗಳನ್ನು ಇತರ ವ್ಯಕ್ತಿಗಳ ಸರಕುಗಳಿಂದ ಅಥವಾ ಸೇವೆಗಳಿಂದ ವಿಭಿನ್ನವಾಗಿ ತೋರಿಸುವುದಕ್ಕೆ ಸಂಬಂಧಿಸಿದ 2ನೇ ಪ್ರಕರಣದ (1)ನೇ ಉಪಪ್ರಕರಣದ (ಜೆಡ್‌ಬಿ) ಖಂಡದಲ್ಲಿರುವ ಉಲ್ಲೇಖವನ್ನು ಚಿಹ್ನೆಯ ಮಾಲೀಕನಾಗಿರುವ ವ್ಯಕ್ತಿಗಳ ಸಂಘದ ಸದಸ್ಯರ ಸರಕುಗಳನ್ನು ಅಥವಾ ಸೇವೆಗಳನ್ನು ಆ ಇತರರ ಸರಕುಗಳು ಅಥವಾ ಸೇವೆಗಳಿಂದ ವಿಭಿನ್ನವಾಗಿ ತೋರಿಸುವ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**62. ಸಾಮೂಹಿಕ ಚಿಹ್ನೆಯ ಸ್ವರೂಪ ಅಥವಾ ಅರ್ಥವು ದಾರಿ ತಪ್ಪಿಸದಿರುವುದು.–** ಸಾರ್ವಜನಿಕರಲ್ಲಿ ಮೋಸ ಉಂಟುಮಾಡುವ ಸಂಭವವಿದ್ದರೆ ಅಥವಾ ಗೊಂದಲವನ್ನು ಉಂಟುಮಾಡುವಂತಿದ್ದರೆ, ಅದರಲ್ಲೂ ವಿಶೇಷವಾಗಿ ಸಾಮೂಹಿಕ ಚಿಹ್ನೆಗಿಂತ ಸ್ವಲ್ಪಮಟ್ಟಿಗೆ ಪ್ರತ್ಯೇಕವೆಂದು ತಿಳಿಯುವ ಸಂಭವವಿದ್ದರೆ ಅದನ್ನು ನೋಂದಾಯಿಸತಕ್ಕದ್ದಲ್ಲ, ಮತ್ತು ಅಂತಹ ಸಂದರ್ಭದಲ್ಲಿ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯ ಸಂಬಂಧದಲ್ಲಿ ರಿಜಿಸ್ಟ್ರಾರನು, ಒಂದು ಚಿಹ್ನೆಯು ಸಾಮೂಹಿಕ ಚಿಹ್ನೆಯೆಂಬ ಯಾವುದಾದರೂ ಸೂಚನೆಯನ್ನು ಹೊಂದಿರಬೇಕೆಂಬುದನ್ನು ಅಗತ್ಯಪಡಿಸಬಹುದು.

**63. ಸಾಮೂಹಿಕ ಚಿಹ್ನೆಗಳ ಬಳಕೆಯನ್ನು ನಿಯಂತ್ರಿಸುವ ವಿನಿಯಮಗಳು ಅರ್ಜಿಯೊಂದಿಗೆ ಇರುವುದು.–** (1) ಸಾಮೂಹಿಕ ಚಿಹ್ನೆಯ ನೋಂದಣಿಯ ಅರ್ಜಿಯೊಂದಿಗೆ ಅಂತಹ ಸಾಮೂಹಿಕ ಚಿಹ್ನೆಯ ಬಳಕೆಯನ್ನು ನಿಯಂತ್ರಿಸುವ ವಿನಿಯಮಗಳು ಇರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿನಿಯಮಗಳು, ಚಿಹ್ನೆಯನ್ನು ಬಳಸಲು ಅಧಿಕೃತರಾದ ವ್ಯಕ್ತಿಗಳನ್ನು, ಸಂಘದ ಸದಸ್ಯತ್ವದ ಷರತ್ತುಗಳನ್ನು ಮತ್ತು ದುರ್ಬಳಕೆಯ ವಿರುದ್ಧದ ಯಾವುವೇ ನಿರ್ಬಂಧಗಳನ್ನು ಮತ್ತು ನಿಯಮಿಸಬಹುದಾದ ಅಂತಹ ಇತರ ವಿಷಯಗಳನ್ನು ಒಳಗೊಂಡಂತೆ, ಚಿಹ್ನೆಯ ಬಳಕೆಯ ಷರತ್ತುಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

**64. ರಿಜಿಸ್ಟ್ರಾರನು ಅರ್ಜಿಯನ್ನು ಮತ್ತು ವಿನಿಯಮಗಳನ್ನು ಅಂಗೀಕರಿಸುವುದು.–** ನೋಂದಣಿಯ ಅಗತ್ಯತೆಗಳು ತೃಪ್ತಿಕರವಾಗಿವೆಯೆಂದು ರಿಜಿಸ್ಟ್ರಾರನಿಗೆ ಕಂಡುಬಂದರೆ, ತಾನು ಸೂಕ್ತವೆಂದು ಭಾವಿಸಬಹುದಾದಂತೆ, ಬೇಷರತ್ತಾಗಿಯಾಗಲಿ ಅಥವಾ ಸದರಿ ವಿನಿಯಮಗಳ ತಿದ್ದುಪಡಿಗಳು ಯಾವುವಾದರೂ ಇದ್ದರೆ, ಅವುಗಳೂ ಸೇರಿದಂತೆ ಅಂತಹ ಷರತ್ತುಗಳಿಗೆ ಒಳಪಟ್ಟಾಗಲಿ ವಿನಿಯಮಗಳೊಂದಿಗೆ ಅರ್ಜಿಯನ್ನು ಅಂಗೀಕರಿಸತಕ್ಕದ್ದು ಅಥವಾ ಅದನ್ನು ಅಂಗೀಕರಿಸಲು ನಿರಾಕರಿಸತಕ್ಕದ್ದು ಮತ್ತು ಅಂಗೀಕರಿಸಿದರೆ ವಿನಿಯಮಗಳನ್ನು ಅಧಿಸೂಚಿಸತಕ್ಕದ್ದು.

**65. ವಿನಿಯಮಗಳ ಪರಿಶೀಲನೆಗೆ ಅವಕಾಶವಿರುವುದು.–** 63ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವಿನಿಯಮಗಳನ್ನು, 148ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲೇ ರಿಜಿಸ್ಟರಿನಂತೆಯೇ ಸಾರ್ವಜನಿಕ ಪರಿಶೀಲನೆಗೆ ಅವಕಾಶವಿರತಕ್ಕದ್ದು.

**66. ವಿನಿಯಮಗಳ ತಿದ್ದುಪಡಿ.–** 63ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವಿನಿಯಮಗಳ ಯಾವುದೇ ತಿದ್ದುಪಡಿಯು, ತಿದ್ದುಪಡಿ ಮಾಡಿದ ವಿನಿಯಮಗಳನ್ನು ರಿಜಿಸ್ಟ್ರಾರನಿಗೆ ಸಲ್ಲಿಸಿದ ಹೊರತು ಮತ್ತು 64ನೇ ಪ್ರಕರಣಕ್ಕನುಸಾರವಾಗಿ ಅವನು ಅದನ್ನು ಅಂಗೀಕರಿಸಿ ಪ್ರಕಟಿಸಿದ ಹೊರತು ಪರಿಣಾಮಕಾರಿಯಾಗತಕ್ಕದ್ದಲ್ಲ.

**67. ಸಾಮೂಹಿಕ ಚಿಹ್ನೆಯ ನೋಂದಾಯಿತ ಮಾಲೀಕನಿಂದ ವ್ಯವಹರಣೆಗಳ ಅತಿಲಂಘನ.–** ಸಾಮೂಹಿಕ ಚಿಹ್ನೆಯ ನೋಂದಾಯಿತ ಮಾಲೀಕನು ವಾದಿಯಾಗಿ ಅತಿಲಂಘನದ ಕಾರಣದಿಂದ ದಾವೆಯನ್ನು ಹೂಡಿರುವಲ್ಲಿ, ಅಧಿಕೃತ ಬಳಕೆದಾರರು ಯಾವುದೇ ನಷ್ಟವನ್ನು ಅನುಭವಿಸಿದರೆ ಅಥವಾ ಅನುಭವಿಸುವ ಸಂಭವವಿದ್ದರೆ ನ್ಯಾಯಾಲಯವು ಅದನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ವಾದಿಯು ಅಂತಹ ಅಧಿಕೃತ ಬಳಕೆದಾರರ ಪರವಾಗಿ ಯಾವುದೇ ಆರ್ಥಿಕ ಪರಿಹಾರೋಪಾಯಕ್ಕೆ ಸಂಬಂಧಿಸಿದಂತೆ ಎಷ್ಟುಮಟ್ಟಿಗೆ ಉತ್ಪತ್ತಿಗಳನ್ನು ಇಟ್ಟುಕೊಳ್ಳಬಹುದೆಂಬ ಬಗ್ಗೆ ತಾನು ಸೂಕ್ತವೆಂದು ಭಾವಿಸಬಹುದಾದ ಅಂತಹ ನಿರ್ದೇಶನಗಳನ್ನು ನೀಡಬಹುದು.

**68. ಸಾಮೂಹಿಕ ಚಿಹ್ನೆಯ ನೋಂದಣಿಯನ್ನು ತೆಗೆದುಹಾಕಲು ಹೆಚ್ಚಿನ ಕಾರಣಗಳು.–** ಸಾಮೂಹಿಕ ಚಿಹ್ನೆಯ ನೋಂದಣಿಯನ್ನು,–

(ಎ) ಮಾಲೀಕನು ಅಥವಾ ಅಧಿಕೃತ ಬಳಕೆದಾರನು ಸಾಮೂಹಿಕ ಚಿಹ್ನೆಯನ್ನು ಸಾರ್ವಜನಿಕರನ್ನು ದಾರಿ ತಪ್ಪಿಸುವುದಕ್ಕೆ ಬದ್ಧವಾಗುವಂಥ ರೀತಿಯಲ್ಲಿ ಸಾಮೂಹಿಕ ಚಿಹ್ನೆಯಂತೆ ಬಳಸಿದ್ದಾನೆ; ಅಥವಾ

(ಬಿ) ಮಾಲೀಕನು, ಚಿಹ್ನೆಯ ಬಳಕೆಯನ್ನು ನಿಯಂತ್ರಿಸುವ ವಿನಿಯಮಗಳನ್ನು ಪಾಲಿಸಲು ಅಥವಾ ಅವುಗಳ ಪಾಲನೆಯನ್ನು ಸುನಿಶ್ಚಿತಗೊಳಿಸಲು ವಿಫಲನಾಗಿದ್ದಾನೆ

– ಎಂಬ ಕಾರಣದ ಮೇಲೆ ಸಹ ರಿಜಿಸ್ಟ್ರರಿನಿಂದ ತೆಗೆದುಹಾಕಬಹುದು.

**ವಿವರಣೆ I.–** ಈ ಅಧ್ಯಾಯದ ಉದ್ದೇಶಗಳಿಗಾಗಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, "ಅಧಿಕೃತ ಬಳಕೆದಾರ" ಎಂದರೆ ಸಂಘದ ನೋಂದಾಯಿತ ಸಾಮೂಹಿಕ ಚಿಹ್ನೆಯನ್ನು ಬಳಸಲು ಅಧಿಕೃತನಾದ ಸಂಘದ ಸದಸ್ಯ.

**ವಿವರಣೆII.–** ಈ ಅಧಿನಿಯಮದ ಉದ್ದೇಶಗಳಿಗಾಗಿ, ವಿವರಣೆ–**I** ರಲ್ಲಿ ಉಲ್ಲೇಖಿಸಲಾದ ಅಧಿಕೃತ ಬಳಕೆದಾರನು ಮಾಡುವ ಸಾಮೂಹಿಕ ಚಿಹ್ನೆಯ ಬಳಕೆಯನ್ನು ಅದರ ನೋಂದಾಯಿತ ಮಾಲೀಕನು ಮಾಡುವ ಬಳಕೆ ಎಂದು ಭಾವಿಸತಕ್ಕದ್ದು.

## ಅಧ್ಯಾಯ – IX
## ಪ್ರಮಾಣೀಕೃತ ವ್ಯಾಪಾರ ಚಿಹ್ನೆಗಳು

**69. ಈ ಅಧಿನಿಯಮದ ಕೆಲವು ಉಪಬಂಧಗಳು ಪ್ರಮಾಣೀಕೃತ ವ್ಯಾಪಾರ ಚಿಹ್ನೆಗಳಿಗೆ ಅನ್ವಯವಾಗದಿರುವುದು.–** ಈ ಅಧಿನಿಯಮದ ಕೆಳಕಂಡ ಉಪಬಂಧಗಳು ಪ್ರಮಾಣೀಕೃತ ವ್ಯಾಪಾರ ಚಿಹ್ನೆಗಳಿಗೆ ಅನ್ವಯವಾಗತಕ್ಕದ್ದಲ್ಲ, ಎಂದರೆ,–

(ಎ) 9ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಮತ್ತು (ಸಿ) ಖಂಡಗಳು;

(ಬಿ) ಈ ಅಧ್ಯಾಯದಿಂದ ವ್ಯಕ್ತವಾಗಿ ಅನ್ವಯವಾಗುವ ಹೊರತು, 18, 20 ಮತ್ತು 21ನೆಯ ಪ್ರಕರಣಗಳು;

(ಸಿ) 28, 29, 30, 41, 42, 47, 48, 49, 50, 52, 54ನೆಯ ಪ್ರಕರಣಗಳು ಮತ್ತು 56ನೇ ಪ್ರಕರಣದ (2)ನೇ ಉಪಪ್ರಕರಣ;

(ಡಿ) 107ನೇ ಪ್ರಕರಣವನ್ನು ಹೊರತುಪಡಿಸಿ, ಅಧ್ಯಾಯ – XII.

**70. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿ.–** ಪ್ರಮಾಣೀಕರಿಸಿದ ಬಗೆಯ ಸರಕುಗಳ ವ್ಯಾಪಾರವನ್ನು ಅಥವಾ ಪ್ರಮಾಣೀಕರಿಸಿದ ಬಗೆಯ ಸೇವೆಗಳನ್ನು ಒದಗಿಸುವ ವ್ಯಾಪಾರವನ್ನು ನಡೆಸುವ ವ್ಯಕ್ತಿಯ ಹೆಸರಿನಲ್ಲಿ ಒಂದು ಚಿಹ್ನೆಯನ್ನು, ಪ್ರಮಾಣೀಕೃತ ವ್ಯಾಪಾರ ಚಿಹ್ನೆಯೆಂದು ನೋಂದಾಯಿಸತಕ್ಕದ್ದಲ್ಲ.

**71. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿಗಾಗಿ ಅರ್ಜಿಗಳು.–** (1) ಪ್ರಮಾಣೀಕೃತ ವ್ಯಾಪಾರ ಚಿಹ್ನೆಯೆಂದು ಒಂದು ಚಿಹ್ನೆಯನ್ನು ನೋಂದಣಿ ಮಾಡುವುದಕ್ಕಾಗಿ ಅರ್ಜಿಯನ್ನು, ಅದರ ಮಾಲೀಕನೆಂದು ನೋಂದಾಯಿತನಾಗಲು ಉದ್ದೇಶಿತನಾದ ವ್ಯಕ್ತಿಯು ನಿಯಮಿಸಲಾದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು ಮತ್ತು ಅದರೊಂದಿಗೆ 74ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಬೇಕಾದ ವಿನಿಯಮಗಳ ಕರಡು ಇರತಕ್ಕದ್ದು.

(2) 70ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, 18, 19 ಮತ್ತು 22ನೇ ಪ್ರಕರಣಗಳ ಉಪಬಂಧಗಳು ಈ ಪ್ರಕರಣದ ಅಡಿಯಲ್ಲಿ ಅರ್ಜಿಗೆ ಸಂಬಂಧಿಸಿದಂತೆ 18ನೇ ಪ್ರಕರಣದ ಅಡಿಯಲ್ಲಿ ಅರ್ಜಿಯ ಸಂಬಂಧದಲ್ಲಿ ಅವು ಅನ್ವಯವಾಗುವಂತೆ ಅನ್ವಯವಾಗತಕ್ಕದ್ದು. ಆದರೆ. ಅರ್ಜಿಯ ಅಂಗೀಕಾರಕ್ಕೆ ಸಂಬಂಧಿಸಿದಂತೆ ಅದರಲ್ಲಿನ ಉಲ್ಲೇಖಗಳು ಒಂದು ಅರ್ಜಿಯ ಸಂಬಂಧದಲ್ಲಿ ವ್ಯವಹರಿಸಲು ಅಧಿಕೃತಗೊಳಿಸುವುದಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದೆಂಬ ಮಾರ್ಪಾಟಿಗೆ ಒಳಪಟ್ಟಿರತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿನ ಒಂದು ಅರ್ಜಿಯನ್ನು ಸದರಿ ಉಪಬಂಧಗಳ ಅಡಿಯಲ್ಲಿ ವ್ಯವಹರಿಸುವಲ್ಲಿ, ನ್ಯಾಯಾಧಿಕರಣವು, ಅದು ಪ್ರಮಾಣೀಕೃತ ವ್ಯಾಪಾರ ಚಿಹ್ನೆಯೆಂದು ಕೆಲವು ಸೂಚನೆಯನ್ನು ಒಳಗೊಂಡಿರತಕ್ಕ ಪ್ರಮಾಣೀಕೃತ ವ್ಯಾಪಾರ ಚಿಹ್ನೆಯನ್ನು ದೊರಕಿಸಿಕೊಳ್ಳುವ ಅಪೇಕ್ಷೆಯನ್ನು ಒಳಗೊಂಡು 18ನೇ ಪ್ರಕರಣದ ಅಡಿಯಲ್ಲಿರುವ ಅರ್ಜಿಗಳಂತೆ ಈ ಅರ್ಜಿಯು ಸಾಧ್ಯವಾದಷ್ಟು ಗಮನಿಸಬೇಕಾದ ಅಂಶಗಳನ್ನು ಮತ್ತು ಈ ಪ್ರಕರಣದ ಅಡಿಯಲ್ಲಿನ ಅರ್ಜಿಗಳಿಗೆ ಯಾವುದೇ ಇತರ ಸುಸಂಬದ್ಧ ಅಂಶಗಳನ್ನು ಹೊಂದಿರತಕ್ಕದ್ದು.

**72. ರಿಜಿಸ್ಟ್ರಾರನು ನೋಂದಣಿಗಾಗಿ ಅರ್ಜಿಯನ್ನು ಪರ್ಯಾಲೋಚಿಸುವುದು.–** (1) ರಿಜಿಸ್ಟ್ರಾರನು, 71ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಪರ್ಯಾಲೋಚಿಸತಕ್ಕದ್ದು, ಎಂದರೆ: –

(ಎ) ಯಾವ ಸರಕುಗಳ ಚಿಹ್ನೆಯನ್ನು ನೋಂದಾಯಿಸಬೇಕಾಗಿದೆಯೋ ಆ ಸರಕುಗಳನ್ನು ಪ್ರಮಾಣೀಕರಿಸುವುದಕ್ಕೆ ಅರ್ಜಿದಾರನು ಸಕ್ಷಮನಾಗಿದ್ದಾನೆಯೇ;

(ಬಿ) 74ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಬೇಕಾದ ವಿನಿಯಮಗಳ ಕರಡು ತೃಪ್ತಿಕರವಾಗಿದೆಯೇ;

(ಸಿ) ನೋಂದಣಿಗೆ ಸಲ್ಲಿಸಿದ ಅರ್ಜಿಯು ಎಲ್ಲಾ ಸನ್ನಿವೇಶಗಳಲ್ಲೂ ಸಾರ್ವಜನಿಕ ಅನುಕೂಲಕ್ಕಾಗಿ ಇದೆಯೇ;

ಮತ್ತು,–

**(i)** ಅರ್ಜಿಯನ್ನು ತಿರಸ್ಕರಿಸಬಹುದು; ಅಥವಾ

**(ii)** ಅರ್ಜಿಯನ್ನು ಅಂಗೀಕರಿಸಬಹುದು ಮತ್ತು ಮಾರ್ಪಾಟು ಮಾಡದೆ ಮತ್ತು ಬೇಷರತ್ತಾಗಿ ಅಥವಾ ಯಾವುದೇ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟು, ವಿನಿಯಮಗಳ ಸದರಿ ಕರಡನ್ನು ಅನುಮೋದಿಸಬಹುದು ಅಥವಾ ಯಾವುದೇ ಸದರಿ ವಿಷಯಗಳಿಗೆ ಸಂಬಂಧಿಸಿ ತಾನು ಅಗತ್ಯವೆಂದು ಭಾವಿಸುವಂತೆ, ಅರ್ಜಿಯ ಅಥವಾ ವಿನಿಯಮಗಳ ಯಾವುದೇ ತಿದ್ದುಪಡಿಗಳನ್ನು ಅಥವಾ ಮಾರ್ಪಾಟುಗಳನ್ನು ಅನುಮೋದಿಸಬಹುದು.

(2) ಮಾರ್ಪಾಟಿಲ್ಲದೆ ಮತ್ತು ಬೇಷರತ್ತಾಗಿ ಅಂಗೀಕರಿಸಿದ ಮತ್ತು ಅನುಮೋದಿಸಿದ ಸಂದರ್ಭವನ್ನು ಹೊರತುಪಡಿಸಿ, ರಿಜಿಸ್ಟ್ರಾರನು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ್ದಲ್ಲದೆ (1)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ವಿಷಯವನ್ನು ತೀರ್ಮಾನಿಸತಕ್ಕದ್ದಲ್ಲ.

**73. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿಗೆ ವಿರೋಧ.–** ರಿಜಿಸ್ಟ್ರಾರನು, ಒಂದು ಅರ್ಜಿಯನ್ನು ಅಂಗೀಕರಿಸಿದ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಅರ್ಜಿಯನ್ನು ಅಂಗೀಕರಿಸಿದಂತೆ ಗೊತ್ತುಪಡಿಸಿದ ರೀತಿಯಲ್ಲಿ ಜಾಹಿರಾತುಪಡಿಸತಕ್ಕದ್ದು ಮತ್ತು 21ನೇ ಪ್ರಕರಣದ ಉಪಬಂಧಗಳು ಚಿಹ್ನೆಯ ನೋಂದಣಿಗೆ ಸಂಬಂಧಿಸಿದಂತೆಯೇ 18ನೇ ಪ್ರಕರಣದ ಅಡಿಯಲ್ಲಿನ ಅರ್ಜಿಯ ಸಂಬಂಧದಲ್ಲಿಯೂ ಅನ್ವಯವಾಗತಕ್ಕದ್ದು.

**74. ಪ್ರಮಾಣೀಕೃತ ವ್ಯಾಪಾರಚಿಹ್ನೆಯ ಬಳಕೆಯನ್ನು ನಿಯಂತ್ರಿಸುವ ವಿನಿಯಮಗಳನ್ನು ದಾಖಲು ಮಾಡುವುದು.–** (1) ಪ್ರಮಾಣೀಕೃತ ವ್ಯಾಪಾರಚಿಹ್ನೆಯ ವಿನಿಯಮಗಳೆಂದು ನೋಂದಣಿಯಾದ ಪ್ರತಿಯೊಂದು ಚಿಹ್ನೆಯ ಸಂಬಂಧದಲ್ಲಿ ಅದರ ಬಳಕೆಯನ್ನು ನಿಯಂತ್ರಿಸುವ ವಿನಿಯಮಗಳನ್ನು ವ್ಯಾಪಾರಚಿಹ್ನೆಯ ನೋಂದಣಿ ಕಚೇರಿಯಲ್ಲಿ ದಾಖಲ್ಮಾಡತಕ್ಕದ್ದು, ಅದು ಸರಕುಗಳನ್ನು ಅಥವಾ ಸೇವೆಗಳನ್ನು ಮಾಲೀಕನು ಪ್ರಮಾಣೀಕರಿಸಬೇಕಾದ ಮತ್ತು ಪ್ರಮಾಣೀಕೃತ ವ್ಯಾಪಾರಚಿಹ್ನೆಯ ಬಳಕೆಯನ್ನು ಅಧಿಕೃತಗೊಳಿಸಬೇಕಾದ ಉಪಬಂಧಗಳನ್ನು ಒಳಗೊಂಡಿರತಕ್ಕದ್ದು, ಮತ್ತು ರಿಜಿಸ್ಟ್ರಾರನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಅದರಲ್ಲಿ ಸೇರಿಸಲು ಅಗತ್ಯಪಡಿಸಬಹುದಾದ ಅಥವಾ ಅನುಮತಿಸಬಹುದಾದ ಯಾವುವೇ ಇತರ ಉಪಬಂಧಗಳನ್ನು (ವಿನಿಯಮಗಳಿಗನುಸಾರವಾಗಿ ಸರಕುಗಳನ್ನು ಪ್ರಮಾಣೀಕರಿಸುವುದಕ್ಕೆ ಅಥವಾ ಪ್ರಮಾಣೀಕೃತ ವ್ಯಾಪಾರ ಚಿಹ್ನೆಯ ಬಳಕೆಯನ್ನು ಅಧಿಕೃತಗೊಳಿಸುವುದಕ್ಕೆ ಮಾಲೀಕನು ಯಾವುದೇ ನಿರಾಕರಣೆಯನ್ನು ಮಾಡಿದಾಗ ಅದರ ವಿರುದ್ಧ ಅಪೀಲನ್ನು ಸಲ್ಲಿಸುವ ಹಕ್ಕನ್ನು ರಿಜಿಸ್ಟ್ರಾರನಿಗೆ ಪ್ರದಾನ ಮಾಡುವ ಉಪಬಂಧಗಳನ್ನು ಒಳಗೊಂಡಂತೆ) ಒಳಗೊಳ್ಳಬಹುದು ಮತ್ತು ಹಾಗೆ ದಾಖಲು ಮಾಡಿದ ವಿನಿಯಮಗಳನ್ನು, 148ನೇ ಪ್ರಕರಣದಲ್ಲಿ ರಿಜಿಸ್ಟರನ್ನು ಪರಿಶೀಲನೆ ಮಾಡುವುದಕ್ಕೆ ಉಪಬಂಧಿಸಲಾದಂತೆಯೇ ಪರಿಶೀಲಿಸಲು ಅವಕಾಶವಿರತಕ್ಕದ್ದು.

(2) ನೋಂದಾಯಿತ ಮಾಲೀಕನು ಸಲ್ಲಿಸಿದ ಅರ್ಜಿಯ ಮೇಲೆ, ಹಾಗೆ ದಾಖಲು ಮಾಡಿದ ವಿನಿಯಮಗಳನ್ನು ರಿಜಿಸ್ಟ್ರಾರನು ವ್ಯತ್ಯಾಸಗೊಳಿಸಬಹುದು.

(3) ರಿಜಿಸ್ಟ್ರಾರನು, ಯಾವುದೇ ಸಂದರ್ಭದಲ್ಲಿ ಅರ್ಜಿಯನ್ನು ಜಾಹೀರಾತು ಮಾಡುವುದು ವಿಹಿತವೆಂದು ಭಾವಿಸಿದಲ್ಲಿ ಹಾಗೆ ಜಾಹೀರಾತು ಮಾಡಿಸಬಹುದು ಮತ್ತು ಅವನು ಹಾಗೆ ಮಾಡಿದಲ್ಲಿ, ಜಾಹೀರಾತಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ, ಅರ್ಜಿಯನ್ನು ವಿರೋಧಿಸುವ ನೋಟೀಸನ್ನು ಯಾರೇ ವ್ಯಕ್ತಿಯು ನೀಡಿದರೆ, ರಿಜಿಸ್ಟ್ರಾರನು, ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತು ವಿಷಯವನ್ನು ತೀರ್ಮಾನಿಸತಕ್ಕದ್ದಲ್ಲ.

**75. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ಅತಿಲಂಘನ.–** ಪ್ರಮಾಣೀಕೃತ ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕನಾಗಿರದ ಅಥವಾ 74ನೇ ಪ್ರಕರಣದ ಅಡಿಯಲ್ಲಿ ದಾಖಲ್ಮಾಡಿದ ವಿನಿಯಮಗಳ ಅಡಿಯಲ್ಲಿ ಆ ಬಗ್ಗೆ ಅವನಿಂದ ಅಧಿಕೃತನಾದ, ಆ ಪ್ರಕರಣದ ಮೇರೆಗೆ ಅದನ್ನು ಬಳಸುವ ವ್ಯಕ್ತಿಯಾಗಿರದ ಯಾರೇ ವ್ಯಕ್ತಿಯು, ಯಾವ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಪ್ರಮಾಣೀಕೃತ ವ್ಯಾಪಾರಚಿಹ್ನೆಯನ್ನು ನೋಂದಾಯಿಸಲಾಗಿದೆಯೋ ಆ ಪ್ರಮಾಣೀಕೃತ ವ್ಯಾಪಾರ ಚಿಹ್ನೆಗೆ ತದ್ರೂಪವಾಗಿರುವ ಅಥವಾ ಮೋಸ ಹೋಗುವಷ್ಟು ಸಮರೂಪವಾಗಿರುವ ಒಂದು ಚಿಹ್ನೆಯನ್ನು ವ್ಯಾಪಾರ ಕ್ರಮದಲ್ಲಿ ಬಳಸಿದಾಗ, ಮತ್ತು ವ್ಯಾಪಾರಚಿಹ್ನೆಯ ಬಳಕೆಯನ್ನು ಮಾಡುವಂಥದೇ ರೀತಿಯಲ್ಲಿ ಚಿಹ್ನೆಯನ್ನು ಬಳಕೆ ಮಾಡುವ ಸಂಭವವಿರುವಂತೆ ಬಳಸಿದಾಗ 78ನೇ ಪ್ರಕರಣದ ಮೂಲಕ ಪ್ರದತ್ತವಾದ ಹಕ್ಕನ್ನು ಅತಿಲಂಘಿಸಿದಂತಾಗುವುದು.

**76. ಕೃತ್ಯಗಳು ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ಅತಿಲಂಘನೆಯನ್ನು ಒಳಗೊಳ್ಳದಿರುವುದು.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಮುಂದಿನ ಕೃತ್ಯಗಳು, ನೋಂದಾಯಿತ ಪ್ರಮಾಣೀಕೃತ ವ್ಯಾಪಾರಚಿಹ್ನೆಯ ಬಳಕೆಯ ಹಕ್ಕಿನ ಒಂದು ಅತಿಲಂಘನೆಯನ್ನು ಒಳಗೊಳ್ಳುವುದಿಲ್ಲ,–

(ಎ) ಒಂದು ಪ್ರಮಾಣೀಕೃತ ವ್ಯಾಪಾರಚಿಹ್ನೆಯನ್ನು, ರಿಜಿಸ್ಟರಿನಲ್ಲಿ ನಮೂದಿಸಿದ ಯಾವುದೇ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟು ನೋಂದಾಯಿಸಿದಲ್ಲಿ, ಯಾವುದೇ ಸ್ಥಳದಲ್ಲಿ ಮಾರಾಟ ಮಾಡಲಾಗುವ ಅಥವಾ ಇತರೇ ರೀತಿಯಲ್ಲಿ ವ್ಯಾಪಾರ ಮಾಡಲಾಗುವ ಸರಕುಗಳಿಗೆ ಸಂಬಂಧಿಸಿದಂತೆ ಅಥವಾ ಯಾವುದೇ ಮಾರುಕಟ್ಟೆಗೆ ರಫ್ತು ಮಾಡಲಾಗುವ ಸರಕುಗಳಿಗೆ ಸಂಬಂಧಿಸಿದಂತೆ ಅಥವಾ ಯಾವುದೇ ಸ್ಥಳದಲ್ಲಿ, ದೇಶದಲ್ಲಿ ಅಥವಾ ಪ್ರದೇಶದಲ್ಲಿ ಬಳಕೆಗೆ ಅಥವಾ ಸ್ವೀಕಾರಕ್ಕೆ ಲಭ್ಯವಿರುವ ಸೇವೆಗಳಿಗೆ

ಸಂಬಂಧಿಸಿದಂತೆ, ಅಥವಾ ಯಾವುದೇ ಇತರ ಪರಿಸ್ಥಿತಿಗಳಲ್ಲಿ ಅಂತಹ ಯಾವುವೇ ಪರಿಮಿತಿಗಳನ್ನು ಗಮನಿಸಿ, ಅಂಥ ಯಾವುದೇ ಗುರುತನ್ನು ಯಾವುದೇ ವಿಧಾನದಲ್ಲಿ ಬಳಸುವುದಕ್ಕೆ ನೋಂದಣಿಯನ್ನು ವಿಸ್ತರಿಸದಿರುವುದು;

(ಬಿ) ಗುರುತಿನ ಮಾಲೀಕನು ಪ್ರಮಾಣೀಕರಿಸಿದ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ, ಆ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳ ಭಾಗವಾಗಿರುವ ಅಧಿಕ ಪ್ರಮಾಣದ ಸಂಬಂಧದಲ್ಲಿ, ಮಾಲೀಕನು ಅಥವಾ ಸುಸಂಗತ ವಿನಿಯಮಗಳ ಅಡಿಯಲ್ಲಿ ತನ್ನ ಅಧಿಕೃತಗೊಳಿಸುವಿಕೆಗೆ ಅನುಸಾರವಾಗಿ ಮತ್ತೊಬ್ಬ ವ್ಯಕ್ತಿಯು, ಚಿಹ್ನೆಯನ್ನು ಬಳಸಿರುವ ಮತ್ತು ತರುವಾಯ ಅದನ್ನು ತೆಗೆದುಹಾಕದಿರುವ ಅಥವಾ ಅಳಿಸಿ ಹಾಕದಿರುವ, ಅಥವಾ ಮಾಲೀಕನು ಯಾವುದೇ ಸಮಯದಲ್ಲಿ ಗುರುತಿನ ಬಳಕೆಗೆ ವ್ಯಕ್ತವಾಗಿ ಅಥವಾ ಇಂಗಿತವಾಗಿ ಒಪ್ಪಿಗೆ ನೀಡಿರುವ ಸಂದರ್ಭದಲ್ಲಿ ಪ್ರಮಾಣೀಕೃತ ವ್ಯಾಪಾರಚಿಹ್ನೆಯನ್ನು ಬಳಸಿರುವುದು.

(ಸಿ) ಮೇಲೆ ಹೇಳಿದಂತೆ ನೀಡಲಾದ ಹಕ್ಕಿನ ಅತಿಲಂಘನೆಯಾಗದಂತೆ ಯಾವ ಇತರ ಸರಕುಗಳಿಗೆ ಸಂಬಂಧಿಸಿದಂತೆ ಚಿಹ್ನೆಯನ್ನು ಬಳಸಿದೆಯೋ ಅಥವಾ ತತ್ಕಾಲದಲ್ಲಿ ಹಾಗೆ ಬಳಸಲಾಗುತ್ತಿದೆಯೋ ಆ ಸರಕುಗಳ ಭಾಗವಾಗಿ ಅಥವಾ ಉಪಸಾಧನವಾಗಿ ಅಳವಡಿಸಿದ್ದು, ಸರಕುಗಳನ್ನು ಅಥವಾ ಸೇವೆಗಳನ್ನು ಹಾಗೆ ಅಳವಡಿಸಲಾಗಿದೆಯೆಂದು ಸೂಚಿಸುವುದಕ್ಕೆ ಮತ್ತು ಚಿಹ್ನೆಯ ಬಳಕೆಯ ಉದ್ದೇಶ ಅಥವಾ ಪರಿಣಾಮವು ಮಾಲೀಕನ ಸರಕುಗಳನ್ನು ಅಥವಾ ಸೇವೆಗಳನ್ನು ಪ್ರಮಾಣೀಕರಿಸುವ ಸಂಗತಿಯಲ್ಲದೆ ಬೇರೇನನ್ನೂ ಸೂಚಿಸುವುದಿಲ್ಲವೆಂಬುದಕ್ಕೆ ಚಿಹ್ನೆಯ ಬಳಕೆಯು ಯುಕ್ತವಾಗಿ ಅವಶ್ಯಕವಾಗಿರುವ ಸಂದರ್ಭದಲ್ಲಿ ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಪ್ರಮಾಣೀಕೃತ ವ್ಯಾಪಾರ ಚಿಹ್ನೆಯನ್ನು ಬಳಸಿರುವುದು.

(2) (1)ನೇ ಉಪಪ್ರಕರಣದ (ಬಿ) ಖಂಡವು, ಸರಕುಗಳು ಅಥವಾ ಸೇವೆಗಳು ಆ ಖಂಡದಲ್ಲಿ ನಮೂದಿಸಲಾದಂಥವುಗಳಾಗಿದ್ದರೂ, ಸರಕುಗಳಿಗೆ ಅಥವಾ ಸೇವೆಗಳಿಗೆ ಪ್ರಮಾಣೀಕೃತ ವ್ಯಾಪಾರ ಚಿಹ್ನೆಯ ಅನ್ವಯಿಕೆಯು ಆ ಖಂಡದಲ್ಲಿ ಉಲ್ಲೇಖಿಸಲಾದ ವಿನಿಯಮಗಳಿಗೆ ವ್ಯತಿರಿಕ್ತವಾಗಿದ್ದರೆ ಅಂಥ ಅನ್ವಯಿಕೆಯನ್ನು ಒಳಗೊಂಡ ಬಳಕೆಯ ಸಂದರ್ಭಕ್ಕೆ ಅನ್ವಯಿಸತಕ್ಕದ್ದಲ್ಲ.

(3) ಈ ಅಧಿನಿಯಮದ ಅಡಿಯಲ್ಲಿ ಪರಸ್ಪರ ತದ್ರೂಪವಾಗಿರುವ ಅಥವಾ ಬಹುಮಟ್ಟಿಗೆ ಸಾದೃಶ್ಯವಿರುವ ಎರಡು ಅಥವಾ ಹೆಚ್ಚು ವ್ಯಾಪಾರಚಿಹ್ನೆಗಳಲ್ಲಿ ಒಂದನ್ನು ಪ್ರಮಾಣೀಕೃತ ವ್ಯಾಪಾರ ಚಿಹ್ನೆಯೆಂದು ನೋಂದಾಯಿಸಿರುವಲ್ಲಿ, ನೋಂದಣಿಯ ಮೂಲಕ ನೀಡಲಾದ ಆ ವ್ಯಾಪಾರಚಿಹ್ನೆಯನ್ನು ಬಳಸುವ ಹಕ್ಕನ್ನು ಚಲಾಯಿಸುವಲ್ಲಿ ಆ ಯಾವುದೇ ವ್ಯಾಪಾರಚಿಹ್ನೆಗಳ ಬಳಕೆಯನ್ನು ಆ ಇತರ ಯಾವುದೇ ವ್ಯಾಪಾರಚಿಹ್ನೆಯ ಬಳಕೆಗೆ ಹಾಗೆ ನೀಡಲಾದ ಹಕ್ಕಿನ ಅತಿಲಂಘನವೆಂದು ಭಾವಿಸತಕ್ಕದ್ದಲ್ಲ.

**77. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿಯ ರದ್ದಿಯಾತಿ ಅಥವಾ ವ್ಯತ್ಯಸ್ಥಗೊಳಿಸುವುದು.–** ರಿಜಿಸ್ಟ್ರಾರನು, ಬಾಧಿತನಾದ ಯಾರೇ ವ್ಯಕ್ತಿಯು, ನಿಯಮಿಸಿದ ರೀತಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಮಾಲೀಕನಿಗೆ ಅರ್ಜಿಯನ್ನು ವಿರೋಧಿಸುವ ಅವಕಾಶವನ್ನು ನೀಡಿದ ನಂತರ, ಈ ಕೆಳಗಿನ ಯಾವುವೇ ಆಧಾರಗಳ ಮೇಲೆ, ಪ್ರಮಾಣೀಕೃತ ವ್ಯಾಪಾರ ಚಿಹ್ನೆಗೆ ರಿಜಿಸ್ಟರಿನಲ್ಲಿರುವ ಯಾವುದೇ ನಮೂದನ್ನು ತೆಗೆದುಹಾಕವುದಕ್ಕೆ ಅಥವಾ ವ್ಯತ್ಯಸ್ಥಗೊಳಿಸುವುದಕ್ಕೆ ಅಥವಾ ವಿನಿಯಮಗಳನ್ನು ವ್ಯತ್ಯಾಸಗೊಳಿಸುವುದಕ್ಕೆ ತಾನು ಸೂಕ್ತವೆಂದು ಭಾವಿಸುವಂತಹ ಆದೇಶವನ್ನು ಮಾಡಬಹುದು, ಎಂದರೆ: –

(ಎ) ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಚಿಹ್ನೆಯನ್ನು ನೋಂದಾಯಿಸಲಾಗಿದೆಯೋ, ಆ ಸರಕುಗಳನ್ನು ಅಥವಾ ಸೇವೆಗಳನ್ನು ಪ್ರಮಾಣೀಕರಿಸುವುದಕ್ಕೆ ಮಾಲೀಕನು ಸಕ್ಷಮನಾಗಿಲ್ಲದಿರುವುದು;

(ಬಿ) ಮಾಲೀಕನು ತಾನು ಪಾಲಿಸಬೇಕಾಗಿರುವ ವಿನಿಯಮಗಳ ಯಾವುವೇ ಉಪಬಂಧಗಳನ್ನು ಪಾಲಿಸುವಲ್ಲಿ ವಿಫಲನಾಗಿರುವುದು;

(ಸಿ) ಒಂದು ಚಿಹ್ನೆ ನೋಂದಾಯಿತವಾಗಿ ಉಳಿಯುವುದರಿಂದ ಅದು ಸಾರ್ವಜನಿಕರಿಗೆ ಅನುಕೂಲಕರವಾಗಿಲ್ಲದಿರುವುದು;

(ಡಿ) ಆ ಚಿಹ್ನೆಯು ನೋಂದಾಯಿತವಾಗಿಯೇ ಉಳಿದರೆ, ಸಾರ್ವಜನಿಕರ ಅನುಕೂಲಕ್ಕಾಗಿ, ವಿನಿಯಮಗಳನ್ನು ವ್ಯತ್ಯಸ್ಥಗೊಳಿಸಬೇಕಾಗಿರುವುದು.

**78. ಪ್ರಮಾಣೀಕೃತ ವ್ಯಾಪಾರಚಿಹ್ನೆಗಳ ನೋಂದಣಿಯಿಂದ ಪ್ರದತ್ತವಾದ ಹಕ್ಕುಗಳು.–** (1) 34, 35, ಮತ್ತು 76ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಯಾವುವೇ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಪ್ರಮಾಣೀಕೃತ ವ್ಯಾಪಾರ ಚಿಹ್ನೆಯ ಮಾಲೀಕನೆಂದು ಒಬ್ಬ ವ್ಯಕ್ತಿಯ ನೋಂದಣಿಯು ಸಿಂಧುವಾಗಿದ್ದರೆ, ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಚಿಹ್ನೆಯ ಬಳಕೆಯ ಅನನ್ಯ ಹಕ್ಕನ್ನು ಆ ವ್ಯಕ್ತಿಗೆ ನೀಡುತ್ತದೆ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಪ್ರಮಾಣೀಕೃತ ವ್ಯಾಪಾರಚಿಹ್ನೆಯ ಬಳಕೆಯ ಅನನ್ಯ ಹಕ್ಕು, ನೋಂದಣಿಯು ಯಾವ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟಿರತಕ್ಕದ್ದೋ ಅವುಗಳಿಗೆ ಒಳಪಟ್ಟಿರತಕ್ಕದ್ದು.

## ಅಧ್ಯಾಯ – X
## ಜವಳಿ ಸರಕುಗಳಿಗೆ ವಿಶೇಷ ಉಪಬಂಧಗಳು

**79. ಜವಳಿ ಸರಕುಗಳು.–** ಕೇಂದ್ರ ಸರ್ಕಾರವು, ಬಳಸಲಾಗುವ ಯಾವ ವ್ಯಾಪಾರ ಚಿಹ್ನೆಗಳ ಸಂಬಂಧದಲ್ಲಿ ಈ ಅಧ್ಯಾಯದ ಉಪಬಂಧಗಳು ಅನ್ವಯಿಸತಕ್ಕದ್ದೋ ಅವುಗಳಿಗೆ ಸಂಬಂಧಿಸಿದಂತೆ ಸರಕುಗಳ ಪ್ರವರ್ಗಗಳನ್ನು (ಈ ಅಧ್ಯಾಯದಲ್ಲಿ ಜವಳಿ ಸರಕುಗಳೆಂದು ಉಲ್ಲೇಖಿಸಲಾಗಿದೆ) ನಿಯಮಿಸಬಹುದು; ಮತ್ತು ಸದರಿ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಇತರ ಉಪಬಂಧಗಳು, ಇತರ ಸರಕುಗಳ ಪ್ರವರ್ಗಗಳಿಗೆ ಸಂಬಂಧಿಸಿದಂತೆ ಬಳಸಲಾಗುವ ವ್ಯಾಪಾರಚಿಹ್ನೆಗಳಿಗೆ ಅವು ಅನ್ವಯಿಸುವ ಹಾಗೆಯೇ ಅಂತಹ ವ್ಯಾಪಾರಚಿಹ್ನೆಗಳಿಗೆ ಅನ್ವಯಿಸತಕ್ಕದ್ದು.

**80. ಜವಳಿ ಸರಕುಗಳ ನೋಂದಣಿಯ ಮೇಲೆ ನಿರ್ಬಂಧ.–** (1) ಬಿಡಿಸರಕುಗಳಾಗಿರುವ ಜವಳಿ ಸರಕುಗಳ ಸಂಬಂಧದಲ್ಲಿ,–

(ಎ) ಪ್ರತ್ಯೇಕವಾದ ಒಂದು ರೇಖಾ ಶೀರ್ಷಿಕೆಯನ್ನು ಮಾತ್ರ ಒಳಗೊಂಡಿರುವ ಯಾವುದೇ ಚಿಹ್ನೆಯನ್ನು ವ್ಯಾಪಾರಚಿಹ್ನೆಯೆಂದು ನೋಂದಾಯಿಸತಕ್ಕದ್ದಲ್ಲ;

(ಬಿ) ಒಂದು ರೇಖಾ ಶೀರ್ಷಿಕೆಯು ವಿಭಿನ್ನತೆಯನ್ನು ಹೊಂದಲು ಸಮರ್ಥವಾಗಿದೆಯೆಂದು ಪರಿಭಾವಿಸತಕ್ಕದ್ದಲ್ಲ;

(ಸಿ) ವ್ಯಾಪಾರಚಿಹ್ನೆಯ ನೋಂದಣಿಯು ಒಂದು ರೇಖಾಶೀರ್ಷಿಕೆಯ ಬಳಕೆಗೆ ಯಾವುದೇ ಅನನ್ಯ ಹಕ್ಕನ್ನು ನೀಡತಕ್ಕದ್ದಲ್ಲ.

(2) ಯಾವುವೇ ಜವಳಿ ಸರಕುಗಳ ಸಂಬಂಧದಲ್ಲಿ, ಅಕ್ಷರಗಳ ಅಥವಾ ಅಂಕಿಗಳ ಅಥವಾ ಅವುಗಳ ಯಾವುದೇ ಸಂಯೋಜನೆಯ ನೋಂದಣಿಯು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು.

**81. ಜವಳಿ ಸರಕುಗಳು, ಹತ್ತಿ ನೂಲು ಮತ್ತು ದಾರಗಳ ಮೇಲೆ ಮುದ್ರೆಯೊತ್ತುವುದು.–** (1) ಸಾಮಾನ್ಯವಾಗಿ, ಉದ್ದದ ಅಳತೆಯಾಗಿ ಅಥವಾ ಬಿಡಿಯಾಗಿ ಮಾರಾಟ ಮಾಡುವಂಥ ಜವಳಿ ಸರಕುಗಳನ್ನು, ಕಾರ್ಖಾನೆಗಳ ಅಧಿನಿಯಮ, 1948 (1948ರ 63) ರಲ್ಲಿ ಪರಿಭಾಷಿಸಲಾದಂತೆ, ಒಂದು ಕಾರ್ಖಾನೆಯಾಗಿರುವ ಆವರಣದಲ್ಲಿ ತಯಾರಿಸಲಾಗಿದ್ದರೆ, ಬಿಳಿದು ಮಾಡಿದ್ದರೆ, ಬಣ್ಣ ಹಾಕಿದ್ದರೆ, ಅಚ್ಚು ಮಾಡಿದ್ದರೆ ಅಥವಾ ಸಂಸ್ಕರಿಸಿದ್ದರೆ, ಪ್ರತಿಯೊಂದು ಜವಳಿ ಬಟ್ಟೆಯ ಮೇಲೆ ಅದರ ಉದ್ದವನ್ನು ಮಾನಕ ಗಜಗಳಲ್ಲಿ, ಅಥವಾ ಮಾನಕ ಗಜಗಳಲ್ಲಿ ಮತ್ತು

ಅಂಥ ಗಜದ ಒಂದು ಭಾಗದಲ್ಲಿ ಅಥವಾ ಮಾನಕ ಮೀಟರುಗಳಲ್ಲಿ ಅಥವಾ ಮಾನಕ ಮೀಟರುಗಳಲ್ಲಿ ಮತ್ತು ಅಂಥ ಮೀಟರಿನ ಒಂದು ಭಾಗದಲ್ಲಿ ಜವಳಿ ಬಟ್ಟೆಯ ನಿಜವಾದ ಉದ್ದಕ್ಕನುಸಾರವಾಗಿ ಭಾರತೀಯ ಅಂಕಿಗಳ ಅಂತರ ರಾಷ್ಟ್ರೀಯ ನಮೂನೆಯಲ್ಲಿ ಗಮನ ಸೆಳೆಯುವ ಹಾಗೆ ಮುದ್ರೆಯನ್ನು ಹಾಕಿರದಿದ್ದರೆ, ಮತ್ತು, ಪ್ರತಿಯೊಂದು ಬಟ್ಟೆಯ ಮೇಲೆ ತಯಾರಕನ ಹೆಸರನ್ನು ಅಥವಾ ಆ ಜವಳಿ ಬಟ್ಟೆ ಯಾವ ಆವರಣದಲ್ಲಿ ಅಂತಿಮವಾಗಿ ಸಂಸ್ಕರಿತವಾಗಿದೆಯೋ ಆ ಆವರಣಗಳ ಅಧಿಭೋಗದಾರನ ಹೆಸರನ್ನು ಅಥವಾ ಭಾರತದಲ್ಲಿ ಜವಳಿಯ ಸಗಟು ಖರೀದಿದಾರನ ಹೆಸರನ್ನು ಗಮನ ಸೆಳೆಯುವ ಹಾಗೆ ಗುರುತು ಹಾಕದಿದ್ದರೆ, ಭಾರತದಿಂದ ರಫ್ತಿಗಾಗಿ ಕಾರ್ಖಾನೆಯಿಂದ ಮಾರಾಟ ಮಾಡುವ ಸರಕುಗಳನ್ನು ಹೊರತುಪಡಿಸಿ, ಅಂಥ ಪ್ರಕ್ರಿಯೆಗಳ ಪೈಕಿ ಯಾವುವೇ ಪ್ರಕ್ರಿಯೆಯು ಅಂಥ ಕೊನೆಯ ಆವರಣದಲ್ಲಿ ನಡೆದಿದ್ದರೆ, ಅವುಗಳನ್ನು ಮಾರಾಟಕ್ಕಾಗಿ ತೆಗೆದುಕೊಂಡು ಹೋಗತಕ್ಕದ್ದಲ್ಲ.

(2) 82ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ನಿಯಮಗಳಿಂದ ವಿನಾಯತಿ ಪಡೆಯದ ಯಾವುದೇ ಆವರಣದಲ್ಲಿ ತಯಾರಿಸಲಾದ, ಬಿಳಿದು ಮಾಡಿದ, ಬಣ್ಣ ಹಾಕಿದ ಅಥವಾ ಸಂಸ್ಕರಿಸಿದ, ಸಾಮಾನ್ಯವಾಗಿ ಪಿಂಡಿಗಳಲ್ಲಿ ಮಾರಾಟ ಮಾಡುವಂತಹ ಹತ್ತಿ ನೂಲನ್ನು ಮತ್ತು ಹತ್ತಿ ದಾರ ಎಂದರೆ ಹೊಲಿಯಲು, ಎಳೆ ತುಂಬಲು, ಹೆಣೆಯಲು ಅಥವಾ ಕೈಕಸೂತಿ ಮಾಡಲು ತಯಾರಿಸಿದಂಥ ದಾರಕ್ಕೆ, ನೂಲಿಗೆ ಸಂಬಂಧಿಸಿದಂತೆ ಸದರಿ ನಿಯಮಗಳಿಗನುಸಾರವಾಗಿ,–

(ಎ) ಪ್ರತಿಯೊಂದು ಪಿಂಡಿಯಲ್ಲಿ ನೂಲಿನ ತೂಕವನ್ನು ಗಮನ ಸೆಳೆಯುವಂತೆ ಇಂಗ್ಲಿಷಿನಲ್ಲಿ ಅಥವಾ ಮೆಟ್ರಿಕ್ ಪದ್ಧತಿಯಲ್ಲಿ ಪಿಂಡಿಗಳನ್ನು ಗುರುತಿಸಲಾಗಿದ್ದ ಹೊರತು; ಮತ್ತು

(ಬಿ) ಪಿಂಡಿಗಳಲ್ಲಿ ಒಳಗೊಂಡಿರುವ ನೂಲಿನ ಕೌಂಟನ್ನು ಮತ್ತು ದಾರದ ಸಂದರ್ಭದಲ್ಲಿ ಪ್ರತಿಯೊಂದು ಘಟಕವನ್ನು, ಘಟಕದಲ್ಲಿರುವ ದಾರದ ಉದ್ದ ಮತ್ತು ತೂಕವನ್ನು ಗಮನ ಸೆಳೆಯುವಂತೆ ಮತ್ತು ಸದರಿ ನಿಯಮಗಳ ಮೂಲಕ ಅಗತ್ಯಪಡಿಸಬಹುದಾದಂತಹ ಇತರ ರೀತಿಯಲ್ಲಿ ಗುರುತಿಸಲಾಗಿದ್ದ ಹೊರತು; ಮತ್ತು

(ಸಿ) ಸರಕುಗಳ ತಯಾರಕನ ಹೆಸರನ್ನು ಅಥವಾ ಭಾರತದಲ್ಲಿ ಸಗಟು ಖರೀದಿದಾರನ ಹೆಸರನ್ನು ಪ್ರತಿಯೊಂದು ಪಿಂಡಿ ಅಥವಾ ಘಟಕದಲ್ಲಿ ಗಮನ ಸೆಳೆಯುವಂತೆ ಗುರುತು ಮಾಡಿರುವ ಹೊರತಾಗಿ, ಭಾರತದಿಂದ ರಫ್ತಿಗಾಗಿ ಆವರಣದಿಂದ ಮಾರಾಟ ಮಾಡಿದ ಸರಕುಗಳ ಹೊರತು

– ಆ ಆವರಣಗಳಿಂದ ಮಾರಾಟಕ್ಕಾಗಿ ತೆಗೆದುಕೊಂಡು ಹೋಗತಕ್ಕದ್ದಲ್ಲ:

ಪರಂತು, 82ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ನಿಯಮಗಳು, ಹತ್ತು ಜನರಿಗಿಂತ ಹೆಚ್ಚಿಲ್ಲದ ಇತರ ನೌಕರರ ನೆರವಿನೊಂದಿಗೆ ಅಥವಾ ನೆರವಿಲ್ಲದೆ ಒಂದು ಕುಟುಂಬದ ಸದಸ್ಯರು ಕೆಲಸವನ್ನು ಮಾಡುತ್ತಿರುವ ಎಲ್ಲಾ ಆವರಣಗಳು, ಮತ್ತು ಆವರಣಗಳಲ್ಲಿ ಇಪ್ಪತ್ತು ಜನರಿಗಿಂತ ಹೆಚ್ಚಿಲ್ಲದ ಕೆಲಸಗಾರರು ನಿಯೋಜಿತರಾಗಿರುವ, ಒಂದು ಸಹಕಾರ ಸಂಘದ ನಿಯಂತ್ರಣದಲ್ಲಿರುವ ಎಲ್ಲಾ ಆವರಣಗಳಿಗೆ ವಿನಾಯಿತಿ ನೀಡತಕ್ಕದ್ದು.

**82. ಗುಣ ಪರಿಶೀಲನೆ ಮಾಡುವ ಮೂಲಕ ಜವಳಿ ಸರಕುಗಳ ಸ್ವರೂಪದ ನಿರ್ಧರಣೆ.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು, –

(ಎ) ಸಮಾನ ಸಂಖ್ಯೆ, ಪರಿಮಾಣ, ಅಳತೆ, ಗೇಜ್ ಅಥವಾ ತೂಕವಿರುವುದಾಗಿ ತಾತ್ಪರ್ಯವಾಗುವ ಅಥವಾ ಹೇಳಲಾಗುವ ಯಾವುವೇ ಸರಕುಗಳಿಗೆ ಸಂಬಂಧಿಸಿದಂತೆ, ಆಯ್ಕೆ ಮಾಡಬೇಕಾದ ಮತ್ತು ಪರೀಕ್ಷಿಸಬೇಕಾದ ಮಾದರಿಗಳ ಸಂಖ್ಯೆಯನ್ನು ಮತ್ತು ಮಾದರಿಗಳ ಆಯ್ಕೆಯನ್ನು ಉಪಬಂಧಿಸುವ;

(ಬಿ) 81ನೇ ಪ್ರಕರಣದ ಉದ್ದೇಶಗಳಿಗಾಗಿ, ಆ ಪ್ರಕರಣದ ಮೂಲಕ ಅಗತ್ಯಪಡಿಸಿದ ವಿವರಗಳೊಂದಿಗೆ ಹತ್ತಿ ನೂಲು ಮತ್ತು ಹತ್ತಿ ದಾರಕ್ಕೆ ಗುರುತು ಮಾಡುವ ವಿಧಾನವನ್ನು ಮತ್ತು ಹತ್ತಿ ನೂಲು ಅಥವಾ ಹತ್ತಿ ದಾರವನ್ನು ತಯಾರಿಸಲು, ಬಿಳಿದು ಮಾಡಲು, ಬಣ್ಣ ಹಾಕಲು ಅಥವಾ ಸಂಸ್ಕರಿಸಲು

ಬಳಸುವ ಕೆಲವು ಆವರಣಗಳಿಗೆ ಆ ಪ್ರಕರಣದ ಉಪಬಂಧಗಳಿಂದ ವಿನಾಯಿತಿಯನ್ನು ಉಪಬಂಧಿಸುವ; ಮತ್ತು

(ಸಿ) ಈ ಅಧಿನಿಯಮದ 81ನೇ ಪ್ರಕರಣದ ಅಥವಾ ಸೀಮಾ ಸುಂಕ ಅಧಿನಿಯಮ, 1962ರ 11ನೇ ಪ್ರಕರಣದ (2)ನೇ ಉಪಪ್ರಕರಣದ (ಎನ್) ಖಂಡದ ಉದ್ದೇಶಗಳಿಗಾಗಿ "ಸಾಮಾನ್ಯವಾಗಿ ಉದ್ದದ ಅಳತೆಯಲ್ಲಿ ಅಥವಾ ಬಿಡಿಯಾಗಿ ಮಾರಾಟ ಮಾಡುವಂಥ ಬಿಡಿ ಸರಕುಗಳು" ಎಂಬ ಪದಾವಳಿಯಲ್ಲಿ ಸರಕುಗಳ ಯಾವ ವರ್ಗಗಳು ಒಳಗೊಂಡಿವೆಯೆಂಬುದನ್ನು ಘೋಷಿಸುವ

– ನಿಯಮಗಳನ್ನು ರಚಿಸಬಹುದು.

(2) ಯಾವುವೇ ಸರಕುಗಳಿಗೆ ಸಂಬಂಧಿಸಿದಂತೆ ಆಯ್ಕೆ ಮತ್ತು ಮಾದರಿಗಳ ಪರೀಕ್ಷೆಯ ಬಗ್ಗೆ (1)ನೇ ಉಪಪ್ರಕರಣದ ಅಡಿಯಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುವೇ ನಿಯಮಗಳಲ್ಲಿ ಉಪಬಂಧಗಳನ್ನು ಮಾಡದಿರುವಲ್ಲಿ, ಸರಕುಗಳ ಸಂಖ್ಯೆ, ಪರಿಮಾಣ, ಅಳತೆ, ಗೇಜ್ ಅಥವಾ ತೂಕವನ್ನು ಖಚಿತಪಡಿಸಿಕೊಳ್ಳಲು ಅವಕಾಶ ಹೊಂದಿರುವ, ನ್ಯಾಯಾಲಯ ಅಥವಾ ಸಂದರ್ಭಾನುಸಾರ, ಸೀಮಾಸುಂಕ ಅಧಿಕಾರಿಯು, ಲಿಖಿತ ಆದೇಶದ ಮೂಲಕ, ಆಯ್ಕೆ ಮಾಡಬೇಕಾದ ಮತ್ತು ಪರೀಕ್ಷಿಸಬೇಕಾದ ಮಾದರಿಗಳ ಸಂಖ್ಯೆಯನ್ನು ಮತ್ತು ಅಯ್ಕೆ ಮಾಡಬೇಕಾದ ಮಾದರಿಗಳ ರೀತಿಯನ್ನು ನಿರ್ಧರಿಸತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿನ ನಿಯಮಗಳ ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿನ ಆದೇಶದ ಅನುಸಾರವಾಗಿ ಪರೀಕ್ಷೆಯ ಸರಾಸರಿ ಪರಿಣಾಮವು, ಸಂದರ್ಭಾನುಸಾರ, ಸರಕುಗಳ ಸಂಖ್ಯೆ, ಪರಿಮಾಣ, ಅಳತೆ, ಗೇಜ್ ಅಥವಾ ತೂಕದ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು .

(4) (1)ನೇ ಉಪ-ಪ್ರಕರಣದ ಅಡಿಯಲ್ಲಿನ ನಿಯಮಗಳಿಗೆ, ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿನ ಆದೇಶಕ್ಕನುಸಾರವಾಗಿ ಯಾವ ಸರಕುಗಳಿಗೆ ಸಂಬಂಧಿಸಿದಂತೆ, ಅವುಗಳ ಮಾದರಿಗಳನ್ನು ಆಯ್ಕೆ ಮಾಡಲಾಗಿದೆಯೋ ಮತ್ತು ಪರೀಕ್ಷಿಸಲಾಗಿದೆಯೋ ಅವುಗಳ ಮೇಲೆ ಅಥವಾ ಅವುಗಳ ಸಂಬಂಧದಲ್ಲಿ ಯಾವುದೇ ಕ್ಲೇಮನ್ನು ಹೊಂದಿರುವ ವ್ಯಕ್ತಿಯು ಆ ಸರಕುಗಳ ಯಾವುವೇ ಹೆಚ್ಚಿನ ಮಾದರಿಗಳನ್ನು ಆಯ್ಕೆ ಮಾಡಲು ಮತ್ತು ಪರೀಕ್ಷಿಸಲು ಅಪೇಕ್ಷಿಸಿದರೆ, ಅಂತಹ ಹೆಚ್ಚಿನ ಮಾದರಿಗಳನ್ನು, ಅವನ ಲಿಖಿತ ಅರ್ಜಿಯ ಮೇಲೆ ಮತ್ತು ನ್ಯಾಯಾಲಯವು ಅಥವಾ ಅಧಿಕಾರಿಯು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದ ಹೆಚ್ಚಿನ ಆಯ್ಕೆ ಮತ್ತು ಪರೀಕ್ಷೆಯ ವೆಚ್ಚವನ್ನು ಭರಿಸುವಂತಹ ಮೊತ್ತಗಳನ್ನು, ನ್ಯಾಯಾಲಯಕ್ಕೆ ಅಥವಾ ಸಂದರ್ಭಾನುಸಾರ, ಸೀಮಾಸುಂಕ ಅಧಿಕಾರಿಗೆ ಮುಂಗಡವಾಗಿ ಸಂದಾಯ ಮಾಡಿದ ಮೇಲೆ, ಈ ಬಗ್ಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳ ಮೂಲಕ ಅನುಮತಿಸಬಹುದಾದಷ್ಟು ಮಟ್ಟಿಗೆ ವ್ಯಾಪ್ತಿಯಲ್ಲಿ ಆಯ್ಕೆ ಮಾಡತಕ್ಕದ್ದು ಮತ್ತು ಪರೀಕ್ಷಿಸತಕ್ಕದ್ದು, ಅಥವಾ ಯಾವ ಸರಕುಗಳ ಸಂಬಂಧದಲ್ಲಿ ಅಂತಹ ನಿಯಮಗಳಲ್ಲಿ ಉಪಬಂಧವನ್ನು ಕಲ್ಪಿಸಲಾಗಿಲ್ಲವೋ ಆ ಸರಕುಗಳ ಸಂದರ್ಭದಲ್ಲಿ, ನ್ಯಾಯಾಲಯ ಅಥವಾ ಸೀಮಾಸುಂಕ ಅಧಿಕಾರಿಯು, ಸೂಕ್ತವೆಂದು ಕಂಡ ಪರಿಸ್ಥಿತಿಗಳಲ್ಲಿ (1)ನೇ ಉಪಪ್ರಕರಣದ ಅಡಿಯಲ್ಲಿ, ಅಥವಾ ಸಂದರ್ಭಾನುಸಾರ (2)ನೇ ಉಪಪ್ರಕರಣದ ಅಡಿಯಲ್ಲಿ ನಿಯಮಿಸಲಾದ ರೀತಿಯಲ್ಲಿ ಮಾದರಿಗಳ ಆಯ್ಕೆ ಮಾಡುವುದನ್ನು ನಿರ್ಧರಿಸಬಹುದು.

(5) (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಪರೀಕ್ಷೆಯ ಮತ್ತು (4)ನೇ ಉಪ-ಪ್ರಕರಣದ ಅಡಿಯಲ್ಲಿನ ಹೆಚ್ಚಿನ ಪರೀಕ್ಷೆಯ ಸರಾಸರಿ ಪರಿಣಾಮವು, ಸಂದರ್ಭಾನುಸಾರ, ಸರಕುಗಳ ಸಂಖ್ಯೆಯ, ಪರಿಮಾಣದ, ಅಳತೆಯ, ಗೇಜ್‌ನ ಅಥವಾ ತೂಕದ ನಿರ್ಣಾಯಕ ರುಜುವಾತಾಗಿರತಕ್ಕದ್ದು.

## ಅಧ್ಯಾಯ – XI
## ಅಪೀಲು ಮಂಡಲಿ

**83. ಅಪೀಲು ಮಂಡಲಿಯ ಸ್ಥಾಪನೆ.–** ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯಿಂದ ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಅದಕ್ಕೆ ಪ್ರದಾನ ಮಾಡಿದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು

ಅಧಿಕಾರವನ್ನು ಚಲಾಯಿಸುವುದಕ್ಕಾಗಿ ಬೌದ್ಧಿಕ ಆಸ್ತಿ ಅಪೀಲು ಮಂಡಲಿಯೆಂದು ಕರೆಯಲಾಗುವ ಒಂದು ಅಪೀಲು ಮಂಡಲಿಯನ್ನು ಸ್ಥಾಪಿಸತಕ್ಕದ್ದು.

**84. ಅಪೀಲು ಮಂಡಲಿಯ ರಚನೆ.–** (1) ಅಪೀಲು ಮಂಡಲಿಯು, ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಅಂತಹ ಸಂಖ್ಯೆಯ ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಅಪೀಲು ಮಂಡಲಿಯ ಅಧಿಕಾರವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಅದರ ಪೀಠಗಳ ಮೂಲಕ ಚಲಾಯಿಸಬಹುದು.

(2) ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಪೀಠವು ಒಬ್ಬ ನ್ಯಾಯಿಕ ಸದಸ್ಯನನ್ನು ಮತ್ತು ಒಬ್ಬ ತಾಂತ್ರಿಕ ಸದಸ್ಯನನ್ನು ಒಳಗೊಂಡಿರತಕ್ಕದ್ದು ಮತ್ತು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ಸ್ಥಳದಲ್ಲಿ ಸಭೆ ಸೇರತಕ್ಕದ್ದು.

(3) (2)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಧ್ಯಕ್ಷನು,–

(ಎ) ಯಾವ ಪೀಠದ ನ್ಯಾಯಿಕ ಸದಸ್ಯನ ಅಥವಾ ತಾಂತ್ರಿಕ ಸದಸ್ಯನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅವನನ್ನು ನೇಮಕ ಮಾಡಲಾಗಿದೆಯೋ, ಆ ಪ್ರಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ, ಯಾವುದೇ ಇತರ ಪೀಠದ ನ್ಯಾಯಿಕ ಸದಸ್ಯನ ಅಥವಾ ಸಂದರ್ಭಾನುಸಾರ, ತಾಂತ್ರಿಕ ಸದಸ್ಯನ ಪ್ರಕಾರ್ಯಗಳನ್ನೂ ನಿರ್ವಹಿಸಬಹುದು;

(ಬಿ) ಒಬ್ಬ ಸದಸ್ಯನನ್ನು ಒಂದು ಪೀಠದಿಂದ ಇನ್ನೊಂದು ಪೀಠಕ್ಕೆ ವರ್ಗಾಯಿಸಬಹುದು;

(ಸಿ) ಒಂದು ಪೀಠಕ್ಕೆ ನೇಮಕಗೊಂಡ ಉಪಾಧ್ಯಕ್ಷ, ನ್ಯಾಯಿಕ ಸದಸ್ಯ ಅಥವಾ ತಾಂತ್ರಿಕ ಸದಸ್ಯನನ್ನು, ಇನ್ನೊಂದು ಪೀಠದ ನ್ಯಾಯಿಕ ಸದಸ್ಯನ ಅಥವಾ ಸಂದರ್ಭಾನುಸಾರವಾಗಿ, ತಾಂತ್ರಿಕ ಸದಸ್ಯನ ಪ್ರಕಾರ್ಯಗಳನ್ನು ಸಹ ನಿರ್ವಹಿಸಲು ಅಧಿಕೃತಗೊಳಿಸಬಹುದು.

(4) ಯಾವುವೇ ಪೀಠಗಳನ್ನು ರಚಿಸಿದಲ್ಲಿ, ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ, ಅಪೀಲು ಮಂಡಲಿಯ ಕಾರ್ಯಕಲಾಪವನ್ನು ಪೀಠಗಳ ನಡುವೆ ವಿತರಣೆ ಮಾಡುವ ಬಗ್ಗೆ ಉಪಬಂಧಗಳನ್ನು ಮಾಡಬಹುದು ಮತ್ತು ಪ್ರತಿಯೊಂದು ಪೀಠವು ವ್ಯವಹರಿಸಬಹುದಾದ ವಿಷಯಗಳನ್ನು ನಿರ್ದಿಷ್ಟಪಡಿಸಬಹುದು.

(5) ಯಾವುದೇ ವಿಷಯವು, ಒಂದು ಪೀಠಕ್ಕೆ ಹಂಚಲಾದ ಕಾರ್ಯಕಲಾಪದ ವ್ಯಾಪ್ತಿಯೊಳಗೆ ಬರುತ್ತಿದೆಯೇ ಎನ್ನುವುದಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ ಉದ್ಭವಿಸಿದಲ್ಲಿ, ಅಧ್ಯಕ್ಷನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**ವಿವರಣೆ.–** ಸಂದೇಹಗಳ ನಿವಾರಣೆಗಾಗಿ, "ವಿಷಯ" ಎಂಬ ಪದವು 91ನೇ ಪ್ರಕರಣದ ಅಡಿಯಲ್ಲಿನ ಒಂದು ಅಪೀಲನ್ನು ಒಳಗೊಂಡಿದೆಯೆಂದು ಈ ಮೂಲಕ ಘೋಷಿಸಲಾಗಿದೆ .

(6) ಪೀಠದ ಸದಸ್ಯರಲ್ಲಿ ಯಾವುದೇ ವಿಷಯದ ಬಗ್ಗೆ ಅಭಿಪ್ರಾಯಭೇದವಿದ್ದರೆ, ಅವರು, ಯಾವ ಅಂಶ ಅಥವಾ ಅಂಶಗಳ ಬಗ್ಗೆ ಅವರಿಗೆ ಅಭಿಪ್ರಾಯಭೇದವಿದೆಯೋ ಅದನ್ನು ಅಧ್ಯಕ್ಷನಿಗೆ ಉಲ್ಲೇಖಿಸತಕ್ಕದ್ದು, ಅವನು ಆ ಅಂಶ ಅಥವಾ ಅಂಶಗಳನ್ನು ತಾನು ಸ್ವತ: ವಿಚಾರಣೆ ಮಾಡತಕ್ಕದ್ದು ಅಥವಾ ಅಂತಹ ಅಂಶ ಅಥವಾ ಅಂಶಗಳನ್ನು ವಿಚಾರಣೆ ಮಾಡಲು ಆ ಪ್ರಕರಣವನ್ನು ಒಬ್ಬ ಅಥವಾ ಹೆಚ್ಚಿನ ಇತರ ಸದಸ್ಯರಿಗೆ ಒಪ್ಪಿಸತಕ್ಕದ್ದು ಮತ್ತು ಅಂತಹ ಅಂಶ ಅಥವಾ ಅಂಶಗಳ ಪ್ರಕರಣವನ್ನು ಮೊದಲು ವಿಚಾರಣೆ ಮಾಡಿದವರೂ ಸೇರಿದಂತೆ, ಆ ಪ್ರಕರಣದ ವಿಚಾರಣೆ ಮಾಡಿದ ಸದಸ್ಯರ ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿ ತೀರ್ಮಾನಿಸತಕ್ಕದ್ದು.

**85. ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯರಾಗಿ ನೇಮಕಗೊಳ್ಳಲು ಅರ್ಹತೆಗಳು.–** (1) ಒಬ್ಬ ವ್ಯಕ್ತಿಯು,–

(ಎ) ಅವನು ಉಚ್ಚನ್ಯಾಯಾಲಯದ ನ್ಯಾಯಾಧೀಶನಾಗಿರುವ, ಅಥವಾ ನ್ಯಾಯಾಧೀಶನಾಗಿದ್ದ ಹೊರತು; ಅಥವಾ

(ಬಿ) ಕನಿಷ್ಠ ಎರಡು ವರ್ಷಗಳ ಅವಧಿಗೆ, ಉಪಾಧ್ಯಕ್ಷನ ಪದವನ್ನು ಹೊಂದಿದ್ದ ಹೊರತು

– ಅಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(2) ಒಬ್ಬ ವ್ಯಕ್ತಿಯು,–

(ಎ) ಕನಿಷ್ಠ ಎರಡು ವರ್ಷಗಳ ಅವಧಿಗೆ, ನ್ಯಾಯಿಕ ಸದಸ್ಯನ ಅಥವಾ ತಾಂತ್ರಿಕ ಸದಸ್ಯನ ಪದವನ್ನು ಹೊಂದಿದ್ದ ಹೊರತು; ಅಥವಾ

(ಬಿ) ಭಾರತೀಯ ಕಾನೂನು ಸೇವೆಯ ಸದಸ್ಯನಾಗಿದ್ದ ಮತ್ತು ಕನಿಷ್ಠ ಐದು ವರ್ಷಗಳು ಆ ಸೇವೆಯ ದರ್ಜೆ– I ಹುದ್ದೆಯನ್ನು ಅಥವಾ ಯಾವುದೇ ಉನ್ನತ ಹುದ್ದೆಯನ್ನು ಹೊಂದಿದ್ದ ಹೊರತು

– ಉಪಾಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(3) ಒಬ್ಬ ವ್ಯಕ್ತಿಯು,–

(ಎ) ಭಾರತೀಯ ಕಾನೂನುಸೇವೆಯಲ್ಲಿ ಸದಸ್ಯನಾಗಿದ್ದ ಮತ್ತು ಕನಿಷ್ಠ ಮೂರು ವರ್ಷಗಳು ಆ ಸೇವೆಯಲ್ಲಿ ದರ್ಜೆ–I ಹುದ್ದೆಯನ್ನು ಹೊಂದಿದ್ದ ಹೊರತು; ಅಥವಾ

(ಬಿ) ಕನಿಷ್ಠ ಹತ್ತು ವರ್ಷಗಳು, ಸಿವಿಲ್ ನ್ಯಾಯಿಕ ಪದವನ್ನು ಹೊಂದಿದ್ದ ಹೊರತು

– ಅವನು ನ್ಯಾಯಿಕ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(4) ಒಬ್ಬ ವ್ಯಕ್ತಿಯು,–

(ಎ) ಕನಿಷ್ಠ ಹತ್ತು ವರ್ಷಗಳು ಈ ಅಧಿನಿಯಮದ ಅಡಿಯಲ್ಲಿ ಅಥವಾ ವ್ಯಾಪಾರ ಮತ್ತು ವ್ಯಾಪಾರಿ ಸರಕುಗಳ ಅಧಿನಿಯಮ, 1958ರ ಅಡಿಯಲ್ಲಿ ಅಥವಾ ಇವೆರಡರ ಅಡಿಯಲ್ಲಿ ನ್ಯಾಯಾಧಿಕರಣದ ಪ್ರಕಾರ್ಯಗಳನ್ನು ಚಲಾಯಿಸಿರುವ, ಮತ್ತು ಕನಿಷ್ಠ ಐದು ವರ್ಷಗಳು ಜಂಟಿ ರಿಜಿಸ್ಟ್ರಾರನ ಹುದ್ದೆಗಿಂತ ಕಡಿಮೆಯಿಲ್ಲದ ಹುದ್ದೆಯನ್ನು ಹೊಂದಿದ್ದ ಹೊರತು; ಅಥವಾ

(ಬಿ) ಕನಿಷ್ಠ ಹತ್ತು ವರ್ಷಗಳು ವ್ಯಾಪಾರ ಚಿಹ್ನೆಯ ಕಾನೂನಿನಲ್ಲಿ ವಿಶೇಷ ಅನುಭವವನ್ನು ಪಡೆದು ನ್ಯಾಯವಾದಿಯಾಗಿದ್ದ ಹೊರತು

– ಅವನು ತಾಂತ್ರಿಕ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ .

(5) (6)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪ್ರತಿಯೊಬ್ಬ ಇತರ ಸದಸ್ಯನನ್ನು ಭಾರತದ ರಾಷ್ಟ್ರಪತಿಯು ನೇಮಕಮಾಡತಕ್ಕದ್ದು .

(6) ಭಾರತದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಿದ ತರುವಾಯವಲ್ಲದೆ ಅಧ್ಯಕ್ಷನಾಗಿ ಯಾರೇ ವ್ಯಕ್ತಿಯ ನೇಮಕವನ್ನು ಮಾಡತಕ್ಕದ್ದಲ್ಲ.

**86. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ಪದಾವಧಿ.–** ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯರು ಸಾಮಾನ್ಯವಾಗಿ ತಮ್ಮ ಪದವನ್ನು ಧಾರಣ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಅಥವಾ,–

(ಎ) ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಸಂದರ್ಭದಲ್ಲಿ, ಅರವತ್ತೈದು ವರ್ಷ ವಯಸ್ಸು ಆಗುವವರೆಗೆ; ಮತ್ತು

(ಬಿ) ಸದಸ್ಯನ ಸಂದರ್ಭದಲ್ಲಿ, ಅರವತ್ತೆರಡು ವರ್ಷ ವಯಸ್ಸು ಆಗುವವರೆಗೆ

– ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದವನ್ನು ಹೊಂದಿರತಕ್ಕದ್ದು .

**87. ಕೆಲವು ಸಂದರ್ಭಗಳಲ್ಲಿ ಉಪಾಧ್ಯಕ್ಷ ಅಥವಾ ಅತ್ಯಂತ ಹಿರಿಯ ಸದಸ್ಯನು ಅಧ್ಯಕ್ಷನಂತೆ ಕಾರ್ಯನಿರ್ವಹಿಸುವುದು ಅಥವಾ ಅವನ ಪ್ರಕಾರ್ಯಗಳನ್ನು ನಿರ್ವಹಿಸುವುದು.–** (1) ಅಧ್ಯಕ್ಷನ ಮರಣ, ರಾಜೀನಾಮೆ ಅಥವಾ ಇತರ ಯಾವುದೇ ಕಾರಣದಿಂದ ಅವನ ಪದವು ತೆರವಾದಾಗ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ತೆರವಾದ ಪದವನ್ನು ಭರ್ತಿ ಮಾಡುವ ಸಲುವಾಗಿ ಒಬ್ಬ ಹೊಸ ಅಧ್ಯಕ್ಷನು ನೇಮಕವಾಗಿ ತನ್ನ ಪದವನ್ನು ಸ್ವೀಕರಿಸುವ ದಿನಾಂಕದವರೆಗೆ ಉಪಾಧ್ಯಕ್ಷನು ಮತ್ತು ಅವನ ಗೈರುಹಾಜರಿಯಲ್ಲಿ ಅತ್ಯಂತ ಹಿರಿಯ ಸದಸ್ಯನು, ಅಧ್ಯಕ್ಷನಂತೆ ಕಾರ್ಯನಿರ್ವಹಿಸತಕ್ಕದ್ದು.

(2) ಅಧ್ಯಕ್ಷನು ತನ್ನ ಗೈರುಹಾಜರಿ, ಕಾಯಿಲೆ ಅಥವಾ ಯಾವುದೇ ಇತರ ಕಾರಣದಿಂದ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ, ಉಪಾಧ್ಯಕ್ಷನು ಮತ್ತು ಅವನ ಗೈರುಹಾಜರಿಯಲ್ಲಿ ಅತ್ಯಂತ ಹಿರಿಯ ಸದಸ್ಯನು, ಅಧ್ಯಕ್ಷನು ಪುನ: ತನ್ನ ಕರ್ತವ್ಯಕ್ಕೆ ಹಾಜರಾಗುವ ದಿನಾಂಕದವರೆಗೆ ಆತನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**88. ಅಧ್ಯಕ್ಷನ, ಉಪಾಧ್ಯಕ್ಷನ ಮತ್ತು ಇತರ ಸದಸ್ಯರ ಸಂಬಳಗಳು, ಭತ್ಯೆಗಳು ಮತ್ತು ಇತರ ನಿಬಂಧನೆಗಳು ಮತ್ತು ಷರತ್ತುಗಳು.–** (1) ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರಿಗೆ ಸಂದಾಯವಾಗಬೇಕಾದ ಸಂಬಳಗಳು ಮತ್ತು ಭತ್ಯೆಗಳು, ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಉಪದಾನ ಮತ್ತು ಇತರ ನಿವೃತ್ತಿ ಸೌಲಭ್ಯಗಳೂ ಸೇರಿದಂತೆ) ನಿಯಮಿಸಬಹುದಾದಂತೆ ಇರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರು ಸಹ, ಸರ್ಕಾರಿ ಸೇವೆಯಲ್ಲಿರುವ ಒಬ್ಬ ವ್ಯಕ್ತಿಯು ಅಧ್ಯಕ್ಷನೆಂದು, ಉಪಾಧ್ಯಕ್ಷನೆಂದು ಅಥವಾ ಇತರ ಸದಸ್ಯನೆಂದು ಪದವನ್ನು ವಹಿಸಿಕೊಳ್ಳುವ ದಿನಾಂಕಕ್ಕೆ ನಿಕಟಪೂರ್ವದಲ್ಲಿ, ಸರ್ಕಾರಿ ಸೇವೆಯಲ್ಲಿದ್ದರೆ, ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯನೆಂದು ಪದವನ್ನು ಸ್ವೀಕರಿಸಿದ ದಿನಾಂಕದಂದು ಅವನು ತನ್ನ ಸೇವೆಯಿಂದ ನಿವೃತ್ತನಾಗಿದ್ದಾನೆಂದು ಭಾವಿಸತಕ್ಕದ್ದು .

**89. ರಾಜೀನಾಮೆ ಮತ್ತು ತೆಗೆದುಹಾಕುವಿಕೆ.–** (1) ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಯಾವುದೇ ಇತರ ಸದಸ್ಯನು, ಭಾರತದ ರಾಷ್ಟ್ರಪತಿಗೆ ಸಂಬೋಧಿಸಿ ತನ್ನ ಕೈಬರಹದಲ್ಲಿ, ಸೂಚನೆಯನ್ನು ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ಸಲ್ಲಿಸಬಹುದು:

ಪರಂತು, ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಯಾವನೇ ಇತರ ಸದಸ್ಯನು, ತನ್ನ ಪದವನ್ನು ಬೇಗನೆ ತ್ಯಜಿಸುವುದಕ್ಕೆ ಭಾರತದ ರಾಷ್ಟ್ರಪತಿಯು ಅನುಮತಿಸಿದ ಹೊರತು, ಅಂತಹ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಮುಕ್ತಾಯದವರೆಗೆ ಅಥವಾ ಆತನ ಉತ್ತರಾಧಿಕಾರಿಯಾಗಿ ಕ್ರಮಬದ್ಧವಾಗಿ ನೇಮಕಗೊಂಡ ಒಬ್ಬ ವ್ಯಕ್ತಿಯು ಆತನ ಪದವನ್ನು ಸ್ವೀಕರಿಸುವವರೆಗೆ ಅಥವಾ ತನ್ನ ಪದಾವಧಿಯು ಮುಕ್ತಾಯವಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ, ಅಲ್ಲಿಯವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(2) ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಯಾವನೇ ಇತರ ಸದಸ್ಯನನ್ನು, ಅವರ ವಿರುದ್ಧ ಆರೋಪವನ್ನು ತಿಳಿಸಿ, ಆ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯನನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನು ವಿಚಾರಣೆಯನ್ನು ನಡೆಸಿದ ನಂತರ ಮತ್ತು ಆ ಆರೋಪಗಳಿಗೆ ಸಂಬಂಧಿಸಿದಂತೆ ಅಹವಾಲನ್ನು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶವನ್ನು ನೀಡಿದ ನಂತರ ದುರ್ವರ್ತನೆ ಅಥವಾ ಅಸಮರ್ಥತೆಯು ರುಜುವಾತಾದ ಆಧಾರದ ಮೇರೆಗೆ ಭಾರತದ ರಾಷ್ಟ್ರಪತಿಯು ಮಾಡಿದ ಆದೇಶದ ಹೊರತು ಪದದಿಂದ ತೆಗೆದು ಹಾಕತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, ನಿಯಮಗಳ ಮೂಲಕ, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಧ್ಯಕ್ಷನ, ಉಪಾಧ್ಯಕ್ಷನ ಅಥವಾ ಇತರ ಸದಸ್ಯನ ದುರ್ನಡತೆ ಅಥವಾ ಅಸಮರ್ಥತೆಯ ತನಿಖೆಯನ್ನು ಮಾಡುವ ಕಾರ್ಯವಿಧಾನವನ್ನು ವಿನಿಯಮಿಸಬಹುದು.

**90. ಅಪೀಲು ಮಂಡಳಿಯ ಸಿಬ್ಬಂದಿ.–** (1) ಕೇಂದ್ರ ಸರ್ಕಾರವು, ಅಪೀಲು ಮಂಡಲಿಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸಲು ನೆರವು ನೀಡುವುದಕ್ಕೆ ಅಗತ್ಯವಾದ ಅಧಿಕಾರಿಗಳು ಮತ್ತು ಇತರ ನೌಕರರ ಸ್ವರೂಪ ಮತ್ತು ಪ್ರವರ್ಗಗಳನ್ನು ನಿರ್ಧರಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಅಪೀಲು ಮಂಡಲಿಗೆ ಒದಗಿಸತಕ್ಕದ್ದು.

(2) ಅಪೀಲು ಮಂಡಲಿಯ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವಾ ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

(3) ಅಪೀಲು ಮಂಡಳಿಯ ಅಧಿಕಾರಿಗಳು ಮತ್ತು ಇತರ ನೌಕರರು, ನಿಯಮಿಸಬಹುದಾದ ರೀತಿಯಲ್ಲಿ ಅಧ್ಯಕ್ಷನ ಸಾಮಾನ್ಯ ಅಧೀಕ್ಷಣೆಯಲ್ಲಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**91. ಅಪೀಲು ಮಂಡಳಿಗೆ ಅಪೀಲುಗಳು.–** (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ರಿಜಿಸ್ಟ್ರಾರನ ಆದೇಶದಿಂದ ಅಥವಾ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆತನ ವಿರುದ್ಧ ಮಾಡಲಾದ ಅಪೀಲಿನ ಆದೇಶವನ್ನು ಅಥವಾ ತೀರ್ಮಾನವನ್ನು ಅಪೀಲನ್ನು ಹೂಡುವ ಅಂತಹ ವ್ಯಕ್ತಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಅಪೀಲು ಮಂಡಲಿಯಲ್ಲಿ ಅಪೀಲನ್ನು ಹೂಡಬಹುದು.

(2) ಯಾವುದೇ ಅಪೀಲನ್ನು (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದ ನಂತರ ಹೂಡಿದರೆ ಅದನ್ನು ಅಂಗೀಕರಿಸತಕ್ಕದ್ದಲ್ಲ:

ಪರಂತು, ಅಪೀಲುದಾರನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಪೀಲನ್ನು ಹೂಡದಿರುವುದಕ್ಕೆ ಸಾಕಷ್ಟು ಕಾರಣವಿತ್ತೆಂದು ಅಪೀಲು ಮಂಡಲಿಗೆ ಅವನು ಮನವರಿಕೆ ಮಾಡಿಕೊಟ್ಟರೆ, ಆಗ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದ ನಂತರವೂ ಅಪೀಲನ್ನು ಅಂಗೀಕರಿಸಬಹುದು.

(3) ಅಪೀಲು ಮಂಡಲಿಗೆ ಸಲ್ಲಿಸುವ ಅಪೀಲು, ನಿಯಮಿಸಲಾದ ನಮೂನೆಯಲ್ಲಿರತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಅದನ್ನು ಪರಿಶೀಲಿಸತಕ್ಕದ್ದು ಮತ್ತು ಯಾವ ಆದೇಶದ ಅಥವಾ ತೀರ್ಮಾನದ ವಿರುದ್ಧ ಅಪೀಲು ಹೂಡಲಾಗಿದೆಯೋ ಅದರ ಒಂದು ಪ್ರತಿಯನ್ನು ಮತ್ತು ನಿಯಮಿಸಬಹುದಾದಂಥ ಫೀಜನ್ನು ಜೊತೆಯಲ್ಲಿ ಹೊಂದಿರತಕ್ಕದ್ದು.

**92. ಅಪೀಲು ಮಂಡಳಿಯ ಕಾರ್ಯವಿಧಾನ ಮತ್ತು ಅಧಿಕಾರಗಳು.–** (1) ಅಪೀಲು ಮಂಡಲಿಯು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ ನಿರೂಪಿಸಲಾದ ಕಾರ್ಯವಿಧಾನಕ್ಕೆ ಬದ್ಧವಾಗಿರತಕ್ಕದ್ದಲ್ಲ, ಆದರೆ ಸಹಜ ನ್ಯಾಯ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳಿಗೊಳಪಟ್ಟು, ಅಪೀಲು ಮಂಡಳಿಯು, ತಾನು ವಿಚಾರಣೆ ನಡೆಸುವ ಸ್ಥಳಗಳನ್ನು ಮತ್ತು ಸಮಯವನ್ನು ಗೊತ್ತುಪಡಿಸುವುದೂ ಒಳಗೊಂಡಂತೆ ಅದರ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಅಪೀಲು ಮಂಡಲಿಯು, ಈ ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಈ ಮುಂದಿನ ವಿಷಯಗಳ ಸಂಬಂಧದಲ್ಲಿ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಸಾಕ್ಷ್ಯವನ್ನು ಸ್ವೀಕರಿಸುವುದು ;
(ಬಿ) ಸಾಕ್ಷಿದಾರರ ಪರೀಕ್ಷೆಗೆ ಕಾರ್ಯಾಜ್ಞೆಗಳನ್ನು ಹೊರಡಿಸುವುದು ;
(ಸಿ) ಯಾವುದೇ ಸಾರ್ವಜನಿಕ ದಾಖಲೆಯನ್ನು ಕಡ್ಡಾಯವಾಗಿ ಕೋರುವುದು; ಮತ್ತು
(ಡಿ) ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಅಪೀಲು ಮಂಡಲಿಯ ಮುಂದಿರುವ ಯಾವುದೇ ವ್ಯವಹರಣೆಯನ್ನು ಭಾರತ ದಂಡ ಸಂಹಿತೆಯ (1860ರ 45) 193ನೇ ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ಮತ್ತು 196ನೇ ಪ್ರಕರಣದ ಉದ್ದೇಶಕ್ಕಾಗಿ ನ್ಯಾಯಿಕ ವ್ಯವಹರಣೆಯೆಂದು ಪರಿಭಾವಿಸತಕ್ಕದ್ದು ಮತ್ತು ಅಪೀಲು ಮಂಡಲಿಯನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ,1973ರ (1974ರ 2) 195ನೇ ಪ್ರಕರಣ ಮತ್ತು ಅಧ್ಯಾಯ XXVIರ ಎಲ್ಲಾ ಉದ್ದೇಶಗಳಿಗೆ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**93. ನ್ಯಾಯಾಲಯಗಳು ಇತ್ಯಾದಿಯ ಅಧಿಕಾರ ವ್ಯಾಪ್ತಿಯ ಪ್ರತಿಷೇಧ.–** ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು, 91ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ, ಯಾವುವೇ ಅಧಿಕಾರಗಳು ಅಥವಾ ಪ್ರಾಧಿಕಾರವನ್ನು ಚಲಾಯಿಸತಕ್ಕದ್ದಲ್ಲ ಅಥವಾ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

**94. ಅಪೀಲು ಮಂಡಲಿಯ ಮುಂದೆ ಹಾಜರಾಗುವುದಕ್ಕೆ ಪ್ರತಿಷೇಧ.–** ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯರ ಪದವನ್ನು ಹೊಂದಿರುವುದು ನಿಂತುಹೋದ ಮೇಲೆ ಅವರು ಅಪೀಲು ಮಂಡಲಿಯ ಅಥವಾ ರಿಜಿಸ್ಟ್ರಾರನ ಮುಂದೆ ಹಾಜರಾಗತಕ್ಕದ್ದಲ್ಲ.

**95. ಮಧ್ಯಕಾಲೀನ ಆದೇಶಗಳನ್ನು ಮಾಡುವುದಕ್ಕೆ ಷರತ್ತುಗಳು.–** ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಪೀಲಿಗೆ ಸಂಬಂಧಿಸಿದ ಯಾವುವೇ ವ್ಯವಹರಣೆಗಳ ಮೇಲೆ ಅಥವಾ ಅವುಗಳಲ್ಲಿ ಯಾವುದೇ ಮಧ್ಯಕಾಲೀನ ಆದೇಶವನ್ನು (ನಿರ್ಬಂದಕಾಜ್ಞೆಯ ರೂಪದಲ್ಲಾಗಲಿ ಅಥವಾ ತಡೆಯಾಜ್ಞೆ ರೂಪದಲ್ಲಾಗಲಿ ಅಥವಾ ಯಾವುದೇ ಇತರ ರೀತಿಯಲ್ಲಾಗಲಿ),–

(ಎ) ಅಂಥ ಅಪೀಲಿನ ಪ್ರತಿಗಳನ್ನು ಮತ್ತು ಮಧ್ಯಕಾಲೀನ ಆದೇಶದ ವಾದಾಂಶವನ್ನು ಸಮರ್ಥಿಸುವ ಎಲ್ಲಾ ದಸ್ತಾವೇಜುಗಳನ್ನು ಯಾವ ಪಕ್ಷಕಾರರ ವಿರುದ್ಧ ಅಂಥ ಅಪೀಲನ್ನು ಮಾಡಲಾಗಿದೆಯೋ ಅಥವಾ ಮಾಡಲು ಉದ್ದೇಶಿಸಲಾಗಿದೆಯೋ ಅವರಿಗೆ ಒದಗಿಸಿದ ಹೊರತು; ಮತ್ತು

(ಬಿ) ಈ ವಿಷಯದಲ್ಲಿ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅಂಥ ಪಕ್ಷಕಾರರಿಗೆ ಅವಕಾಶವನ್ನು ನೀಡಿದ ಹೊರತು

– ಮಾಡತಕ್ಕದ್ದಲ್ಲ.

**96. ಪ್ರಕರಣಗಳನ್ನು ಒಂದು ಪೀಠದಿಂದ ಇನ್ನೊಂದಕ್ಕೆ ವರ್ಗಾಯಿಸಲು ಅಧ್ಯಕ್ಷನ ಅಧಿಕಾರ.–** ಯಾರೇ ಪಕ್ಷಕಾರರ ಅರ್ಜಿಯ ಮೇಲೆ, ಮತ್ತು ಪಕ್ಷಕಾರರಿಗೆ ನೋಟೀಸನ್ನು ನೀಡಿದ ನಂತರ, ಮತ್ತು ತಾನು ಅಹವಾಲನ್ನು ಕೇಳಲು ಇಚ್ಛಿಸುವಂತವರ ಅಹವಾಲನ್ನು ಕೇಳಿದ ನಂತರ ಅಥವಾ ಅಂಥ ನೋಟೀಸಿಲ್ಲದೆ ತಾನಾಗಿಯೇ, ಅಧ್ಯಕ್ಷನು ಒಂದು ಪೀಠದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಪ್ರಕರಣವನ್ನು, ವಿಲೆಗಾಗಿ, ಇತರ ಯಾವುದೇ ಪೀಠಕ್ಕೆ ವರ್ಗಾಯಿಸಬಹುದು.

**97. ಅಪೀಲು ಮಂಡಳಿಯ ಮುಂದೆ ಸರಿಪಡಿಸುವಿಕೆಗಾಗಿ ಅರ್ಜಿ, ಇತ್ಯಾದಿಯ ಕಾರ್ಯವಿಧಾನ.–** (1)57ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟರನ್ನು ಸರಿಪಡಿಸುವುದಕ್ಕೆ ಅಪೀಲು ಮಂಡಳಿಗೆ ಸಲ್ಲಿಸಿದ ಅರ್ಜಿಯು ನಿಯಮಿಸಬಹುದಾದಂತಹ ನಮೂನೆಯಲ್ಲಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತ ವ್ಯಾಪಾರಚಿಹ್ನೆಗೆ ಸಂಬಂಧಿಸಿದಂತೆ ಅಪೀಲು ಮಂಡಲಿಯ ಪ್ರತಿಯೊಂದು ಆದೇಶದ ಅಥವಾ ತೀರ್ಪಿನ ಒಂದು ಪ್ರಮಾಣಿತ ಪ್ರತಿಯನ್ನು, ಮಂಡಲಿಯು ರಿಜಿಸ್ಟ್ರಾರನಿಗೆ ಕಳಿಸತಕ್ಕದ್ದು ಮತ್ತು ರಿಜಿಸ್ಟ್ರಾರನು ಮಂಡಲಿಯ ಆದೇಶವನ್ನು ಜಾರಿಗೆ ತರತಕ್ಕದ್ದು ಮತ್ತು ಅಂಥ ಆದೇಶಕ್ಕನುಸಾರವಾಗಿ ರಿಜಿಸ್ಟರಿನಲ್ಲಿ ನಮೂದುಗಳನ್ನು ತಿದ್ದುಪಡಿ ಮಾಡತಕ್ಕದ್ದೆಂದು, ಅಥವಾ ರಿಜಿಸ್ಟರನ್ನು ಸರಿಪಡಿಸಬೇಕೆಂದು ನಿರ್ದೇಶಿಸಿದಾಗ ಹಾಗೆ ಮಾಡತಕ್ಕದ್ದು.

**98. ಕಾನೂನು ವ್ಯವಹರಣೆಗಳ ಸಂದರ್ಭದಲ್ಲಿ ರಿಜಿಸ್ಟ್ರಾರನು ಹಾಜರಾಗುವುದು.–** (1) ರಿಜಿಸ್ಟ್ರಾರನು,–

(ಎ) ಅಪೀಲು ಮಂಡಳಿಯ ಮುಂದಿರುವ, ಯಾವುವೇ ಕಾನೂನು ವ್ಯವಹರಣೆಗಳಲ್ಲಿ ಕೋರಲಾದ ಪರಿಹಾರದಲ್ಲಿ ರಿಜಿಸ್ಟರನ್ನು ಮಾರ್ಪಡಿಸುವುದು ಅಥವಾ ಸರಿಪಡಿಸುವುದು ಒಳಗೊಂಡಿದ್ದರೆ ಅಥವಾ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿ ಪದ್ಧತಿಗೆ ಸಂಬಂಧಿಸಿದಂತೆ ಉದ್ಭವಿಸಿದ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ;

(ಬಿ) ವ್ಯಾಪಾರಚಿಹ್ನೆಯ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯ ಮೇಲೆ ರಿಜಿಸ್ಟ್ರಾರನು ಮಾಡಿದ ಆದೇಶದ ವಿರುದ್ಧ ಮಂಡಲಿಗೆ ಸಲ್ಲಿಸಿದ ಯಾವುದೇ ಅಪೀಲಿನಲ್ಲಿ,–

(i) ಅದನ್ನು ವಿರೋಧಿಸದಿದ್ದಲ್ಲಿ ಮತ್ತು ಅರ್ಜಿಯನ್ನು ರಿಜಿಸ್ಟ್ರಾರನು ನಿರಾಕರಿಸಿದರೆ ಅಥವಾ ಯಾವುದೇ ತಿದ್ದುಪಡಿಗಳಿಗೆ, ಮಾರ್ಪಾಟುಗಳಿಗೆ, ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟು ಅಂಗೀಕರಿಸಿದರೆ; ಅಥವಾ

(ii) ಅದನ್ನು ವಿರೋಧಿಸಿದಲ್ಲಿ ಮತ್ತು ರಿಜಿಸ್ಟ್ರಾರನು ಸಾರ್ವಜನಿಕ ಹಿತಾಸಕ್ತಿಯಿಂದ ತಾನು ಹಾಜರಾಗುವುದು ಅವಶ್ಯಕವೆಂದು ಮನಗಂಡರೆ

– ಹಾಜರಾಗಿ, ಅಹವಾಲನ್ನು ಹೇಳಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಹಾಜರಾಗುವಂತೆ ಮಂಡಲಿಯು ನಿರ್ದೇಶಿಸಿದರೆ, ರಿಜಿಸ್ಟ್ರಾರನು ಹಾಗೆ ಹಾಜರಾಗತಕ್ಕದ್ದು.

(2) ಅಪೀಲು ಮಂಡಲಿಯು ಅನ್ಯಥಾ ನಿರ್ದೇಶಿದ ಹೊರತು, ರಿಜಿಸ್ಟ್ರಾರನು, ಸ್ವತಃ ತಾನು ಹಾಜರಾಗುವ ಬದಲಿಗೆ, ವಿವಾದದಲ್ಲಿರುವ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಮುಂದಿರುವ ವ್ಯವಹರಣೆಗಳ ಅಥವಾ ಅವುಗಳ ಮೇಲೆ ಪರಿಣಾಮ ಬೀರುವಂತೆ ತಾನು ನೀಡಿದ ಯಾವುದೇ ತೀರ್ಮಾನದ ಆಧಾರಗಳ ಬಗ್ಗೆ ಅಥವಾ ಅಂತಹುವೇ ಸಂದರ್ಭಗಳಲ್ಲಿ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಿ ಪದ್ಧತಿಯ ಬಗ್ಗೆ ಅಥವಾ ವಿವಾದಾಂಶಗಳಿಗೆ ಸುಸಂಬದ್ಧವೆನಿಸುವ ಇತರ ವಿಷಯಗಳ ಬಗ್ಗೆ ಮತ್ತು ರಿಜಿಸ್ಟ್ರಾರನಾಗಿ ತನ್ನ ತಿಳಿವಳಿಕೆಯ ವ್ಯಾಪ್ತಿಯೊಳಗೆ, ತಾನು ಸೂಕ್ತವೆಂದು ಭಾವಿಸುವ ಅಂಥ ವಿವರಗಳನ್ನು ಒದಗಿಸುವ ಲಿಖಿತ ಹೇಳಿಕೆಯನ್ನು ತಾನು ಸಹಿಮಾಡಿ ಸಲ್ಲಿಸಬಹುದು ಮತ್ತು ಅಂಥ ಹೇಳಿಕೆಯು ವ್ಯವಹರಣೆಗಳಲ್ಲಿ ಸಾಕ್ಷ್ಯವಾಗತಕ್ಕದ್ದು.

**99. ಅಪೀಲು ಮಂಡಳಿಯ ಮುಂದಿರುವ ವ್ಯವಹರಣೆಗಳಲ್ಲಿ ರಿಜಿಸ್ಟ್ರಾರನ ವೆಚ್ಚಗಳು.–** ಅಪೀಲು ಮಂಡಲಿಯ ಮುಂದಿರುವ ಈ ಅಧಿನಿಯಮದ ಅಡಿಯಲ್ಲಿನ ಎಲ್ಲಾ ವ್ಯವಹರಣೆಗಳಲ್ಲಿ ರಿಜಿಸ್ಟ್ರಾರನ ವೆಚ್ಚಗಳು, ಮಂಡಲಿಯ ವಿವೇಚನೆಗೆ ಒಳಪಟ್ಟಿರತಕ್ಕದ್ದು, ಆದರೆ ಯಾವುವೇ ಪಕ್ಷಕಾರರ ವೆಚ್ಚಗಳನ್ನು ಸಂದಾಯ ಮಾಡುವಂತೆ ರಿಜಿಸ್ಟ್ರಾರನಿಗೆ ಆದೇಶ ಮಾಡತಕ್ಕದ್ದಲ್ಲ.

**100. ಇತ್ಯರ್ಥದಲ್ಲಿರುವ ವ್ಯವಹರಣೆಗಳನ್ನು ಅಪೀಲು ಮಂಡಲಿಗೆ ವರ್ಗಾಯಿಸುವುದು.–** ಯಾವುದೇ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ, ರಿಜಿಸ್ಟ್ರಾರನ ಯಾವುದೇ ಆದೇಶದ ಅಥವಾ ತೀರ್ಮಾನದ ವಿರುದ್ಧ ಸಲ್ಲಿಸಲಾದ ಎಲ್ಲಾ ಅಪೀಲುಗಳು ಮತ್ತು ರಿಜಿಸ್ಟರನ್ನು ಸರಿಪಡಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಪ್ರಕರಣಗಳನ್ನು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಿದ ದಿನಾಂಕದಿಂದ* ಅಪೀಲು ಮಂಡಲಿಗೆ ವರ್ಗಾಯಿಸತಕ್ಕದ್ದು ಮತ್ತು ಅಪೀಲು ಮಂಡಲಿಯು ವಿಷಯವನ್ನು ಹೊಸದಾಗಿಯಾಗಲಿ ಅಥವಾ ಅದನ್ನು ಹಾಗೆ ವರ್ಗಾಯಿಸಲಾದ ಹಂತದಿಂದಾಗಲಿ ಮುಂದುವರಿಸಬಹುದು.

## ಅಧ್ಯಾಯ XII
## ಅಪರಾಧಗಳು, ದಂಡಗಳು ಮತ್ತು ಕಾರ್ಯವಿಧಾನ

**101. ವ್ಯಾಪಾರ ಗುರುತುಗಳನ್ನು ಮತ್ತು ವ್ಯಾಪಾರ ವಿವರಣೆಗಳನ್ನು ಅನ್ವಯಿಸುವುದರ ಅರ್ಥ.–** (1) ಒಬ್ಬ ವ್ಯಕ್ತಿಯು, ಸರಕುಗಳಿಗೆ ಅಥವಾ ಸೇವೆಗಳಿಗೆ ಒಂದು ವ್ಯಾಪಾರ ಚಿಹ್ನೆಯನ್ನು ಅಥವಾ ಚಿಹ್ನೆಯನ್ನು ಅಥವಾ ವ್ಯಾಪಾರ ವಿವರಣೆಯನ್ನು, ಈ ಮುಂದಿನ ಸಂದರ್ಭಗಳಲ್ಲಿ ಅನ್ವಯಿಸಿರುವುದಾಗಿ ಭಾವಿಸತಕ್ಕದ್ದು,–

(ಎ) ಅವನು ಸರಕುಗಳಿಗಾಗಿಯೇ ಅದನ್ನು ಅನ್ವಯಿಸಿದಾಗ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅದನ್ನು ಬಳಸಿದಾಗ; ಅಥವಾ

* 06.10.2003 ರಿಂದ ಜಾರಿಗೆ ಬಂದಿದೆ. ನೋಡಿ ಎಸ್.ಒ. 1150 (ಇ), ದಿನಾಂಕ 01.10.2003.

(ಬಿ) ಯಾವ ಪ್ಯಾಕೇಜಿನಲ್ಲಿ ಅಥವಾ ಅದರೊಂದಿಗೆ ಸರಕುಗಳನ್ನು ಮಾರಲಾಗುವುದೋ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಲಾಗುವುದೋ ಅಥವಾ ಅದು ಮಾರಾಟಕ್ಕಾಗಿ ಅಥವಾ ವ್ಯಾಪಾರ ಅಥವಾ ತಯಾರಿಕೆಯ ಯಾವುದೇ ಉದ್ದೇಶಕ್ಕಾಗಿ ಸ್ವಾಧೀನದಲ್ಲಿ ಇದ್ದಿತೋ ಆ ಯಾವುದೇ ಪ್ಯಾಕೇಜಿಗೆ ಅವನು ಅದನ್ನು ಅನ್ವಯಿಸಿದಾಗ; ಅಥವಾ

(ಸಿ) ಮಾರಲಾಗುವ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಲಾಗುವ ಅಥವಾ ಮಾರಾಟಕ್ಕಾಗಿ ಅಥವಾ ವ್ಯಾಪಾರ ಅಥವಾ ತಯಾರಿಕೆಯ ಯಾವುದೇ ಉದ್ದೇಶಕ್ಕಾಗಿ ಸ್ವಾಧೀನದಲ್ಲಿ ಇದ್ದ ಯಾವುದೇ ಸರಕುಗಳನ್ನು, ಒಂದು ವ್ಯಾಪಾರ ಗುರುತನ್ನು ಅಥವಾ ಗುರುತನ್ನು ಅಥವಾ ವ್ಯಾಪಾರ ವಿವರಣೆಯನ್ನು ಅನ್ವಯಿಸಿರುವ ಯಾವುದೇ ಪ್ಯಾಕೇಜಿನಲ್ಲಿ ಅಥವಾ ಅದರೊಂದಿಗೆ ಅಥವಾ ಇತರ ವಸ್ತುವಿನಲ್ಲಿ ಅಥವಾ ಅದರೊಂದಿಗೆ ಇರಿಸಿದಾಗ, ಒಳಗಿರಿಸಿದಾಗ ಅಥವಾ ಜೊತೆಗಿರಿಸಿದಾಗ; ಅಥವಾ

(ಡಿ) ಒಂದು ವ್ಯಾಪಾರಚಿಹ್ನೆಯನ್ನು ಅಥವಾ ಚಿಹ್ನೆಯನ್ನು ಅಥವಾ ವ್ಯಾಪಾರ ವಿವರಣೆಯನ್ನು ಯಾವುದೇ ರೀತಿಯಲ್ಲಿ ಬಳಸುವಲ್ಲಿ, ಯಾವ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಆ ವ್ಯಾಪಾರಚಿಹ್ನೆಯನ್ನು ಅಥವಾ ಚಿಹ್ನೆಯನ್ನು ಅಥವಾ ವ್ಯಾಪಾರ ವಿವರಣೆಯನ್ನು ಬಳಸಲಾಗಿದೆಯೋ ಆ ವ್ಯಾಪಾರ ಚಿಹ್ನೆಯ ಅಥವಾ ಚಿಹ್ನೆಯ ಅಥವಾ ವ್ಯಾಪಾರ ವಿವರಣೆಯ ಮೂಲಕ ಹೆಸರಿಸಲಾಗಿದೆ ಅಥವಾ ವಿವರಿಸಲಾಗಿದೆ ಎಂಬ ನಂಬಿಕೆಗೆ ಯುಕ್ತವಾಗಿ ಎಡೆಕೊಡುವಂತೆ ಬಳಸಿದಾಗ; ಅಥವಾ

(ಇ) ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ, ಒಂದು ವ್ಯಾಪಾರ ಚಿಹ್ನೆಯನ್ನು ಅಥವಾ ವ್ಯಾಪಾರ ವಿವರಣೆಯನ್ನು – ಯಾವುದೇ ಚಿಹ್ನೆಯಲ್ಲಿ, ಜಾಹೀರಾತಿನಲ್ಲಿ, ಖರೀದಿ ಪಟ್ಟಿಯಲ್ಲಿ, ಸೂಚಿಪಟ್ಟಿಯಲ್ಲಿ, ವಾಣಿಜ್ಯಪತ್ರದಲ್ಲಿ, ವಾಣಿಜ್ಯ ಕಾಗದಪತ್ರದಲ್ಲಿ, ಬೆಲೆ ಪಟ್ಟಿಯಲ್ಲಿ ಅಥವಾ ಇತರ ವಾಣಿಜ್ಯ ದಸ್ತಾವೇಜಿನಲ್ಲಿ ಮತ್ತು ಹಾಗೆ ಬಳಸಿದ ವ್ಯಾಪಾರ ಚಿಹ್ನೆಗೆ ಅಥವಾ ವ್ಯಾಪಾರ ವಿವರಣೆಗೆ ಸಂಬಂಧಿಸಿ ಮಾಡಿದ ಕೋರಿಕೆ ಅಥವಾ ಆದೇಶಕ್ಕನುಸಾರವಾಗಿ ವ್ಯಕ್ತಿಗೆ ಒಪ್ಪಿಸಿದ ಸರಕುಗಳಿಗೆ ಅಥವಾ ಸಲ್ಲಿಸಿದ ಸೇವೆಗಳಿಗೆ ಬಳಸಿದಾಗ.

(2) ಒಂದು ವ್ಯಾಪಾರಚಿಹ್ನೆಯನ್ನು ಅಥವಾ ಚಿಹ್ನೆಯನ್ನು ಅಥವಾ ವ್ಯಾಪಾರ ವಿವರಣೆಯನ್ನು ಸರಕುಗಳು ಅಥವಾ ಯಾವುದೇ ಪ್ಯಾಕೇಜುಗಳಿಗೆ ಅಥವಾ ಇತರ ವಸ್ತುವನ್ನು ಹೆಣೆದಿರಲಿ, ಮುದ್ರೆಯೊತ್ತಿರಲಿ, ಅಥವಾ ಬೇರೆ ರೀತಿಯಲ್ಲಿ ರಚಿಸಿರಲಿ, ಅಥವಾ ಸೇರಿಸಿರಲಿ ಅಥವಾ ಅಂಟಿಸಿರಲಿ, ಅದನ್ನು ಸರಕುಗಳಿಗೆ ಅನ್ವಯಿಸಿರುವುದಾಗಿ ಭಾವಿಸತಕ್ಕದ್ದು.

**102. ವ್ಯಾಪಾರ ಚಿಹ್ನೆಗಳನ್ನು ಸುಳ್ಳಾಗಿ ಹಾಕುವುದು ಮತ್ತು ಮೋಸದಿಂದ ಬಳಸುವುದು.–** (1) ಒಬ್ಬ ವ್ಯಕ್ತಿಯು,–

(ಎ) ವ್ಯಾಪಾರ ಗುರುತಿನ ಮಾಲೀಕನ ಒಪ್ಪಿಗೆಯಿಲ್ಲದೆ ಆ ವ್ಯಾಪಾರ ಚಿಹ್ನೆಯನ್ನು ಅಥವಾ ಮೋಸಹೋಗುವಷ್ಟು ಸಮರೂಪವಾಗಿರುವ ಒಂದು ವ್ಯಾಪಾರಚಿಹ್ನೆಯನ್ನು ಮಾಡಿದಾಗ; ಅಥವಾ

(ಬಿ) ವ್ಯತ್ಯಸ್ತಗೊಳಿಸುವ ಅಥವಾ ಸೇರಿಸುವ ಅಥವಾ ಅಳಿಸಿ ಹಾಕುವ ಮೂಲಕವಾಗಲಿ ಅಥವಾ ಇತರೇ ರೀತಿಯಲ್ಲಾಗಲಿ, ಯಾವುದೇ ಅಪ್ಪಟ ವ್ಯಾಪಾರಚಿಹ್ನೆಯನ್ನು ಸುಳ್ಳಾಗಿ ಹಾಕಿದಾಗ

– ಅವನು ಒಂದು ವ್ಯಾಪಾರಚಿಹ್ನೆಯನ್ನು ಸುಳ್ಳಾಗಿ ಹಾಕಿರುವುದಾಗಿ ಭಾವಿಸತಕ್ಕದ್ದು.

(2) ಒಬ್ಬ ವ್ಯಕ್ತಿಯು, ವ್ಯಾಪಾರಚಿಹ್ನೆಯ ಮಾಲೀಕನ ಅನುಮತಿಯಿಲ್ಲದೆ,–

(ಎ) ಅಂತಹ ವ್ಯಾಪಾರಚಿಹ್ನೆಯನ್ನು ಅಥವಾ ಮೋಸ ಹೋಗುವಷ್ಟು ಸಮರೂಪವಾಗಿರುವ ಒಂದು ಚಿಹ್ನೆಯನ್ನು ಸರಕುಗಳಿಗೆ ಅಥವಾ ಸೇವೆಗಳಿಗೆ ಅಥವಾ ಸರಕುಗಳನ್ನು ಒಳಗೊಂಡಿರುವ ಯಾವುದೇ ಪ್ಯಾಕಿಗೆ ಬಳಸಿದಾಗ;

(ಬಿ) ವ್ಯಾಪಾರಚಿಹ್ನೆಯ ಮಾಲೀಕನ ಅಪ್ಪಟ ಸರಕುಗಳನ್ನು ಹೊರತುಪಡಿಸಿ, ಯಾವುದೇ ಸರಕುಗಳನ್ನು ಪ್ಯಾಕೇಜ್ ಮಾಡುವ, ಭರ್ತಿ ಮಾಡುವ ಅಥವಾ ಸುತ್ತಿಡುವ ಉದ್ದೇಶಕ್ಕಾಗಿ, ಅಂತಹ ಮಾಲೀಕನ ವ್ಯಾಪಾರಚಿಹ್ನೆಗೆ ತದ್ರೂಪವಾಗಿರುವ ಅಥವಾ ಮೋಸ ಹೋಗುವಷ್ಟು ಸಮರೂಪವಾಗಿರುವ ಒಂದು ಚಿಹ್ನೆಯನ್ನು ಹೊಂದಿರುವ ಯಾವುದೇ ಪ್ಯಾಕೇಜನ್ನು ಬಳಸಿದಾಗ

– ಅವನು ವ್ಯಾಪಾರಚಿಹ್ನೆಯನ್ನು ಸರಕುಗಳಿಗೆ ಅಥವಾ ಸೇವೆಗಳಿಗೆ ಮೋಸದಿಂದ ಬಳಸಿರುವುದಾಗಿ ಭಾವಿಸತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ನಮೂದಿಸಿದಂತೆ ಯಾವುದೇ ವ್ಯಾಪಾರಚಿಹ್ನೆಯನ್ನು ಸುಳ್ಳಾಗಿ ಹಾಕಿದ್ದರೆ ಅಥವಾ (2)ನೇ ಉಪಪ್ರಕರಣದಲ್ಲಿ ನಮೂದಿಸಿದಂತೆ ಮೋಸದಿಂದ ಬಳಸಿದ್ದರೆ, ಅದನ್ನು ಈ ಅಧಿನಿಯಮದಲ್ಲಿ ಸುಳ್ಳು ವ್ಯಾಪಾರಚಿಹ್ನೆಯೆಂದು ಉಲ್ಲೇಖಿಸಲಾಗಿದೆ.

(4) ಸರಕುಗಳಿಗೆ ಅಥವಾ ಸೇವೆಗಳಿಗೆ ಒಂದು ವ್ಯಾಪಾರ ಚಿಹ್ನೆಯನ್ನು ಸುಳ್ಳಾಗಿ ಹಾಕಿರುವ ಅಥವಾ ಒಂದು ವ್ಯಾಪಾರ ಚಿಹ್ನೆಯನ್ನು ಮೋಸದಿಂದ ಬಳಸಿರುವ ಸಂಬಂಧದ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ, ಮಾಲೀಕನ ಒಪ್ಪಿಗೆಯನ್ನು ರುಜುವಾತುಪಡಿಸುವ ಹೊಣೆಯು ಆಪಾದಿತನ ಮೇಲಿರತಕ್ಕದ್ದು.

**103. ಸುಳ್ಳು ವ್ಯಾಪಾರಚಿಹ್ನೆಗಳು, ವ್ಯಾಪಾರ ವಿವರಣೆಗಳು, ಇತ್ಯಾದಿಗಳನ್ನು ಬಳಸುವುದಕ್ಕೆ ದಂಡನೆ.–** ಒಬ್ಬ ವ್ಯಕ್ತಿಯು,–

(ಎ) ಯಾವುದೇ ವ್ಯಾಪಾರಚಿಹ್ನೆಯನ್ನು ಸುಳ್ಳಾಗಿ ಹಾಕಿದರೆ; ಅಥವಾ

(ಬಿ) ಸರಕುಗಳಿಗೆ ಅಥವಾ ಸೇವೆಗಳಿಗೆ ಯಾವುದೇ ವ್ಯಾಪಾರಚಿಹ್ನೆಯನ್ನು ಮೋಸದಿಂದ ಬಳಸಿದರೆ; ಅಥವಾ

(ಸಿ) ಒಂದು ವ್ಯಾಪಾರಚಿಹ್ನೆಯನ್ನು ಸುಳ್ಳಾಗಿ ಹಾಕುವ ಅಥವಾ ತಪ್ಪಾಗಿ ಬಳಸುವ ಉದ್ದೇಶಕ್ಕಾಗಿ ಯಾವುದೇ ಅಚ್ಚು, ಪಡಿಯಚ್ಚು, ಯಂತ್ರ, ಪ್ಲೇಟ್ ಅಥವಾ ಇತರ ಸಾಧನವನ್ನು ವಿಲೆ ಮಾಡಿದರೆ ಅಥವಾ ತನ್ನ ಸ್ವಾಧೀನದಲ್ಲಿ ಹೊಂದಿದರೆ; ಅಥವಾ

(ಡಿ) ಯಾವುದೇ ಸುಳ್ಳು ವ್ಯಾಪಾರ ವಿವರಣೆಯನ್ನು ಸರಕುಗಳಿಗೆ ಅಥವಾ ಸೇವೆಗಳಿಗೆ ಬಳಸಿದರೆ; ಅಥವಾ

(ಇ) 139ನೇ ಪ್ರಕರಣದ ಅಡಿಯಲ್ಲಿ ಯಾವುವೇ ಸರಕುಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಮಾಡಲಾದ ಅಥವಾ ಉತ್ಪಾದಿಸಲಾದ ದೇಶದ ಅಥವಾ ಸ್ಥಳದ ಸೂಚನೆಯನ್ನು ಅಥವಾ ಯಾವ ತಯಾರಕ ಅಥವಾ ವ್ಯಕ್ತಿಗಾಗಿ ಸರಕುಗಳನ್ನು ತಯಾರಿಸಲಾಗಿದೆಯೋ ಆ ವ್ಯಕ್ತಿಯ ಹೆಸರನ್ನು ಮತ್ತು ವಿಳಾಸವನ್ನು ಬಳಸಬೇಕೆಂದು ಅಗತ್ಯಪಡಿಸಲಾಗಿದೆಯೋ ಅಂತಹ ದೇಶ, ಸ್ಥಳ, ಹೆಸರು ಅಥವಾ ವಿಳಾಸವನ್ನು ತಪ್ಪಾಗಿ ಸೂಚಿಸಿದರೆ; ಅಥವಾ

(ಎಫ್) 139ನೇ ಪ್ರಕರಣದ ಅಡಿಯಲ್ಲಿ ಬಳಸಬೇಕೆಂದು ಅಗತ್ಯಪಡಿಸಿದ ಯಾವುದೇ ಸರಕುಗಳಿಗೆ ಬಳಸುವ ಮೂಲಕ್ಕೆ ಸಂಬಂಧಿಸಿದ ಸೂಚನೆಯನ್ನು ಕೆಡಿಸಿದರೆ, ವ್ಯತ್ಯಸ್ತಗೊಳಿಸಿದರೆ ಅಥವಾ ಅಳಿಸಿಹಾಕಿದರೆ; ಅಥವಾ

(ಜಿ) ಈ ಪ್ರಕರಣದಲ್ಲಿ ಮೇಲೆ ತಿಳಿಸಿದ ಯಾವುವೇ ವಿಷಯಗಳ ಪೈಕಿ ಯಾವುದೇ ವಿಷಯವನ್ನು ಮಾಡುವುದಕ್ಕೆ ಕಾರಣನಾದರೆ

– ಮೋಸ ಮಾಡುವ ಉದ್ದೇಶವಿಲ್ಲದೆ ತಾನು ಕಾರ್ಯನಿರ್ವಹಿಸಿದ್ದೇನೆಂದು ಅವನು ರುಜುವಾತುಪಡಿಸಿದ ಹೊರತು, ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ, ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದಲೂ ಮತ್ತು ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ, ಆದರೆ ಎರಡು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯವು, ತೀರ್ಪಿನಲ್ಲಿ ನಮೂದಿಸುವಂತಹ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ, ಆರು ತಿಂಗಳುಗಳಿಗಿಂತ ಕಡಿಮೆ ಅವಧಿಯ ಕಾರಾವಾಸ ಶಿಕ್ಷೆಯನ್ನು ಅಥವಾ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

**104. ಸುಳ್ಳು ವ್ಯಾಪಾರಚಿಹ್ನೆಯನ್ನು ಅಥವಾ ಸುಳ್ಳು ವ್ಯಾಪಾರವಿವರಣೆಯನ್ನು ಬಳಸಿ ಸರಕುಗಳನ್ನು ಮಾರುವುದಕ್ಕೆ ಅಥವಾ ಸೇವೆಗಳನ್ನು ಒದಗಿಸುವುದಕ್ಕೆ ದಂಡನೆ.–** ಒಬ್ಬ ವ್ಯಕ್ತಿಯು, ಸರಕುಗಳನ್ನು ಅಥವಾ ವಸ್ತುಗಳನ್ನು ಮಾರುವಲ್ಲಿ, ಬಾಡಿಗೆಗೆ ನೀಡುವಲ್ಲಿ ಅಥವಾ ಮಾರಾಟಕ್ಕೆ ಇಡುವಲ್ಲಿ ಅಥವಾ ಬಾಡಿಗೆಗೆ ತೆಗೆದುಕೊಳ್ಳುವಲ್ಲಿ ಅಥವಾ ಮಾರಾಟ ಮಾಡುವುದಕ್ಕಾಗಿ ತನ್ನ ಸ್ವಾಧೀನದಲ್ಲಿ ಹೊಂದಿರುವಲ್ಲಿ ಅಥವಾ ಸೇವೆಗಳನ್ನು ಒದಗಿಸುವಲ್ಲಿ ಅಥವಾ ಬಾಡಿಗೆಗೆ ನೀಡುವಲ್ಲಿ ಯಾವುದೇ ಸುಳ್ಳು ವ್ಯಾಪಾರಚಿಹ್ನೆಯನ್ನು ಅಥವಾ ಸುಳ್ಳು ವ್ಯಾಪಾರವಿವರಣೆಯನ್ನು ಬಳಸಿದ್ದರೆ ಅಥವಾ ಅವುಗಳನ್ನು ಮಾಡಿದ ಅಥವಾ ಉತ್ಪಾದಿಸಿದ ದೇಶದ ಅಥವಾ ಸ್ಥಳದ ಸೂಚನೆಯನ್ನು ಅಥವಾ ಸಂದರ್ಭಾನುಸಾರ ತಯಾರಕರ ಅಥವಾ ಯಾವ ವ್ಯಕ್ತಿಗಾಗಿ ಸರಕುಗಳನ್ನು ತಯಾರಿಸಲಾಗಿದೆಯೋ ಅಥವಾ ಸೇವೆಗಳನ್ನು ಒದಗಿಸಲಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಬಳಸಬೇಕೆಂದು 139ನೆಯ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾಗಿದ್ದು, ಹಾಗೆ ಅಗತ್ಯಪಡಿಸಲಾದ ಸೂಚನೆಗಳಿಲ್ಲದಿದ್ದರೆ,–

(ಎ) ಈ ಪ್ರಕರಣಕ್ಕೆ ವಿರೋಧವಾದ ಅಪರಾಧವನ್ನು ಮಾಡುವುದರ ವಿರುದ್ಧ ಎಲ್ಲಾ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದು, ಆಪಾದಿಸಲಾದ ಅಪರಾಧ ಘಟಿಸಿದ ಸಂದರ್ಭದಲ್ಲಿ ಆ ವ್ಯಾಪಾರಚಿಹ್ನೆಯ ಅಥವಾ ವ್ಯಾಪಾರ ವಿವರಣೆಯ ನೈಜತೆಯ ಬಗ್ಗೆ ಅಥವಾ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಪರಾಧವು ಘಟಿಸಿದ ಬಗ್ಗೆ ಸಂಶಯಪಡಲು ಯಾವುದೇ ಕಾರಣಗಳಿಲ್ಲವೆಂದು;

(ಬಿ) ಪ್ರಾಸಿಕ್ಯೂಟರ್‌ನ ಬೇಡಿಕೆಯ ಮೇರೆಗೆ ಅಥವಾ ಪರವಾಗಿ, ಅವನು ಅಂಥ ಸರಕುಗಳನ್ನು ಅಥವಾ ವಸ್ತುಗಳನ್ನು ಅಥವಾ ಸೇವೆಗಳನ್ನು ಯಾವ ವ್ಯಕ್ತಿಯಿಂದ ಪಡೆದಿದ್ದನೋ ಆ ವ್ಯಕ್ತಿಗೆ ಸಂಬಂಧಿಸಿದಂತೆ ತನ್ನಲ್ಲಿರುವ ಎಲ್ಲಾ ಮಾಹಿತಿಯನ್ನು ನೀಡಿದ್ದೇನೆಂದು; ಅಥವಾ

(ಸಿ) ಅವನು ಅನ್ಯಥಾ ನಿರ್ದೋಷಿಯಾಗಿ ಕಾರ್ಯನಿರ್ವಹಿಸಿದ್ದೇನೆಂದು

– ಅವನು ರುಜುವಾತು ಪಡಿಸಿದ ಹೊರತು, ಆರು ತಿಂಗಳುಗಳಿಗಿಂತ ಕಡಿಮೆ ಇಲ್ಲದ ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದಲೂ ಮತ್ತು ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಆದರೆ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯವು, ತೀರ್ಪಿನಲ್ಲಿ ನಮೂದಿಸುವಂತಹ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ, ಆರು ತಿಂಗಳುಗಳಿಗಿಂತ ಕಡಿಮೆ ಅವಧಿಯ ಕಾರಾವಾಸ ಶಿಕ್ಷೆಯನ್ನು ಅಥವಾ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

**105. ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯಕ್ಕಾಗಿ ಹೆಚ್ಚಿಸಲಾದ ದಂಡನೆ.–** 103ನೆಯ ಪ್ರಕರಣದ ಅಥವಾ 104ನೆಯ ಪ್ರಕರಣದ ಅಡಿಯಲ್ಲಿ ಅಪರಾಧಕ್ಕಾಗಿ ಈಗಾಗಲೆ ಅಪರಾಧಿಯೆಂದು ನಿರ್ಣೀತನಾದ ಯಾರೇ ಆಗಲಿ, ಯಾವುದೇ ಅಂತಹ ಅಪರಾಧವನ್ನು ಮತ್ತೆ ಮಾಡಿ ಅಪರಾಧಿಯೆಂದು ನಿರ್ಣೀತನಾದಲ್ಲಿ, ಎರಡನೆಯ ಮತ್ತು ಪ್ರತಿಯೊಂದು ತರುವಾಯದ ಅಪರಾಧಕ್ಕಾಗಿ, ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದಲೂ ಮತ್ತು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಆದರೆ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯವು, ತೀರ್ಪಿನಲ್ಲಿ ನಮೂದಿಸುವಂತಹ ಸಾಕಷ್ಟು ಮತ್ತು ವಿಶೇಷ ಕಾರಣಕ್ಕಾಗಿ, ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಕಾರಾವಾಸ ಶಿಕ್ಷೆಯನ್ನು ಅಥವಾ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು:

ಮತ್ತೂ ಪರಂತು, ಈ ಪ್ರಕರಣದ ಉದ್ದೇಶಗಳಿಗಾಗಿ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಲಾದ ಯಾವುದೇ ಅಪರಾಧ ನಿರ್ಣಯಕ್ಕೆ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

**106. 81ನೇ ಪ್ರಕರಣಕ್ಕೆ ವಿರುದ್ಧವಾಗಿ ಜವಳಿ ಸರಕುಗಳು, ಇತ್ಯಾದಿಗಳನ್ನು ಸ್ಥಳಾಂತರಿಸುವುದಕ್ಕೆ ದಂಡನೆ.–** ಒಬ್ಬ ವ್ಯಕ್ತಿಯು, 81ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಜವಳಿ ಸರಕುಗಳ ಅಥವಾ ಹತ್ತಿನೂಲನ್ನು ಅಥವಾ ಹತ್ತಿದಾರವನ್ನು ಆವರಣಗಳಿಂದ ಮಾರಾಟಕ್ಕೆ ಸ್ಥಳಾಂತರಿಸಿದರೆ ಅಥವಾ ಸ್ಥಳಾಂತರಿಸಲು ಯತ್ನಿಸಿದರೆ ಅಥವಾ ಸ್ಥಳಾಂತರಿಸುವುದಕ್ಕೆ ಕಾರಣನಾದರೆ ಅಥವಾ ಪ್ರಯತ್ನಪಟ್ಟರೆ ಅಥವಾ ಆ ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಗುರುತು ಮಾಡದೆ ವ್ಯಾಪಾರ ಮಾಡಿದರೆ ಅಥವಾ ತಯಾರು ಮಾಡಿದರೆ ಅಥವಾ ಮಾರಾಟಕ್ಕೆ ಇಟ್ಟರೆ ಅಥವಾ ಮಾರಾಟಕ್ಕೆ ಅಥವಾ ಯಾವುದೇ ಉದ್ದೇಶಕ್ಕಾಗಿ ತನ್ನ ಸ್ವಾಧೀನದಲ್ಲಿಟ್ಟುಕೊಂಡರೆ, ಅಂತಹ ಪ್ರತಿಯೊಂದು ಜವಳಿಯನ್ನು ಮತ್ತು ಅಂತಹ ಪ್ರತಿಯೊಂದು ನೂಲಿನ ಪೆಂಡಿಯನ್ನು ಮತ್ತು ಎಲ್ಲಾ ಅಂತಹ ದಾರವನ್ನು ಮತ್ತು ಅದನ್ನು ಪ್ಯಾಕೇಜು ಮಾಡುವುದಕ್ಕೆ ಬಳಸಿದ ಪ್ರತಿಯೊಂದನ್ನೂ ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ಅಂತಹ ವ್ಯಕ್ತಿಯು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**107. ಒಂದು ವ್ಯಾಪಾರ ಚಿಹ್ನೆಯನ್ನು ನೋಂದಾಯಿಸಲಾಗಿದೆಯೆಂದು ಸುಳ್ಳಾಗಿ ನಿರೂಪಿಸಿದ್ದಕ್ಕೆ ದಂಡನೆ.–** (1) ಯಾರೇ ವ್ಯಕ್ತಿಯು,–

(ಎ) ನೋಂದಾಯಿತ ವ್ಯಾಪಾರಚಿಹ್ನೆಯಾಗಿಲ್ಲದಿರುವ, ಒಂದು ಚಿಹ್ನೆಗೆ ಸಂಬಂಧಿಸಿದಂತೆ, ಅದು ನೋಂದಾಯಿತ ವ್ಯಾಪಾರಚಿಹ್ನೆಯೆಂದು ತಾತ್ಪರ್ಯವಾಗಿದ್ದರೆ; ಅಥವಾ

(ಬಿ) ನೋಂದಾಯಿತ ವ್ಯಾಪಾರಚಿಹ್ನೆಯ ಒಂದು ಭಾಗವಾಗಿರುವ ಸಂಬಂಧದಲ್ಲಿ, ವ್ಯಾಪಾರಚಿಹ್ನೆಯೆಂದು ಅದರ ಭಾಗವನ್ನು ಪ್ರತ್ಯೇಕವಾಗಿ ನೋಂದಾಯಿಸಿಲ್ಲದಿದ್ದು, ಪ್ರತ್ಯೇಕವಾಗಿ ನೋಂದಾಯಿಸಿದ ವ್ಯಾಪಾರಚಿಹ್ನೆಯಾಗಿ ತಾತ್ಪರ್ಯವಾಗಿದ್ದರೆ; ಅಥವಾ

(ಸಿ) ಯಾವುವೇ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಅವನ್ನು ವಾಸ್ತವವಾಗಿ ನೋಂದಾಯಿಸಿಲ್ಲದ ಸಂದರ್ಭದಲ್ಲಿ ಆ ನೋಂದಾಯಿತ ವ್ಯಾಪಾರಚಿಹ್ನೆಯನ್ನು ನೋಂದಾಯಿಸಲಾಗಿದೆಯೆಂದು ತಾತ್ಪರ್ಯವಾಗಿದ್ದರೆ; ಅಥವಾ

(ಡಿ) ಒಂದು ವ್ಯಾಪಾರ ಚಿಹ್ನೆಯ ನೋಂದಣಿಯು, ರಿಜಿಸ್ಟರಿನಲ್ಲಿ ನಮೂದಿಸಿದ ಪರಿಮಿತಿಗೆ ಸಂಬಂಧಿಸಿದಂತೆ, ಯಾವುದೇ ಸಂದರ್ಭದಲ್ಲಿ ಅದರ ಬಳಕೆಗೆ ಅನನ್ಯ ಹಕ್ಕನ್ನು ನೀಡಿದಾಗ, ನೋಂದಣಿಯು ವಾಸ್ತವದಲ್ಲಿ ಆ ಹಕ್ಕನ್ನು ನೀಡಿಲ್ಲದಿದ್ದರೆ

– ಯಾವುದೇ ನಿರೂಪಣೆಯನ್ನು ಮಾಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು (1)ನೆಯ ಉಪಪ್ರಕರಣದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ, ಭಾರತದಲ್ಲಿ ವ್ಯಾಪಾರಚಿಹ್ನೆಗೆ ಸಂಬಂಧಿಸಿದಂತೆ, ನೋಂದಣಿಯು ವ್ಯಕ್ತವಾಗಿಯಾಗಲಿ ಅಥವಾ ಇಂಗಿತವಾಗಿಯಾಗಲಿ ಉಲ್ಲೇಖಿಸಿದ "ನೋಂದಾಯಿತ" ಪದವು, ಅಥವಾ ಯಾವುದೇ ಇತರೆ ಪದಾವಳಿ, ಸಂಕೇತ ಅಥವಾ ಚಿಹ್ನೆಯ ಬಳಕೆಯನ್ನು ಈ ಮುಂದಿನ ಸಂದರ್ಭಗಳ ಹೊರತು ರಿಜಿಸ್ಟರಿನಲ್ಲಿ ನೋಂದಣಿಗೆ ಒಂದು ಉಲ್ಲೇಖವೆಂದು ಭಾವಿಸತಕ್ಕದ್ದು,–

(ಎ) ಆ ಪದವನ್ನು ಅಥವಾ ಇತರೆ ಪದಾವಳಿಯನ್ನು, ಸಂಕೇತವನ್ನು ಅಥವಾ ಚಿಹ್ನೆಯನ್ನು ಕೊನೇಪಕ್ಷ ಇತರ ಪದಗಳ ನೇರ ಸಹಯೋಗಕ್ಕೆ, ಆ ಪದವನ್ನು ಅಥವಾ ಇತರ ಪದಾವಳಿಯನ್ನು, ಸಂಕೇತವನ್ನು ಅಥವಾ ಚಿಹ್ನೆಯನ್ನು ದೊಡ್ಡ ಪ್ರಮಾಣದಲ್ಲಿ ನಿರೂಪಿಸಿದ ಸ್ವರೂಪದಲ್ಲೇ ಬಳಸಿದಲ್ಲಿ ಮತ್ತು ಉಲ್ಲೇಖಿಸಿದ ನೋಂದಣಿಯು ವಾಸ್ತವವಾಗಿ ಜಾರಿಯಲ್ಲಿರುವ ಕಾನೂನಿನ ಅಡಿಯಲ್ಲಿ ಭಾರತದ ಹೊರಗಿರುವ ದೇಶವಾಗಿರುವ ಆ ದೇಶದ ಕಾನೂನಿನ ಅಡಿಯಲ್ಲಿ ವ್ಯಾಪಾರಚಿಹ್ನೆಯ ನೋಂದಣಿಯ ಉಲ್ಲೇಖವನ್ನು ಸೂಚಿಸುವುದು; ಅಥವಾ

(ಬಿ) ಆ ಇತರ ಪದಾವಳಿ, ಸಂಕೇತ ಅಥವಾ ಚಿಹ್ನೆಯನ್ನು ತಾನಾಗಿಯೇ ಸೂಚಿಸುವಂತೆ ಆ ಉಲ್ಲೇಖವು (ಎ) ಖಂಡದಲ್ಲಿ ನಮೂದಿಸಲಾದಂತಹ ನೋಂದಣಿಯನ್ನು ಸೂಚಿಸುವುದು; ಅಥವಾ

(ಸಿ) ಭಾರತದ ಹೊರಗೆ ಆ ದೇಶದ ಕಾನೂನು ಅಡಿಯಲ್ಲಿ ಒಂದು ಚಿಹ್ನೆಯನ್ನು ವ್ಯಾಪಾರ ಚಿಹ್ನೆಯೆಂದು ನೋಂದಾಯಿಸಿದ ಸಂದರ್ಭದಲ್ಲಿ ಮತ್ತು ಆ ದೇಶಕ್ಕೆ ಮಾತ್ರ ರಫ್ತು ಮಾಡಲಾಗುವ ಸರಕುಗಳ ಸಂಬಂಧದಲ್ಲಿ ಅಥವಾ ಆ ದೇಶದಲ್ಲಿ ಅದನ್ನು ಬಳಸುವುದು.

**108. ಒಂದು ವ್ಯವಹಾರ ಸ್ಥಳವು ವ್ಯಾಪಾರಚಿಹ್ನೆಗಳ ಕಚೇರಿಗೆ ಸಂಬಂಧಿಸಿದ್ದದೆಂದು ಅನುಚಿತವಾಗಿ ವಿವರಿಸಿರುವುದಕ್ಕೆ ದಂಡನೆ.–** ಒಬ್ಬ ವ್ಯಕ್ತಿಯು, ತನ್ನ ವ್ಯವಹಾರದ ಸ್ಥಳದ ಮೇಲೆ ಅಥವಾ ತಾನು ನೀಡಿದ ಯಾವುದೇ ದಸ್ತಾವೇಜಿನ ಮೇಲೆ ಅಥವಾ ಅನ್ಯಥಾ ಇತರೆ ರೀತಿಯಲ್ಲಿ ಪದಗಳನ್ನು ಬಳಸಿ, ಅವನ ವ್ಯವಹಾರದ ಸ್ಥಳವು, ವ್ಯಾಪಾರಚಿಹ್ನೆಗಳ ಕಚೇರಿಯೆಂದು ಅಥವಾ ಅದಕ್ಕೆ ಅಧಿಕೃತವಾಗಿ ಸಂಬಂಧಪಟ್ಟಿದೆಯೆಂದು ಯುಕ್ತ ನಂಬಿಕೆಯನ್ನುಂಟು ಮಾಡಿದಾಗ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು.

**109. ರಿಜಿಸ್ಟರಿನಲ್ಲಿ ಇರುವ ಸುಳ್ಳು ನಮೂದನೆಗಳಿಗಾಗಿ ದಂಡನೆ.–** ಯಾರೇ ವ್ಯಕ್ತಿಯು, ರಿಜಿಸ್ಟರಿನಲ್ಲಿ ಸುಳ್ಳು ನಮೂದನೆಯನ್ನು ಮಾಡಿದರೆ ಅಥವಾ ಮಾಡುವುದಕ್ಕೆ ಕಾರಣವಾದರೆ ಅಥವಾ ರಿಜಿಸ್ಟರಿನಲ್ಲಿ ನಮೂದನೆಯ ಒಂದು ಪ್ರತಿ ಎಂದು ಅರ್ಥೈಸುವಂತೆ ಸುಳ್ಳಾಗಿ ಬರೆದರೆ ಅಥವಾ ನಮೂದನೆಯು ಅಥವಾ ಬರಹವು ಸುಳ್ಳೆಂದು ತಿಳಿದೂ, ಯಾವುದೇ ಅಂತಹ ಬರಹದ ಸಾಕ್ಷ್ಯವನ್ನು ಒದಗಿಸಿದರೆ ಅಥವಾ ನೀಡಿದರೆ ಅಥವಾ ಒದಗಿಸುವುದಕ್ಕೆ ಅಥವಾ ನೀಡುವುದಕ್ಕೆ ಕಾರಣನಾದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದಲೂ ಅಥವಾ ಜುಲ್ಮಾನೆಯಿಂದಲೂ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು.

**110. ಕೆಲವು ಸಂದರ್ಭಗಳಲ್ಲಿ ಅಪರಾಧವಾಗದಿರುವುದು.–** ಮಾಲೀಕನ ಸಂಬಂಧದಲ್ಲಿ, 102, 103, 104 ಮತ್ತು 105ನೆಯ ಪ್ರಕರಣಗಳ ಉಪಬಂಧಗಳು, ನೋಂದಾಯಿತ ವ್ಯಾಪಾರಚಿಹ್ನೆಯ ಅಥವಾ ಅಂಥ ಚಿಹ್ನೆಯ ಈ ಅಧಿನಿಯಮದ ಅಡಿಯಲ್ಲಿ ಸೃಜಿಸಲಾದ ಅಥವಾ ಮಾನ್ಯ ಮಾಡಲಾದ ಹಕ್ಕುಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಯಾವುದೇ ಕೃತ್ಯ ಅಥವಾ ಲೋಪವನ್ನು ಈ ಮುಂದೆ ಹೇಳಿದ ಸಂದರ್ಭಗಳಲ್ಲಿ ಮೇಲೆ ತಿಳಿಸಿದ ಪ್ರಕರಣಗಳಡಿಯಲ್ಲಿ ಅಪರಾಧವೆಂಬುದಾಗಿ ಭಾವಿಸತಕ್ಕದ್ದಲ್ಲ,–

(ಎ) ಆಪಾದಿಸಲಾದ ಅಪರಾಧವು ಒಂದು ನೋಂದಾಯಿತ ವ್ಯಾಪಾರಚಿಹ್ನೆಗೆ ಸಂಬಂಧಿಸಿದ್ದು ಮತ್ತು ಆ ಕೃತ್ಯ ಅಥವಾ ಲೋಪವನ್ನು ಈ ಅಧಿನಿಯಮದ ಅಡಿಯಲ್ಲಿ ಅನುಮತಿಸಿರುವುದು; ಮತ್ತು

(ಬಿ) ಆಪಾದಿಸಲಾದ ಅಪರಾಧವು, ನೋಂದಾಯಿಸಿದ ಅಥವಾ ನೋಂದಾಯಿಸಿಲ್ಲದ ಒಂದು ವ್ಯಾಪಾರಚಿಹ್ನೆಗೆ ಸಂಬಂಧಿಸಿದ ಅಪರಾಧವಾಗಿದ್ದರೆ ಮತ್ತು ಆ ಕೃತ್ಯ ಅಥವಾ ಲೋಪವನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಅನುಮತಿಸಿರುವುದು.

**111. ಸರಕುಗಳ ಮುಟ್ಟುಗೋಲು.–** (1) ಒಬ್ಬ ವ್ಯಕ್ತಿಯು, 103ನೆಯ ಪ್ರಕರಣದ ಅಥವಾ 104ನೆಯ ಪ್ರಕರಣದ ಅಥವಾ 105ನೆಯ ಪ್ರಕರಣದ ಅಡಿಯಲ್ಲಿ ಅಪರಾಧ ನಿರ್ಣೀತನಾಗಿದ್ದಲ್ಲಿ, ಅಥವಾ ಮೋಸದ ಉದ್ದೇಶವಿಲ್ಲದೆ ಅವನು ಕಾರ್ಯನಿರ್ವಹಿಸಿದ ಆಧಾರದ ಮೇಲೆ 103ನೆಯ ಪ್ರಕರಣದ, ಅಥವಾ 104ನೆಯ ಪ್ರಕರಣದ ಅಡಿಯಲ್ಲಿ ಅಥವಾ ಆ ಪ್ರಕರಣದ (ಎ) ಖಂಡದಲ್ಲಿ , (ಬಿ) ಖಂಡದಲ್ಲಿ ಅಥವಾ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಆಧಾರದ ಮೇಲೆ 104ನೆಯ ಪ್ರಕರಣದ ಅಡಿಯಲ್ಲಿ ಅಪರಾಧದ ನಿರ್ದೋಷಿಯಾಗಿದ್ದಲ್ಲಿ, ಅವನನ್ನು ಅಪರಾಧಿಯೆಂದು ಅಥವಾ ನಿರ್ದೋಷಿಯೆಂದು ನ್ಯಾಯಾಲಯವು ನಿರ್ಣಯಿಸಿ, ಯಾವ ಸರಕುಗಳು ಮತ್ತು ವಸ್ತುಗಳ ಮೂಲಕ ಅಥವಾ ಅವುಗಳ ಸಂಬಂಧದಲ್ಲಿ ಅಪರಾಧವನ್ನು ಮಾಡಿದ್ದಾನೋ ಆ ಎಲ್ಲ ಸರಕುಗಳನ್ನು ಮತ್ತು ವಸ್ತುಗಳನ್ನು ಅಥವಾ ಮೇಲೆ ಹೇಳಿದಂತಹ ಆಧಾರದ ಮೇಲೆ ಮಾತ್ರ ಮಾಡಿದ್ದರೆ, ಸರ್ಕಾರಕ್ಕೆ ಮುಟ್ಟುಗೋಲು ಹಾಕಲು ನಿರ್ದೇಶನ ನೀಡಬಹುದು.

(2) ಅಪರಾಧ ನಿರ್ಣಯದ ಮೇಲೆ ಮುಟ್ಟುಗೋಲು ಹಾಕಲು ನಿರ್ದೇಶಿಸಿದಾಗ ಮತ್ತು ಅಪರಾಧ ನಿರ್ಣಯದ ವಿರುದ್ಧ ಅಪೀಲನ್ನು ಹೂಡಿದಾಗ, ಆ ಅಪೀಲು ಮುಟ್ಟುಗೋಲಿನ ವಿರುದ್ಧವೂ ಸಹ ಇರತಕ್ಕದ್ದು.

(3) ನಿರಪರಾಧಿಯ ಮೇಲೆ ಮುಟ್ಟುಗೋಲು ಹಾಕಲು ನಿರ್ದೇಶಿಸಿದಾಗ ಮತ್ತು ಯಾವ ಸರಕುಗಳಿಗೆ ಅಥವಾ ವಸ್ತುಗಳಿಗೆ ಆ ನಿರ್ದೇಶನವು ಸಂಬಂಧಿಸಿದೆಯೋ ಅ ಸರಕುಗಳ ಅಥವಾ ವಸ್ತುಗಳ ಮೌಲ್ಯವು ಐವತ್ತು ರೂಪಾಯಿಗಳಿಗಿಂತ ಹೆಚ್ಚಾಗಿದ್ದಾಗ, ಮುಟ್ಟುಗೋಲಿನ ನಿರ್ದೇಶನ ನೀಡಿದ ನ್ಯಾಯಾಲಯದ ಶಿಕ್ಷೆಯ ವಿರುದ್ಧ ಅಪೀಲು ಹೂಡಬಹುದಾದ ಪ್ರಸಂಗಗಳಲ್ಲಿ ಅಪೀಲು ಹೂಡಬಹುದಾಗಿದ್ದು, ಹಾಗೆ ನಿರ್ದೇಶನವನ್ನು ನೀಡಿದ ದಿನಾಂಕದಿಂದ 30 ದಿನಗಳೊಳಗೆ ಮುಟ್ಟುಗೋಲಿನ ವಿರುದ್ಧ ಅಪೀಲನ್ನು ಹೂಡಬಹುದು.

(4) ನ್ಯಾಯಾಲಯವು ಅಪರಾಧ ನಿರ್ಣಯಕ್ಕನುಸಾರವಾಗಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ನಿರ್ದೇಶಿಸಿದಾಗ, ಅಪರಾಧ ನಿರ್ಣೀತನಾದ ವ್ಯಕ್ತಿಯ ಮುಂದೆ, ಯಾವುದೇ ಮುಟ್ಟುಗೋಲು ಹಾಕಿದ ವಸ್ತುಗಳನ್ನು ನಾಶ ಮಾಡಲು ಅಥವಾ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಬಹುದಾದಂತೆ ಇತರೇ ರೀತಿಯಲ್ಲಿ ವಿಲೇ ಮಾಡಲು ಆದೇಶಿಸಬಹುದು.

**112. ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ನಿಯೋಜಿತರಾದ ಕೆಲವು ವ್ಯಕ್ತಿಗಳಿಗೆ ವಿನಾಯಿತಿ.–** 103ನೆಯ ಪ್ರಕರಣದ ಅಡಿಯಲ್ಲಿ ಅಪರಾಧದಿಂದ ಆಪಾದಿತನಾದ ವ್ಯಕ್ತಿಯು, ಈ ಮುಂದಿನವುಗಳನ್ನು ರುಜುವಾತುಪಡಿಸಿದರೆ ನಿರ್ದೋಷಿಯಾಗಿರತಕ್ಕದ್ದು,–

(ಎ) ಅವನ ಸಾಮಾನ್ಯ ವ್ಯವಹಾರ ಕ್ರಮದಲ್ಲಿ, ಸಂದರ್ಭಾನುಸಾರ, ವ್ಯಾಪಾರ ಚಿಹ್ನೆಗಳಿಗೆ ಅಥವಾ ವ್ಯಾಪಾರ ವಿವರಣೆಗಳಿಗೆ ಬಳಸುವುದಕ್ಕೆ ಅಥವಾ ವ್ಯಾಪಾರ ಚಿಹ್ನೆಗಳನ್ನು ಮಾಡುವುದಕ್ಕೆ ಅಥವಾ ಮಾಡುವಲ್ಲಿ ಬಳಸುವ ಅಚ್ಚುಗಳು, ಬ್ಲಾಕ್‌ಗಳು, ಯಂತ್ರಗಳು, ಪ್ಲೇಟುಗಳು ಅಥವಾ ಇತರೆ ಸಾಧನಗಳನ್ನು ಮಾಡುವುದಕ್ಕೆ ಇತರ ವ್ಯಕ್ತಿಗಳ ಪರವಾಗಿ ನಿಯೋಜಿತನಾಗುವುದು; ಮತ್ತು

(ಬಿ) ಅವನು ಹಾಗೆ ನಿಯೋಜಿತನಾದರೂ ಅದು ದೋಷಾರೋಪಣೆಗೆ ಗುರಿಯಾದ ಸಂದರ್ಭದಲ್ಲಿ, ಮತ್ತು ಸಂದರ್ಭಾನುಸಾರ ಸರಕುಗಳ ಮಾರಾಟದ ಬಗ್ಗೆ ಅಥವಾ ಸೇವೆಗಳನ್ನು ಒದಗಿಸುವುದರ ಮೇಲೆ ಅವಲಂಬಿಸಿ ಬರುವ ಲಾಭ ಅಥವಾ ಕಮೀಷನ್‌ಗಾಗಿ ಸರಕುಗಳ ಅಥವಾ ಇತರೇ ವಸ್ತುವಿನಲ್ಲಿ ಆಸಕ್ತಿಯನ್ನು ಹೊಂದಿಲ್ಲದಿರುವುದು; ಮತ್ತು

(ಸಿ) ಆರೋಪಿಸಲಾದ ಅಪರಾಧವನ್ನು ಮಾಡಿದುದರ ವಿರುದ್ಧ ಎಲ್ಲ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದು, ಅವನು, ಆಪಾದಿಸಲಾದ ಅಪರಾಧವನ್ನು ಮಾಡಿದ ಸಮಯದಲ್ಲಿ ವ್ಯಾಪಾರಚಿಹ್ನೆಯ ಅಥವಾ ವ್ಯಾಪಾರವಿವರಣೆಯ ನೈಜತೆಯನ್ನು ಸಂಶಯಿಸುವುದಕ್ಕೆ ಕಾರಣಗಳಿಲ್ಲದಿರುವುದು; ಮತ್ತು

(ಡಿ) ಪ್ರಾಸಿಕ್ಯೂಟರನ ಮೂಲಕ ಅಥವಾ ಪರವಾಗಿ ಮಾಡಿದ ಬೇಡಿಕೆಯ ಮೇರೆಗೆ, ಅವನು ಯಾರ ಪರವಾಗಿ ವ್ಯಾಪಾರಚಿಹ್ನೆಯನ್ನು ಅಥವಾ ವ್ಯಾಪಾರ ವಿವರಣೆಯನ್ನು ಅನ್ವಯಿಸಲಾಗಿದೆಯೋ ಆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ತನ್ನಲ್ಲಿರುವ ಎಲ್ಲ ಮಾಹಿತಿಯನ್ನು ನೀಡಿರುವುದು.

**113. ಆಪಾದಿತನು ನೋಂದಣಿಯು ಅಸಿಂಧುವೆಂದು ವಾದಿಸಿದಾಗ ಕಾರ್ಯವಿಧಾನ.–** (1) ನೋಂದಾಯಿತ ವ್ಯಾಪಾರಚಿಹ್ನೆಯ ಸಂಬಂಧದಲ್ಲಿ 103ನೆಯ ಪ್ರಕರಣದ ಅಥವಾ 104ನೇ ಪ್ರಕರಣದ ಅಥವಾ 105ನೆಯ ಪ್ರಕರಣದ ಅಡಿಯಲ್ಲಿ ಅಪರಾಧವನ್ನು ಆರೋಪಿಸಿದಲ್ಲಿ ಮತ್ತು ಆಪಾದಿತನು ವ್ಯಾಪಾರ ಚಿಹ್ನೆಯ ನೋಂದಣಿಯು ಅಸಿಂಧುವೆಂದು ವಾದಿಸಿದಲ್ಲಿ, ಈ ಮುಂದಿನ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು,–

(ಎ) ನ್ಯಾಯಾಲಯವು, ಅಂಥ ಪ್ರತಿರಕ್ಷೆಯು ಮೊದಲನೋಟಕ್ಕೆ ಸಮರ್ಥನೀಯವೆಂದು ಮನಗಂಡರೆ, ಅದು ಆರೋಪದ ಬಗ್ಗೆ ಮುಂದುವರೆಯತಕ್ಕದ್ದಲ್ಲ, ಆದರೆ ನೋಂದಣಿಯು ಅಸಿಂಧುವೆಂಬ ಆಧಾರದ ಮೇಲೆ ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಆಪಾದಿತನು ಅಪೀಲು ಮಂಡಲಿಯ ಮುಂದೆ ಅರ್ಜಿಯನ್ನು ದಾಖಲ್ಮಾಡುವುದಕ್ಕೆ ಸಾಧ್ಯವಾಗುವಂತೆ ಆಪಾದಿತನ ವಾದವನ್ನು ದಾಖಲಿಸಿದ ದಿನಾಂಕದಿಂದ ಮೂರು ತಿಂಗಳವರೆಗೆ ವ್ಯವಹರಣೆಯನ್ನು ಮುಂದಕ್ಕೆ ಹಾಕತಕ್ಕದ್ದು;

(ಬಿ) ಆಪಾದಿತನು, ಅಂಥ ಸೀಮಿತ ಅವಧಿಯೊಳಗೆ ಅಥವಾ ನ್ಯಾಯಾಲಯವು ಸಾಕಷ್ಟು ಕಾರಣಕ್ಕಾಗಿ ಅನುಮತಿಸಬಹುದಾದ ಅಂಥ ಹೆಚ್ಚಿನ ಸಮಯದೊಳಗೆ, ಅಂಥ ಅರ್ಜಿಯನ್ನು ಸಲ್ಲಿಸಲಾಗಿದೆಯೆಂದು ನ್ಯಾಯಾಲಯಕ್ಕೆ ರುಜುವಾತುಪಡಿಸಿದರೆ, ಸರಿಪಡಿಸುವಿಕೆಯ ಅಂಥ ಅರ್ಜಿಯ ವಿಲೆಯಾಗುವವರೆಗೆ ಪ್ರಾಸಿಕ್ಯೂಷನ್‌ನಲ್ಲಿನ ಹೆಚ್ಚಿನ ವ್ಯವಹರಣೆಗಳನ್ನು ತಡೆಹಿಡಿಯತಕ್ಕದ್ದು;

(ಸಿ) ಮೂರು ತಿಂಗಳ ಅವಧಿಯೊಳಗೆ ಅಥವಾ ನ್ಯಾಯಾಲಯವು ಅನುಮತಿಸಬಹುದಾದ ಅಂಥ ವಿಸ್ತೃತ ಅವಧಿಯೊಳಗೆ ಆಪಾದಿತನು ರಿಜಿಸ್ಟರನ್ನು ಸರಿಪಡಿಸುವ ಬಗ್ಗೆ ಅಪೀಲು ಮಂಡಲಿಗೆ ಅರ್ಜಿ ಸಲ್ಲಿಸಲು ವಿಫಲನಾದರೆ, ನ್ಯಾಯಾಲಯವು ನೋಂದಣಿಯು ಸಿಂದುವಾಗಿದ್ದರೆ ಹೇಗೋ ಹಾಗೆ ಪ್ರಕರಣದ ಬಗ್ಗೆ ಮುಂದುವರಿಯತಕ್ಕದ್ದು.

(2) (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಪರಾಧದ ಒಂದು ಫಿರ್ಯಾದನ್ನು ಹೂಡುವುದಕ್ಕೆ ಮುಂಚೆ, ಅದರ ನೋಂದಣಿಯ ಅಸಿಂಧುತ್ವದ ಆಧಾರದ ಮೇಲೆ ಸಂಬಂಧಪಟ್ಟ ವ್ಯಾಪಾರಚಿಹ್ನೆಯ ರಿಜಿಸ್ಟರನ್ನು ಸರಿಪಡಿಸುವ ಬಗ್ಗೆ ಯಾವುದೇ ಅರ್ಜಿಯನ್ನು ನ್ಯಾಯಾಧಿಕರಣದ ಮುಂದೆ ಈಗಾಗಲೆ ಸೂಕ್ತವಾಗಿ ಸಲ್ಲಿಸಿದ್ದು, ಅದು ಇತ್ಯರ್ಥದಲ್ಲಿರುವಲ್ಲಿ, ನ್ಯಾಯಾಲಯವು ಹಿಂದೆ ಹೇಳಿದ ಅರ್ಜಿಯ ವಿಲೆಯು ಇತ್ಯರ್ಥದಲ್ಲಿರುವಾಗ ಪ್ರಾಸಿಕ್ಯೂಷನ್‌ನಲ್ಲಿನ ಹೆಚ್ಚಿನ ವ್ಯವಹರಣೆಗಳನ್ನು ತಡೆಹಿಡಿಯತಕ್ಕದ್ದು ಮತ್ತು ಫಿರ್ಯಾದುದಾರನು ತನ್ನ ಚಿಹ್ನೆಯ ನೋಂದಣಿಯನ್ನು ಅವಲಂಬಿಸುವಷ್ಟು ಮಟ್ಟಿಗೆ, ಸರಿಪಡಿಸುವಿಕೆಯ ಅರ್ಜಿಯ ಫಲಿತಾಂಶಕ್ಕನುಗುಣವಾಗಿ ಆಪಾದಿತನ ವಿರುದ್ಧದ ಆರೋಪವನ್ನು ನಿರ್ಧರಿಸತಕ್ಕದ್ದು.

**114. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಮಾಡಿರುವ ವ್ಯಕ್ತಿಯು ಒಂದು ಕಂಪನಿಯಾಗಿರುವಲ್ಲಿ, ಆ ಕಂಪನಿಯನ್ನು ಮತ್ತು ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ ಅಂಥ ಯಾರೇ ವ್ಯಕ್ತಿಯು, ಅಂಥ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನನ್ನು, ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೆಯ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದರೂ ಸಹ, ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರೆ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ, "ನಿರ್ದೇಶಕ" ಎಂದರೆ, ಫರ್ಮಿನಲ್ಲಿನ ಪಾಲುದಾರ.

**115. ಕೆಲವು ಅಪರಾಧಗಳ ಸಂಜ್ಞೇಯತೆ ಹಾಗೂ ಶೋಧನೆ ಮತ್ತು ಅಭಿಗ್ರಹಣ ಮಾಡಿಕೊಳ್ಳುವುದಕ್ಕೆ ಪೊಲೀಸ್ ಅಧಿಕಾರಿಯ ಅಧಿಕಾರಗಳು.–** (1) ಯಾವುದೇ ನ್ಯಾಯಾಲಯವು, ರಿಜಿಸ್ಟ್ರಾರನು ಅಥವಾ ಅವನಿಂದ ಲಿಖಿತದಲ್ಲಿ ಅಧಿಕೃತನಾಗಿರುವ ಯಾರೇ ಅಧಿಕಾರಿಯು ಮಾಡಿದ ಲಿಖಿತ ಫಿರ್ಯಾದಿನ ಹೊರತು, 107ನೆಯ ಪ್ರಕರಣ ಅಥವಾ 108ನೆಯ ಪ್ರಕರಣ ಅಥವಾ 109ನೆಯ ಪ್ರಕರಣದ ಅಡಿಯಲ್ಲಿ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, 107ನೆಯ ಪ್ರಕರಣದ (1)ನೆಯ ಉಪಪ್ರಕರಣದ (ಸಿ) ಖಂಡಕ್ಕೆ ಸಂಬಂಧಿಸಿದಂತೆ, ಒಂದು ನ್ಯಾಯಾಲಯವು, ವಾಸ್ತವವಾಗಿ ನೋಂದಾಯಿತವಾಗಿರದ ಯಾವುವೇ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ನೋಂದಾಯಿತ ವ್ಯಾಪಾರಚಿಹ್ನೆಯನ್ನು ನೋಂದಾಯಿಸಲಾಗಿದೆಯೆಂದು ನಿರೂಪಿಸುವ ಬಗ್ಗೆ ರಿಜಿಸ್ಟ್ರಾರನು ಹೊರಡಿಸಿದ ಒಂದು ಪ್ರಮಾಣ ಪತ್ರದ ಆಧಾರದ ಮೇಲೆ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದು.

(2) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರಿಗಿಂತ ಅಥವಾ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರಿಗಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿನ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದಲ್ಲ.

(3) 103ನೆಯ ಪ್ರಕರಣ ಅಥವಾ 104ನೆಯ ಪ್ರಕರಣದ ಅಥವಾ 105ನೆಯ ಪ್ರಕರಣದ ಅಡಿಯಲ್ಲಿನ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.

(4) ಪೊಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್‌ರ ದರ್ಜೆಗೆ ಅಥವಾ ಅದಕ್ಕೆ ಸಮಾನವಾಗಿರುವ ದರ್ಜೆಗೆ ಕಡಿಮೆಯಲ್ಲದ ಯಾರೇ ಪೊಲೀಸ್ ಅಧಿಕಾರಿಯು, (3)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುವೇ ಅಪರಾಧಗಳನ್ನು ಮಾಡಿರುವುದು ಅಥವಾ ಅಂತಹುವೇ ಅಪರಾಧಗಳನ್ನು ಮಾಡಿರುವುದಾಗಿ, ಮಾಡುತ್ತಿರುವುದಾಗಿ ಅಥವಾ ಮಾಡುವ ಸಂಭವಿರುವುದಾಗಿ ಮನಗಂಡರೆ, ಅಪರಾಧ ಮಾಡಿರುವಲ್ಲಿ ಒಳಗೊಂಡಿರುವ ಸರಕುಗಳು, ಅಚ್ಚು, ಪಡಿಯಚ್ಚು, ಯಂತ್ರ, ಪ್ಲೇಟ್, ಇತರೆ ಸಾಧನಗಳನ್ನು ಅಥವಾ ಸಾಮಗ್ರಿಗಳನ್ನು ಎಲ್ಲಿ ಕಂಡರೂ ವಾರಂಟಿಲ್ಲದೆ ಶೋಧಿಸಬಹುದು ಮತ್ತು ಅಭಿಗ್ರಹಣ ಮಾಡಬಹುದು ಮತ್ತು ಹಾಗೆ ಅಭಿಗ್ರಹಣ ಮಾಡಿದ ಎಲ್ಲಾ ವಸ್ತುಗಳನ್ನು, ಕಾರ್ಯಸಾಧ್ಯವಾದಷ್ಟು ಬೇಗನೆ, ಪ್ರಥಮದರ್ಜೆಯ ನ್ಯಾಯಿಕಮ್ಯಾಜಿಸ್ಟ್ರೇಟನ ಅಥವಾ ಸಂದರ್ಭಾನುಸಾರ, ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು:

ಪರಂತು, ಯಾವುದೇ ಶೋಧನೆ ಮತ್ತು ಅಭಿಗ್ರಹಣವನ್ನು ಮಾಡುವುದಕ್ಕೆ ಮುಂಚೆ, ಪೊಲೀಸ್ ಅಧಿಕಾರಿಯು, ವ್ಯಾಪಾರಚಿಹ್ನೆಗೆ ಸಂಬಂಧಿಸಿದ ಅಪರಾಧದಲ್ಲಿ ಒಳಗೊಂಡಿರುವ ಅಂಶಗಳ ಬಗ್ಗೆ ರಿಜಿಸ್ಟ್ರಾರನ ಅಭಿಪ್ರಾಯವನ್ನು ಪಡೆಯತಕ್ಕದ್ದು ಮತ್ತು ಹಾಗೆ ಪಡೆಯಲಾದ ಅಭಿಪ್ರಾಯಕ್ಕೆ ಬದ್ಧನಾಗಿರತಕ್ಕದ್ದು.

(5) 4ನೆಯ ಉಪಪ್ರಕರಣದ ಅಡಿಯಲ್ಲಿ ಅಭಿಗ್ರಹಿಸಲಾದ ಯಾವುದೇ ವಸ್ತುವಿನಲ್ಲಿ ಹಿತಾಸಕ್ತಿ ಹೊಂದಿರುವ ಯಾರೇ ವ್ಯಕ್ತಿಯು, ಅಂಥ ಶೋಧನೆಯನ್ನು ಮಾಡಿದ 15 ದಿನಗಳೊಳಗಾಗಿ, ಅಂಥ ವಸ್ತುವನ್ನು ತನಗೆ ವಾಪಸು ಕೊಡಬೇಕೆಂದು, ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಥವಾ ಸಂದರ್ಭಾನುಸಾರ, ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನಿಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅರ್ಜಿದಾರನ ಮತ್ತು ಪ್ರಾಸಿಕ್ಯೂಷನ್‌ನ ಅಹವಾಲನ್ನು ಆಲಿಸಿದ ನಂತರ, ಮ್ಯಾಜಿಸ್ಟ್ರೇಟನು ತಾನು ಸೂಕ್ತವೆಂದು ಭಾವಿಸಬಹುದಾದಂತೆ ಅರ್ಜಿಯ ಬಗ್ಗೆ ಅಂಥ ಆದೇಶವನ್ನು ನೀಡಬಹುದು.

**116. ಸಮುದ್ರದ ಮೂಲಕ ಆಮದುಮಾಡಿಕೊಳ್ಳುವ ಸರಕುಗಳ ಮೂಲದ ಬಗ್ಗೆ ಸಾಕ್ಷ್ಯ.–** ಸಮುದ್ರದ ಮೂಲಕ ಭಾರತಕ್ಕೆ ತರುವ ಸರಕುಗಳ ಸಂದರ್ಭದಲ್ಲಿ, ಸರಕು ತುಂಬುವ ಬಂದರಿನ ಸಾಕ್ಷ್ಯವು, ಈ ಅಧಿನಿಯಮದ ಅಡಿಯಲ್ಲಿ ಅಥವಾ 111ನೇ ಪ್ರಕರಣದ (ಡಿ) ಖಂಡದ ಅಡಿಯಲ್ಲಿ ಸರಕುಗಳನ್ನು ಸರ್ಕಾರ ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸೀಮಾ ಸುಂಕ ಅಧಿನಿಯಮ, 1962ರ (1962ರ 52) 112ನೇ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಮತ್ತು ಸರಕುಗಳ ಆಮದಿಗೆ ಸಂಬಂಧಿಸಿದಂತೆ ವ್ಯಾಪಾರ ಚಿಹ್ನೆಗಳ ರಕ್ಷಣೆಗೆ ಸದರಿ ಅಧಿನಿಯಮದ 111ನೇ ಪ್ರಕರಣದ (2)ನೇ ಉಪಪ್ರಕರಣದ (ಎನ್) ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರವು ಅಧಿಸೂಚಿಸಿದ ಅಪರಾಧದ ಪ್ರಾಸಿಕ್ಯೂಷನ್‌ನಲ್ಲಿ, ಯಾವ ಸ್ಥಳದಲ್ಲಿ ಅಥವಾ ದೇಶದಲ್ಲಿ ಸರಕುಗಳನ್ನು ಮಾಡಲಾಗಿದೆಯೋ ಅಥವಾ ಉತ್ಪಾದಿಸಲಾಗಿದೆಯೋ ಆ ಸ್ಥಳದ ಅಥವಾ ದೇಶದ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು.

**117. ಪ್ರತಿರಕ್ಷೆ ಅಥವಾ ಪ್ರಾಸಿಕ್ಯೂಷನಿನ ವೆಚ್ಚಗಳು.–** ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ, ಪ್ರಕರಣದ ಎಲ್ಲಾ ಸನ್ನಿವೇಶಗಳನ್ನು ಮತ್ತು ಪಕ್ಷಕಾರರ ವರ್ತನೆಯನ್ನು ಗಮನದಲ್ಲಿರಿಸಿಕೊಂಡು ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸುವಂತಹ ವೆಚ್ಚಗಳನ್ನು ಆಪಾದಿತನು, ಫಿರ್ಯಾದುದಾರನಿಗೆ ಅಥವಾ ಫಿರ್ಯಾದುದಾರನು ಆಪಾದಿತನಿಗೆ ಸಂದಾಯ ಮಾಡುವುದಕ್ಕೆ ಆದೇಶಿಸಬಹುದು ಮತ್ತು ಹಾಗೆ ಐತೀರ್ಪು ಮಾಡಿದ ವೆಚ್ಚಗಳನ್ನು ಅವರಿಂದ ಜುಲ್ಮಾನೆಯನ್ನು ಹೇಗೆ ವಸೂಲಿ ಮಾಡಲಾಗುವುದೊ ಹಾಗೆ ವಸೂಲು ಮಾಡತಕ್ಕದ್ದು.

**118. ಪ್ರಾಸಿಕ್ಯೂಷನಿನ ಕಾಲ ಪರಿಮಿತಿ.–** ಈ ಅಧಿನಿಯಮದ ಅಡಿಯಲ್ಲಿ ಅಥವಾ 111ನೇ ಪ್ರಕರಣದ (ಡಿ)ಖಂಡದ ಅಡಿಯಲ್ಲಿ ಸರಕುಗಳನ್ನು ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಸೀಮಾ ಸುಂಕ ಅಧಿನಿಯಮ, 1962ರ (1962ರ 52) 112ನೇ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಅಥವಾ ಸರಕುಗಳ ಆಮದಿಗೆ

ಸಂಬಂಧಿಸಿದಂತೆ, ವ್ಯಾಪಾರಚಿಹ್ನೆಗಳ ರಕ್ಷಣೆಗೆ ಸದರಿ ಅಧಿನಿಯಮದ 11ನೇ ಪ್ರಕರಣದ (2)ನೇ ಉಪಪ್ರಕರಣದ (ಎನ್) ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರವು ಅಧಿಸೂಚಿಸಿದ ಅಪರಾಧದ ಯಾವುದೇ ಪ್ರಾಸಿಕ್ಯೂಷನನ್ನು, ಆರೋಪಿಸಲಾದ ಅಪರಾಧವನ್ನು ಮಾಡಿದ ಮೇಲೆ ಮೂರು ವರ್ಷಗಳ ಮುಕ್ತಾಯದ ನಂತರ, ಅಥವಾ ಪ್ರಾಸಿಕ್ಯೂಟರನು ಅದನ್ನು ಬಹಿರಂಗಪಡಿಸಿದ ಮೇಲೆ ಎರಡು ವರ್ಷಗಳ ನಂತರ, ಇವುಗಳಲ್ಲಿ ಯಾವುದರ ಮುಕ್ತಾಯವು ಮೊದಲೊ ಅಲ್ಲಿಂದ ಪ್ರಾರಂಭಿಸತಕ್ಕದ್ದಲ್ಲ.

**119. ಅಪರಾಧವನ್ನು ಮಾಡಿರುವುದರ ಸಂಬಂಧದಲ್ಲಿ ಮಾಹಿತಿ.–** ಈ ಅಧ್ಯಾಯದ ಉಪಬಂಧಗಳನ್ನು ಜಾರಿ ಮಾಡುವುದು ಸರ್ಕಾರದ ಯಾವ ಅಧಿಕಾರಿಯ ಕರ್ತವ್ಯವಾಗಿದೆಯೋ ಅವನನ್ನು, ಈ ಅಧಿನಿಯಮದ ವಿರುದ್ಧ ಯಾವುದೇ ಅಪರಾಧವನ್ನು ಮಾಡಿದ್ದಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ತಾನು ಯಾವ ಮೂಲದಿಂದ ಪಡೆದಿರುವನೆಂಬುದನ್ನು ಯಾವುದೇ ನ್ಯಾಯಾಲಯದಲ್ಲಿ ಹೇಳುವಂತೆ ಒತ್ತಾಯಿಸತಕ್ಕದ್ದಲ್ಲ.

**120. ಭಾರತದ ಹೊರಗಡೆ ಮಾಡಿದ ಕೃತ್ಯಗಳಿಗೆ ಭಾರತದಲ್ಲಿ ದುಷ್ಪ್ರೇರಣೆ ಮಾಡಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ಭಾರತದೊಳಗಿದ್ದುಕೊಂಡು ಭಾರತದ ಹೊರಗೆ ಯಾವುದೇ ಕೃತ್ಯವನ್ನು ಮಾಡುವುದಕ್ಕೆ ದುಷ್ಪ್ರೇರೇಪಿಸಿದರೆ, ಈ ಅಧಿನಿಯಮದ ಅಡಿಯಲ್ಲಿ ಭಾರತದಲ್ಲಿ ಅಪರಾಧವನ್ನು ಮಾಡಿದ್ದರೆ ಹೇಗೋ ಹಾಗೆ, ಅವನು, ಭಾರತದಲ್ಲಿ ಯಾವುದೇ ಸ್ಥಳದಲ್ಲಿ ದೊರೆತರೂ ಅಂತಹ ದುಷ್ಪ್ರೇರಣೆಗಾಗಿ ಅವನನ್ನು ಅಧಿವಿಚಾರಣೆಗೊಳಪಡಿಸಬಹುದು ಮತ್ತು ದುಷ್ಪ್ರೇರೇಪಿಸಿದ ಕೃತ್ಯವನ್ನು ಆ ಸ್ಥಳದಲ್ಲಿ ಅವನೇ ಮಾಡಿದ್ದರೆ, ಹೇಗೆ ಹೊಣೆಗಾರನಾಗುತ್ತಿದ್ದನೋ ಹಾಗೆ ಅವನು ದಂಡಿತನಾಗಬಹುದು.

**121. ಕ್ರಿಮಿನಲ್ ನ್ಯಾಯಾಲಯಗಳು ಅನುಮತಿಸಲಾದ ವ್ಯತ್ಯಾಸವನ್ನು ಪಾಲಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಸೂಚನೆಗಳು.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಸರಕುಗಳ ಸಂಬಂಧದಲ್ಲಿ ಅನುಮತಿಸಲಾದಂತೆ ಸಂಖ್ಯೆ, ಪರಿಮಾಣ, ಅಳತೆ, ಗೇಜ್ ಅಥವಾ ತೂಕಕ್ಕೆ ಸಂಬಂಧಿಸಿದಂತೆ ವ್ಯತ್ಯಾಸದ ಮಿತಿಗಳಿಗಾಗಿ ಕ್ರಿಮಿನಲ್ ನ್ಯಾಯಾಲಯಗಳು ಮಾನ್ಯತೆ ನೀಡುವಲ್ಲಿ ಸೂಚನೆಗಳನ್ನು ನೀಡಬಹುದು.

## ಅಧ್ಯಾಯ – XIII
## ಸಂಕೀರ್ಣ

**122. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮಕ್ಕನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**123. ಕೆಲವು ವ್ಯಕ್ತಿಗಳು ಲೋಕನೌಕರರಾಗಿರುವುದು.–** ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಅಪೀಲು ಮಂಡಲಿಯ ಪ್ರತಿಯೊಬ್ಬ ಸದಸ್ಯನನ್ನು ಭಾರತೀಯ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**124. ವ್ಯಾಪಾರಚಿಹ್ನೆಯ ನೋಂದಣಿಯ ಸಿಂಧುತ್ವವನ್ನು ಪ್ರಶ್ನಿಸಿದಾಗ ವ್ಯವಹರಣೆಗಳನ್ನು ತಡೆಹಿಡಿಯುವುದು, ಇತ್ಯಾದಿ.–** (1) ಒಂದು ವ್ಯಾಪಾರಚಿಹ್ನೆಯ ಅತಿಲಂಘನ ಸಂಬಂಧದ ಯಾವುದೇ ದಾವೆಯಲ್ಲಿ,–

(ಎ) ವಾದಿಯ ವ್ಯಾಪಾರಚಿಹ್ನೆಯ ನೋಂದಣಿಯು ಅಸಿಂಧುವೆಂದು ಪ್ರತಿವಾದಿಯು ವಾದಿಸಿದರೆ; ಅಥವಾ

(ಬಿ) 30ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ ಅಡಿಯಲ್ಲಿ ಪ್ರತಿವಾದಿಯು ಪ್ರತಿರಕ್ಷೆಯನ್ನು ತೆಗೆದುಕೊಂಡಿದ್ದರೆ ಮತ್ತು ಪ್ರತಿವಾದಿಯ ವ್ಯಾಪಾರಚಿಹ್ನೆಯ ನೋಂದಣಿಯ ಅಸಿಂಧುತ್ವದ ಬಗ್ಗೆ ವಾದಿಯು ವಾದಿಸಿದರೆ

– ದಾವೆಯನ್ನು ಅಧಿವಿಚಾರಣೆ ಮಾಡುವ ನ್ಯಾಯಾಲಯವು (ಇದರಲ್ಲಿ ಇನ್ನು ಮುಂದೆ ನ್ಯಾಯಾಲಯವೆಂದು ಉಲ್ಲೇಖಿಸಲಾಗಿದೆ),–

**(i)** ವಾದಿಯ ಅಥವಾ ಪ್ರತಿವಾದಿಯ ವ್ಯಾಪಾರಚಿಹ್ನೆಗೆ ಸಂಬಂಧಿಸಿದಂತೆ ರಿಜಿಸ್ಟರನ್ನು ಸರಿಪಡಿಸುವ ಬಗ್ಗೆ ಯಾವುವೇ ವ್ಯವಹರಣೆಗಳು ರಿಜಿಸ್ಟ್ರಾರನ ಅಥವಾ ಅಪೀಲು ಮಂಡಲಿಯ ಮುಂದೆ ಇತ್ಯರ್ಥದಲ್ಲಿದ್ದರೆ, ಅಂಥ ವ್ಯವಹರಣೆಗಳು ಅಂತಿಮವಾಗಿ ಇತ್ಯರ್ಥವಾಗುವವರೆಗೆ ದಾವೆಯನ್ನು ತಡೆಹಿಡಿಯತಕ್ಕದ್ದು;

**(ii)** ಅಂಥ ಯಾವುವೇ ವ್ಯವಹರಣೆಗಳು ಇತ್ಯರ್ಥದಲ್ಲಿರದಿದ್ದರೆ ಮತ್ತು ವಾದಿಯ ಅಥವಾ ಪ್ರತಿವಾದಿಯ ವ್ಯಾಪಾರಚಿಹ್ನೆಯ ನೋಂದಣಿಯ ಅಸಿಂಧುತ್ವಕ್ಕೆ ಸಂಬಂಧಿಸಿದ ವಾದವು ಮೊದಲ ನೋಟಕ್ಕೆ ಸಮರ್ಥನೀಯವಾದುದೆಂದು ನ್ಯಾಯಾಲಯವು ಮನಗಂಡರೆ, ಅದೇ ವಿಷಯಕ್ಕೆ ಸಂಬಂಧಿಸಿದ ವಿವಾದಾಂಶವನ್ನು ಎತ್ತತಕ್ಕದ್ದು ಮತ್ತು ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ, ಸಂಬಂಧಪಟ್ಟ ಪಕ್ಷಕಾರನು ಅಪೀಲು ಮಂಡಲಿಗೆ ಅರ್ಜಿ ಸಲ್ಲಿಸುವುದಕ್ಕೆ ಸಾಧ್ಯವಾಗುವಂತೆ ಮಾಡಲು ವಿವಾದಾಂಶವನ್ನು ರೂಪಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಗೆ ಪ್ರಕರಣವನ್ನು ಮುಂದಕ್ಕೆ ಹಾಕತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿನ **(ii)** (ಬಿ) ಖಂಡದಲ್ಲಿ ಉಲ್ಲೇಖಿಸಿದಂತೆ, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಥವಾ ಸಾಕಷ್ಟು ಕಾರಣಕ್ಕಾಗಿ ನ್ಯಾಯಾಲಯವು ಅನುಮತಿಸಿದಂತೆ ಅಂಥ ವಿಸ್ತರಿಸಿದ ಕಾಲದೊಳಗೆ ಸಂಬಂಧಿಸಿದ ಪಕ್ಷಕಾರನು ಅಂಥ ಯಾವುದೇ ಅರ್ಜಿಯನ್ನು ಸಲ್ಲಿಸಿದ್ದೇನೆಂದು ನ್ಯಾಯಾಲಯಕ್ಕೆ ರುಜುವಾತುಪಡಿಸಿದರೆ ಸರಿಪಡಿಸುವಿಕೆಯ ವ್ಯವಹರಣೆಗಳು ಅಂತಿಮವಾಗಿ ಇತ್ಯರ್ಥವಾಗುವವರೆಗೆ ದಾವೆಯ ಅಧಿವಿಚಾರಣೆಗೆ ತಡೆಯಾಜ್ಞೆ ನೀಡತಕ್ಕದ್ದು.

(3) ಮೇಲೆ ಹೇಳಿದಂತೆ ಅಂಥ ಅರ್ಜಿಯನ್ನು ಹಾಗೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಥವಾ ನ್ಯಾಯಾಲಯವು ಅನುಮತಿಸಿದಂತೆ ಅಂಥ ವಿಸ್ತರಿಸಿದ ಅವಧಿಯೊಳಗೆ ಸಲ್ಲಿಸದಿದ್ದರೆ, ಸಂಬಂಧಪಟ್ಟ ವ್ಯಾಪಾರ ಚಿಹ್ನೆಯ ನೋಂದಣಿಯ ಸಿಂಧುತ್ವದ ಬಗೆಗಿನ ವಿವಾದಾಂಶವನ್ನು ಬಿಟ್ಟುಬಿಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ನ್ಯಾಯಾಲಯವು ಪ್ರಕರಣದಲ್ಲಿರುವ ಇತರ ವಿವಾದಾಂಶಗಳಿಗೆ ಸಂಬಂಧಿಸಿದ ದಾವೆಯನ್ನು ಮುಂದುವರಿಸತಕ್ಕದ್ದು.

(4) (1)ನೇ ಉಪಪ್ರಕರಣದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸರಿಪಡಿಸುವ ವ್ಯವಹರಣೆಗಳಲ್ಲಿ ಮಾಡಲಾದ ಯಾವುದೇ ಅಂತಿಮ ಆದೇಶವು ಪಕ್ಷಕಾರರಿಗೆ ಬಂಧನಕಾರಿಯಾಗಿರತಕ್ಕದ್ದು ಮತ್ತು ನ್ಯಾಯಾಲಯವು ವ್ಯಾಪಾರಚಿಹ್ನೆಯ ನೋಂದಣಿಯ ಸಿಂಧುತ್ವದ ಬಗೆಗಿನ ವಿವಾದಾಂಶಕ್ಕೆ ಸಂಬಂಧಿಸುವಷ್ಟು ಮಟ್ಟಿಗೆ ಅಂಥ ಆದೇಶಕ್ಕನುಸಾರವಾಗಿ ದಾವೆಯನ್ನು ವಿಲೆ ಮಾಡತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿಯ ಒಂದು ವ್ಯಾಪಾರಚಿಹ್ನೆಯ ಅತಿಲಂಘನದ ಬಗೆಗಿನ ದಾವೆಯ ತಡೆಯಾಜ್ಞೆಯು, ದಾವೆಯ ತಡೆಯಾಜ್ಞೆಯ ಅವಧಿಯಲ್ಲಿ ಯಾವುದೇ ವಾದಕಾಲೀನ ಆದೇಶವನ್ನು (ನಿರ್ಬಂಧಕಾಜ್ಞೆಯನ್ನು ನೀಡುವ ಯಾವುದೇ ಆದೇಶ, ಲೆಕ್ಕ ಪತ್ರವನ್ನು ಇಡುವುದಕ್ಕೆ ನಿರ್ದೇಶಿಸುವುದು, ಸ್ವೀಕರ್ತನನ್ನು ನೇಮಕ ಮಾಡುವುದು ಅಥವಾ ಯಾವುದೇ ಸ್ವತ್ತನ್ನು ಜಪ್ತಿ ಮಾಡುವುದು ಒಳಗೊಂಡಂತೆ) ಮಾಡುವುದರಿಂದ ನ್ಯಾಯಾಲಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

**125. ಕೆಲವು ಸಂದರ್ಭಗಳಲ್ಲಿ ರಿಜಿಸ್ಟರನ್ನು ಸರಿಪಡಿಸಲು ಅರ್ಜಿಯನ್ನು ಅಪೀಲು ಮಂಡಲಿಗೆ ಸಲ್ಲಿಸುವುದು.–** (1) ನೋಂದಾಯಿತ ವ್ಯಾಪಾರಚಿಹ್ನೆಯ ಅತಿಲಂಘನದ ಒಂದು ದಾವೆಯಲ್ಲಿ ವಾದಿಯ ವ್ಯಾಪಾರಚಿಹ್ನೆಯ ನೋಂದಣಿಯ ಸಿಂಧುತ್ವವನ್ನು ಪ್ರತಿವಾದಿಯು ಪ್ರಶ್ನಿಸಿದಲ್ಲಿ ಅಥವಾ ಅಂಥ ಯಾವುದೇ ಅಂತಹ ದಾವೆಯಲ್ಲಿ 30ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ ಅಡಿಯಲ್ಲಿ ಪ್ರತಿವಾದಿಯು ಪ್ರತಿರಕ್ಷೆಯನ್ನು ತೆಗೆದುಕೊಂಡಲ್ಲಿ ಮತ್ತು ಪ್ರತಿವಾದಿಯ ವ್ಯಾಪಾರಚಿಹ್ನೆಯ ನೋಂದಣಿಯ ಸಿಂಧುತ್ವವನ್ನು ವಾದಿಯು ಪ್ರಶ್ನಿಸಿದಲ್ಲಿ, ಸಂಬಂಧಪಟ್ಟ ವ್ಯಾಪಾರಚಿಹ್ನೆಯ ಸಿಂಧುತ್ವದ ಬಗೆಗಿನ ವಿವಾದಾಂಶವನ್ನು, ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ ಇರುವ ಒಂದು ಅರ್ಜಿಯ ಮೇರೆಗೆ ಮಾತ್ರ ನಿರ್ಧರಿಸತಕ್ಕದ್ದು ಮತ್ತು 47ನೇ ಪ್ರಕರಣದಲ್ಲಿ ಅಥವಾ 57ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಅರ್ಜಿಯನ್ನು ಅಪೀಲು ಮಂಡಲಿಗೆ ಸಲ್ಲಿಸತಕ್ಕದ್ದೇ ಹೊರತು ರಿಜಿಸ್ಟ್ರಾರನಿಗೆ ಅಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, 47ನೇ ಪ್ರಕರಣದ ಅಥವಾ 57ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ ಅರ್ಜಿಯನ್ನು ರಿಜಿಸ್ಟ್ರಾರನಿಗೆ ಸಲ್ಲಿಸಿದ್ದಲ್ಲಿ, ರಿಜಿಸ್ಟ್ರಾರನು, ತನಗೆ ಸೂಕ್ತವೆಂದು ಕಂಡುಬಂದರೆ, ವ್ಯವಹರಣೆಗಳ ಯಾವುದೇ ಹಂತದಲ್ಲಿ ಅರ್ಜಿಯನ್ನು ಅಪೀಲು ಮಂಡಲಿಗೆ ಕಳುಹಿಸತಕ್ಕದ್ದು.

**126. ಗುರುತು ಮಾಡಿದ ಸರಕುಗಳ ಮಾರಾಟದ ಮೇಲೆ ಇಂಗಿತ ಭರವಸೆ.–** ಮಾರಾಟಕ್ಕಿರುವ ಸರಕುಗಳಿಗೆ ಅಥವಾ ಯಾವುವೇ ಸರಕುಗಳ ಮಾರಾಟಕ್ಕೆ ಮಾಡಲಾಗಿರುವ ಕರಾರಿನಲ್ಲಿ ಅಥವಾ ಯಾವುದೇ ಸೇವೆಗೆ ಸಂಬಂಧಿಸಿದಂತೆ ಒಂದು ಗುರುತನ್ನು ಅಥವಾ ವ್ಯಾಪಾರಚಿಹ್ನೆಯನ್ನು ಅಥವಾ ವ್ಯಾಪಾರ ವಿವರಣೆಯನ್ನು ಬಳಸಲಾಗಿರುವಲ್ಲಿ, ಮಾರಾಟಗಾರನು, ಆ ವ್ಯಾಪಾರಚಿಹ್ನೆಯು ಒಂದು ಅಸಲಿ ಚಿಹ್ನೆಯೆಂದು ಮತ್ತು ತಪ್ಪಾಗಿ ಬಳಸಿಲ್ಲವೆಂದು, ಅಥವಾ ಈ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಆ ವ್ಯಾಪಾರ ವಿವರಣೆಯು ಒಂದು ತಪ್ಪು ವ್ಯಾಪಾರ ವಿವರಣೆಯಾಗಿಲ್ಲವೆಂದು ಭರವಸೆ ನೀಡಿರುವುದಾಗಿ ಭಾವಿಸತಕ್ಕದ್ದು. ಆದರೆ ಮಾರಾಟಗಾರನು ಅಥವಾ ಅವನ ಪರವಾಗಿ ಇದಕ್ಕೆ ವ್ಯತಿರಿಕ್ತವಾದುದನ್ನು ಲಿಖಿತದಲ್ಲಿ ವ್ಯಕ್ತಪಡಿಸಿ ಸಹಿ ಮಾಡಿ ಖರೀದಿದಾರನಿಗೆ ಕರಾರಿನ ಮೇಲೆ ಮತ್ತು ಅವನು ಅಂಗೀಕರಿಸಿದ ಮೇರೆಗೆ ಸರಕುಗಳ ಮಾರಾಟದ ಅಥವಾ ಸೇವೆಗಳನ್ನು ಒದಗಿಸುವ ಸಮಯದಲ್ಲಿ ಒಪ್ಪಿಸಿರಬಾರದು.

**127. ರಿಜಿಸ್ಟ್ರಾರನ ಅಧಿಕಾರಗಳು.–** ಈ ಅಧಿನಿಯಮದ ಅಡಿಯಲ್ಲಿ ರಿಜಿಸ್ಟ್ರಾರನ ಮುಂದಿರುವ ಎಲ್ಲ ವ್ಯವಹರಣೆಗಳಲ್ಲಿ,–

(ಎ) ರಿಜಿಸ್ಟ್ರಾರನು, ಸಾಕ್ಷ್ಯವನ್ನು ಸ್ವೀಕರಿಸುವ, ಪ್ರಮಾಣವಚನ ಬೋಧಿಸುವ, ಸಾಕ್ಷಿಗಳನ್ನು ಹಾಜರಿಗೆ ಒತ್ತಾಯಿಸುವ, ದಸ್ತಾವೇಜುಗಳನ್ನು ಹುಡುಕಲು ಮತ್ತು ಹಾಜರುಪಡಿಸಲು ಒತ್ತಾಯಿಸುವ ಮತ್ತು ಸಾಕ್ಷಿಗಳ ಪರೀಕ್ಷೆಗಾಗಿ ಕಾರ್ಯಾಚರಣೆಯನ್ನು ಹೊರಡಿಸುವ ಉದ್ದೇಶಗಳಿಗೆ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು;

(ಬಿ) ರಿಜಿಸ್ಟ್ರಾರನು, 157ನೆಯ ಪ್ರಕರಣದ ಅಡಿಯಲ್ಲಿ ಈ ಬಗ್ಗೆ ಮಾಡಲಾದ ಯಾವುವೇ ನಿಯಮಗಳಿಗೊಳಪಟ್ಟು, ವೆಚ್ಚಗಳ ಬಗ್ಗೆ ತಾನು ಸೂಕ್ತವೆಂದು ಪರಿಗಣಿಸುವ ಅಂಥ ಆದೇಶಗಳನ್ನು ಮಾಡಬಹುದು ಮತ್ತು ಅಂಥ ಯಾವುದೇ ಆದೇಶವನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ಕಾರ್ಯಗತಗೊಳಿಸತಕ್ಕದ್ದು:

ಪರಂತು, ರಿಜಿಸ್ಟ್ರಾರನು, ಸರಕುಗಳನ್ನು ಪ್ರಮಾಣೀಕರಿಸುವುದಕ್ಕೆ ಅಥವಾ ಸೇವೆಗಳನ್ನು ಒದಗಿಸುವುದಕ್ಕೆ ಅಥವಾ ಚಿಹ್ನೆಯ ಬಳಕೆಯನ್ನು ಅಧಿಕೃತಗೊಳಿಸುವುದನ್ನು ಪ್ರಮಾಣೀಕೃತ ವ್ಯಾಪಾರಚಿಹ್ನೆಯ ಮಾಲೀಕನು ನಿರಾಕರಿಸಿರುವುದರ ವಿರುದ್ಧ ಯಾರೇ ಪಕ್ಷಕಾರನು ತನಗೆ ಮಾಡಿದ ಅಪೀಲಿನ ಬಗ್ಗೆ ಅಥವಾ ಅಪೀಲಿನ ವಿರುದ್ಧದ ವೆಚ್ಚಗಳ ಸಂಬಂಧವಾಗಿ ಐತೀರ್ಪು ನೀಡುವ ಯಾವುದೇ ಅಧಿಕಾರವನ್ನು ಹೊಂದಿರತಕ್ಕದ್ದಲ್ಲ;

(ಸಿ) ರಿಜಿಸ್ಟ್ರಾರನು, ನಿಯಮಿಸಲಾದ ರೀತಿಯಲ್ಲಿ ಮಾಡಲಾದ ಒಂದು ಅರ್ಜಿಯ ಮೇಲೆ, ತನ್ನ ತೀರ್ಮಾನವನ್ನು ಪುನರಾವಲೋಕಿಸಬಹುದು.

**128. ರಿಜಿಸ್ಟ್ರಾರನಿಂದ ವಿವೇಚನಾಧಿಕಾರದ ಚಲಾವಣೆ.–** 131ನೆಯ ಪ್ರಕರಣದ ಉಪಬಂಧ ಗಳಿಗೊಳಪಟ್ಟು, ರಿಜಿಸ್ಟ್ರಾರನು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಮೂಲಕ ತನ್ನಲ್ಲಿ ನಿಹಿತವಾಗಿರುವ ಯಾವುದೇ ವಿವೇಚನಾತ್ಮಕ ಅಥವಾ ಇತರೆ ಅಧಿಕಾರವನ್ನು, ಯಾರೇ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು (ನಿಯಮಿಸಲಾದ ಸಮಯದೊಳಗಾಗಿ ಆ ವ್ಯಕ್ತಿಯು ಹಾಗೆ ಅಗತ್ಯಪಡಿಸಿದರೆ) ಒಂದು ಸೂಕ್ತ ಅವಕಾಶವನ್ನು ನೀಡಿದ ಹೊರತು ಆ ಅಧಿಕಾರವನ್ನು ಚಲಾಯಿಸಬೇಕೆಂದು ಅರ್ಜಿಹಾಕಿಕೊಳ್ಳುವ ಆ ವ್ಯಕ್ತಿಗೆ ಪ್ರತಿಕೂಲವಾಗುವಂತೆ ಚಲಾಯಿಸತಕ್ಕದ್ದಲ್ಲ.

**129. ರಿಜಿಸ್ಟ್ರಾರನ ಮುಂದೆ ಸಾಕ್ಷ್ಯ.–** ಈ ಅಧಿನಿಯಮದ ಅಡಿಯಲ್ಲಿ ರಿಜಿಸ್ಟ್ರಾರನ ಮುಂದಿರುವ ಯಾವುದೇ ವ್ಯವಹರಣೆಯಲ್ಲಿ, ಶಪಥಪತ್ರದ ಮೂಲಕ ಸಾಕ್ಷ್ಯವನ್ನು ನೀಡತಕ್ಕದ್ದು:

ಪರಂತು, ರಿಜಿಸ್ಟ್ರಾರನು, ತಾನು ಸೂಕ್ತವೆಂದು ಭಾವಿಸಿದರೆ, ಶಪಥಪತ್ರದ ಮೂಲಕ ಅಂಥ ಸಾಕ್ಷ್ಯದ ಬದಲಾಗಿ ಅಥವಾ ಅದಕ್ಕೆ ಹೆಚ್ಚಿಗೆಯಾಗಿ ಮೌಖಿಕ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು.

**130. ಒಂದು ವ್ಯವಹರಣೆಯಲ್ಲಿ ಪಕ್ಷಕಾರನ ಮರಣ.–** ಒಬ್ಬ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ವ್ಯವಹರಣೆಯಲ್ಲಿ ಒಬ್ಬ ಪಕ್ಷಕಾರನಾಗಿದ್ದು (ಅಪೀಲು ಮಂಡಲಿ ಅಥವಾ ನ್ಯಾಯಾಲಯದ ಮುಂದಿರುವ ವ್ಯವಹರಣೆಯಾಗಿರದ) ವ್ಯವಹರಣೆಯು ಇತ್ಯರ್ಥದಲ್ಲಿರುವಾಗ ಮೃತನಾದರೆ, ರಿಜಿಸ್ಟ್ರಾರನು, ಕೋರಿಕೆಯ ಮೇರೆಗೆ ಮತ್ತು ಮೃತವ್ಯಕ್ತಿಯ ಹಿತಾಸಕ್ತಿಯ ವರ್ಗಾವಣೆಯ ಬಗ್ಗೆ ತನಗೆ ಸಮಾಧಾನವಾಗುವ ರುಜುವಾತಿನ ಮೇರೆಗೆ, ಅವನ ಸ್ಥಾನದಲ್ಲಿ ಹಿತಾಸಕ್ತಿಯುಳ್ಳ ಅವನ ಉತ್ತರಾಧಿಕಾರಿಯನ್ನು ವ್ಯವಹರಣೆಯಲ್ಲಿ ಪ್ರತಿಯೋಜಿಸಬಹುದು ಅಥವಾ ಬದುಕಿರುವ ಪಕ್ಷಕಾರರು ಮೃತವ್ಯಕ್ತಿಯ ಹಿತಾಸಕ್ತಿಯನ್ನು ಸಾಕಷ್ಟು ಮಟ್ಟಿಗೆ ಪ್ರತಿನಿಧಿಸುತ್ತಾರೆಂದು ರಿಜಿಸ್ಟ್ರಾರನು ಅಭಿಪ್ರಾಯಪಟ್ಟರೆ, ಹಿತಾಸಕ್ತಿಯುಳ್ಳ ಅವನ ಉತ್ತರಾಧಿಕಾರಿಯನ್ನು ಪ್ರತಿಯೋಜಿಸದೆ ವ್ಯವಹರಣೆಯನ್ನು ಮುಂದುವರಿಸಲು ಅನುಮತಿಸಬಹುದು.

**131. ಅವಧಿಯ ವಿಸ್ತರಣೆ.–** (1) ರಿಜಿಸ್ಟ್ರಾರನು, ನಿಯಮಿಸಲಾದ ರೀತಿಯಲ್ಲಿ ಮತ್ತು ಗೊತ್ತುಪಡಿಸಲಾದ ಫೀಜಿನೊಂದಿಗೆ ತನಗೆ ಸಲ್ಲಿಸಲಾದ ಅರ್ಜಿಯ ಮೇಲೆ, ಹಾಗೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗಿರಲಿ ಅಥವಾ ಇಲ್ಲದಿರಲಿ, ಯಾವುದೇ ಕೃತ್ಯವನ್ನು ಮಾಡುವುದಕ್ಕೆ ಅವಧಿಯನ್ನು ವಿಸ್ತರಿಸಲು (ಈ ಅಧಿನಿಯಮದಲ್ಲಿ ವ್ಯಕ್ತವಾಗಿ ಉಪಬಂಧಿಸಿದ ಅವಧಿಯಲ್ಲದ), ಸಾಕಷ್ಟು ಕಾರಣವಿದೆಯೆಂದು ಮನಗಂಡರೆ, ವಿಧಿಸುವುದು ಸೂಕ್ತವೆಂದು ತಾನು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಅವಧಿಯನ್ನು ವಿಸ್ತರಿಸಬಹುದು ಮತ್ತು ತದನುಸಾರವಾಗಿ ಪಕ್ಷಕಾರರಿಗೆ ತಿಳಿಸಬಹುದು.

(2) (1)ನೆಯ ಉಪಪ್ರಕರಣದಲ್ಲಿರುವುದಾವುದೂ, ಅವಧಿಯ ವಿಸ್ತರಣೆಗಾಗಿ ಒಂದು ಅರ್ಜಿಯನ್ನು ವಿಲೇ ಮಾಡುವುದಕ್ಕೆ ಮುಂಚೆ ರಿಜಿಸ್ಟ್ರಾರನು ಪಕ್ಷಕಾರರ ಅಹವಾಲನ್ನು ಕೇಳಬೇಕೆಂಬುದನ್ನು ಅಗತ್ಯಪಡಿಸುತ್ತದೆಯೆಂದು ಪರಿಭಾವಿಸತಕ್ಕದ್ದಲ್ಲ ಮತ್ತು ಈ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನ ಯಾವುದೇ ಆದೇಶದ ವಿರುದ್ಧ ಯಾವುದೇ ಅಪೀಲು ಹೂಡಲು ಅವಕಾಶವಿರತಕ್ಕದ್ದಲ್ಲ.

**132. ಬಿಟ್ಟುಬಿಡುವುದು.–** ರಿಜಿಸ್ಟ್ರಾರನ ಅಭಿಪ್ರಾಯದಲ್ಲಿ, ಈ ಅಧಿನಿಯಮದ ಅಥವಾ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಜಾರಿಯಲ್ಲಿದ್ದ ವ್ಯಾಪಾರಚಿಹ್ನೆಗಳಿಗೆ ಸಂಬಂಧಿಸಿದ ಯಾವುದೇ ಅಧಿನಿಯಮದ ಅಡಿಯಲ್ಲಿ ದಾಖಲ್ಮಾಡಿದ ಅರ್ಜಿಯ ಪ್ರಾಸಿಕ್ಯೂಷನ್‌ನಲ್ಲಿ ಅರ್ಜಿದಾರನು, ತಪ್ಪಿತಸ್ಥನಾಗಿದ್ದರೆ ರಿಜಿಸ್ಟ್ರಾರನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ನೋಟೀಸಿನ ಮೂಲಕ ತಪ್ಪಿನ ಪರಿಹಾರ ಕ್ರಮಕ್ಕಾಗಿ ಅರ್ಜಿದಾರನನ್ನು ಅಗತ್ಯಪಡಿಸಬಹುದು ಮತ್ತು ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಬೇಕೆಂದು ಅಪೇಕ್ಷಿಸಿದರೆ, ಅದನ್ನು ಹಾಗೆ ನೀಡಿದ ತರುವಾಯ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ತಪ್ಪಿನ ಬಗ್ಗೆ ಪರಿಹಾರ ಕ್ರಮಕೈಗೊಂಡ ಹೊರತು, ಅರ್ಜಿಯನ್ನು ಬಿಟ್ಟುಬಿಡಲಾಗಿದೆಯೆಂದು ಪರಿಗಣಿಸತಕ್ಕದ್ದು.

**133. ವಿಭಿನ್ನತೆಯ ಬಗ್ಗೆ ರಿಜಿಸ್ಟ್ರಾರನಿಂದ ಪ್ರಾರಂಭಿಕ ಸಲಹೆ.–** (1) ರಿಜಿಸ್ಟ್ರಾರನು, ವ್ಯಾಪಾರ ಚಿಹ್ನೆಯ ನೋಂದಣಿಗಾಗಿ ಅರ್ಜಿ ಸಲ್ಲಿಸಲು ಸೂಚಿಸಿದ ಯಾರೇ ವ್ಯಕ್ತಿಯು ನಿಯಮಿಸಲಾದ ರೀತಿಯಲ್ಲಿ ತನಗೆ ಸಲ್ಲಿಸಿದ ಅರ್ಜಿಯ ಮೇಲೆ, ಆ ವ್ಯಾಪಾರ ಚಿಹ್ನೆಯು ಮೊದಲ ನೋಟಕ್ಕೆ ವಿಭಿನ್ನವೆಂದು ತನಗೆ ಕಂಡುಬಂದಿರುವ ಬಗ್ಗೆ ಸಲಹೆ ನೀಡಬಹುದು.

(2) ರಿಜಿಸ್ಟ್ರಾರನು, ಮೇಲೆ ಹೇಳಿದಂತೆ ಸಕಾರಾತ್ಮಕವಾಗಿ ನೀಡಿದ ಸಲಹೆಗೆ ಸಂಬಂಧಿಸಿದಂತೆ, ವ್ಯಾಪಾರ ಚಿಹ್ನೆಯ ನೋಂದಣಿಗಾಗಿ ಸಲಹೆಯನ್ನು ನೀಡಿದ ನಂತರ ಮೂರು ತಿಂಗಳುಗಳ ಒಳಗೆ ಅರ್ಜಿ ಸಲ್ಲಿಸಿದರೆ, ರಿಜಿಸ್ಟ್ರಾರನು, ಹೆಚ್ಚಿನ ತನಿಖೆಯನ್ನು ಅಥವಾ ಪರ್ಯಾಲೋಚನೆಯನ್ನು ನಡೆಸಿದ ನಂತರ, ಆ ವ್ಯಾಪಾರಚಿಹ್ನೆಯು ವಿಭಿನ್ನವಾಗಿಲ್ಲವೆಂಬ ಆಧಾರದ ಮೇರೆಗೆ ಅರ್ಜಿದಾರನಿಗೆ ಆಕ್ಷೇಪಣೆಯ ನೋಟೀಸನ್ನು ನೀಡಿದರೆ, ಅರ್ಜಿದಾರನು ನಿಯಮಿಸಲಾದ ಅವಧಿಯೊಳಗೆ ಅರ್ಜಿಯ ವಾಪಸಾತಿಯ ನೋಟೀಸನ್ನು ನೀಡಿದ ಮೇಲೆ, ಅರ್ಜಿಯನ್ನು ದಾಖಲ್ಮಾಡಿದ ತರುವಾಯ ಸಂದಾಯ ಮಾಡಿದ ಯಾವುದೇ ಫೀಜನ್ನು ಮರಳಿ ಪಡೆಯುವುದಕ್ಕೆ ಹಕ್ಕುಳ್ಳವನಾಗತಕ್ಕದ್ದು.

**134. ಅತಿಲಂಘನದ ದಾವೆ, ಇತ್ಯಾದಿಗಳನ್ನು ಜಿಲ್ಲಾ ನ್ಯಾಯಾಲಯದ ಮುಂದೆ ಹೂಡುವುದು.–** (1)

(ಎ) ಒಂದು ನೋಂದಾಯಿತ ವ್ಯಾಪಾರಚಿಹ್ನೆಯ ಅತಿಲಂಘನದ; ಅಥವಾ

(ಬಿ) ಒಂದು ನೋಂದಾಯಿತ ವ್ಯಾಪಾರಚಿಹ್ನೆಯ ಯಾವುದೇ ಹಕ್ಕಿಗೆ ಸಂಬಂಧಿಸಿದ; ಅಥವಾ

(ಸಿ) ನೋಂದಾಯಿಸಿರಲಿ ಅಥವಾ ನೋಂದಾಯಿಸಿಲ್ಲದಿರಲಿ, ವಾದಿಯ ವ್ಯಾಪಾರ ಚಿಹ್ನೆಗೆ ತದ್ರೂಪವಾಗಿರುವ ಅಥವಾ ಮೋಸಹೋಗುವಷ್ಟು ಸಮರೂಪವಾಗಿರುವ ಯಾವುದೇ ವ್ಯಾಪಾರ ಚಿಹ್ನೆಯನ್ನು ಪ್ರತಿವಾದಿಯು ಬಳಸುವುದರಿಂದಾಗಿ ಉದ್ಭವಿಸುವ, ಸರಕನ್ನು ಮೋಸದಿಂದ ಮಾರುವುದಕ್ಕೆ ಸಂಬಂಧಿಸಿದ ಯಾವುದೇ ದಾವೆಯನ್ನು, ದಾವೆಯ ಅಧಿವಿಚಾರಣೆಯ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ಜಿಲ್ಲಾ ನ್ಯಾಯಾಲಯಕ್ಕಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯದಲ್ಲಿ ಹೂಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳ ಉದ್ದೇಶಗಳಿಗಾಗಿ, "ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಲಯ"ವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ (1908ರ 5) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ದಾವೆ ಅಥವಾ ಇತರ ವ್ಯವಹರಣೆಯನ್ನು ಹೂಡುವ ಕಾಲದಲ್ಲಿ, ಯಾರ ಅಧಿಕಾರವ್ಯಾಪ್ತಿಯೊಳಗೆ ದಾವೆ ಅಥವಾ ವ್ಯವಹರಣೆಯನ್ನು ಹೂಡುವಂಥ ವ್ಯಕ್ತಿ, ಅಥವಾ ಅಂಥ ವ್ಯಕ್ತಿಗಳು ಒಬ್ಬನಿಗಿಂತ ಹೆಚ್ಚು ಇರುವಲ್ಲಿ ಅವರಲ್ಲಿ ಯಾರಾದರೊಬ್ಬನು, ವಾಸ್ತವವಾಗಿ ಮತ್ತು ಸ್ವಯಿಚ್ಛೆಯಿಂದ ವಾಸವಾಗಿರುವನೋ ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಅಥವಾ ಲಾಭಕ್ಕಾಗಿ ತಾನೇ ಕೆಲಸ ನಿರ್ವಹಿಸುತ್ತಿರುವನೋ ಆ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗಿನ ಒಂದು ಜಿಲ್ಲಾ ನ್ಯಾಯಾಲಯವನ್ನು ಒಳಗೊಂಡಿರತಕ್ಕದ್ದು.

**ವಿವರಣೆ.–** (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, "ವ್ಯಕ್ತಿ" ಎಂಬುದು ನೋಂದಾಯಿತ ಮಾಲೀಕ ಮತ್ತು ನೋಂದಾಯಿತ ಬಳಕೆದಾರನನ್ನು ಒಳಗೊಳ್ಳುತ್ತದೆ.

**135. ಅತಿಲಂಘನ ಅಥವಾ ಸರಕುಗಳನ್ನು ಮೋಸದಿಂದ ಮಾರುವುದಕ್ಕೆ ಸಂಬಂಧಿಸಿದ ದಾವೆಗಳಲ್ಲಿ ಪರಿಹಾರ.–** (1) 134ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಅತಿಲಂಘನಕ್ಕೆ ಅಥವಾ ಸರಕುಗಳನ್ನು ಮೋಸದಿಂದ ಮಾರುವುದಕ್ಕೆ ಸಂಬಂಧಿಸಿದ ಯಾವುವೇ ದಾವೆಗಳಲ್ಲಿ ಒಂದು ನ್ಯಾಯಾಲಯವು, ಮಂಜೂರು ಮಾಡುವ ಪರಿಹಾರದಲ್ಲಿ, ನಿರ್ಬಂಧಕಾಜ್ಞೆಯನ್ನು (ನ್ಯಾಯಾಲಯವು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳು, ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು) ಮತ್ತು ವಾದಿಯ ಆಯ್ಕೆಯಂತೆ, ನಾಶ ಮಾಡುವುದಕ್ಕಾಗಿ ಅಥವಾ ಅಳಿಸಿ ಹಾಕುವುದಕ್ಕಾಗಿ ಅತಿಲಂಘನವಾದ ಗುರುತು ಚೀಟಿಗಳ ಮತ್ತು ಚಿಹ್ನೆಗಳನ್ನು ಒಪ್ಪಿಸಿಬಿಡುವ ಯಾವುದೇ ಆದೇಶದೊಂದಿಗೆ ಅಥವಾ ಆದೇಶವಿಲ್ಲದೆ, ಹಾನಿಯನ್ನಾಗಲಿ ಅಥವಾ ಲಾಭಗಳ ಲೆಕ್ಕವನ್ನಾಗಲಿ, ಒಳಗೊಳ್ಳುತ್ತದೆ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ಬಂಧಕಾಜ್ಞೆಯ ಆದೇಶವು, ಈ ಮುಂದಿನ ಯಾವುದೇ ವಿಷಯಗಳಿಗೆ ಏಕಪಕ್ಷೀಯ ನಿರ್ಬಂಧಕಾಜ್ಞೆ ಅಥವಾ ಯಾವುದೇ ವಾದಕಾಲೀನ ಆದೇಶವನ್ನು ಒಳಗೊಂಡಿರಬಹುದು, ಎಂದರೆ:–

(ಎ) ದಸ್ತಾವೇಜುಗಳನ್ನು ಕಂಡುಹಿಡಿಯುವುದು;

(ಬಿ) ದಾವೆಯ ವಸ್ತುವಿಷಯಕ್ಕೆ ಸಂಬಂಧಿಸಿ ಅತಿಲಂಘನವಾದ ಸರಕುಗಳನ್ನು, ದಸ್ತಾವೇಜುಗಳನ್ನು ಅಥವಾ ಇತರ ಸಾಕ್ಷ್ಯವನ್ನು ಪರಿರಕ್ಷಿಸುವುದು;

(ಸಿ) ವಾದಿಗೆ ಅಂತಿಮವಾಗಿ ಕೊಡಲು ಐರ್ತೀರ್ಪು ಮಾಡಬಹುದಾದ ನಷ್ಟಗಳು, ವೆಚ್ಚಗಳು ಅಥವಾ ಇತರ ಆರ್ಥಿಕ ಪರಿಹಾರಗಳನ್ನು ವಸೂಲಿ ಮಾಡುವಲ್ಲಿ ವಾದಿಯ ಸಾಮರ್ಥ್ಯಕ್ಕೆ ಪ್ರತಿಕೂಲ ಪರಿಣಾಮ ಬೀರಬಹುದಾದ ರೀತಿಯಲ್ಲಿ ತನ್ನ ಸ್ವತ್ತುಗಳನ್ನು ವಿಲೆ ಮಾಡುವುದನ್ನು ಅಥವಾ ವ್ಯವಹರಿಸುವುದನ್ನು ಪ್ರತಿವಾದಿಯನ್ನು ನಿರ್ಬಂಧಿಸುವುದು.

(3) (1)ನೆಯ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನ್ಯಾಯಾಲಯವು,-

(ಎ) ವ್ಯಾಪಾರಚಿಹ್ನೆಯ ಅತಿಲಂಘನಕ್ಕೆ ಸಂಬಂಧಿಸಿದ ದಾವೆಯಲ್ಲಿ, ಫಿರ್ಯಾದು ಮಾಡಲಾದ ಅತಿಲಂಘನವು ಪ್ರಮಾಣೀಕೃತ ವ್ಯಾಪಾರಚಿಹ್ನೆಗೆ ಅಥವಾ ಸಾಮೂಹಿಕ ಚಿಹ್ನೆಗೆ ಸಂಬಂಧಿಸಿದ್ದರೆ; ಅಥವಾ

(ಬಿ) ಅತಿಲಂಘನಕ್ಕೆ ಸಂಬಂಧಿಸಿದ ದಾವೆಯಲ್ಲಿ, ಪ್ರತಿವಾದಿಯು,-

(i) ದಾವೆಯಲ್ಲಿ ಫಿರ್ಯಾದು ಮಾಡಲಾದ ವ್ಯಾಪಾರ ಚಿಹ್ನೆಯ ಬಳಕೆಯನ್ನು ಅವನು ಪ್ರಾರಂಭಿಸಿದ ಸಮಯದಲ್ಲಿ, ವಾದಿಯ ಆ ವ್ಯಾಪಾರ ಚಿಹ್ನೆಯು ರಿಜಿಸ್ಟರಿನಲ್ಲಿತ್ತು ಅಥವಾ ವಾದಿಯು ಅನುಮತಿಸಲಾದ ಬಳಕೆಯ ಮೂಲಕ ಬಳಸುವ ನೋಂದಾಯಿತ ಬಳಕೆದಾರನೆಂದು ತಿಳಿದಿರಲಿಲ್ಲವೆಂದು ನಂಬುವುದಕ್ಕೆ ಸೂಕ್ತ ಆಧಾರವಿರಲಿಲ್ಲವೆಂದು; ಮತ್ತು

(ii) ಅವನು ವ್ಯಾಪಾರಚಿಹ್ನೆಗೆ ಸಂಬಂಧಿಸಿದಂತೆ ತಿಳುವಳಿಕೆಯನ್ನು ಮತ್ತು ವಾದಿಯ ಹಕ್ಕಿನ ಅಸ್ತಿತ್ವ ಮತ್ತು ಸ್ವರೂಪವನ್ನು ತಿಳಿದಾಗ, ಯಾವ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಆ ವ್ಯಾಪಾರಚಿಹ್ನೆಯನ್ನು ನೋಂದಾಯಿಸಲಾಗಿತ್ತೋ ಆ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ವ್ಯಾಪಾರಚಿಹ್ನೆಯ ಬಳಕೆಯನ್ನು ತಕ್ಷಣವೇ ನಿಲ್ಲಿಸಿದ್ದೆನೆಂದು

– ನ್ಯಾಯಾಲಯಕ್ಕೆ ಮನವರಿಕೆ ಮಾಡಿದ್ದರೆ; ಅಥವಾ

(ಸಿ) ಸರಕನ್ನು ಮೋಸದಿಂದ ಮಾರುವುದಕ್ಕೆ ಸಂಬಂಧಿಸಿದ ದಾವೆಯಲ್ಲಿ ಪ್ರತಿವಾದಿಯು,-

(i) ದಾವೆಯಲ್ಲಿ ಫಿರ್ಯಾದು ಮಾಡಲಾದ ವ್ಯಾಪಾರಚಿಹ್ನೆಯ ಬಳಕೆಯನ್ನು ಅವನು ಪ್ರಾರಂಭಿಸಿದ ಸಮಯದಲ್ಲಿ, ವಾದಿಯ ಆ ವ್ಯಾಪಾರಚಿಹ್ನೆ ಬಳಕೆಯಲ್ಲಿದೆ ಎಂದು ತಿಳಿದಿರಲಿಲ್ಲ ಮತ್ತು ಅದನ್ನು ನಂಬುವುದಕ್ಕೆ ಸೂಕ್ತ ಆಧಾರಗಳಿರಲಿಲ್ಲವೆಂದು; ಮತ್ತು

(ii) ವಾದಿಯ ವ್ಯಾಪಾರಚಿಹ್ನೆಯ ಅಸ್ತಿತ್ವವನ್ನು ಮತ್ತು ಸ್ವರೂಪವನ್ನು ತಿಳಿದ ತಕ್ಷಣ ಫಿರ್ಯಾದು ಮಾಡಲಾದ ವ್ಯಾಪಾರಚಿಹ್ನೆಯ ಬಳಕೆಯನ್ನು ನಿಲ್ಲಿಸಿದ್ದೆನೆಂದು

– ನ್ಯಾಯಾಲಯಕ್ಕೆ ಮನವರಿಕೆ ಮಾಡಿದ್ದರೆ ಯಾವುದೇ ಪ್ರಕರಣದಲ್ಲಿ ಹಾನಿಪೂರ್ತಿ ಮೂಲಕವಾಗಲಿ (ಅತ್ಯಲ್ಪ ಮೊತ್ತದ ಹಾನಿಪೂರ್ತಿಯನ್ನು ಹೊರತುಪಡಿಸಿ) ಅಥವಾ ಲಾಭಗಳಿಗಾಗಿಯಾಗಲಿ ಪರಿಹಾರವನ್ನು ನೀಡತಕ್ಕದ್ದಲ್ಲ.

**136. ನೋಂದಾಯಿತ ಬಳಕೆದಾರನನ್ನು ಕೆಲವು ವ್ಯವಹರಣೆಗಳಲ್ಲಿ ಪಕ್ಷಕಾರರನ್ನಾಗಿ ಮಾಡುವುದು.-** (1) VIIನೆಯ ಅಧ್ಯಾಯದ ಅಥವಾ 91ನೆಯ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ವ್ಯವಹರಣೆಯಲ್ಲಿ, ಆ ಅಧ್ಯಾಯದ ಅಥವಾ ಪ್ರಕರಣದ ಅಡಿಯಲ್ಲಿನ ಯಾವುದೇ ವ್ಯವಹರಣೆಯ ಸಂಬಂಧದಲ್ಲಿ ಸ್ವತಃ ಅರ್ಜಿದಾರನಾಗಿಲ್ಲದಿರುವ, ಅನುಮತಿಸಲಾದ ಬಳಕೆಯ ರೂಪದಲ್ಲಿ ಬಳಸಲಾಗುವ ವ್ಯಾಪಾರಚಿಹ್ನೆಯ ಪ್ರತಿಯೊಬ್ಬ ನೋಂದಾಯಿತ ಬಳಕೆದಾರನನ್ನು, ವ್ಯವಹರಣೆಗೆ ಒಬ್ಬ ಪಕ್ಷಕಾರನನ್ನಾಗಿ ಮಾಡತಕ್ಕದ್ದು.

(2) ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಸಹ, ನೋಂದಾಯಿತ ಬಳಕೆದಾರನನ್ನು ಹಾಗೆ ವ್ಯವಹರಣೆಯ ಪಕ್ಷಕಾರನನ್ನಾಗಿ ಮಾಡಿದಾಗ, ಆ ವ್ಯವಹರಣೆಯಲ್ಲಿ ಅವನು ಹಾಜರಾಗಿ ಮತ್ತು ಅದರಲ್ಲಿ ಪಾಲ್ಗೊಂಡ ಹೊರತು ಯಾವುದೇ ವೆಚ್ಚಗಳಿಗೆ ಹೊಣೆಗಾರನಾಗಿರತಕ್ಕದ್ದಲ್ಲ.

**137. ರಿಜಿಸ್ಟರಿನಲ್ಲಿನ ನಮೂದನೆಗಳು, ಇತ್ಯಾದಿ ಮತ್ತು ರಿಜಿಸ್ಟ್ರಾರನು ಮಾಡಿದ ಕಾರ್ಯ ಸಾಕ್ಷ್ಯವಾಗಿರುವುದು.–** (1) ರಿಜಿಸ್ಟ್ರಾರನು ಪ್ರಮಾಣೀಕರಿಸಿದ್ದನೆಂದು ತಾತ್ಪರ್ಯವಾಗುವ ಮತ್ತು ವ್ಯಾಪಾರಚಿಹ್ನೆಗಳ ನೋಂದಣಿ ಕಚೇರಿಯ ಮೊಹರಿನೊಂದಿಗೆ ಮೊಹರು ಮಾಡಲಾದ ರಿಜಿಸ್ಟರಿನಲ್ಲಿನ ಯಾವುದೇ ನಮೂದನೆಯ ಅಥವಾ 148ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ದಸ್ತಾವೇಜಿನ ಪ್ರತಿಯನ್ನು ಎಲ್ಲಾ ನ್ಯಾಯಾಲಯಗಳಲ್ಲಿ ಸಾಕ್ಷ್ಯವಾಗಿ ಮತ್ತು ಎಲ್ಲಾ ವ್ಯವಹರಣೆಗಳಲ್ಲಿ ಹೆಚ್ಚಿನ ರುಜುವಾತಿಲ್ಲದೆ ಅಥವಾ ಮೂಲ ಪ್ರತಿಯನ್ನು ಹಾಜರುಪಡಿಸದೆ ಅಂಗೀಕರಿಸತಕ್ಕದ್ದು.

(2) ರಿಜಿಸ್ಟ್ರಾರನು ಈ ಅಧಿನಿಯಮದ ಅಥವಾ ನಿಯಮಗಳ ಮೂಲಕ, ಮಾಡಲು ಅಥವಾ ನಿರ್ವಹಿಸಲು ಅಧಿಕೃತಗೊಳಿಸಲಾಗಿರುವ ಯಾವುದೇ ನಮೂದನೆ, ವಿಷಯ ಅಥವಾ ಕಾರ್ಯಕ್ಕೆ ಸಂಬಂಧಿಸಿದಂತೆ ಅವನ ಸಹಿಯಿದೆಯೆಂದು ತಾತ್ಪರ್ಯವಾಗುವ ಪ್ರಮಾಣಪತ್ರವು, ಮಾಡಲಾದ ನಮೂದನೆಗಳಿಗೆ ಮತ್ತು ಅದರ ಒಳಾಂಶಗಳಿಗೆ, ಅಥವಾ ಮಾಡಿದ ಅಥವಾ ಮಾಡಿರದ ವಿಷಯ ಅಥವಾ ಕಾರ್ಯಗಳಿಗೆ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು.

**138. ರಿಜಿಸ್ಟರ್ ಇತ್ಯಾದಿಯನ್ನು ಹಾಜರುಪಡಿಸುವುದಕ್ಕೆ ರಿಜಿಸ್ಟ್ರಾರನನ್ನು ಮತ್ತು ಇತರ ಅಧಿಕಾರಿಗಳನ್ನು ಒತ್ತಾಯಿಸದಿರುವುದು.–** ರಿಜಿಸ್ಟ್ರಾರನನ್ನು ಅಥವಾ ವ್ಯಾಪಾರಚಿಹ್ನೆಗಳ ನೋಂದಣಿ ರಿಜಿಸ್ಟ್ರಿಯ ಯಾರೇ ಅಧಿಕಾರಿಯನ್ನು, ಅವನು ಪಕ್ಷಕಾರನಾಗಿಲ್ಲದಿರುವ, ಯಾವುವೇ ಕಾನೂನು ವ್ಯವಹರಣೆಗಳಲ್ಲಿ ವಿಶೇಷ ಕಾರಣಕ್ಕಾಗಿ ನ್ಯಾಯಾಲಯವು ಮಾಡಿದ ಆದೇಶವನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿಯಲ್ಲಿ ನೀಡಲಾದ ಯಾವ ಒಂದು ಪ್ರಮಾಣೀಕೃತ ಪ್ರತಿಯನ್ನು ಹಾಜರುಪಡಿಸುವುದರಿಂದ ಅದರ ಒಳಾಂಶಗಳನ್ನು ರುಜುವಾತುಪಡಿಸಬಹುದೊ, ತನ್ನ ಅಭಿರಕ್ಷೆಯಲ್ಲಿರುವ ಆ ರಿಜಿಸ್ಟರನ್ನು ಅಥವಾ ಯಾವುದೇ ಇತರ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ಅಥವಾ ಅದರಲ್ಲಿ ದಾಖಲಿಸಲಾದ ವಿಷಯಗಳನ್ನು ರುಜುವಾತುಪಡಿಸಲು ಸಾಕ್ಷಿಯೆಂದು ಹಾಜರಾಗುವದಕ್ಕೆ ಒತ್ತಾಯಪಡಿಸತಕ್ಕದ್ದಲ್ಲ.

**139. ಸರಕುಗಳ ಮೂಲದ ಸೂಚನೆಯನ್ನು ತೋರಿಸುವಂತೆ ಅಗತ್ಯಪಡಿಸುವ ಅಧಿಕಾರ.–** (1) ಭಾರತದ ಪರಿಮಿತಿಗಳ ಹೊರಗೆ ತಯಾರಿಸಲಾದ ಅಥವಾ ಉತ್ಪಾದಿಸಲಾದ ಮತ್ತು ಭಾರತಕ್ಕೆ ಆಮದು ಮಾಡಲಾದ, ಅಥವಾ ಭಾರತದ ಪರಿಮಿತಿಗಳೊಳಗೆ ತಯಾರಿಸಲಾದ ಅಥವಾ ಉತ್ಪಾದಿಸಲಾದ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವರ್ಗದ ಸರಕುಗಳನ್ನು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಗತ್ಯಪಡಿಸಬಹುದಾದಂತೆ, ಅದನ್ನು ಹೊರಡಿಸಿದಂದಿನಿಂದ ಮೂರು ತಿಂಗಳಿಗೆ ಕಡಿಮೆಯಲ್ಲದ ಅಂಥ ಅವಧಿಯಲ್ಲಿ ಅಧಿಸೂಚನೆಯ ಮೂಲಕ ನೇಮಕ ಮಾಡಬಹುದಾದ ಅಂಥ ದಿನಾಂಕದಿಂದ ಯಾವ ದೇಶದಲ್ಲಿ ಅಥವಾ ಸ್ಥಳದಲ್ಲಿ ಅವುಗಳನ್ನು ತಯಾರಿಸಲಾಗಿದೆಯೋ ಅಥವಾ ಉತ್ಪಾದಿಸಲಾಗಿದೆಯೋ ಆ ದೇಶ ಅಥವಾ ಸ್ಥಳದ ಅಥವಾ ತಯಾರಕನ ಅಥವಾ ಯಾವ ವ್ಯಕ್ತಿಗಾಗಿ ಸರಕುಗಳನ್ನು ತಯಾರಿಸಲಾಗಿದೆಯೋ ಅ ವ್ಯಕ್ತಿಯ ಹೆಸರು ಮತ್ತು ವಿಳಾಸದ ಸೂಚನೆಯನ್ನು ಅವುಗಳಿಗೆ ಅಂಟಿಸಿರತಕ್ಕದ್ದೆಂದು ಅಗತ್ಯಪಡಿಸಬಹುದು.

(2) ಅಧಿಸೂಚನೆಯಲ್ಲಿ ಅಂಥ ಸೂಚನೆಯನ್ನು ಅಂಟಿಸತಕ್ಕ ವಿಧಾನವನ್ನು ನಿರ್ದಿಷ್ಟಪಡಿಸಬಹುದು ಎಂದರೆ, ಸರಕುಗಳಿಗೆ ಆಗಲಿ ಅಥವಾ ಇತರ ಯಾವುದೇ ವಿಧಾನದಲ್ಲಾಗಲಿ, ಮತ್ತು ಯಾವ ಸಮಯ ಅಥವಾ ಸಂದರ್ಭಗಳಲ್ಲಿ, ಸೂಚನೆಯು ಇರುವುದು ಅವಶ್ಯಕವಾಗಿದೆ ಎಂದರೆ, ಆಮದಿಗೆ ಮಾತ್ರವೇ ಅಥವಾ ಮಾರಾಟದ ಸಮಯದಲ್ಲೂ ಸಗಟುವ್ಯಾಪಾರದಲ್ಲಿ ಅಥವಾ ಚಿಲ್ಲರೆ ವ್ಯಾಪಾರದಲ್ಲಿ ಅಥವಾ ಎರಡರಲ್ಲೂ ಎಂಬುದನ್ನು ನಿರ್ದಿಷ್ಟಪಡಿಸಬಹುದು.

(3) ಸಂಬಂಧಿಸಿದ ಸರಕುಗಳಲ್ಲಿನ ವ್ಯಾಪಾರಿಗಳ ಅಥವಾ ತಯಾರಕರ, ಉತ್ಪಾದಕರ ಅಥವಾ ಬಳಕೆದಾರರ ಹಿತಾಸಕ್ತಿಯನ್ನು ಬಹುಮಟ್ಟಿಗೆ ಪ್ರತಿನಿಧಿಸುವ ವ್ಯಕ್ತಿಗಳು ಅಥವಾ ಸಂಘಗಳು ಅಧಿಸೂಚನೆಯನ್ನು ಹೊರಡಿಸುವುದಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಹೊರತುಪಡಿಸಿ, ಅಥವಾ ಕೇಂದ್ರ ಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದಂತೆ, ಅಂಥ ವಿಚಾರಣೆ ನಡೆಸಿ ಅಥವಾ ವಿಚಾರಣೆಯಿಲ್ಲದೆ, ಅಧಿಸೂಚನೆಯನ್ನು ಹೊರಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವೆಂದು ಕೇಂದ್ರ ಸರ್ಕಾರವು ಅನ್ಯಥಾ ಮನಗಂಡ ಹೊರತು, ಈ ಪ್ರಕರಣದ ಅಡಿಯಲ್ಲಿ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(4) ಸಾಮಾನ್ಯ ಖಂಡಗಳ ಅಧಿನಿಯಮ, 1897ರ (1897ರ 10) 23ನೆಯ ಪ್ರಕರಣದ ಉಪಬಂಧಗಳು, ಪೂರ್ವಪ್ರಕಟಣೆಯ ಷರತ್ತುಗಳಿಗೊಳಪಟ್ಟು ಒಂದು ನಿಯಮಕ್ಕೆ ಅಥವಾ ಒಂದು ಉಪವಿಧಿಗೆ ಅವು ಅನ್ವಯವಾಗುವಂತೆ ಈ ಪ್ರಕರಣದ ಅಡಿಯಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಅನ್ವಯವಾಗತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿನ ಅಧಿಸೂಚನೆಯು, ಭಾರತದ ಪರಿಮಿತಿಗಳ ಹೊರಗೆ ತಯಾರಿಸಲಾದ ಅಥವಾ ಉತ್ಪಾದಿಸಲಾದ ಅಥವಾ ಭಾರತಕ್ಕೆ ಆಮದು ಮಾಡಿಕೊಳ್ಳಲಾದ ಸರಕುಗಳಿಗೆ, ಆ ಸರಕುಗಳ ಸಂಬಂಧದಲ್ಲಿ, ಸೀಮಾಸುಂಕ ಕಮೀಷನರನು, ಭಾರತದಲ್ಲಿ ಹಡಗಿನಿಂದ ಹಡಗಿಗೆ ಸಾಗಣೆಯ ಅಥವಾ ಭಾರತದ ಮೂಲಕ ಸಾಗಣೆಯ ನಂತರವಾಗಲಿ ಅಥವಾ ಇತರೆ ರೀತಿಯಲ್ಲಾಗಲಿ, ಆಮದಿನ ಸಮಯದಲ್ಲಿ ಅವುಗಳನ್ನು ರಫ್ತು ಮಾಡುವುದಕ್ಕೆ ಉದ್ದೇಶಿಸಲಾಗಿತ್ತೆಂದು ಮನಗಂಡರೆ, ಅನ್ವಯಿಸತಕ್ಕದ್ದಲ್ಲ.

**140. ಸುಳ್ಳು ವ್ಯಾಪಾರಚಿಹ್ನೆಗಳನ್ನು ಹೊಂದಿರುವ ಆಮದು ಸರಕುಗಳ ಮಾಹಿತಿಯನ್ನು ಅಗತ್ಯಪಡಿಸುವ ಅಧಿಕಾರ.–** (1) ಒಂದು ನೋಂದಾಯಿತ ವ್ಯಾಪಾರಚಿಹ್ನೆಯ ಮಾಲೀಕ ಅಥವಾ ಒಬ್ಬ ಲೈಸೆನ್ಸುದಾರನು, ಸದರಿ ಸರಕುಗಳ ಆಮದು 29ನೇ ಪ್ರಕರಣದ (6)ನೇ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ಅತಿಲಂಘನವಾಗುವಂತಿದ್ದರೆ, ಯಾವುವೇ ಸರಕುಗಳ ಆಮದನ್ನು ನಿರೋಧಿಸುವಂತೆ ಸೀಮಾಸುಂಕ ಕಲೆಕ್ಟರನಿಗೆ ಲಿಖಿತದಲ್ಲಿ ಸೂಚನೆಯನ್ನು ನೀಡಬಹುದು.

(2) ವ್ಯಾಪಾರ ಚಿಹ್ನೆಗಳ ಸಂರಕ್ಷಣೆಗಾಗಿ, ಸೀಮಾಸುಂಕ ಅಧಿನಿಯಮ, 1962ರ 11ನೇ ಪ್ರಕರಣದ (2)ನೇ ಉಪಪ್ರಕರಣದ (ಎನ್) ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಭಾರತಕ್ಕೆ ಆಮದು ಮಾಡಿಕೊಳ್ಳದಂತೆ ನಿಷೇಧಿಸಲಾದ ಮತ್ತು ಆ ಅಧಿನಿಯಮದ ಅಡಿಯಲ್ಲಿ ಆಮದು ಮಾಡಿಕೊಂಡ ಮೇಲೆ ಮುಟ್ಟುಗೋಲಿಗೆ ಬದ್ಧವಾಗಿರುವ ಸರಕುಗಳನ್ನು ಭಾರತಕ್ಕೆ ಆಮದು ಮಾಡಿಕೊಂಡಾಗ, ಸೀಮಾಸುಂಕ ಕಮಿಷನರು, ತನಗೆ ಮಾಡಿಕೊಂಡ ನಿವೇದನೆಯ ಮೇಲೆ, ಫಿರ್ಯಾದಿನ ಆ ವ್ಯಾಪಾರ ಚಿಹ್ನೆಯು ಸುಳ್ಳು ವ್ಯಾಪಾರ ಚಿಹ್ನೆಯಾಗಿ ಬಳಕೆಯಾಗಿದೆಯೆಂದು ನಂಬುವುದಕ್ಕೆ ಕಾರಣವಿದ್ದಾಗ, ಸರಕುಗಳನ್ನು ಆಮದು ಮಾಡಿಕೊಳ್ಳುವವನನ್ನು ಅಥವಾ ಅವನ ಏಜೆಂಟನನ್ನು, ಸರಕುಗಳಿಗೆ ಸಂಬಂಧಿಸಿದಂತೆ ತನ್ನ ಸ್ವಾಧೀನದಲ್ಲಿರುವ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ಮತ್ತು ಯಾವ ವ್ಯಕ್ತಿಯ ಮೂಲಕ ಭಾರತಕ್ಕೆ ಸರಕುಗಳನ್ನು ರವಾನಿಸಲಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸದ ಬಗ್ಗೆ ಮತ್ತು ಭಾರತದಲ್ಲಿ ಯಾವ ವ್ಯಕ್ತಿಗೆ ಸರಕುಗಳನ್ನು ಕಳುಹಿಸಲಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸದ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಅಗತ್ಯಪಡಿಸಬಹುದು.

(3) ಆಮದು ಮಾಡಿಕೊಳ್ಳುವವನು ಅಥವಾ ಅವನ ಏಜೆಂಟನು ಹದಿನಾಲ್ಕು ದಿನಗಳೊಳಗೆ, ಹಿಂದೆ ಹೇಳಿದಂತಹ ಅಗತ್ಯತೆಯನ್ನು ಪಾಲಿಸತಕ್ಕದ್ದು, ಮತ್ತು ಆತ ಹಾಗೆ ಮಾಡುವುದಕ್ಕೆ ವಿಫಲನಾದರೆ, ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳುವವನಿಂದ ಅಥವಾ ಅವನ ಏಜೆಂಟನಿಂದ ಪಡೆಯಲಾದ ಯಾವುದೇ ಮಾಹಿತಿಯನ್ನು ಸುಳ್ಳು ವ್ಯಾಪಾರಚಿಹ್ನೆಯೆಂದು ಬಳಸಲಾಗಿದೆಯೆಂದು ಹೇಳಲಾದ ವ್ಯಾಪಾರಚಿಹ್ನೆಯ ನೋಂದಾಯಿತ ಮಾಲೀಕನಿಗೆ ಅಥವಾ ನೋಂದಾಯಿತ ಬಳಕೆದಾರನಿಗೆ ಸೀಮಾಸುಂಕ ಕಮಿಷನರನು ತಿಳಿಸಬಹುದು.

**141. ಸಿಂಧುತ್ವ ಪ್ರಮಾಣಪತ್ರ.–** ಅಪೀಲು ಮಂಡಲಿಯ ಮುಂದೆ ರಿಜಿಸ್ಟರನ್ನು ಸರಿಪಡಿಸುವುದಕ್ಕಾಗಿ ಇರುವ ಯಾವುದೇ ಕಾನೂನು ವ್ಯವಹರಣೆಯಲ್ಲಿ, ವ್ಯಾಪಾರಚಿಹ್ನೆಯ ನೋಂದಣಿಯ ಸಿಂಧುತ್ವಕ್ಕೆ ಸಂಬಂಧಿಸಿದ ವಿವಾದದ ಬಗ್ಗೆ ವ್ಯಾಪಾರಚಿಹ್ನೆಯ ನೋಂದಾಯಿತ ಮಾಲೀಕನ ಪರವಾಗಿ ನೀಡಲಾಗಿರುವ ತೀರ್ಮಾನವನ್ನು ಅದನ್ನು ವಿರೋಧಿಸಲಾಗಿದ್ದರೆ, ಅಪೀಲು ಮಂಡಲಿಯು ಹಾಗೆಂದು ಒಂದು ಪ್ರಮಾಣಪತ್ರವನ್ನು ನೀಡಬಹುದು, ಮತ್ತು ಅಂಥ ಪ್ರಮಾನಣಪತ್ರವನ್ನು ನೀಡಿದ್ದು ತದನಂತರ, ಸದರಿ ಸಿಂಧುತ್ವವು ಯಾವುದೇ ತರುವಾಯದ ಕಾನೂನು ವ್ಯವಹರಣೆಯಲ್ಲಿ ಪ್ರಶ್ನಿತವಾಗಿದ್ದರೆ, ಸದರಿ ಮಾಲೀಕನು ವ್ಯಾಪಾರಚಿಹ್ನೆಯ ನೋಂದಣಿಯ ಸಿಂಧುತ್ವವನ್ನು ದೃಢೀಕರಿಸುವ ಒಂದು ಅಂತಿಮ ಆದೇಶ ಅಥವಾ ತೀರ್ಪನ್ನು ತನ್ನ ಪರವಾಗಿ ಪಡೆದ ಮೇಲೆ, ಸದರಿ ಅಂತಿಮ

ಆದೇಶ ಅಥವಾ ತೀರ್ಪು ಸಾಕಷ್ಟು ಕಾರಣಕ್ಕಾಗಿ ಅನ್ಯಥಾ ನಿರ್ದೇಶಿಸಿದ ಹೊರತು, ನ್ಯಾಯವಾದಿ ಮತ್ತು ಕಕ್ಷಿದಾರನ ನಡುವಿನ ಸಂಪೂರ್ಣ ಖರ್ಚು ಮತ್ತು ವೆಚ್ಚಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

**142. ಕಾನೂನು ವ್ಯವಹರಣೆಗಳ ಆಧಾರರಹಿತ ಬೆದರಿಕೆಗಳು.–** (1) ಒಬ್ಬ ವ್ಯಕ್ತಿಯು ಸುತ್ತೋಲೆಗಳ, ಜಾಹಿರಾತುಗಳ ಮೂಲಕ ಅಥವಾ ಇತರ ರೀತಿಯಲ್ಲಿ ನೋಂದಾಯಿತವಾದ ಅಥವಾ ಮೊದಲು ನಮೂದಿಸಿದ ವ್ಯಕ್ತಿಯಿಂದ ನೋಂದಾಯಿತವಾಗಿದೆಯೆಂದು ಆಪಾದಿತವಾದ ಒಂದು ವ್ಯಾಪಾರ ಚಿಹ್ನೆಯ ಅತಿಲಂಘನಕ್ಕಾಗಿ ಒಂದು ಕ್ರಮದ ಮೂಲಕ ಅಥವಾ ವ್ಯವಹರಣೆಯ ಮೂಲಕ ಅಥವಾ ಅಂತಹುದೇ ಇತರೆ ವ್ಯವಹರಣೆಯ ಮೂಲಕ ವ್ಯಕ್ತಿಯನ್ನು ಬೆದರಿಸಿದಲ್ಲಿ, ಬಾಧಿತ ವ್ಯಕ್ತಿಯು, ಬೆದರಿಕೆ ಒಡ್ಡಿದ ವ್ಯಕ್ತಿಯು ವ್ಯಾಪಾರಚಿಹ್ನೆಯ ನೋಂದಾಯಿತ ಮಾಲೀಕನಾಗಿರಲಿ ಅಥವಾ ಇಲ್ಲದಿರಲಿ ಅಥವಾ ನೋಂದಾಯಿತ ಬಳಕೆದಾರನಾಗಿರಲಿ ಅಥವಾ ಇಲ್ಲದಿರಲಿ, ಮೊದಲು ನಮೂದಿಸಿದ ವ್ಯಕ್ತಿಯ ವಿರುದ್ಧ ದಾವೆಯನ್ನು ಹೂಡಬಹುದು ಮತ್ತು ಆ ಬೆದರಿಕೆಗಳು ಸಮರ್ಥನೀಯವಲ್ಲವೆಂಬ ಒಂದು ಘೋಷಣೆಯನ್ನು ಮತ್ತು ಬೆದರಿಕೆಗಳನ್ನು ಮುಂದುವರಿಸುವುದರ ವಿರುದ್ಧ ಒಂದು ನಿರ್ಬಂಧಕಾಜ್ಞೆಯನ್ನು ಪಡೆಯಬಹುದು ಮತ್ತು ಮೊದಲು ನಮೂದಿಸಿದ ವ್ಯಕ್ತಿಯು, ಆ ವ್ಯಾಪಾರಚಿಹ್ನೆಯನ್ನು ನೋಂದಾಯಿಸಲಾಗಿದೆಯೆಂದು ಮತ್ತು ಯಾವ ಕೃತ್ಯಗಳ ಸಂಬಂಧದಲ್ಲಿ ವ್ಯವಹರಣೆಗಳನ್ನು ಹೂಡುವುದಾಗಿ ಬೆದರಿಸಲಾಗಿದೆಯೋ ಆ ಕೃತ್ಯಗಳು, ವ್ಯಾಪಾರ ಚಿಹ್ನೆಯ ಅತಿಲಂಘನವನ್ನು ಮಾಡಿದಂತೆ ಅಥವಾ ಆ ಕೃತ್ಯಗಳನ್ನು ಮಾಡಿದರೆ, ಅತಿಲಂಘನವನ್ನು ಮಾಡುವಂತೆ ಆಗುತ್ತದೆ ಎಂದು ನ್ಯಾಯಾಲಯಕ್ಕೆ ಮನಗಾಣಿಸಿದ ಹೊರತು ಅವನಿಗೆ ಉಂಟಾದಂಥ ಹಾನಿಪೂರ್ತಿಯನ್ನು (ಯಾವುದಾದರೂ ಇದ್ದರೆ) ವಸೂಲು ಮಾಡಬಹುದು.

(2) ನಿಕಟಪೂರ್ವ ಉಪಪ್ರಕರಣವು, ವ್ಯಾಪಾರ ಚಿಹ್ನೆಯ ನೋಂದಾಯಿತ ಮಾಲೀಕನು ಅಥವಾ 52ನೇ ಪ್ರಕರಣದ (1)ನೇ ಉಪಪ್ರಕರಣಕ್ಕನುಸಾರವಾಗಿ ಕಾರ್ಯನಿರ್ವಹಿಸುವ ಒಬ್ಬ ನೋಂದಾಯಿತ ಬಳಕೆದಾರನು, ವ್ಯಾಪಾರ ಚಿಹ್ನೆಯ ಅತಿಲಂಘನಕ್ಕಾಗಿ ಬೆದರಿಕೆಯೊಡ್ಡಿದ ವ್ಯಕ್ತಿಯ ವಿರುದ್ಧ ಯುಕ್ತ ಶ್ರದ್ಧೆಯಿಂದ ಕ್ರಮವನ್ನು ಪ್ರಾರಂಭಿಸಿದರೆ ಮತ್ತು ಮುಂದುವರಿಸಿದರೆ, ಅನ್ವಯವಾಗತಕ್ಕದ್ದಲ್ಲ.

(3) ಈ ಪ್ರಕರಣದಲ್ಲಿರುವುದಾವುದೂ, ಒಬ್ಬ ನ್ಯಾಯವಾದಿಯನ್ನು ಅಥವಾ ಒಬ್ಬ ನೋಂದಾಯಿತ ವ್ಯಾಪಾರಚಿಹ್ನೆಗಳ ಏಜೆಂಟನನ್ನು, ಕಕ್ಷಿದಾರನ ಪರವಾಗಿ ತನ್ನ ವೃತ್ತಿ ಸಾಮರ್ಥ್ಯದಲ್ಲಿ ಮಾಡಿದ ಒಂದು ಕಾರ್ಯಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಅಡಿಯಲ್ಲಿನ ಒಂದು ಕ್ರಮಕ್ಕೆ ಹೊಣೆಗಾರನಾಗತಕ್ಕದ್ದಲ್ಲ.

(4) (1)ನೆಯ ಉಪಪ್ರಕರಣದ ಅಡಿಯಲ್ಲಿ ದಾವೆಯನ್ನು, ಜಿಲ್ಲಾ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯದಲ್ಲಿ ಹೂಡತಕ್ಕದ್ದಲ್ಲ.

**143. ಜಾರಿ ಮಾಡುವ ವಿಳಾಸ.–** ಒಂದು ಅರ್ಜಿಯಲ್ಲಿ ಅಥವಾ ವಿರೋಧಪಕ್ಷದ ನೋಟೀಸಿನಲ್ಲಿ ಹೇಳಲಾದ ಜಾರಿಯ ವಿಳಾಸವನ್ನು, ಅರ್ಜಿಯ ಅಥವಾ ವಿರೋಧಪಕ್ಷದ ನೋಟೀಸಿನ ಉದ್ದೇಶಗಳಿಗಾಗಿ, ಅರ್ಜಿದಾರನ ಅಥವಾ ಸಂದರ್ಭಾನುಸಾರ, ಎದುರು ಪಕ್ಷಕಾರನ ವಿಳಾಸವೆಂದು ಭಾವಿಸತಕ್ಕದ್ದು ಮತ್ತು ಅರ್ಜಿಗೆ ಅಥವಾ ವಿರೋಧಪಕ್ಷದ ನೋಟೀಸಿಗೆ ಸಂಬಂಧಿಸಿದ ಎಲ್ಲಾ ದಸ್ತಾವೇಜುಗಳನ್ನು, ಅರ್ಜಿದಾರನ ಅಥವಾ ಸಂದರ್ಭಾನುಸಾರ, ಎದುರು ಪಕ್ಷಕಾರನ ಜಾರಿಯ ವಿಳಾಸದಲ್ಲಿ ಬಿಡುವ ಮೂಲಕ ಅಥವಾ ಅಂಚೆಯ ಮೂಲಕ ಜಾರಿ ಮಾಡಬಹುದು.

**144. ಪರಿಗಣನೆಗೆ ತೆಗೆದುಕೊಳ್ಳಬೇಕಾಗಿರುವ ವ್ಯಾಪಾರ ರೂಢಿಗಳು, ಇತ್ಯಾದಿ.–** ವ್ಯಾಪಾರ ಚಿಹ್ನೆಗೆ ಸಂಬಂಧಿಸಿದ ಯಾವುದೇ ವ್ಯವಹರಣೆಯಲ್ಲಿ, ನ್ಯಾಯಾಧಿಕರಣವು ಸಂಬಂಧಿಸಿದ ವ್ಯಾಪಾರದ ಮತ್ತು ಇತರ ವ್ಯಕ್ತಿಗಳು ಕಾನೂನು ಸಮ್ಮತವಾಗಿ ಬಳಸಿದ ಯಾವುದೇ ಸುಸಂಗತ ವ್ಯಾಪಾರಚಿಹ್ನೆಯ ಅಥವಾ ವ್ಯಾಪಾರ ಹೆಸರಿನ ಅಥವಾ ಆಕರ್ಷಕ ವಿನ್ಯಾಸದ ರೂಢಿಗಳನ್ನು ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

**145. ಏಜೆಂಟರು.–** ಒಂದು ಶಪಥಪತ್ರ ಮಾಡುವುದನ್ನು ಹೊರತುಪಡಿಸಿ, ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ, ಯಾರೇ ವ್ಯಕ್ತಿಯು ಯಾವುದೇ ಕೃತ್ಯವನ್ನು ರಿಜಿಸ್ಟ್ರಾರನ ಮುಂದೆ ಮಾಡಬೇಕೆಂದು ಅಗತ್ಯಪಡಿಸಲಾದಲ್ಲಿ, ಆ ಕೃತ್ಯವನ್ನು ಈ ಬಗ್ಗೆ ಮಾಡಲಾದ ನಿಯಮಗಳಿಗೊಳಪಟ್ಟು, ಆ ವ್ಯಕ್ತಿಯ ಬದಲಿಗೆ ನಿಯಮಿಸಲಾದ ವಿಧಾನದಲ್ಲಿ ಕ್ರಮಬದ್ಧವಾಗಿ ಅಧಿಕೃತನಾದ ಈ ಮುಂದಿನ ಒಬ್ಬ ವ್ಯಕ್ತಿಯು ಎಂದರೆ,–

(ಎ) ಒಬ್ಬ ನ್ಯಾಯವಾದಿ; ಅಥವಾ

(ಬಿ) ವ್ಯಾಪಾರಚಿಹ್ನೆಗಳ ಏಜೆಂಟನೆಂದು ನಿಯಮಿಸಲಾದ ರೀತಿಯಲ್ಲಿ ನೋಂದಾಯಿತವಾದ ಒಬ್ಬ ವ್ಯಕ್ತಿ; ಅಥವಾ

(ಸಿ) ಯಜಮಾನನ ಏಕೈಕ ಮತ್ತು ನಿಯತ ನಿಯೋಜನೆಯಲ್ಲಿರುವ ಒಬ್ಬ ವ್ಯಕ್ತಿ

– ಮಾಡಬಹುದು.

**146. ನಿಯೋಜಿತ ಅಧಿಕಾರವಿಲ್ಲದೆ ಒಬ್ಬ ಏಜೆಂಟನು ಅಥವಾ ಪ್ರತಿನಿಧಿಯು ನೋಂದಾಯಿಸಿದ ಚಿಹ್ನೆಗಳು.–** ಒಂದು ನೋಂದಾಯಿತ ವ್ಯಾಪಾರ ಚಿಹ್ನೆಯ ಒಬ್ಬ ಏಜೆಂಟನು ಅಥವಾ ಒಬ್ಬ ಪ್ರತಿನಿಧಿಯು ಯಾವುದೇ ನಿಯೋಜಿತ ಅಧಿಕಾರವಿಲ್ಲದೆ ಆ ಚಿಹ್ನೆಯನ್ನು ಬಳಸಿದರೆ ಅಥವಾ ತನ್ನ ಸ್ವಂತ ಹೆಸರಿನಲ್ಲಿ, ನೋಂದಾಯಿಸುವುದಕ್ಕೆ ಪ್ರಯತ್ನಿಸಿದರೆ ಅಥವಾ ನೋಂದಾಯಿಸಿದರೆ ಮಾಲೀಕನು ಅರ್ಜಿ ಸಲ್ಲಿಸಲಾದ ನೋಂದಣಿಯನ್ನು ವಿರೋಧಿಸುವುದಕ್ಕೆ ಅಥವಾ ಅದರ ರದ್ದಿಯಾತಿಯನ್ನು ಸುನಿಶ್ಚಿತಗೊಳಿಸುವುದಕ್ಕೆ ಅಥವಾ ತನ್ನ ಪರವಾಗಿ ಸದರಿ ಚಿಹ್ನೆಯನ್ನು ಹಸ್ತಾಂತರಣ ಮಾಡಿ ತನ್ನನ್ನು ನೋಂದಾಯಿತ ಮಾಲೀಕನೆಂದು ಗುರುತಿಸುವುದಕ್ಕಾಗಿ ರಿಜಿಸ್ಟ್ರರನ್ನು ಸರಿಪಡಿಸುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ವ್ಯಾಪಾರಚಿಹ್ನೆಯ ನೋಂದಾಯಿತ ಮಾಲೀಕನು, ಏಜೆಂಟನ ಅಥವಾ ಪ್ರತಿನಿಧಿಯ ವರ್ತನೆಯನ್ನು ತಿಳಿದು ಬಂದ ಮೂರು ವರ್ಷಗಳೊಳಗೆ ಅಂಥ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

**147. ಸೂಚಿಗಳು.–** ರಿಜಿಸ್ಟ್ರಾರನ ನಿರ್ದೇಶನ ಮತ್ತು ಮೇಲ್ವಿಚಾರಣೆಯ ಅನುಸಾರ ಈ ಮುಂದಿನ ಸೂಚಿಗಳನ್ನು ಇಡತಕ್ಕದ್ದು,–

(ಎ) ನೋಂದಾಯಿತ ವ್ಯಾಪಾರಚಿಹ್ನೆಗಳ ಒಂದು ಸೂಚಿ;

(ಬಿ) ಯಾವ ವ್ಯಾಪಾರಚಿಹ್ನೆಗಳ ಸಂಬಂಧದಲ್ಲಿ ನೋಂದಣಿಗಾಗಿ ಅರ್ಜಿಗಳು ಇತ್ಯರ್ಥದಲ್ಲಿವೆಯೋ ಆ ವ್ಯಾಪಾರಚಿಹ್ನೆಗಳ ಒಂದು ಸೂಚಿ;

(ಸಿ) ನೋಂದಾಯಿತ ವ್ಯಾಪಾರಚಿಹ್ನೆಗಳ ಮಾಲೀಕರ ಹೆಸರುಗಳ ಒಂದು ಸೂಚಿ; ಮತ್ತು

(ಡಿ) ನೋಂದಾಯಿತ ಬಳಕೆದಾರರ ಹೆಸರುಗಳ ಒಂದು ಸೂಚಿ.

**148. ದಸ್ತಾವೇಜುಗಳು ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿರುವುದು.–** (1) 49ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು,–

(ಎ) ರಿಜಿಸ್ಟರು ಮತ್ತು ರಿಜಿಸ್ಟರಿನಲ್ಲಿರುವ ಯಾವುದೇ ನಮೂದನೆಗೆ ಆಧಾರವಾಗಿರುವ ಯಾವುದೇ ದಸ್ತಾವೇಜು;

(ಬಿ) ರಿಜಿಸ್ಟ್ರಾರನ ಮುಂದಿರುವ ವ್ಯಾಪಾರಚಿಹ್ನೆಯ ನೋಂದಣಿಯನ್ನು ವಿರೋಧಿಸುವ ಪ್ರತಿಯೊಂದು ನೋಟೀಸು, ಸರಿಪಡಿಸುವುದಕ್ಕಾಗಿ ಅರ್ಜಿ, ಅದರ ಬಗ್ಗೆ ಪ್ರತಿಹೇಳಿಕೆ ಮತ್ತು ರಿಜಿಸ್ಟ್ರಾರನ ಮುಂದಿರುವ ಯಾವುವೇ ವ್ಯವಹರಣೆಗಳಲ್ಲಿ ಪಕ್ಷಕಾರರು ದಾಖಲ್ಮಾಡಿದ ಯಾವುದೇ ಶಪಥಪತ್ರ ಅಥವಾ ದಸ್ತಾವೇಜು;

(ಸಿ) 63ನೇ ಪ್ರಕರಣದ ಅಥವಾ 74ನೇ ಪ್ರಕರಣದ ಅಡಿಯಲ್ಲಿ ಇಡಲಾದ ಎಲ್ಲಾ ವಿನಿಯಮಗಳು, ಮತ್ತು ಅಂಥ ವಿನಿಯಮಗಳನ್ನು ವ್ಯತ್ಯಾಸಗೊಳಿಸುವುದಕ್ಕೆ 66ನೇ ಪ್ರಕರಣದ ಅಥವಾ 77ನೇ ಪ್ರಕರಣದ ಅಡಿಯಲ್ಲಿನ ಎಲ್ಲಾ ಅರ್ಜಿಗಳು;

(ಡಿ) 147ನೇ ಪ್ರಕರಣದಲ್ಲಿ ನಮೂದಿಸಲಾದ ಸೂಚಿಗಳು; ಮತ್ತು

(ಇ) ಕೇಂದ್ರ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ನಿರ್ದಿಷ್ಟಪಡಿಸಬಹುದಾದ ಇತರ ದಸ್ತಾವೇಜುಗಳು

– ಇವುಗಳು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ವ್ಯಾಪಾರಚಿಹ್ನೆಗಳ ರಿಜಿಸ್ಟ್ರಿಯಲ್ಲಿ ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು:

ಪರಂತು, ಅಂಥ ರಿಜಿಸ್ಟರನ್ನು ಗಣಕಯಂತ್ರದಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ ನಿರ್ವಹಿಸಿಕೊಂಡು ಬಂದಾಗ, ಈ ಪ್ರಕರಣದ ಅಡಿಯಲ್ಲಿ ಅಂಥ ರಿಜಿಸ್ಟರಿನ ಪರಿಶೀಲನೆಯನ್ನು ಗಣಕಯಂತ್ರದಲ್ಲಿ ಹಾಗೆ ನಿರ್ವಹಿಸಿಕೊಂಡು ಬರಲಾದ ರಿಜಿಸ್ಟರಿನಲ್ಲಿ ಸುಸಂಗತ ನಮೂದನೆಯ ಗಣಕಯಂತ್ರದ ಮುದ್ರಿತಪ್ರತಿಯನ್ನು ಪರಿಶೀಲಿಸುವ ಮೂಲಕ ಮಾಡತಕ್ಕದ್ದು.

(2) ಯಾರೇ ವ್ಯಕ್ತಿಯು, ರಿಜಿಸ್ಟ್ರಾರನಿಗೆ ಒಂದು ಅರ್ಜಿಯನ್ನು ಸಲ್ಲಿಸಿದ ಮೇಲೆ ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ, ರಿಜಿಸ್ಟರಿನಲ್ಲಿರುವ ಯಾವುದೇ ನಮೂದನೆಯ ಅಥವಾ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ದಸ್ತಾವೇಜಿನ ಒಂದು ಪ್ರಮಾಣಿತ ಪ್ರತಿಯನ್ನು ಪಡೆಯಬಹುದು.

**149. ರಿಜಿಸ್ಟ್ರಾರನ ವರದಿಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ರಿಜಿಸ್ಟ್ರಾರನ ವರದಿಯನ್ನು ಕಾರ್ಯಗತಗೊಳಿಸುವ ಸಂಬಂಧದಲ್ಲಿ ವರ್ಷಕ್ಕೊಂದು ಸಲ ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**150. ಫೀಜು ಮತ್ತು ಸರ್‌ಚಾರ್ಜ್.–** (1) ಈ ಅಧಿನಿಯಮದ ಅಡಿಯಲ್ಲಿ ಅರ್ಜಿಗಳ ಮತ್ತು ನೋಂದಣಿಯ ಹಾಗೂ ಇತರೆ ವಿಷಯಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂತಹ ಫೀಜು ಮತ್ತು ಸರ್‌ಚಾರ್ಜ್‌ನ್ನು ಸಂದಾಯ ಮಾಡತಕ್ಕದ್ದು.

(2) ರಿಜಿಸ್ಟ್ರಾರನು ಮಾಡಬೇಕಾಗಿರುವ ಒಂದು ಕೃತ್ಯದ ಸಂಬಂಧದಲ್ಲಿ ಒಂದು ಫೀಜನ್ನು ಸಂದಾಯ ಮಾಡಬೇಕಾಗಿರುವಲ್ಲಿ, ಆ ಫೀಜನ್ನು ಸಂದಾಯ ಮಾಡುವವರೆಗೆ ರಿಜಿಸ್ಟ್ರಾರನು ಆ ಕೃತ್ಯವನ್ನು ಮಾಡತಕ್ಕದ್ದಲ್ಲ.

(3) ವ್ಯಾಪಾರಚಿಹ್ನೆಗಳ ರಿಜಿಸ್ಟ್ರಿಯಲ್ಲಿ ಒಂದು ದಸ್ತಾವೇಜನ್ನು ದಾಖಲ್ಮಾಡುವ ಸಂಬಂಧದಲ್ಲಿ ಒಂದು ಫೀಜನ್ನು ಸಂದಾಯ ಮಾಡಬೇಕಾಗಿದ್ದಲ್ಲಿ, ಆ ಫೀಜನ್ನು ಸಂದಾಯ ಮಾಡುವವರೆಗೆ ಕಚೇರಿಯಲ್ಲಿ ದಸ್ತಾವೇಜನ್ನು ದಾಖಲ್ಮಾಡಲಾಗಿಲ್ಲವೆಂದು ಭಾವಿಸತಕ್ಕದ್ದು.

**151. ಅಧ್ಯಾಯ XII ರಲ್ಲಿ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆಗಳು.–** XIIನೆಯ ಅಧ್ಯಾಯದಲ್ಲಿರುವುದಾವುದೂ,–

(ಎ) ಯಾರೇ ವ್ಯಕ್ತಿಯ ವಿರುದ್ಧದ ಯಾವುದೇ ದಾವೆಯಿಂದ ಅಥವಾ ಇತರೆ ವ್ಯವಹರಣೆಯಿಂದ ಆ ಅಧ್ಯಾಯದಲ್ಲಿರುವ ಯಾವುದೇ ವಿಷಯದ ಹೊರತಾಗಿ, ಅವನನ್ನು ವಿನಾಯಿತಿಗೊಳಿಸತಕ್ಕದ್ದಲ್ಲ.

(ಬಿ) ಯಾವುದೇ ದಾವೆಯಲ್ಲಿ ಅಥವಾ ಇತರ ವ್ಯವಹರಣೆಯಲ್ಲಿ ಸಂಪೂರ್ಣವಾಗಿ ಬಹಿರಂಗಪಡಿಸಲು ಅಥವಾ ಯಾವುದೇ ಪ್ರಶ್ನೆಗೆ ಅಥವಾ ಪರಿಪ್ರಶ್ನೆಗೆ ಉತ್ತರಿಸಲು ನಿರಾಕರಿಸುವದಕ್ಕೆ ಯಾರೇ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದಲ್ಲ, ಆದರೆ ಹಾಗೆ ಬಹಿರಂಗಪಡಿಸುವುದನ್ನು ಅಥವಾ ಉತ್ತರಿಸುವುದನ್ನು, ಆ ಅಧ್ಯಾಯದ ಅಡಿಯಲ್ಲಿನ ಅಥವಾ ಸೀಮಾಸುಂಕ ಅಧಿನಿಯಮ, 1962ರ (1962ರ 52) 111ನೇ ಪ್ರಕರಣದ (ಡಿ) ಖಂಡದ ಅಡಿಯಲ್ಲಿ ಸರಕುಗಳ ಅಧಿಹರಣಕ್ಕೆ ಸಂಬಂಧಿಸಿದಂತೆ ಆ

ಅಧಿನಿಯಮದ 112ನೇ ಪ್ರಕರಣದ (ಹೆಚ್) ಖಂಡದ ವಿರುದ್ದ ಮತ್ತು ಸರಕುಗಳ ಆಮದಿಗೆ ಸಂಬಂಧಿಸಿದಂತೆ ವ್ಯಾಪಾರಚಿಹ್ನೆಗಳ ರಕ್ಷಣೆಗಾಗಿ 11ನೇ ಪ್ರಕರಣದ (2)ನೇ ಉಪಪ್ರಕರಣದ (ಎನ್) ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರವು ಅಧಿಸೂಚಿಸಿದ ಒಂದು ಅಪರಾಧದ ಯಾವುದೇ ಅಂಥ ಪ್ರಾಸಿಕ್ಯೂಷನ್‌ನಲ್ಲಿ ಅಂಥ ವ್ಯಕ್ತಿಯ ವಿರುದ್ಧ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದಲ್ಲ; ಅಥವಾ

(ಸಿ) ಭಾರತದ ನಿವಾಸಿಯಾಗಿರುವ ಒಬ್ಬ ಯಜಮಾನನ ಯಾರೇ ನೌಕರನು, ಅಂಥ ಯಜಮಾನನ ಸೂಚನೆಗಳಿಗೆ ವಿಧೇಯನಾಗಿ ಸದ್ಭಾವನೆಯಿಂದ ಕಾರ್ಯ ಮಾಡಿದ್ದಕ್ಕೆ ಮತ್ತು ಪ್ರಾಸಿಕ್ಯೂಟರ್‌ನು ಮಾಡಿದ ಅಥವಾ ಅವನ ಪರವಾಗಿ ಮಾಡಲಾದ ಬೇಡಿಕೆಯ ಮೇಲೆ ತನ್ನ ಯಜಮಾನನಿಗೆ ಮತ್ತು ತನ್ನ ಯಜಮಾನನಿಂದ ತಾನು ಸ್ವೀಕರಿಸಿದ ಸೂಚನೆಗಳಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ನೀಡಿರುವುದಕ್ಕೆ ಯಾವುದೇ ಪ್ರಾಸಿಕ್ಯೂಷನ್ ಅಥವಾ ದಂಡನೆಗೆ ಹೊಣೆಗಾರನನ್ನಾಗಿ ಮಾಡಿರುವುದಾಗಿ ಅರ್ಥೈಸತಕ್ಕದ್ದಲ್ಲ.

**152. ನೋಂದಣಿ ಅಧಿನಿಯಮ, 1908ರ ಅಡಿಯಲ್ಲಿ ನೋಂದಾಯಿಸಲು ಬಾರದ ವ್ಯಾಪಾರ ಚಿಹ್ನೆಯ ಒಡೆತನದ ಬಗ್ಗೆ ಘೋಷಣೆ.–** ನೋಂದಣಿ ಅಧಿನಿಯಮ, 1908 ರಲ್ಲಿ (1908ರ 16) ಏನೇ ಒಳಗೊಂಡಿದ್ದರೂ, ನೋಂದಾಯಿತ ಒಂದು ವ್ಯಾಪಾರಚಿಹ್ನೆಯನ್ನು ಹೊರತುಪಡಿಸಿ, ವ್ಯಾಪಾರಚಿಹ್ನೆಗೆ ವ್ಯಕ್ತಿಯ ಒಡೆತನವನ್ನು ಅಥವಾ ಸ್ವಾಮ್ಯವನ್ನು ಘೋಷಿಸುವ ಅಥವಾ ಘೋಷಿಸುವುದೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಆ ಅಧಿನಿಯಮದ ಅಡಿಯಲ್ಲಿ ನೋಂದಾಯಿಸತಕ್ಕದ್ದಲ್ಲ.

**153. ಸರ್ಕಾರವು ಬದ್ಧವಾಗಿರಬೇಕಾಗಿರುವುದು.–** ಈ ಅಧಿನಿಯಮದ ಉಪಬಂಧಗಳು ಸರ್ಕಾರದ ಮೇಲೆ ಬದ್ಧವಾಗಿರತಕ್ಕದ್ದು.

**154. ಒಡಂಬಡಿಕೆ ದೇಶಗಳ ನಾಗರಿಕರ ನೋಂದಣಿ ಅರ್ಜಿಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.–** (1) ತನ್ನ ನಾಗರಿಕರಿಗೆ ನೀಡುವಂತಹುವೇ ವಿಶೇಷ ಸ್ಥಾನಮಾನಗಳನ್ನು ಭಾರತದ ನಾಗರಿಕರಿಗೆ ಒದಗಿಸುವ ಯಾವುದೇ ದೇಶದೊಂದಿಗೆ ಅಥವಾ ದೇಶಗಳ ಸಮೂಹದ ಅಥವಾ ದೇಶಗಳ ಒಕ್ಕೂಟದ ಅಥವಾ ಭಾರತದ ಹೊರಗಿನ – ಅಂತರ ಸರ್ಕಾರಿ ಸಂಸ್ಥೆಯ ಸದಸ್ಯ ದೇಶದೊಂದಿಗೆ ಮಾಡಿಕೊಂಡ ಒಂದು ಒಪ್ಪಂದವನ್ನು, ಒಡಂಬಡಿಕೆಯನ್ನು ಅಥವಾ ವ್ಯವಸ್ಥೆಯನ್ನು ಪೂರೈಸುವ ದೃಷ್ಟಿಯಿಂದ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಅಂತಹ ದೇಶವನ್ನು ಅಥವಾ ದೇಶಗಳ ಸಮೂಹವನ್ನು ಅಥವಾ ದೇಶಗಳ ಒಕ್ಕೂಟವನ್ನು ಅಥವಾ ಅಂತರ ಸರ್ಕಾರಿ ಸಂಸ್ಥೆಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ, ಸಂದರ್ಭಾನುಸಾರ, ಒಡಂಬಡಿಕೆ ದೇಶವೆಂದು ಅಥವಾ ದೇಶಗಳ ಸಮೂಹವೆಂದು ಅಥವಾ ದೇಶಗಳ ಒಕ್ಕೂಟವೆಂದು ಅಥವಾ ಅಂತರ ಸರ್ಕಾರೀ ಸಂಸ್ಥೆಯೆಂದು ಘೋಷಿಸಬಹುದು.

(2) ಒಬ್ಬ ವ್ಯಕ್ತಿಯು, ಒಂದು ಒಡಂಬಡಿಕೆ ದೇಶದಲ್ಲಿ ಅಥವಾ ದೇಶಗಳ ಸಮೂಹದ ಅಥವಾ ದೇಶಗಳ ಒಕ್ಕೂಟದ ಅಥವಾ ಅಂತರ – ಸರ್ಕಾರಿ ಸಂಸ್ಥೆಯ ಒಂದು ಸದಸ್ಯ ದೇಶದಲ್ಲಿ ವ್ಯಾಪಾರಚಿಹ್ನೆಯ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಿದಲ್ಲಿ ಮತ್ತು ಆ ವ್ಯಕ್ತಿ ಅಥವಾ ಅವನ ಕಾನೂನುಸಮ್ಮತ ಪ್ರತಿನಿಧಿಯು ಅಥವಾ ಹಸ್ತಾಂತರಧಾರಕನು, ಒಡಂಬಡಿಕೆ ದೇಶದಲ್ಲಿ ಅಥವಾ ದೇಶಗಳ ಸಮೂಹದ ಅಥವಾ ದೇಶಗಳ ಒಕ್ಕೂಟದ ಅಥವಾ ಅಂತರ ಸರ್ಕಾರಿ ಸಂಸ್ಥೆಗಳ ಒಂದು ಸದಸ್ಯ ದೇಶದಲ್ಲಿ ಅರ್ಜಿ ಸಲ್ಲಿಸಿದ ದಿನಾಂಕದ ನಂತರ ಆರು ತಿಂಗಳುಗಳೊಳಗೆ ಭಾರತದಲ್ಲಿ ವ್ಯಾಪಾರ ಚಿಹ್ನೆಯ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಿದಲ್ಲಿ, ಆ ವ್ಯಾಪಾರಚಿಹ್ನೆಯನ್ನು, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸುವುದಾದರೆ, ಒಡಂಬಡಿಕೆ ದೇಶದಲ್ಲಿ ಅಥವಾ ದೇಶಗಳ ಸಮೂಹದ ಅಥವಾ ದೇಶಗಳ ಒಕ್ಕೂಟದ ಅಥವಾ ಅಂತರ – ಸರ್ಕಾರಿ ಸಂಸ್ಥೆಯ ಒಂದು ಸದಸ್ಯ ದೇಶದಲ್ಲಿ ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿತ್ತೊ ಆ ದಿನಾಂಕದಂದು ನೋಂದಾಯಿಸತಕ್ಕದ್ದು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ದಿನಾಂಕವನ್ನು ನೋಂದಣಿಯ ದಿನಾಂಕವೆಂದು ಭಾವಿಸತಕ್ಕದ್ದು.

(3) ಎರಡು ಅಥವಾ ಹೆಚ್ಚಿನ ಒಡಂಬಡಿಕೆ ದೇಶಗಳಲ್ಲಿ ಅಥವಾ ದೇಶಗಳ ಸಮೂಹದ ಅಥವಾ ದೇಶಗಳ ಒಕ್ಕೂಟದ ಅಥವಾ ಅಂತರ ಸರ್ಕಾರಿ ಸಂಸ್ಥೆಯ ಸದಸ್ಯ ದೇಶಗಳಲ್ಲಿ ಹಿಂದಿನ ಕೊನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆರು ತಿಂಗಳ ಅವಧಿಯನ್ನು ವ್ಯಾಪಾರಚಿಹ್ನೆಯ ನೋಂದಣಿಗಾಗಿ ಅರ್ಜಿಗಳನ್ನು ಸಲ್ಲಿಸಿದಲ್ಲಿ

ಯಾವ ದಿನಾಂಕದಂದು ಅದಕ್ಕೆ ಮುಂಚೆ ಅಥವಾ ತೀರಾ ಮುಂಚೆ ಆ ಅರ್ಜಿಗಳನ್ನು ಸಲ್ಲಿಸಲಾಗಿತ್ತೊ ಆ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು.

(4) ಈ ಅಧಿನಿಯಮದಲ್ಲಿರುವುದಾವುದೂ, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗಾಗಿ ಅರ್ಜಿ ಸಲ್ಲಿಸಿದ ದಿನಾಂಕಕ್ಕೆ ಮುಂಚೆ ನಡೆದ ಅತಿಲಂಘನದ ಹಾನಿ ಪೂರ್ತಿಯನ್ನು ವಸೂಲು ಮಾಡುವುದಕ್ಕೆ ವ್ಯಾಪಾರಚಿಹ್ನೆಯ ಮಾಲೀಕನಿಗೆ ಹಕ್ಕು ನೀಡತಕ್ಕದ್ದಲ್ಲ.

**155. ಪರಸ್ಪರ ಸಂಬದ್ಧತೆಗೆ ಸಂಬಂಧಿಸಿದ ಉಪಬಂಧ.–** ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಿದ ಯಾವುದೇ ದೇಶ ಅಥವಾ ದೇಶಗಳ ಸಮೂಹದ ಅಥವಾ ದೇಶಗಳ ಒಕ್ಕೂಟದ ಅಥವಾ ಅಂತರ – ಸರ್ಕಾರಿ ಸಂಸ್ಥೆಯ ಒಂದು ಸದಸ್ಯ ದೇಶವು, ವ್ಯಾಪಾರ ಚಿಹ್ನೆ ನೋಂದಣಿ ಮತ್ತು ರಕ್ಷಣೆಯ ಸಂಬಂಧದಲ್ಲಿ, ತನ್ನ ರಾಷ್ಟ್ರೀಯರಿಗೆ ನೀಡುವಂಥಹವೇ ಹಕ್ಕುಗಳನ್ನು ಭಾರತದ ನಾಗರಿಕರಿಗೆ ನೀಡಲು ಒಪ್ಪದಿದ್ದಲ್ಲಿ, ಸಂದರ್ಭಾನುಸಾರ ಅಂಥ ದೇಶದ ಅಥವಾ ದೇಶಗಳ ಸಮೂಹದ ಅಥವಾ ದೇಶಗಳ ಒಕ್ಕೂಟದ ಅಥವಾ ಅಂತರ ಸರ್ಕಾರಿ ಸಂಸ್ಥೆಯ ಒಂದು ಸದಸ್ಯ ದೇಶದ ಯಾರೇ ರಾಷ್ಟ್ರೀಯನು, ತಾನೊಬ್ಬನೇ ಆಗಲಿ ಅಥವಾ ಯಾರೇ ಇತರೇ ವ್ಯಕ್ತಿಯೊಂದಿಗೆ ಜಂಟಿಯಾಗಿ ಆಗಲಿ,–

(ಎ) ಒಂದು ವ್ಯಾಪಾರಚಿಹ್ನೆಯ ನೋಂದಣಿಗೆ ಅಥವಾ ಅದರ ಮಾಲೀಕನೆಂದು ನೋಂದಾಯಿಸಲು ಅರ್ಜಿ ಸಲ್ಲಿಸುವುದಕ್ಕೆ;

(ಬಿ) ಒಂದು ನೋಂದಾಯಿತ ವ್ಯಾಪಾರಚಿಹ್ನೆಯ ಮಾಲೀಕನ ಹಸ್ತಾಂತರಗ್ರಾಹಿಯೆಂದು ನೋಂದಾಯಿಸುವುದಕ್ಕೆ; ಅಥವಾ

(ಸಿ) 49ನೇ ಪ್ರಕರಣದ ಅಡಿಯಲ್ಲಿ ಒಂದು ವ್ಯಾಪಾರಚಿಹ್ನೆಯ ನೋಂದಣಿಗೆ ಅಥವಾ ಒಬ್ಬ ನೋಂದಾಯಿತ ಬಳಕೆದಾರನೆಂದು ನೋಂದಾಯಿಸಲು ಅರ್ಜಿ ಸಲ್ಲಿಸಲಿಕ್ಕೆ

– ಹಕ್ಕುಳ್ಳವನಾಗತಕ್ಕದ್ದಲ್ಲ.

**156. ತೊಂದರೆಗಳನ್ನು ನಿವಾರಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಾಗ ಯಾವುದೇ ತೊಂದರೆ ಉದ್ಭವಿಸಿದಲ್ಲಿ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸುವುದಕ್ಕೆ ಅಗತ್ಯವಾಗಬಹುದಾದಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಐದು ವರ್ಷಗಳ ಮುಕ್ತಾಯದ ನಂತರ, ಈ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**157. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆಯ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಈ ಮುಂದಿನ ಎಲ್ಲಾ ವಿಷಯಗಳ ಅಥವಾ ಯಾವುದೇ ವಿಷಯದ ಬಗ್ಗೆ ಅಂತಹ ನಿಯಮಗಳನ್ನು ರಚಿಸಬಹುದು, ಎಂದರೆ:–

(i) 6ನೇ ಪ್ರಕರಣದ (1)ನೆಯ ಉಪಪ್ರಕರಣದ ಅಡಿಯಲ್ಲಿ ವ್ಯಾಪಾರಚಿಹ್ನೆಗಳ ರಿಜಿಸ್ಟರಿನಲ್ಲಿ ಒಳಗೊಂಡಿರಬೇಕಾದ ವಿಷಯಗಳು ಮತ್ತು ಆ ಪ್ರಕರಣದ (2)ನೆಯ ಉಪಪ್ರಕರಣದ ಅಡಿಯಲ್ಲಿ

ಗಣಕಯಂತ್ರ ಮುದ್ರಿಕೆಗಳಲ್ಲಿ ಅಥವಾ ಧ್ವನಿತಟ್ಟೆಗಳಲ್ಲಿ ಅಥವಾ ಯಾವುದೇ ಇತರ ವಿದ್ಯುನ್ಮಾನ ರೂಪದಲ್ಲಿ ದಾಖಲೆಗಳನ್ನು ಇಟ್ಟುಕೊಂಡು ಬರುವಾಗ ಪಾಲಿಸಬೇಕಾದ ರಕ್ಷಣಾ ಕ್ರಮಗಳು;

(ii) 8ನೇ ಪ್ರಕರಣದ (1)ನೆಯ ಉಪಪ್ರಕರಣದ ಅಡಿಯಲ್ಲಿ ಸರಕುಗಳ ಮತ್ತು ಸೇವೆಗಳ ವರ್ಗೀಕರಣದ ಅಕಾರಾದಿ ಸೂಚಿಯ ಪ್ರಕಟಣೆಯ ವಿಧಾನ;

(iii) 13ನೇ ಪ್ರಕರಣದ ಅಡಿಯಲ್ಲಿ ಅಂತರರಾಷ್ಟ್ರೀಯ ಮಾಲೀಕತ್ವ ಹೊಂದಿಲ್ಲದ ಪದವನ್ನು ರಿಜಿಸ್ಟ್ರಾರನು ಅಧಿಸೂಚಿಸಬಹುದಾದ ವಿಧಾನ;

(iv) 16ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಸಂಘದ ವಿಘಟನೆಗೆ ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ;

(v) 18ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ವ್ಯಾಪಾರ ಚಿಹ್ನೆಯ ನೋಂದಣಿಗೆ ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ;

(vi) 20ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿಗಾಗಿ ಒಂದು ಅರ್ಜಿಯನ್ನು ಜಾಹಿರಾತು ಮಾಡುವ ವಿಧಾನ, ಮತ್ತು (2)ನೇ ಉಪಪ್ರಕರಣದ ಅಡಿಯಲ್ಲಿ ಸರಿಪಡಿಸುವಿಕೆಗಳನ್ನು ಅಥವಾ ತಿದ್ದುಪಡಿಗಳನ್ನು ಅಧಿಸೂಚಿಸುವ ವಿಧಾನ;

(vii) (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸುವ ಮತ್ತು ನೋಟೀಸು ನೀಡುವ ಅಂಥ ಅರ್ಜಿಗೆ ಸಂದಾಯ ಮಾಡಬೇಕಾದ ಫೀಜಿನ ಮತ್ತು (2)ನೇ ಉಪಪ್ರಕರಣದ ಅಡಿಯಲ್ಲಿ ಪ್ರತಿ ಹೇಳಿಕೆಗಳನ್ನು ಕಳುಹಿಸುವ ಮತ್ತು 21ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಸಾಕ್ಷ್ಯವನ್ನು ಒಪ್ಪಿಸುವ ವಿಧಾನ ಮತ್ತು ಅದಕ್ಕಾಗಿ ಇರುವ ಸಮಯ;

(viii) (2)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಪ್ರಮಾಣಪತ್ರದ ನಮೂನೆ, ಮತ್ತು 23ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿದಾರನಿಗೆ ನೋಟೀಸು ನೀಡುವ ವಿಧಾನ;

(ix) 25ನೇ ಪ್ರಕರಣದ ಅಡಿಯಲ್ಲಿ ನವೀಕರಣ ಮತ್ತು ಪುನ: ಸ್ಥಾಪನೆಗಾಗಿ ಅರ್ಜಿಯ ನಮೂನೆಗಳು ಮತ್ತು ಅಂಥ ಅರ್ಜಿಯನ್ನು ಸಲ್ಲಿಸಬೇಕಾಗಿರುವ ಸಮಯ, ಪ್ರತಿ ಅರ್ಜಿಯೊಂದಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ಸರ್‌ಚಾರ್ಜ್, ಯಾವುದಾದರೂ ಇದ್ದರೆ, ಅವು ಮತ್ತು ಆ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನು ನೋಟೀಸನ್ನು ಕಳುಹಿಸತಕ್ಕ ಸಮಯ ಮತ್ತು ಅಂಥ ನೋಟೀಸಿನ ವಿಧಾನ;

(x) 40ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಪ್ರಕರಣಗಳ ವಿವರಣೆಯನ್ನು ಸಲ್ಲಿಸುವ ವಿಧಾನ;

(xi) 41ನೇ ಪ್ರಕರಣದ ಅಡಿಯಲ್ಲಿ ವ್ಯಾಪಾರಚಿಹ್ನೆಯ ಮಾಲೀಕನು ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ;

(xii) 43ನೇ ಪ್ರಕರಣದ ಅಡಿಯಲ್ಲಿ ವ್ಯಾಪಾರಚಿಹ್ನೆಯ ಪ್ರಮಾಣೀಕರಣದ ಹಸ್ತಾಂತರಣ ಅಥವಾ ರವಾನೆಗೆ ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ;

(xiii) 45ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಹೆಸರನ್ನು ನೋಂದಾಯಿಸಲು ರಿಜಿಸ್ಟ್ರಾರನಿಗೆ ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ;

(xiv) 46ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಯಾವ ವಿಧಾನದಲ್ಲಿ ಮತ್ತು ಯಾವ ಸಮಯದೊಳಗೆ ಅರ್ಜಿಯನ್ನು ಸಲ್ಲಿಸಬೇಕಾಗಿದೆಯೋ ಆ ವಿಧಾನ ಮತ್ತು ಸಮಯ;

(xv) 47ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಗುರುತು ಮಾಡುವ ವಿಧಾನ;

(xvi) 49ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ, ಅಂಥ ಒಂದು ಅರ್ಜಿಯ ಜೊತೆಗಿರಿಸಬೇಕಾದ ದಸ್ತಾವೇಜುಗಳು ಮತ್ತು ಇತರ ಸಾಕ್ಷ್ಯ ಮತ್ತು (3)ನೇ ಉಪಪ್ರಕರಣದ ಅಡಿಯಲ್ಲಿ ನೋಟೀಸನ್ನು ನೀಡಬೇಕಾದ ವಿಧಾನ;

(xvii)50ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ, (2)ನೇ ಉಪಪ್ರಕರಣದ ಅಡಿಯಲ್ಲಿ ಒಂದು ನೋಟೀಸನ್ನು ನೀಡಬೇಕಾದ ವಿಧಾನ ಮತ್ತು (3)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿಯನ್ನು ರದ್ದುಗೊಳಿಸುವ ಕಾರ್ಯವಿಧಾನ;

(xviii) 57ನೇ ಪ್ರಕರಣದ (1)ನೇ ಮತ್ತು (2)ನೇ ಉಪಪ್ರಕರಣಗಳ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸುವ ವಿಧಾನ, (4)ನೇ ಉಪಪ್ರಕರಣದ ಅಡಿಯಲ್ಲಿ ನೋಟೀಸನ್ನು ನೀಡಬೇಕಾದ ವಿಧಾನ ಮತ್ತು (5)ನೇ ಉಪಪ್ರಕರಣದ ಅಡಿಯಲ್ಲಿ ಸರಿಪಡಿಸುವಿಕೆ ನೋಟೀಸನ್ನು ಜಾರಿಗೊಳಿಸುವ ವಿಧಾನ;

(xix) 58ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವ ವಿಧಾನ;

(xx) 59ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ, (2)ನೇ ಮತ್ತು (3)ನೇ ಉಪಪ್ರಕರಣಗಳ ಅಡಿಯಲ್ಲಿ ಒಂದು ಅರ್ಜಿಯನ್ನು ಜಾಹೀರಾತು ಮಾಡುವ ವಿಧಾನ, ಸಮಯ ಮತ್ತು ಅರ್ಜಿಯನ್ನು ವಿರೋಧಿಸಬಹುದಾದ ನೋಟೀಸಿನ ವಿಧಾನ;

(xxi) 60ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಜಾಹೀರಾತು ನೀಡುವ ವಿಧಾನ;

(xxii) 63ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬೇಕಾದ ಇತರ ವಿಷಯಗಳು;

(xxiii) 71ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸಬೇಕಾದ ವಿಧಾನ;

(xxiv) 73ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಜಾಹೀರಾತು ಮಾಡಬೇಕಾದ ವಿಧಾನ;

(xxv) 77ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸಬೇಕಾದ ವಿಧಾನ;

(xxvi) 79ನೇ ಪ್ರಕರಣದ ಅಡಿಯಲ್ಲಿ ಸರಕುಗಳ ವರ್ಗಗಳು;

(xxvii)80ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಷರತ್ತುಗಳು ಮತ್ತು ನಿರ್ಬಂಧಗಳು;

(xxviii) 82ನೇ ಪ್ರಕರಣದ ಅಡಿಯಲ್ಲಿ ಮಾದರಿ ಗುಣಪರಿಶೀಲನೆಯ ಮೂಲಕ ಜವಳಿ ಸರಕುಗಳ ಗುಣಮಟ್ಟದ ನಿರ್ಧರಣೆ;

(xxix) 88ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು;

(xxx) 89ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅಧ್ಯಕ್ಷನ, ಉಪಾಧ್ಯಕ್ಷನ ಮತ್ತು ಇತರ ಸದಸ್ಯರ ದುರ್ವರ್ತನೆಯನ್ನು ಅಥವಾ ಅಸಮರ್ಥತೆಯನ್ನು ತನಿಖೆ ಮಾಡುವ ಕಾರ್ಯವಿಧಾನ;

(xxxi) 90ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲು ಮಂಡಲಿಯ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವೆಯ ಇತರ ಷರತ್ತುಗಳು, ಮತ್ತು (3)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲು ಮಂಡಲಿಯ ಅಧಿಕಾರಿಗಳು ಮತ್ತು ಇತರ ನೌಕರರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕ ವಿಧಾನ;

(xxxii)91ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲನ್ನು ಸಲ್ಲಿಸುವ ನಮೂನೆ, ಪರಿಶೀಲನೆಯ ವಿಧಾನ ಮತ್ತು ಸಂದಾಯ ಮಾಡಬೇಕಾದ ಫೀಜು;

(xxxiii) 97ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲು ಮಂಡಲಿಗೆ ಸಲ್ಲಿಸುವ ಅರ್ಜಿಯ ನಮೂನೆ ಮತ್ತು ಅದು ಒಳಗೊಂಡಿರಬೇಕಾದ ವಿವರಗಳು;

(xxxiv) 127ನೇ ಪ್ರಕರಣದ (ಸಿ) ಖಂಡದ ಅಡಿಯಲ್ಲಿ ಪುನರಾವಲೋಕನಕ್ಕಾಗಿ ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ;

(xxxv)128ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನು, ತನ್ನ ವಿವೇಚನಾಧಿಕಾರವನ್ನು ಚಲಾಯಿಸಲು ಅರ್ಜಿಯನ್ನು ಯಾವ ಸಮಯದೊಳಗೆ ಅವನಿಗೆ ಸಲ್ಲಿಸಬೇಕಾಗಿದೆಯೋ ಆ ಸಮಯ;

(xxxvi) 131ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕಾದ ವಿಧಾನ ಮತ್ತು ಅದಕ್ಕಾಗಿ ಸಂದಾಯಮಾಡಬೇಕಾದ ಫೀಜು;

(xxxvii) 133ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸಬೇಕಾದ ವಿಧಾನ ಮತ್ತು (2)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ಅರ್ಜಿಯನ್ನು ಹಿಂತೆಗೆದುಕೊಳ್ಳುವ ಅವಧಿ;

(xxxviii) 145ನೇ ಪ್ರಕರಣದ ಅಡಿಯಲ್ಲಿ ಯಾರೇ ವ್ಯಕ್ತಿಯನ್ನು ವ್ಯಾಪಾರ ಚಿಹ್ನೆಯ ಏಜೆಂಟನಾಗಿ ಅಧಿಕೃತಗೊಳಿಸುವ ವಿಧಾನ ಮತ್ತು ವ್ಯಾಪಾರಚಿಹ್ನೆಯ ಏಜೆಂಟನಾಗಿ ನೋಂದಣಿ ಮಾಡಿಕೊಳ್ಳುವ ವಿಧಾನ;

(xxxix) 148ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ದಸ್ತಾವೇಜುಗಳನ್ನು ಪರಿಶೀಲಿಸುವುದಕ್ಕೆ ಷರತ್ತುಗಳು ಮತ್ತು (2)ನೇ ಉಪಪ್ರಕರಣದ ಅಡಿಯಲ್ಲಿ ರಿಜಿಸ್ಟರಿನಲ್ಲಿರುವ ಯಾವುದೇ ನಮೂದನೆಯ ಒಂದು ಪ್ರಮಾಣಿತ ಪ್ರತಿಯನ್ನು ಪಡೆಯಲು ಸಂದಾಯ ಮಾಡಬೇಕಾದ ಫೀಜು;

(XL) 150ನೇ ಪ್ರಕರಣದ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಮತ್ತು ನೋಂದಣಿ ಮತ್ತು ಇತರ ವಿಷಯಗಳಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ಸರ್‌ಚಾರ್ಜ್;

(XLI) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೂಲಕ ನಿಯಮಗಳನ್ನು ರಚಿಸಲು ಪ್ರದತ್ತವಾದ ಅಧಿಕಾರವು (2)ನೇ ಉಪಪ್ರಕರಣದ (xxix) ಮತ್ತು (xxxi)ನೇ ಖಂಡಗಳಲ್ಲಿ ಉಲ್ಲೇಖಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿನದಲ್ಲದ ದಿನಾಂಕದಿಂದ ಪೂರ್ವಾನ್ವಯ ಪರಿಣಾಮವನ್ನು ನೀಡುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು, ಆದರೆ ಯಾರೇ ವ್ಯಕ್ತಿಗೆ ಉಪನಿಯಮವು ಅನ್ವಯವಾಗಬಹುದಾಗಿದ್ದರೆ ಆ ವ್ಯಕ್ತಿಯ ಹಿತಾಸಕ್ತಿಗಳಿಗೆ ಪ್ರತಿಕೂಲ ಪರಿಣಾಮ ಬೀರುವಂತೆ ಯಾವುದೇ ಅಂಥ ನಿಯಮಕ್ಕೆ ಪೂರ್ವಾನ್ವಯ ಪರಿಣಾಮವನ್ನು ನೀಡತಕ್ಕದ್ದಲ್ಲ.

(4) ಈ ಅಧಿನಿಯಮದ ಅಡಿಯಲ್ಲಿ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದಲ್ಲಿ ಬರುವ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**158. ತಿದ್ದುಪಡಿಗಳು.–** ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಅಧಿನಿಯಮಿತಿಯನ್ನು ಅದರಲ್ಲಿ ನಿರ್ದಿಷ್ಟಪಡಿಸಲಾದ ವಿಧಾನದಲ್ಲಿ ತಿದ್ದುಪಡಿಮಾಡತಕ್ಕದ್ದು.

**159. ನಿರಸನ ಮತ್ತು ಉಳಿಸುವಿಕೆಗಳು.–** (1) ವ್ಯಾಪಾರ ಮತ್ತು ವಾಣಿಜ್ಯ ಸರಕು ಚಿಹ್ನೆಗಳ ಅಧಿನಿಯಮ, 1958ನ್ನು (1958ರ 43) ಈ ಮೂಲಕ ನಿರಸನಗೊಳಿಸಲಾಗಿದೆ.

(2) ವ್ಯಾಪಾರ ಮತ್ತು ವಾಣಿಜ್ಯ ಸರಕು ಚಿಹ್ನೆಗಳ ಅಧಿನಿಯಮ, 1958ರ (1958ರ 43) ಅಡಿಯಲ್ಲಿ ಮಾಡಲಾದ, ಹೊರಡಿಸಲಾದ, ನೀಡಲಾದ ಅಥವಾ ಮಾಡಿದ ಯಾವುದೇ ಅಧಿಸೂಚನೆ, ನಿಯಮ, ಆದೇಶ, ಅಗತ್ಯತೆ, ನೋಂದಣಿ, ಪ್ರಮಾಣಪತ್ರ, ನೋಟೀಸು, ತೀರ್ಮಾನ, ನಿರ್ಧಾರ, ನಿರ್ದೇಶನ, ಅನುಮೋದನೆ, ಅಧಿಕೃತತೆ, ಒಪ್ಪಿಗೆ, ಅರ್ಜಿ, ಕೋರಿಕೆ ಅಥವಾ ವಿಷಯವು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದರೆ, ಸಾಮಾನ್ಯ ಖಂಡಗಳ ಅಧಿನಿಯಮ, 1897ರಲ್ಲಿ ಒಳಗೊಂಡಿರುವ ನಿರಸನಗಳಿಗೆ ಸಂಬಂಧಿಸಿದ ಉಪಬಂಧಗಳಿಗೆ ಬಾಧಕವಾಗದಂತೆ, ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಲಾಗಿದ್ದರೆ, ಹೊರಡಿಸಲಾಗಿದ್ದರೆ, ನೀಡಲಾಗಿದ್ದರೆ ಅಥವಾ ಮಾಡಿದ್ದರೆ ಹೇಗೋ ಹಾಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳು, ಈ ಅಧಿನಿಯಮದ ಪ್ರಾರಂಭದಲ್ಲಿ ಇತ್ಯರ್ಥದಲ್ಲಿರುವ ವ್ಯಾಪಾರ ಚಿಹ್ನೆಯ ನೋಂದಣಿಯ ಯಾವುದೇ ಅರ್ಜಿಗೆ ಮತ್ತು ತತ್ಪರಿಣಾಮವಾದ ಯಾವುವೇ ವ್ಯವಹರಣೆಗಳಿಗೆ ಮತ್ತು ಅದಕ್ಕನುಸಾರವಾಗಿ ಮಂಜೂರು ಮಾಡಲಾದ ಯಾವುದೇ ನೋಂದಣಿಗೆ ಅನ್ವಯವಾಗತಕ್ಕದ್ದು.

(4) 100ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಮತ್ತು ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಏನೇ ಒಳಗೊಂಡಿದ್ದರೂ ಸಹ, ಈ ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಕಾನೂನು ವ್ಯವಹರಣೆಯು, ಈ ಅಧಿನಿಯಮವು ಜಾರಿಯಾಗಿರದಿದ್ದರೆ ಹೇಗೋ ಹಾಗೆ ಆ ನ್ಯಾಯಾಲಯದಲ್ಲಿ ಮುಂದುವರಿಯಬಹುದು.

(5) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಸಹ, ನೋಂದಾಯಿತ ವ್ಯಾಪಾರಚಿಹ್ನೆಯ ನಿರ್ದಿಷ್ಟ ಬಳಕೆಯು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ನೋಂದಾಯಿತ ವ್ಯಾಪಾರಚಿಹ್ನೆಗೆ ಸಂಬಂಧಿಸಿ ಒಂದು ಅತಿಲಂಘನೆಯಾಗದಿರುವಲ್ಲಿ ಆ ಚಿಹ್ನೆಯ ಮುಂದುವರಿದ ಬಳಕೆಯು, ಈ ಅಧಿನಿಯಮದ ಅಡಿಯಲ್ಲಿ ಒಂದು ಅತಿಲಂಘನೆಯಾಗತಕ್ಕದ್ದಲ್ಲ.

(6) (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ನೋಂದಾಯಿತ ವ್ಯಾಪಾರಚಿಹ್ನೆಯ ನೋಂದಣಿಯ ಮುಕ್ತಾಯ ದಿನಾಂಕವು ಅದನ್ನು ನೋಂದಾಯಿಸಿದ ಅಥವಾ ನವೀಕರಿಸಿದ ಏಳು ವರ್ಷಗಳ ಅವಧಿಯ ನಿಕಟೋತ್ತರದ ದಿನಾಂಕವಾಗಿರತಕ್ಕದ್ದು:

ಪರಂತು, ವ್ಯಾಪಾರ ಮತ್ತು ವಾಣಿಜ್ಯ ಸರಕು ಚಿಹ್ನೆಗಳ ಅಧಿನಿಯಮ, 1958ರ 47ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ರಕ್ಷಣಾತ್ಮಕ ವ್ಯಾಪಾರಚಿಹ್ನೆಯ ನೋಂದಣಿಯು, ಅಂಥ ಪ್ರಾರಂಭದ ಐದು ವರ್ಷಗಳ ಮುಕ್ತಾಯದ ನಿಕಟೋತ್ತರದ ದಿನಾಂಕ ಅಥವಾ ಅದನ್ನು ನೋಂದಾಯಿಸಿದ ಅಥವಾ ನವೀಕರಿಸಿದ ಅವಧಿಯ ಮುಕ್ತಾಯದ ನಂತರದ ದಿನಾಂಕ; ಇವುಗಳಲ್ಲಿ ಯಾವುದು ಮೊದಲೋ ಅಂದು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

**ಅನುಸೂಚಿ**
**(158ನೇ ಪ್ರಕರಣ ನೋಡಿ)**
**ತಿದ್ದುಪಡಿಗಳು**

| **ವರ್ಷ** | **ಅಧಿನಿಯಮ ಸಂಖ್ಯೆ** | **ಚಿಕ್ಕ ಹೆಸರು** | **ತಿದ್ದುಪಡಿ** |
|---|---|---|---|
| 1956 | 1 | ಕಂಪನಿಗಳ ಅಧಿನಿಯಮ, 1956 | (1) 20ನೇ ಪ್ರಕರಣದಲ್ಲಿ, (2)ನೇ ಉಪಪ್ರಕರಣಕ್ಕೆ, ಈ ಮುಂದಿನ ಉಪಪ್ರಕರಣಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ: –<br><br>"(2) ಮೊದಲು ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ,–<br>(i) ಅಸ್ತಿತ್ವದಲ್ಲಿರುವ ಒಂದು ಕಂಪನಿಯು ಮೊದಲಿಗೆನೋಂದಾಯಿತವಾದ ಹೆಸರಿಗೆ, ಅಥವಾ<br><br>(ii) ವ್ಯಾಪಾರಚಿಹ್ನೆಗಳ ಅಧಿನಿಯಮ, 1999ರ ಅಡಿಯಲ್ಲಿ ಒಂದು ನೋಂದಾಯಿತ ವ್ಯಾಪಾರಚಿಹ್ನೆ ಅಥವಾ ಇತರ ಯಾರೇ ವ್ಯಕ್ತಿಯ ನೋಂದಣಿಗಾಗಿ ಮಾಡಿದ ಅರ್ಜಿಯ ವಿಷಯ ವಾಗಿರುವ ಒಂದು ವ್ಯಾಪಾರಚಿಹ್ನೆಗೆ<br>– ತದ್ರೂಪವಾಗಿರುವ, ಅಥವಾ ಬಹುಮಟ್ಟಿಗೆ ಸಾದೃಶ್ಯವಿರುವ ಒಂದು ಹೆಸರನ್ನು, (1)ನೇ ಉಪಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಕೇಂದ್ರ ಸರ್ಕಾರವು ಅನಪೇಕ್ಷಿತವೆಂದು ಭಾವಿಸಬಹುದು.<br><br>3) ಕೇಂದ್ರ ಸರ್ಕಾರವು, (2)ನೇ ಉಪಪ್ರಕರಣದ (ii)ನೇ ಖಂಡದ ಅಡಿಯಲ್ಲಿ ಒಂದು ಹೆಸರನ್ನು ಅನಪೇಕ್ಷಿತವೆಂದು ಭಾವಿಸುವುದಕ್ಕೆ ಮುಂಚೆ, ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಾರನೊಡನೆ ಸಮಾಲೋಚಿಸಬಹುದು"<br><br>II) 22ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ,–<br>(i) "ಆದರೆ, ಮೂಲಕ" ಎಂದು ಆರಂಭವಾಗುವ ಭಾಗಕ್ಕೆ ಮತ್ತು "ಮೊದಲು ನಮೂದಿಸಿದ ಕಂಪನಿ" ಎಂದು ಕೊನೆಯಾಗುವಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–<br><br>"ಅಜಾಗರೂಕತೆಯಿಂದ ಅಥವಾ ಇತರೇ ರೀತಿಯಲ್ಲಿ, ಒಂದು ಕಂಪನಿಯು ತನ್ನ ಮೊದಲ ನೋಂದಣಿಯನ್ನು ಅಥವಾ ಹೊಸ ಹೆಸರಿನ ಮೂಲಕ ತನ್ನ ನೋಂದಣಿಯನ್ನು ಮಾಡಿದ್ದರೆ,– |

| | | | | |
|---|---|---|---|---|
| | | | | (i) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಮೊದಲೇ ನೋಂದಾಯಿತವಾಗಿದ್ದು ಈಗಾಗಲೇ ಅಸ್ತಿತ್ವದಲ್ಲಿರುವ ಕಂಪನಿಯ ಹೆಸರಿಗೆ ತದ್ರೂಪವಾಗಿದ್ದರೆ ಅಥವಾ ಬಹುಮಟ್ಟಿಗೆ ಸಾದೃಸ್ಯವಿದ್ದರೆ ಈ ಅಧಿನಿಯಮದ ಮೇರೆಗಾಗಲಿ ಅಥವಾ ಯಾವುದೇ ಮೊದಲ ಕಂಪನಿಗಳ ಕಾನೂನಿನ ಮೇರೆಗಾಗಲಿ ಮೊದಲು ನಮೂದಿತವಾದ ಕಂಪನಿಯು, ಅಥವಾ<br><br>(ii) ವ್ಯಾಪಾರಚಿಹ್ನೆಯ ನೋಂದಾಯಿತ ಮಾಲೀಕನು ಸಲ್ಲಿಸಿದ ಅರ್ಜಿಯ ಮೇರೆಗೆ ವ್ಯಾಪಾರಚಿಹ್ನೆಗಳ ಅಧಿನಿಯಮ, 1999ರ ಮೇರೆಗೆ ಅಂತಹ ಮಾಲೀಕನ ನೋಂದಾಯಿತ ವ್ಯಾಪಾರ ಚಿಹ್ನೆಗೆ ತದ್ರೂಪವಾಗಿದೆಯೆಂದು, ಅಥವಾ ಬಹುಮಟ್ಟಿಗೆ ಸಾದೃಶ್ಯವಾಗಿದೆಯೆಂದು ಕೇಂದ್ರಸರ್ಕಾರವು ಅಭಿಪ್ರಾಯಪಟ್ಟಲ್ಲಿ, ಅಂತಹ ಕಂಪನಿಯ,<br>– ಹೆಸರು ನೋಂದಾಯಿತವಾಗಿರುವುದು."<br><br>(iii) ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ: –<br>"ಪರಂತು, (ii)ನೇ ಖಂಡದ ಅಡಿಯಲ್ಲಿ ವ್ಯಾಪಾರಚಿಹ್ನೆಯ ನೋಂದಾಯಿತ ಮಾಲೀಕನು ಯಾವುದೇ ಅರ್ಜಿಯನ್ನು ಸಲ್ಲಿಸಿದ್ದು ಐದು ವರ್ಷಗಳ ನಂತರ ಕಂಪನಿಯ ನೋಂದಣಿಯ ಗಮನಕ್ಕೆ ಬಂದಿದ್ದರೆ ಕೇಂದ್ರ ಸರ್ಕಾರವು ಪರಿಗಣಿಸತಕ್ಕದ್ದಲ್ಲ. |

* * *